ಸಣ್ಣ ಕತೆಗಳು ೧೪

ಮಾಸ್ತಿ ವೆಂಕಟೇಶ ಅಯ್ಯಂಗಾರ್

ಸಣ್ಣ ಕತೆಗಳು

೧೪

ಶ್ರೀನಿವಾಸ

ಜೀವನ ಕಾರ್ಯಾಲಯ
ಬೆಂಗಳೂರು

SANNAKATHEGALU 14: Twelve Short Stories in Kannada by "Srinivasa," (Masti Venkatesa Iyengar)
Published by Jeevana Karyalaya, Bangalore.

Pages: 134+vii

October 1979

ಆಕರ:
https://archive.org/details/bmshri.sannakathegalu140000srin.8k8.42301.s.k.v.14

ಓಸಿಆರ್ ಪರಿವರ್ತನೆ : ವಿಶು
[https://vishwakoshaagaara.blogspot.com/]

© : Author

PRICE: Rs. 8-00

Printed by: Ila Printers Bangalore 560018.

ಮುನ್ನುಡಿ

ಇದು ನನ್ನ ಸಣ್ಣ ಕತೆಗಳ ಹದಿನಾಲ್ಕನೆಯ ಸಂಕಲನ.

ಸಣ್ಣ ಕತೆಗಳು ೧೩ ಪ್ರಕಟವಾದದ್ದು ೧೯೬೮ ರಲ್ಲಿ. ಇಲ್ಲಿ ಈಗ ಸೇರಿರುವ ಕಥೆಗಳಲ್ಲಿ ಕೆಲವು ಆ ಮೊದಲೆ ಮನಸ್ಸಿನಲ್ಲಿ ರೂಪುಗೊಂಡಿದ್ದವು. ಎರಡು ತೀರ ಈಚೆಗೆ, ಉಳಿದವು ಮಧ್ಯೆ, ರೂಪುಗೊಂಡವು. ಕತೆಗಳ ಮಾತು ಬಂದು ನಾನು ಕೆಲವು ವೇಳೆ ಇವುಗಳಲ್ಲಿ ಒಂದೆರಡು ವಿವರಗಳನ್ನು ತಿಳಿಸಿದಾಗ, ಮಿತ್ರರು ಇವನ್ನು ಬೇಗನೇ ಬರೆದುಬಿಡಿ ಎಂದು ಸೂಚಿಸಿದ್ದುಂಟು. ಈ ವರ್ಷದ ಆರಂಭದಲ್ಲಿ ಒಂದು ಕೆಲಸ ಮುಗಿದು ಬೇರೆ ಯಾವ ಕೆಲಸವನ್ನು ಎತ್ತಿಕೊಳ್ಳುವುದು ಎಂಬ ಪ್ರಶ್ನೆ ಬಂದಾಗ ನನಗೆ ಈ ಕಥೆಗಳನ್ನು ಬರೆಸುವುದು ಚೆನ್ನ ಆದೀತು ಎನ್ನಿಸಿತು; ಒಡನೆಯೇ ಬರೆಯಿಸಲು ಆರಂಭಿಸಿದೆನು. ಹಿರಿಯ ಅಳಿಯಂದಿರು ಚಿ. ಶೇಷಾದ್ರಿಯವರು ಕತೆಗಳನ್ನು ಬರೆದುಕೊಂಡರು. ಸುಮಾರು ಎರಡು ತಿಂಗಳಲ್ಲಿ ಹನ್ನೆರಡು ಕಥೆ ಸಿದ್ಧವಾದವು.

ಕಥೆಗಳನ್ನು ಮತ್ತೆ ಓದಿ ಇಲ್ಲಿ ಅಲ್ಲಿ ಒಂದು ಮಾತು ಅರ್ಧಮಾತನ್ನು ಬೇರೆ ಮಾಡಿ ಅಚ್ಚು ಮಾಡಿಸಲು ಸಿದ್ಧಪಡಿಸಬೇಕು. ಈ ಕೆಲಸ ನಡೆಯುತ್ತಿರುವಲ್ಲಿ ಈ ಕಥೆಗಳು ಸಿದ್ಧವಾಗುತ್ತಿವೆ ಎಂಬ ಮಾತನ್ನು ಕೇಳಿ “ಕನ್ನಡ ಪ್ರಭ”ದ ಶ್ರೀ ರಾಮಪ್ರಸಾದ್ ಅವರು ಒಂದು ದಿನ ನನ್ನ ಬಳಿಗೆ ಬಂದು, ಕಥೆಗಳು ಪುಸ್ತಕವಾಗಿ ಪ್ರಕಟವಾಗುವ ಮೊದಲು ನಮ್ಮ ಪತ್ರಿಕೆಯಲ್ಲಿ ಬರಲಿ, ಎಂದರು. ನಾನು ಒಪ್ಪಿದೆ. ಎಲ್ಲ ಕಥೆಯೂ ಬೇಡ, ಆರು ಕಥೆಯನ್ನು ಕೊಡುತ್ತೇನೆ, ಎಂದೆ. ಅವರು ಆಗಲಿ ಎಂದರು. ಆರು ಕಥೆ ಆರು ವಾರದಲ್ಲಿ “ಕನ್ನಡ ಪ್ರಭ”ದ ಭಾನುವಾರದ ಪತ್ರಿಕೆಗಳಲ್ಲಿ ಪ್ರಕಟವಾದವು.

ಈ ವೇಳೆಗೆ ಉಡುಪಿಯ “ಉದಯವಾಣಿ”ಯ ದೀಪಾವಳಿಯ ಸಂಚಿಕೆಗೆ ಒಂದು ಕಥೆಯನ್ನು ಕೊಡಲು ಒಪ್ಪಿದ್ದೆ. “ಮಲ್ಲಿಗೆ”ಯ ಸಂಪಾದಕರು ಶ್ರೀ ದಿವಾಕರರು ಬಂದು ತಮ್ಮ ಪತ್ರಿಕೆಗೆ ಮೂರು ಕಥೆಗಳು ಬೇಕೆಂದು ಬಯಸಿದರು. ಕೊಡಲು ಒಪ್ಪಿದೆ.

"ಕಾದಂಬರಿ"ಯ ಶ್ರೀ ರಾಮಸ್ವಾಮಿ ತನಗೆ ಒಂದು ಕಥೆ ಬೇಕು ಎಂದರು. ಅದಕ್ಕೂ ಒಪ್ಪಿದೆ. ಉಳಿದದ್ದು ಒಂದು ಕತೆ. ಹೊಸ ಪುಸ್ತಕದಲ್ಲಿ ಮುನ್ನ ಪ್ರಕಟವಾಗದ ಒಂದು ಹೊಸ ಕಥೆಯಾದರೂ ಇರಲಿ ಎಂದು ಅದನ್ನು ಇರಿಸಿಕೊಂಡದ್ದಾಯಿತು. ಅದು ಈ ಪುಸ್ತಕದಲ್ಲಿ ಏಳನೆಯದಾಗಿ ಬಂದಿರುವ "ಪದವಿಯ ಅಪಾಯ".

"ಕನ್ನಡ ಪ್ರಭ" ಪತ್ರಿಕೆಯ ಸಂಪಾದಕರು ಈ ಕಥೆಗಳ ಸಾಲಿಗೆ "ಮಾಸ್ತಿಯವರ ೮೮ರ ಕತೆಗಳು" ಎಂದು ಹೆಸರು ಕೊಟ್ಟರು. ಇದು ನಾನು ಸೂಚಿಸಿದ ಅಥವಾ ಬಯಸಿದ ಹೆಸರಲ್ಲ. ಬರೆದವರ ವಯಸ್ಸಿನಿಂದ ಕಥೆ ಒಳ್ಳೆಯದಾಗುವುದಿಲ್ಲ. ಕೆಟ್ಟದೂ ಆಗುವುದಿಲ್ಲವೇನೋ. ಕತೆ ಒಳ್ಳೆಯದಾಗುವುದು ಅದರ ಸಂಗತಿ, ರೀತಿ, ಮಾತು, ಇವು ಓದುವವರಿಗೆ ರುಚಿಸುವುದರಿಂದ. "ಮಲ್ಲಿಗೆ"ಯಲ್ಲಿ ಬಂದ ಮೊದಲ ಕಥೆಯೊಂದಿಗೆ ಶ್ರೀ ಗೋಪಾಲಕೃಷ್ಣ ಅಡಿಗರವರು ನನ್ನ ಕಥೆಗಳನ್ನು ಕುರಿತು ಕೆಲವು ವಿಶ್ವಾಸದ ಮಾತನ್ನಾಡಿ ಬರೆದ ಒಂದು ಟಿಪ್ಪಣಿ ಪ್ರಕಟವಾಯಿತು. "ಕನ್ನಡ ಪ್ರಭ"ದ ಆರು ಕಥೆಗಳ ಪ್ರಕಟನೆಯ ಬಳಿಕ ಮಾರನೆಯ ವಾರ ಆ ಕಥೆಗಳನ್ನು ಕುರಿತು ಶ್ರೀ ಎಲ್. ಎಸ್. ಶೇಷಗಿರಿರಾಯರವರು ಬರೆದ ಸಣ್ಣ ಒಂದು ಅವಲೋಕನ ಪ್ರಕಟವಾಯಿತು. ಟಿಪ್ಪಣಿ ಅವಲೋಕನ, ಎರಡರಲ್ಲೂ ವಿಚಾರಕ್ಕೆ ಅರ್ಹವಾದ ಕೆಲವು ವಿವರ ಇವೆ. ಅವುಗಳನ್ನು ನಾನು ಇಲ್ಲಿ ಪ್ರಸ್ತಾಪಿಸುವುದಿಲ್ಲ. ಶ್ರೇಷ್ಠ ಸಾಹಿತಿ ಶ್ರೇಷ್ಠ ವಿಮರ್ಶಕರು ಎಂದು ಹೆಸರು ಪಡೆದಿರುವ ನನ್ನ ಈ ಮಿತ್ರರು ನನ್ನ ಈ ಕಥೆಗಳ ವಿಷಯದಲ್ಲಿ ಒಟ್ಟಿನಲ್ಲಿ ಒಪ್ಪಿಗೆ ತಿಳಿಸಿರುವುದೇ ನನಗೆ ಒಂದು ಸಂತೋಷ.

ಒಂಬತ್ತು ಕಥೆಗಳನ್ನು ಪ್ರಕಟಿಸಿದ, ಎರಡು ಕಥೆಗಳನ್ನು ಪ್ರಕಟಿಸಲಿರುವ ಪತ್ರಿಕೆಗಳ ಕರ್ತರಿಗೆ, ಕಥೆಗಳ ವಿಷಯದಲ್ಲಿ ವಿಶ್ವಾಸ ಸೂಚಿಸಿರುವ ಅಡಿಗರಿಗೆ, ಶ್ರೀ ಶೇಷಗಿರಿರಾಯರಿಗೆ ನಾನು ವಂದನೆ ಸಲ್ಲಿಸುತ್ತೇನೆ.

ನನ್ನ ಕಥೆಗಳನ್ನು ಬರೆಯುವಲ್ಲಿ ನನ್ನ ಉದ್ದೇಶ ಒಂದೇ ಒಂದು, ಎಂದು ನಾನು ಹಲವು ಸಂದರ್ಭದಲ್ಲಿ ಸೂಚಿಸಿದ್ದೇನೆ. ಆ ಉದ್ದೇಶ, ಜೀವನ ನನಗೆ ನೀಡಿರುವ ದರ್ಶನವನ್ನು ವಿವರಿಸುವ ಚಿತ್ರಗಳನ್ನು ಕೊಡುವುದು. ಇಂದಿನ, ಹಿಂದಿನ, ನಮ್ಮ ನಾಡಿನ,

ನಮ್ಮ ರಾಷ್ಟ್ರದ, ಬೇರೆ ಹತ್ತು ರಾಷ್ಟ್ರಗಳ, ಬಹುತೆರನ ಜನರ ಜೀವನ ಚಿತ್ರಗಳು ನನ್ನ ಕಥೆಗಳಲ್ಲಿ ಕಾಣುತ್ತವೆ. ಇವು ಸತ್ಯವನ್ನು ಬಿಂಬಿಸಿವೆ, ಸ್ಫುಟವಾಗಿವೆ, ಇಷ್ಟೊ ಅಷ್ಟೊ ರಸಾನುಭವವನ್ನು ನೀಡುತ್ತವೆ, ಎಂದು ಓದುವವರಿಗೆ ಕಂಡರೆ ನನ್ನ ಕೆಲಸ ಸಾರ್ಥಕ ಆಯಿತು. ಇದರ ಆಚೆಗೆ ಇವನ್ನು ಓದುವವರು ಇವುಗಳಲ್ಲಿ ಜೀವನವನ್ನು ಕುರಿತು ಇಂಥ ಅಂಥ ನೀತಿ ಮುಂತಾದವನ್ನು ನಿರೂಪಿಸುವ ಉದ್ದೇಶ ಇದೆ ಎಂದು ಭಾವಿಸಬಹುದು. ದಿಟವಾದ ಜೀವನದಿಂದ ಒಂದು ಭಾವ ತೋರುವಂತೆ ಜೀವನದ ದಿಟವಾದ ಒಂದು ಚಿತ್ರದಿಂದಲೂ ಒಂದು ಭಾವ ತೋರುವುದು ಸಹಜ. ಅದರಿಂದ ಓದುವವರಿಗೆ ಪ್ರಯೋಜನ, ಸಂತೋಷ, ಆಗುವುದಾದರೆ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಬರಹದಿಂದ ಓದುಗರಿಗೆ ಸಂತೋಷ, ಶುಭ, ಆಗುವುದು ಲೇಖಕನ ಭಾಗ್ಯ. ಅವನ ರಚನೆಗೆ ಅದಕ್ಕಿಂತ ಹೆಚ್ಚಿನ ಫಲ ಬೇರೆ ಒಂದಿಲ್ಲ.

ನನ್ನ ಕಥೆಗಳಿಂದ ನನ್ನ ಸೋದರ ಜನ ಹಲವರಿಗೆ ಇಂಥ ಪ್ರಯೋಜನ ಆಗಬಹುದು ಎನ್ನುವುದು ನನ್ನ ಸೋದರ ಸಾಹಿತಿ ಶ್ರೀ. ಯು. ಆರ್. ಅನಂತಮೂರ್ತಿಯವರು ಈಗ ಕೆಲವು ತಿಂಗಳ ಹಿಂದೆ "ಪುಸ್ತಕ ಪುರವಣಿ" ಪತ್ರಿಕೆಯ ಸಂಚಿಕೆ ಒಂದರಲ್ಲಿ ಪ್ರಕಟಿಸಿದ ಒಂದು ಲೇಖನದಿಂದ ಕಂಡಿತು. ಈ ಮಿತ್ರರ ವಿಶ್ವಾಸಕ್ಕೆ ವಂದನೆ ಸಲ್ಲಿಸಿ, ಅವರ ಅನುಮತಿಯನ್ನು ನಿರೀಕ್ಷಿಸಿ ಲೇಖನದ ಕೊನೆಯ ವಾಕ್ಯವೃಂದವನ್ನು ಇಲ್ಲಿ ಕೊಟ್ಟಿದ್ದೇನೆ.

"ಬರಿಯ ಅನ್ನಿಸಿಕೆಯನ್ನು ಮಂಡಿಸಿ ಈ ಪುಟ್ಟ ಲೇಖನ ಮುಗಿಸಲು ಓದುಗನ ಅನುಮತಿ ಬೇಡುತ್ತೇನೆ. ಪ್ರಾಯಕ್ಕೆ ಬರುತ್ತಿರುವ ಮಕ್ಕಳಿಗೆ ಯಾವನಾದರೂ ಒಬ್ಬ ಕನ್ನಡ ಲೇಖಕನನ್ನು ಓದಲು ಕೊಡಬೇಕೆಂದು ಅನಿಸುವುದಾದರೆ ಅದು ಮಾಸ್ತಿ ಎಂದು ನನ್ನ ಭಾವನೆ. ಜೀವನದ ನಿಜಗಳೇನು, ನೋವುಗಳೇನು, ತಾಳುವುದೆಂದರೇನು, ಗೆಲ್ಲುವುದೆಂದರೇನು, ಎಂಬ ಕಷ್ಟಗಳನ್ನು ಭಾವಾತಿರೇಕವಿಲ್ಲದೆ ಸೋಗಿಲ್ಲದೆ ಎದುರಿಸಲು ಖಂಡಿತ ಮಾಸ್ತಿ ಕಲಿಸುತ್ತಾರೆ. ನಮ್ಮ ಭಾವನಾಪ್ರಪಂಚವನ್ನು ಪಕ್ವವಾಗಿಸಬಲ್ಲ ಶಿಕ್ಷಣ ಅವರ ಕಥೆಗಳಿಂದ ಖಂಡಿತ ಸಿಗುತ್ತದೆ. ನಯವಾದ ಮಾತಾಡುವವರನ್ನೆಲ್ಲಾ ಅನುಮಾನದಿಂದ ನೋಡುವುದು ಸರಿಯೆನ್ನಿಸುವ ಈ ಕಾಲದಲ್ಲಿ, ಅಂಥ

ಮಾತುಗಳನ್ನೇ ಆಡಿಯೂ ಪ್ರಾಮಾಣಿಕರಾಗಿರುವ ಮಾಸ್ತಿಯವರಂಥ ಅಪ್ಪಟ ಸಾಹಿತಿಗಳು ಕನ್ನಡದಲ್ಲಾಗಲಿ, ಇಂಗ್ಲಿಷಿನಲ್ಲಾಗಲಿ ತೀರ ಅಪರೂಪ.”

ಇತ್ತಿಚೀನ ನನ್ನ ಎಲ್ಲ ಬರಹದ ವಾಡಿಕೆಯ ರೀತಿ, ಚಿರಂಜೀವಿ ಹಿರಿಯ ಅಳಿಯಂದಿರು ಬರೆದುಕೊಂಡು ನಾನು ಸರಿಪಡಿಸಿದ ಕತೆಗಳನ್ನು ಕಿರಿಯ ಮಗಳು ಸೌಭಾಗ್ಯವತಿ ಅರವಿಂದಮ್ಮ ಶುದ್ಧ ಪ್ರತಿಮಾಡಿ ಅಚ್ಚಿಗೆ ಹೋಗಲು ಸಿದ್ಧ ಪಡಿಸಿದರು ಎಂಬುದನ್ನು ನಾನು ಇಲ್ಲಿ ಹೇಳಬೇಕು.

ಬರುತ್ತಿರುವ ದೀಪಾವಳಿಯ ಕಾಣಿಕೆಯಾಗಿ ನಾನು ಒಪ್ಪಿಸುತ್ತಿರುವ ಈ ಪುಸ್ತಕದಿಂದ ನಮ್ಮ ಜನಕ್ಕೆ ಸಂತೋಷ ಆಗಲಿ ಎಂದು ನಾನು ಬಯಸುತ್ತೇನೆ.

ಸಿದ್ಧಾರ್ಥಿ, ವಿಜಯದಶಮಿ **ಶ್ರೀನಿವಾಸ**

1-10-79

ಬೆಂಗಳೂರು.

ವಿಷಯಸೂಚಿ

1 ರಾಜಋಷಿಯ ಕಳಂಕ

2 ಜಡೇ ನಂಜುಂಡೇಶ್ವರ

3 ದುರದೃಷ್ಟದ ಹೆಣ್ಣು

4 ಸಂನ್ಯಾಸ ಅಲ್ಲದ ಸಂನ್ಯಾಸ

5 ಗುಡ್ಡದ ದೇವರು

6 ಟಾಂಗಾ ಹುಸೇನ

7 ಪದವಿಯ ಅಪಾಯ

8 ಬಾಳಿನ ಚೌಕಾಬಾರ

9 ಎಮ್ಮೇ ಕಳವು

10 ಅರ್ವಾಚೀನ ಆಂಗ್ಲ ಶಕುಂತಲೆ

11 ಆಚಾರವಂತ ಅಯ್ಯಂಗಾರ್ರು

12 ಬೇಬಿಲಾನ್ ಕುಮಾರಿ

ರಾಜಋಷಿಯ ಕಳಂಕ

ರೋಮ್ ಚಕ್ರಾಧಿಪತ್ಯದ ಸಮ್ರಾಟ ಮಾರ್ಕಸ್ ಆರೀಲಿಯಸ್ ಕ್ರಿ. ಶ. ೧೮೯ರಲ್ಲಿ ಚಕ್ರಾಧಿಪತ್ಯದ ಉತ್ತರ ಭಾಗದಲ್ಲಿ ಎದ್ದಿದ್ದ ಒಂದು ದಂಗೆಯನ್ನು ಅಡಗಿಸುವ ಯತ್ನದಲ್ಲಿ ತೊಡಗಿದ್ದಾಗ ಒಂದು ರೀತಿಯ ಜ್ವರ ಬಂದು ತೀರಿಕೊಂಡನು. ಆಗ ಅವನಿಗೆ ೫೯ ವರ್ಷ ವಯಸ್ಸು.

ಮಾರ್ಕಸ್ ಆರೀಲಿಯಸ್ ತನ್ನ ಉನ್ನತ ಜೀವನದಿಂದ ಲೋಕದ ಇತಿಹಾಸದಲ್ಲಿ ಪ್ರಖ್ಯಾತ ಪುರುಷನಾಗಿದ್ದಾನೆ. ಅವನು ಚಿಕ್ಕಂದೇ ತನ್ನ ಹಿಂದಿನ ಚಕ್ರವರ್ತಿಯ ಸ್ವೀಕೃತ ಪುತ್ರನಾಗಿ ಚಕ್ರೇಶಪದವಿಗೆ ಉತ್ತರಾಧಿಕಾರಿಯಾದನು. ಮನೋಧರ್ಮದಿಂದ ಸಹಜವಾಗಿ ಸ್ಟೋಯಿಕ್ ಪಂಥದ ಅನುಯಾಯಿಯಾದ ಅವನು, ಅದರ ತತ್ತ್ವಗಳನ್ನು ಅವನ್ನು ತನಗೆ ಉಪದೇಶಿಸಿದ ಗುರುಗಳಿಗೆ ಸಮನಾಗಿ ತಿಳಿದುಕೊಂಡನು; ಅವರಿಗೂ ಸಾಧ್ಯವಾಗದ ಒಂದು ಮಟ್ಟದಲ್ಲಿ ಅನುಷ್ಠಾನಮಾಡಿದನು. ಆಡಳಿತದಲ್ಲಿ ಸಮರ್ಥ, ಸಮರದಲ್ಲಿ ಶೂರ, ಜೀವನದಲ್ಲಿ ಪರಮ ಸಾತ್ವಿಕ, ಎನ್ನಿಸಿಕೊಂಡು ಈ ಚಕ್ರವರ್ತಿ ಮಾನವ ಜಾತಿಗೆ ಒಂದು ಆದರ್ಶವನ್ನು ಕಲ್ಪಿಸುವಂತೆ ಬಾಳಿದನು.

ಈ ಆದರ್ಶಮಾನವ, ಈ ಉದಾತ್ತ ಪ್ರಭು ತೀರಿಕೊಂಡನೆಂದು ತಿಳಿದಾಗ ರೋಮ್ ನಗರದ ಪ್ರಜೆ ಶೋಕದಲ್ಲಿ ಮುಳುಗಿತು; ಅವನ ಕಳೇಬರ ನಗರಕ್ಕೆ ಬಂದಾಗ ಲಕ್ಷ ಲಕ್ಷದಲ್ಲಿ ಅದನ್ನು ಪೂಜಿಸಿ ಕಂಬನಿ ಸುರಿಸಿತು. ಉತ್ತರ ಕ್ರಿಯೆಗಳು ಮುಂದುವರಿಯಲು ರಾಷ್ಟ್ರ ಮೃತನಾದ ಚಕ್ರೇಶನನ್ನು ಉದಾತ್ತ ಮಾನವ ಪದದಿಂದ ದೇವರ ಪದವಿಗೆ ಏರಿಸಿತು. ಚಕ್ರವರ್ತಿ ಇಹಜೀವನವನ್ನು ಮುಗಿಸಿದ ಒಡನೆ ದೇವರಾದನು.

ಪ್ರಭುವಿನ ಕಳೇಬರವನ್ನು ನಗರಕ್ಕೆ ತಂದವೇಳೆ ಸೈನ್ಯದ ಅವನ ಬಿಡಾರದಲ್ಲಿ ಅವನ ಕೋಣೆಯಲ್ಲಿದ್ದ ಒಂದು ಪುಸ್ತಕವೂ ಊರಿಗೆ ಬಂದಿತು. ಪ್ರಭು ಅದರಲ್ಲಿ ಆಗಾಗ ತನ್ನ ಮನಸ್ಸಿಗೆ ತೋಚಿದ್ದ ಯೋಚನೆಗಳನ್ನು ಬರೆದಿಟ್ಟಿದ್ದನು. ಉತ್ತರ ಕ್ರಿಯೆಗಳು ಮುಗಿದ

ಮೇಲೆ ಪ್ರಭುಸೇವಕರು ಪುಸ್ತಕವನ್ನು ಬಲ್ಲವರ ಕೈಗೆ ಕೊಟ್ಟು ನೋಡಿಸಿದರು. ಈ ಜನ, ಇದು ಪ್ರಭುವಿನ ಮನಸ್ಸನ್ನು ತಿಳಿಯಾಗಿ ತಿಳಿಸುವ ಸ್ಫಟಿಕದಂಥ ಬರಹ, ಇದೊಂದು ಗ್ರಂಥರತ್ನ, ಇತಿಹಾಸದಲ್ಲೇ ಇನ್ನೊಂದು ಇಂಥ ಪುಸ್ತಕ ಇರಲಾರದು, ಎಂದು ಅಭಿಪ್ರಾಯಪಟ್ಟರು.

ಚಕ್ರವರ್ತಿ ತನ್ನ ಮಗ ಕಮೋಡಸ್‌ನನ್ನು ಹದಿನಾರು ವರ್ಷ ಹಿಂದೆಯೇ ಯುವಚಕ್ರೇಶನನ್ನಾಗಿ ನೇಮಿಸಿದ್ದನು. ಎರಡು ವರ್ಷದ ಹಿಂದೆ ಸಹಚಕ್ರೇಶ ಪದವಿಗೆ ಏರಿಸಿದ್ದನು. ಅವನು ತೀರಿಕೊಂಡದ್ದೇ ಕಮೋಡಸ್ ಏಕಮಾತ್ರ ಸಮ್ರಾಟ್ ಸ್ಥಾನದಲ್ಲಿ ನಿಂತನು.

ಚಕ್ರೇಶ ಮಾರ್ಕಸ್‌ಗೆ ಸ್ಟೋಯಿಕ್ ಪಥದ ತತ್ತ್ವವನ್ನು ಕಲಿಸಿದ ಗುರು ಜೂನಿಯಸ್ ರಸ್ಟಿಕಸ್ ಎಂಬ ತತ್ತ್ವಜ್ಞ. ಚಕ್ರವರ್ತಿ ತೀರಿಕೊಂಡದ್ದು ಉಳಿದವರಿಗಿಂತ ಈ ಗುರುವಿಗೆ ಹೆಚ್ಚಿನ ದುಃಖದ ಸಂಗತಿ. ರಸ್ಟಿಕಸ್ ಶಿಷ್ಯನ ಉತ್ತರ ಕ್ರಿಯೆಗಳ ಕಲಾಪದಲ್ಲಿ ಅಷ್ಟಾಗಿ ಬೆರೆಯಲಿಲ್ಲ. ನಗರದ ಹೊರಗಿನ ತನ್ನ ಆಶ್ರಮದಲ್ಲಿ ಇರುತ್ತ ತನ್ನೊಡನೆ ಬಾಳುತ್ತಿದ್ದ ತನ್ನ ಅಣ್ಣನಿಂದ ನಡೆದ ಸಂಗತಿಯನ್ನೆಲ್ಲ ತಿಳಿದನು. ಆದರ್ಶ ಪುರುಷನಾಗಿ, ಆದರ್ಶರಾಜನಾಗಿ, ಬಾಳಿದ ಈ ಶಿಷ್ಯ ಇಷ್ಟು ಚಿಕ್ಕ ವಯಸ್ಸಿನಲ್ಲಿ ತೀರಿಕೊಂಡನೇ ಎಂದು ಮಮ್ಮಲ ಮರುಗಿದನು.

ರಸ್ಟಿಕಸ್ ಪ್ರಭುಗಿಂತ ನಾಲ್ಕೋ ಐದೋ ವರ್ಷ ಅಷ್ಟೇ ಹಿರಿಯ. ಶಿಷ್ಯ ಪ್ರಭು ಎಂಬ ಕಾರಣದಿಂದ ಗುರು ಶಿಷ್ಯರ ಮಧ್ಯೆ ವಯಸ್ಸಿನ ಅಂತರವೇ ಇರಲಿಲ್ಲ ಎಂಬ ರೀತಿಯ ಗಾಢವಾದ ಸ್ನೇಹ ಬೆಳೆದಿತ್ತು. ಬಹುಪಾಲು ಇವರು ಒಬ್ಬರನ್ನೊಬ್ಬರು ಏಕವಚನದಲ್ಲೇ ನುಡಿಸುವರು. ಬೇರೆ ಜನ ಜೊತೆಗಿದ್ದಲ್ಲಿ ಮಾತ್ರ ಬಹುವಚನ. ಮಾರ್ಕಸ್ ಆದರ್ಶ ಚಕ್ರವರ್ತಿ ಎಂದು ಕೀರ್ತಿವಂತನಾದಂತೆ, ರಸ್ಟಿಕಸ್ ಆ ಕೀರ್ತಿ ತನ್ನದೋ ಎಂಬಂತೆ ಹೆಮ್ಮೆಗೊಂಡು ಬೆಳೆದನು. ಪ್ರಭುವಿನ ಮಾತು ಎಲ್ಲೆ ಆಗಲಿ ಪ್ರಸ್ತಾಪಕ್ಕೆ ಬಂದಾಗ, "ತತ್ವಜ್ಞಾನ ಬರಿಯ ಜ್ಞಾನವಾಗಿ ನಮ್ಮಂಥವರಿಗೆ ದೊರೆಯುತ್ತದೆ; ಅದು ಕ್ರಿಯೆಯಾಗಿ ಕಾಣುವುದು ಮಾರ್ಕಸ್ ಚಕ್ರವರ್ತಿಯಂಥ ಅಪರೂಪ ಪುರುಷರಲ್ಲಿ. ಬಡವನಾದವನು

ತತ್ವ ಕಲಿತು ಚೆನ್ನಾಗಿ ನಡೆದುಕೊಂಡರೆ ತಪ್ಪಿ ಬಾಳುವುದಕ್ಕೆ ಉಪಪತ್ತಿ ಇಲ್ಲ, ಚೆನ್ನಾಗಿ ಬಾಳುತ್ತಿದ್ದಾನೆ, ಎನ್ನಬಹುದು. ಒಂದು ಚಕ್ರಾಧಿಪತ್ಯದ ಅಧಿರಾಜ ಏನನ್ನ ಬಯಸಿದರೆ ಅದನ್ನು ಪಡೆಯುವ ಸ್ಥಿತಿಯಲ್ಲಿರುತ್ತ ತನ್ನ ಜ್ಞಾನಕ್ಕೆ ತಕ್ಕಂತೆ ಬಾಳಲ್ಲಿ ನಡೆಯುವುದು ಸಾಧ್ಯವೇ ಅಲ್ಲ ಎನ್ನಬಹುದು. ಇಂಥ ಅಸಾಧ್ಯವಾದ ಸಿದ್ಧಿಯನ್ನು ನಮ್ಮ ಪ್ರಭು ಸಾಧಿಸಿದ್ದಾರೆ," ಎಂದು ಈತ ಹೇಳಿದ್ದುಂಟು.

ಹೊಸ ಚಕ್ರೇಶ ಕಮೋಡಸ್ ತಂದೆಗೆ ತಕ್ಕ ಮಗನಲ್ಲ ತಂದೆ ಜೀವಿಸಿದ್ದಾಗಲೇ ಇದು ಅಷ್ಟು ಇಷ್ಟು ಹೊರಗಿನ ಜನಕ್ಕೆ ಕಂಡಿತ್ತು. ತಂದೆ ತೀರಿಕೊಂಡು ಇವನು ಪ್ರಭುವಾದ ವಾರ ಹತ್ತು ದಿನದಲ್ಲೇ ಇವನು ಯೋಗ್ಯ ಪ್ರಭು ಆಗುವುದಿಲ್ಲ ಎನ್ನುವುದು ಸ್ಪಷ್ಟವಾಯಿತು. ನಗರದಲ್ಲಿ ನಡೆದಾಡಿ ಜನರು ಆಡುವ ಮಾತನ್ನು ಕೇಳಿ ಆಶ್ರಮಕ್ಕೆ ಬಂದ ಅಣ್ಣ, ತಮ್ಮನಿಗೆ, ಆಗಾಗ ತನ್ನ ಕಿವಿಗೆ ಬಿದ್ದ ಮಾತನ್ನು ತಿಳಿಸಿದನು. ರಸ್ಟಿಕಸ್ ಈ ಎಲ್ಲ ಮಾತನ್ನು ಕೇಳಿ ದುಃಖಿಸಿದನು. ಪ್ರಕಟವಾಗಿ ಏನನ್ನೂ ಹೇಳಲಿಲ್ಲ.

ಒಂದು ದಿನ ಅಣ್ಣ, "ಮಾರ್ಕಸ್ ಚಕ್ರೇಶನ ಆಲೋಚನೆಯ ಈ ಪುಸ್ತಕ ಇದೆಯಲ್ಲಾ ಅದರಲ್ಲಿ, ಚಕ್ರೇಶ ಒಂದುಕಡೆ, ನೀನು ತನಗೆ ತತ್ವವನ್ನು ಕಲಿಸಿದ ಗುರು ಎಂದು ಹೇಳಿ ಇರುವುದರೊಂದಿಗೆ, ಇನ್ನೊಂದುಕಡೆ, ನನ್ನ ರಸ್ಟಿಕಸ್‌ನ ಮಧ್ಯೆ ಅಭಿಪ್ರಾಯಭೇದ ಮೂಡಿದರೂ ನಾವು ವಿಶ್ವಾಸವಾಗಿಯೇ ಇದ್ದೆವು ಎಂದು ಹೇಳಿದ್ದಾನಂತೆ. ಪ್ರಭುವೂ ನೀನೂ ಯಾವ ಸಂದರ್ಭದಲ್ಲಿ ಭಿನ್ನ ರೀತಿಯಲ್ಲಿ ಬಗೆದಿರಿ? ಇದು ಯಾರಿಗೂ ತಿಳಿಯದು. ನಮ್ಮ ಪಂಡಿತರು ವಿಷಯ ಯಾವುದಿರಬಹುದು ಎಂದು ಊಹಿಸಲು ತೊಡಗಿದ್ದಾರೆ," ಎಂದನು. ರಸ್ಟಿಕಸ್ ಅವನಿಗೆ ಏನನ್ನೂ ಹೇಳಲಿಲ್ಲ. ನಡೆದಿದ್ದ ಸಂಗತಿಯನ್ನು ತಾನೇ ನೆನೆದನು.

ತನ್ನ ಮಾತು ಚಕ್ರವರ್ತಿಗೆ ರುಚಿಸದೆ ಹೋದ ಮೊದಲ ಸಂದರ್ಭ ಹದಿನಾರು ವರ್ಷ ಹಿಂದಿನದು. ಚಕ್ರವರ್ತಿ ಆಗ ತನ್ನ ಮಗ ತನ್ನ ಉತ್ತರಾಧಿಕಾರಿ ಎಂಬ ತನ್ನ ನಿರ್ಣಯವನ್ನು ಪ್ರಕಟಿಸಿದನು. ರೋಮ್ ಈಚೆಗೆ ಬೆಳೆಸಿಕೊಂಡು ಬಂದಿದ್ದ ಸಂಪ್ರದಾಯದಲ್ಲಿ, ಪ್ರಭು ಪದವಿ ತಂದೆಯಿಂದ ಮಗನಿಗೆ ಹೋಗುವ ಕ್ರಮ ಇರಲಿಲ್ಲ. ಚಕ್ರವರ್ತಿಯಾದವನು

ಯೋಗ್ಯನಾದ ಒಬ್ಬ ತರುಣನನ್ನು ತನ್ನ ಉತ್ತರಾಧಿಕಾರಿಯಾಗಿರಲು ಆರಿಸಿಕೊಳ್ಳಬೇಕು: ಇದು ಕ್ರಮ ಆಗಿತ್ತು. ಹಿಂದಿನ ಚಕ್ರವರ್ತಿ ಮಾರ್ಕಸ್ ಅರೀಲಿಯಸ್‌ನನ್ನು ಹೀಗೆ ದತ್ತು ಮಾಡಿಕೊಂಡಿದ್ದನು. ದತ್ತಾಗಿ ಬಂದು ಪ್ರಭುವಾದ ಈ ಚಕ್ರವರ್ತಿ ಉತ್ತರಾಧಿಕಾರಕ್ಕೆ ಮಗನನ್ನು ಆರಿಸುವುದೇ ಎಂದು ರಸ್ಟಿಕಸ್ ಒಂದುದಿನ ಅವನೊಂದಿಗೆ ಈ ಮಾತನ್ನು ಎತ್ತಿದನು; ಉತ್ತರಾಧಿಕಾರಕ್ಕೆ ನೀನು ಬೇರೆಯವರನ್ನು ಆರಿಸಿದ್ದರೆ ಚೆನ್ನವಾಗಿರುತ್ತಿತ್ತು, ಎಂದನು. ಚಕ್ರವರ್ತಿ, “ನಾನು ಸ್ವಾರ್ಥದಿಂದ ನಡೆದಿದ್ದೇನೆ ಎಂದು ನೀನು ತಿಳಿದಿಲ್ಲ ಅಲ್ಲ?” ಎಂದು ಕೇಳಿದನು. “ನಾನು ಹಾಗೆ ತಿಳಿದಿಲ್ಲ; ಆದರೆ ನೋಡುವ ಯಾರಿಗೂ ಹಾಗೆ ಕಾಣುತ್ತದೆ.” “ಕಾಣುವುದು ದಿಟ. ಆದರೆ ನಾನು ಧೈರ್ಯವಾಗಿ ಹೇಳುತ್ತೇನೆ. ನಾನು ನನ್ನ ಮಗನನ್ನು ಉತ್ತರಾಧಿಕಾರಿ ಎಂದು ಕರೆದಿರುವುದು ಮಮತೆಯ ಕಾರಣದಿಂದಲ್ಲ ರಾಷ್ಟ್ರದ ಕ್ಷೇಮದ ದೃಷ್ಟಿಯಿಂದ.” “ಇದು ಜನಕ್ಕೆ ತಿಳಿಯಬೇಕು ಹೇಗೆ?” “ಅದನ್ನು ಎಲ್ಲರೂ ಯೋಚಿಸಬೇಕು. ನನ್ನ ಮಗನನ್ನಲ್ಲ, ಬೇರೆ ಯಾರನ್ನು ಆರಿಸಲಿ? ನನ್ನ ತಂದೆಗೆ ನಾನು ಒದಗಿದಂತೆ ನನಗೆ ಒದಗಿ ಯಾವ ತರುಣ ಇದ್ದಾನೆ ಹೇಳು.” “ಅದು ದಿಟ. ಆ ಭಾಗದಲ್ಲಿ ಹಿಂದಿನ ಚಕ್ರವರ್ತಿಗಳು ಅದೃಷ್ಟವಂತರು. ಅವರ ಎದುರಿನಲ್ಲೇ ನೀನು ಇದ್ದೆ; ವಯಸ್ಕನಾಗಿ ಇದ್ದೆ; ತತ್ತ್ವವನ್ನು ಅಭ್ಯಾಸ ಮಾಡುತ್ತಿದ್ದೆ, ಚಕ್ರವರ್ತಿ ಸ್ಥಾನಕ್ಕೆ ಏರದಿದ್ದರೆ ತತ್ತ್ವಜ್ಞನಾಗಿ ಉನ್ನತ ಸ್ಥಾನವನ್ನು ಗಳಿಸುತ್ತಿದ್ದೆ. ನಿನ್ನ ಎದುರಿಗೆ ಅಂಥ ತರುಣ ಒಬ್ಬ ಇಲ್ಲ, ಒಪ್ಪಿದೆ; ಆದರೂ ನಾಲ್ಕು ವರ್ಷ ತಡೆದು ನೋಡಬಹುದಾಗಿತ್ತು. ಅದು ಒಂದು ಮಾರ್ಗ. ಆದರೆ ಇದೂ ಒಂದು ಮಾರ್ಗವೇ. ಇನ್ನೂ ಹುಡುಗನಾಗಿರುವ ಇವನಿಗೆ, ನೀನು ಒಂದು ದೊಡ್ಡ ಸ್ಥಾನವನ್ನು ತುಂಬ ಬೇಕಾಗುತ್ತದೆ, ಅದಕ್ಕೆ ಯೋಗ್ಯತೆಯನ್ನು ಬೆಳೆಸಿಕೋ, ಎಂದು ಹೇಳಿದಂತಾಯಿತು. ನಾನು ಈಗ ಈ ನಿರ್ಣಯ ಮಾಡಲಿಲ್ಲ ಎನ್ನು. ಇವನು ಹೇಗೋ ಬೆಳೆದ. ಇವನನ್ನು ಆಮೇಲೆ ತಿದ್ದುವುದು ಸಾಧ್ಯವೆ? ದೈವೇಚ್ಛೆಯಲ್ಲಿ ನನ್ನ ದಿನ ಮುಗಿದು ಈ ಸ್ಥಾನಕ್ಕೆ ಇನ್ನೊಬ್ಬ ಬರಬೇಕಾದಾಗ ರಾಷ್ಟ್ರ ಏನುಮಾಡಬೇಕು? ಯಾರೋ ನಾಲ್ಕು ಜನ ಯೋಗ್ಯರೋ ಅಯೋಗ್ಯರೋ ಸ್ಥಾನಕ್ಕಾಗಿ ಕಾದಬೇಕಾಗಿತ್ತು. ಅದು ಶುಭವೆ? ಇಂಥ

ಸನ್ನಿವೇಶವನ್ನು ತಪ್ಪಿಸುವುದು ಯುಕ್ತ ಅಲ್ಲವೆ? ಜನ ತಪ್ಪಾಗಿ ತಿಳಿಯುತ್ತಾರೆ ಎಂದು ಅಂಜಿ ನಾನು ಯುಕ್ತವಾದ ಏರ್ಪಾಡನ್ನು ಮಾಡದೇ ಇರುವುದು ಯೋಗ್ಯವೆ? ನೀನು ನನಗೆ ಪಾಠ ಹೇಳಿದ ಆಚಾರ್ಯ. ನೀನು ಹೇಗೆ ಹೇಳಿದರೆ ನಾನು ಹಾಗೆ ಮಾಡಲು ಸಿದ್ಧನಾಗಿದ್ದೇನೆ. ಉತ್ತರಾಧಿಕಾರಕ್ಕೆ ಬೇರೆ ಯಾರನ್ನು ಆರಿಸಲಿ ಹೇಳು."

ಚಕ್ರವರ್ತಿಯ ಮಾತು ಯುಕ್ತವಾಗಿತ್ತು. ಸದ್ಯ ಯಾರೂ ಈ ನೇಮನಕ್ಕೆ ತಕ್ಕವರು ಕಣ್ಣೆದುರಿಗೆ ಇರಲಿಲ್ಲ. ತಾನು, "ನಿನ್ನ ಹೆಸರು ಶುಭ್ರವಾಗಿರಲಿ ಎಂಬ ಆಸೆಯಿಂದ ನಾನು ಈ ಮಾತನ್ನು ಎತ್ತಿದೆ. ನಿನ್ನ ಮಗನನ್ನು ಬೇಡ, ಇನ್ನು ಯಾರನ್ನಾದರೂ ನೇಮಿಸು, ಎಂದು ನಾನು ನಿನಗೆ ಹೇಳುತ್ತಿಲ್ಲ. ಕೆಲವು ದಿನ ತಡೆಯಬಹುದಾಗಿತ್ತು ಎಂದಷ್ಟೇ ನನ್ನ ಅರ್ಥ. ಅದು ಕ್ಷೇಮವಲ್ಲ ಎಂದು ನಿನಗೆ ಕಾಣುತ್ತಿದೆ. ಎಂದ ಮೇಲೆ, ನೀನು ಮಾಡಿರುವ ಏರ್ಪಾಡು ಯುಕ್ತವಾದದ್ದು," ಎಂದನು.

ಹದಿನಾಲ್ಕು ವರ್ಷ ಕಳೆದ ಮೇಲೆ, ಈಗ ಎರಡು ವರ್ಷದ ಹಿಂದೆ ಚಕ್ರವರ್ತಿ, ಮಗನನ್ನು ಯುವಚಕ್ರೇಶನೆಂದು, ನೇಮಿಸಿ ರಾಷ್ಟ್ರಕ್ಕೆ ತಿಳಿಸಿದನಷ್ಟೆ. ಇದೂ ಸ್ವಲ್ಪ ಆತುರದ ನಡತೆ ಆಯಿತೆಂದು ತನಗೆ ಕಂಡಿತು. ತಾನು ಮತ್ತೆ ಈ ಮಾತನ್ನೆತ್ತಿದ್ದನು. ಚಕ್ರವರ್ತಿ ಹದಿನಾರು ವರ್ಷದ ಹಿಂದೆ ಕೊಟ್ಟ ಸಮಾಧಾನವನ್ನೆ ಈಗಲೂ ಕೊಟ್ಟನು. "ತಕ್ಕವರು ಬೇರೆ ಯಾರೂ ಕಾಣಲಿಲ್ಲ. ತನ್ನ ಬಳಿಕ ಸ್ಥಾನಕ್ಕಾಗಿ ಸ್ಪರ್ಧೆ ನಡೆಯುವ ಸ್ಥಿತಿ ಬರಬಾರದು." ತಾನು ಮತ್ತೆ ಸುಮ್ಮನಾದನು. ಎರಡನೆಯ ಬಾರಿ ಮಾತನ್ನೆತ್ತಿದ್ದರಿಂದ ಚಕ್ರವರ್ತಿಗೆ ಸ್ವಲ್ಪ ಬೇಸರ ಆಯಿತು ಎಂಬಂತೆ ಕಂಡಿತು. ಆಯಿತು; ತನಗೆ ಸರಿ ಎಂದು ಕಂಡದ್ದನ್ನು ತಾನು ಮಾಡಿದೆ; ಇದರಿಂದ ಚಕ್ರವರ್ತಿಗೆ ಅಸಮಾಧಾನ ಆಯಿತೆಂದರೆ ಅದನ್ನು ತಾನು ಒಪ್ಪಿಕೊಳ್ಳಬೇಕು. ಮುಖ್ಯ, ಚಕ್ರವರ್ತಿ ಮಮತೆ ಇಲ್ಲದೆ ನಡೆಯುತ್ತಿದೇನೆ ಎಂದು ತಿಳಿದಿರುವನಾದರೂ ದಿಟದಲ್ಲಿ ಮಮತೆಯೇ ಅವನ ನಿರ್ಧಾರಕ್ಕೆ ಕಾರಣ. ಅವನು ಜ್ಞಾನಿ, ಕಂಡಹಾಗೆ ತಪ್ಪು ಮಾಡುವನಲ್ಲ. ಕಾಣದೆ ತಪ್ಪು ನಿರ್ಣಯಕ್ಕೆ ಬಂದಿದ್ದಾನೆ. ನಿರ್ಣಯಕ್ಕೆ ಒಳ್ಳೆಯ ಕಾರಣ ಒಂದನ್ನು ಕಲ್ಪಿಸಿಕೊಂಡಿದ್ದಾನೆ.

ಮಾರ್ಕಸ್ ಆರೀಲಿಯಸ್ ಹಿಂದಿನ ಚಕ್ರವರ್ತಿಗೆ ದತ್ತಾಗಿ ಬಂದು ಚಕ್ರವರ್ತಿ ಪದವಿಗೆ ಉತ್ತರಾಧಿಕಾರಿ ಆದದ್ದು ಈಗ್ಗೆ ಹತ್ತಿರ ಹತ್ತಿರ ನಲವತ್ತು ವರ್ಷದ ಹಿಂದಿನ ಮಾತು. ಆ ಸುಮಾರಿನಲ್ಲಿ ಇವನಿಗೆ ಮದುವೆ ಆಗಿತ್ತು. ಇವನನ್ನು ಉತ್ತರಾಧಿಕಾರಿಯನ್ನಾಗಿ ಮಾಡಿಕೊಂಡ ಚಕ್ರವರ್ತಿ ಆ ಮದುವೆಯನ್ನು ಇಲ್ಲಮಾಡಿ, ಆ ಮೊದಲ ಹೆಂಡಿರನ್ನು ಕನ್ಯ ಎನ್ನಿಸಿ, ದತ್ತು ಯುವಕನಿಗೆ ತನ್ನ ಮಗಳು ಫೌಸ್ಟಿನಾ ಎಂಬ ತರುಣಿಯನ್ನು ಕೊಟ್ಟು ಮದುವೆ ಮಾಡಿದನು. ಫೌಸ್ಟಿನಾ ಚೆಲುವೆ ಹೌದು; ಗುಣಶಾಲಿಯೂ ಹೌದು. ಇದಾದ ಇಪ್ಪತ್ತು ವರ್ಷದ ಮೇಲೆ, ಮಾರ್ಕಸ್ ಚಕ್ರವರ್ತಿಯಾಗಿ ಈ ಹೆಂಡತಿ ಚಕ್ರವರ್ತಿನಿ ಆದಳು. ಆ ವೇಳೆಗೆ ಅವಳು ಆರೋ ಏಳೋ ಮಕ್ಕಳನ್ನು ಹೆತ್ತಿದ್ದಳು. ಗಂಡ ಹೆಂಡಿರು ತುಂಬ ಸಂತೋಷವಾಗಿಯೇ ಇದ್ದರು. ಇರುತ್ತ ಈಗ ನಾಲ್ಕೈದು ವರುಷದ ಈಚೆಗೆ ಕೆಲವು ಜನ ಒಂದೆರಡು ಕೆಟ್ಟ ಮಾತನ್ನು ಆಡಲು ಆರಂಭಿಸಿದ್ದರು. ಆಫೀಡಿಯಸ್ ಕ್ಯಾಸಿಯಸ್ ಎಂಬ ಒಬ್ಬ ಸೇನಾನಿ ಚಕ್ರವರ್ತಿಯ ಬಳಿಗೆ ಬರುತ್ತ ಹೋಗುತ್ತ ಇದ್ದನು. ಅವನು ಚಕ್ರವರ್ತಿಗಿಂತ ಹತ್ತು ವರ್ಷ ಚಿಕ್ಕವನು. ತುಂಬ ಚೆಲುವ. ಜನರಲ್ಲಿ ಸರಸವಾಗಿ ನಡೆದುಕೊಳ್ಳುವ ಸ್ವಭಾವದವನು. ಚಕ್ರವರ್ತಿನಿ ಈ ಮನುಷ್ಯನೊಂದಿಗೆ ಅತಿ ಸಲಿಗೆಯಿಂದ ನಡೆದುಕೊಂಡಳು ಎನ್ನುವುದು ಈ ಕೆಟ್ಟ ಮಾತನಾಡುವವರ ಆರೋಪ. ಸಲಿಗೆಯ ನಡೆ ಯಾವುದು, ನುಡಿ ಏನು, ಇದನ್ನು ಯಾರಾದರೂ ನೋಡಿದರು, ಕೇಳಿದರು ಎಂದಲ್ಲ, ಸಲಿಗೆ ಅತಿಯಾಯ್ತು ಎಂದು ಪಿಸುಮಾತು ಅಷ್ಟೆ. ಜನ ಚಕ್ರವರ್ತಿಯನ್ನು ದೇವರು ಎಂಬಂತೆ ಗೌರವದಿಂದ ಕಾಣುತ್ತಿದ್ದರು. ಚಕ್ರವರ್ತಿನಿಯನ್ನು ಕುರಿತ ಇಂಥ ಮಾತು ಪ್ರಭುವಿನ ಮಿತ್ರರಿಗೆ ಕುಂದುತರುವ ಮಾತಾಗಿ ಕಂಡಿತು. ಇದು ಚೆನ್ನ ಅಲ್ಲ. ಇದನ್ನು ಸರಿಪಡಿಸಬೇಕು. ಹೀಗೆಂದುಕೊಂಡವರಲ್ಲಿ ರಸ್ಟಿಕಸ್ ಒಬ್ಬ. ಗುರುವಾಗಿ ತನಗೆ, ರಾಣಿಯನ್ನು ಕುರಿತ ಮಾತನ್ನು ಯಾವುದೇ ರೀತಿಯಲ್ಲಿ ಪ್ರಭುವಿನೊಂದಿಗೆ ಎತ್ತ ಬೇಕೆ ಎಂಬ ಪ್ರಶ್ನೆ ಮನಸ್ಸಿನಲ್ಲಿ ಮೂಡಿತು. ಸ್ವಾಮಿನಿಯಾದವಳು ಅಜಾಗ್ರತೆಯಿಂದ ನಡೆದುಕೊಳ್ಳುತ್ತಿದ್ದಾಳೆ. ರಾಜ ಅವಳಿಗೆ ಎಚ್ಚರ ಹೇಳಬೇಕಲ್ಲವೆ? ಜನ ಅವಳ ವಿಷಯ ಇಂಥ ಮಾತನ್ನಾಡುತ್ತಿದ್ದಾರೆ ಎನ್ನುವುದು ಅವನಿಗೆ ತಿಳಿದರೆ ಅಲ್ಲದೆ ಅವನ ಎಚ್ಚರ

ಹೇಳುವುದು? ತನ್ನ ಪತ್ನಿಯ ವಿಷಯ ಕೆಲವರು ಆಡುತ್ತಿರುವ ಮಾತು ಪ್ರಭುವಿನ ಕಿವಿಗೆ ಬಿದ್ದಿದೆಯೆ? ಇದು ಹೇಗೆ ತಿಳಿಯಬೇಕು? ಬಿದ್ದಿರಬಹುದು. ಬೀಳದೆಯೂ ಇರಬಹುದು. ಬಿದ್ದಿದ್ದೂ, ಇದು ಏನು ಮಾತು, ಹುಚ್ಚು ಮಾತು ಎಂದು ಅವನು ಅಲಕ್ಷ್ಯವಾಗಿರಬಹುದು. ಇಂಥ ಮಾತಿನಿಂದ ಪ್ರಭುಪದದ ಪ್ರತಿಷ್ಠೆ ಇಳಿಯುತ್ತದೆ ಎಂದು ಅವನಿಗೆ ತೋರದೆ ಇರಬಹುದು. ಅದು ಇಳಿಯುವುದು ದಿಟ. ಅದನ್ನು ಅವನಿಗೆ ಹೇಳಬೇಕು. ಹೇಳಬೇಕು ಸರಿ. ಯಾರು ಹೇಳುವರು? "ನಿನ್ನ ರಾಣಿಯನ್ನು ಕುರಿತು ಜನ ಹೀಗೆನ್ನುತ್ತಿದ್ದಾರೆ," ಎಂದು ಪ್ರಭುವಿಗೆ ಹೇಳುವ ಧೈರ್ಯ ಯಾರಿಗೆ, ಸಲಿಗೆ ಯಾರಿಗೆ? ಹೀಗೆಂದೆಲ್ಲ ಯೋಚಿಸಿ ರಸ್ಟಿಕಸ್ ಇದು ತನ್ನ ತತ್ತ್ವಜ್ಞಾನದ ಪರೀಕ್ಷೆಯ ಒಂದು ಘಟ್ಟ ಎಂಬಂತೆ ಕಾಣುತ್ತಿದೆ ಎಂದುಕೊಂಡನು. ರಾಷ್ಟ್ರದ ಹಿತಕ್ಕಾಗಿ, ಸಮಾಜದ ಕ್ಷೇಮಕ್ಕಾಗಿ, ಪ್ರಭುವಿಗೆ ಒಂದು ಎಚ್ಚರದ ಮಾತನ್ನು ಹೇಳಬೇಕಾಗಿ ಬಂದಾಗ ಪ್ರಭುವಿಗೆ ಪಾಠ ಹೇಳಿದ ಹಿರಿಯನಾದ ತನ್ನಂಥವನು ಹಿಂತೆಗೆಯುವುದು ಯುಕ್ತವೆ? ಪ್ರಭುವಿಗೆ ಬೇಸರವಾಗಬಾರದು ಎಂದು ಸುಮ್ಮನಿದ್ದರೆ ಅದು ತನ್ನಲ್ಲಿ ಕರ್ತವ್ಯಲೋಪ ಆಗುವುದಿಲ್ಲವೆ? ಸುದ್ದಿ ಕಿವಿಗೆ ಬಿದ್ದ ಹೊಸದರಲ್ಲಿ ಹೀಗೆ ಯೋಚನೆ ಮಾಡಿ ಇನ್ನೇನು ಪ್ರಭುವಿನಲ್ಲಿ ಈ ಮಾತನ್ನು ಎತ್ತಬೇಕು ಎಂದು ಇವನು ಯೋಚಿಸುವ ವೇಳೆಗೆ ರಾಣಿಯನ್ನು ಕುರಿತ ಮತ್ತೊಂದು ಸಂಗತಿ ಇವನ ಕಿವಿಯನ್ನು ಮುಟ್ಟಿತು. ಚಕ್ರಾಧಿಪತ್ಯದ ಪೂರ್ವ ಭಾಗದ ಒಂದು ಪ್ರದೇಶದಲ್ಲಿ ವಿರೋಧಿಗಳು ದಂಗೆ ಎದ್ದಿದ್ದರು. ದಂಗೆಯನ್ನು ಅಡಗಿಸುವುದಕ್ಕೆ ಅಧಿಕಾರ ಪಡೆದು ಮೂರು ದಿನದ ಹಿಂದೆ ಆಫಿಡಿಯಸ್ ಕ್ಯಾಸಿಯಸ್ ಹೊರಟಿದ್ದನು. ಅವನು ಹೊರಟ ಅದೇ ದಿನ ಚಕ್ರವರ್ತಿನಿ ತಾನು ಎಲ್ಲಿಗೋ ಹೋಗುತ್ತೇನೆ ಎಂದು ಸಣ್ಣ ಪರಿವಾರದೊಂದಿಗೆ ತಾನೂ ಅರಮನೆಯಿಂದ ಹೊರಟಳು. ಜನಕ್ಕೆ ತಿಳಿದ ಮಟ್ಟಿಗೆ ಅವಳು ಸೇನಾನಿಯ ಹಿಂದೆಯೇ ಹೋಗಿದ್ದಳು. ಈ ಮಾತು ಕಿವಿಯನ್ನು ಮುಟ್ಟಿದಾಗ ರಸ್ಟಿಕಸ್‌ನಿಗೆ, ತನ್ನ ಹೆಂಡತಿ ತನ್ನನ್ನು ಬಿಟ್ಟು ಯಾರಲ್ಲಿಗೋ ಹೊರಟು ಹೋದಳು ಎಂದಿದ್ದರೆ ಯಾವ ಖೇದ ಆಗುತ್ತಿತ್ತೋ ಅಂತ ಖೇದ ಆಂತರ್ಯವನ್ನು ಇರಿಯಿತು. ಇದು ಏನು ಈ ಹೆಂಗಸು ಆಡುತ್ತಿರುವ ಈ ಆಟ?

ನೋಡುವವರಿಗೆ ಹೇಗೆ ಕಾಣುತ್ತದೆ ಎಂದು ಹೇವ ಇರಬೇಡವೇ ಈ ಪ್ರಾಣಿಗೆ? ಇವಳು ಹೀಗೆ ಹೋಗಿದ್ದಾಳೆ ಎನ್ನುವುದು ಚಕ್ರ ವರ್ತಿಗೆ ತಿಳಿದಿದೆಯೇ? ತಿಳಿದಿಲ್ಲ. ಯಾರಾದರೂ ಹೇಳಬೇಡವೆ? ತಿಳಿದಿದೆ; ಇದ್ದೂ ಸುಮ್ಮನಿದ್ದಾನೆ; ಇದು ಸರಿಯಲ್ಲ. ಇದನ್ನಾದರೂ ಯಾರಾದರೂ ಹೇಳಬೇಡವೇ? ಇದು ತನ್ನ ಪಾಲಿಗೆ ಬಂದ ಕರ್ತವ್ಯ. ಇದರಲ್ಲಿ ಸಂದೇಹವಿಲ್ಲ. ತಾನು ಪ್ರಭುವಿನ ಬಳಿಗೆ ಹೋಗಿ ಈ ಪ್ರಸ್ತಾಪವನ್ನು ಮಾಡಬೇಕು.

ಬೇಕೇ, ಬೇಡವೇ ಎಂದು ಯೋಚಿಸುತ್ತ ಎರಡು ದಿನ ಕಳೆದು ತಾನು ಒಂದು ಮಧ್ಯಾಹ್ನ ಚಕ್ರವರ್ತಿಯನ್ನು ಕಾಣಲು ಅರಮನೆಗೆ ಹೋದನು. ಅದಕ್ಕೆ ತಕ್ಕಂತೆ ಚಕ್ರವರ್ತಿ ಬಿಡುವಾಗಿ ತನ್ನ ವಾಸದ ತೊಟ್ಟಿಯ ಸ್ವಂತ ಕೋಣೆಯಲ್ಲಿ ಕುಳಿತಿದ್ದನು. ತಾನು ಕಾಣಬಹುದೇ ಎಂದು ಹೇಳಿ ಕಳುಹಿಸಿದ ಒಡನೆ, ಅವಶ್ಯ ಬರಲಿ ಎಂದು ಉತ್ತರ ಕಳುಹಿಸಿ, ತಾನು ಕೋಣೆಯ ಬಾಗಿಲನ್ನು ಸೇರುವ ವೇಳೆಗೆ ಸ್ವತಃ ಹೊರಕ್ಕೆ ಬಂದು ಇವನನ್ನು ಬರಮಾಡಿ ಕೊಂಡನು. ಚಕ್ರವರ್ತಿಯ ನಡತೆ ಸದಾ ಸುಂದರವಾದದ್ದು. ಹುಡುಕಿದರೆ ಕೂಡ ಕಾಣಬಹುದಾದ ಒಂದು ಕೊರೆ ಅದರಲ್ಲಿ ಇರುತ್ತಿರಲಿಲ್ಲ. ಒಳಗೆ ಹೋಗಿ ತಾನು ಪೀಠದ ಮೇಲೆ ಕುಳಿತ ಮೇಲೆ ಚಕ್ರವರ್ತಿ, “ನಾನು ನಿನ್ನನ್ನು ನೋಡ ಬೇಕು ಎಂದುಕೊಂಡೆ. ಅದಕ್ಕೆ ಸರಿಯಾಗಿ ನೀನು ಬಂದೆ”, ಎಂದನು.

“ತುಂಬ ಸಂತೋಷ. ನಾನು ಒಂದು ಸಂಗತಿಯನ್ನು ಕುರಿತು ನಿನ್ನ ಸಂಗಡ ಮಾತನಾಡಬೇಕು ಎಂದುಕೊಂಡೆ. ಆಡುವುದೆ, ಬಿಡುವುದೇ ಎಂದು ಎರಡು ದಿನ ಮನಸ್ಸಿನಲ್ಲಿ ಉಯ್ಯಾಲೆ ಆಡಿ, ಆಡುವುದೇ ಸರಿ ಎಂದು ನಿಶ್ಚಯ ಆದ ಮೇಲೆ ಈಗ ಕಾಣಲು ಬಂದೆ.”

“ಅಂಥ ಸಂಗತಿ ಏನು, ಆಚಾರ್ಯ? ನನ್ನ ನಿನ್ನ ಸಂಬಂಧದಲ್ಲಿ ಇಂಥ ಹಿಂಜರಿವಿಗೆ ಅವಕಾಶ ಇದೆಯೆ?”

“ಸಾಮಾನ್ಯವಾಗಿ ಇಲ್ಲ, ಪ್ರಭು. ಆದರೆ ಇದು ಒಂದು ಅಸಾಮಾನ್ಯವಾದ ವಿಷಯ.”

“ಆಚಾರ್ಯ! ವಿಷಯ ಯಾವುದು ನನಗೆ ತಿಳಿಯದು. ಆದರೆ ಒಂದು ಸಂಗತಿಯನ್ನು ನಿನಗೆ ಧೈರ್ಯವಾಗಿ ಹೇಳುತ್ತೇನೆ. ನನ್ನೊಂದಿಗೆ ಆಡಬೇಕಾದ ಮಾತು

ಎಂದು ನಿನಗೆ ತೋರಿ, ನೀನು ನನ್ನೊಂದಿಗೆ ಆಡಿದ ಯಾವುದೇ ಮಾತನ್ನು ನಾನು ಸಮಾಧಾನವಾಗಿ ಕೇಳುತ್ತೇನೆ. ಅಷ್ಟೇ ಅಲ್ಲ. ರುಚಿಸದಿದ್ದರೂ ಸಂತೋಷದಿಂದ ಕೇಳುತ್ತೇನೆ. ಈ ವಿಷಯದಲ್ಲಿ ನಿನಗೆ ಶಂಕೆ ಬೇಡ.”

“ದಿಟ, ಪ್ರಭು. ನೀನು ನನ್ನನ್ನು ಎಲ್ಲ ಹೊತ್ತೂ ಹೀಗೆಯೇ ನಡೆಸಿಕೊಂಡಿದ್ದೀಯೆ. ಈಗಲೂ ನಡೆಸಿಕೊಳ್ಳುತ್ತೀಯೆ. ಇದು ಮನಸ್ಸಿಗೆ ನಿಶ್ಚಯ ಆದ್ದರಿಂದಲೇ ನಾನು ಇಲ್ಲಿಗೆ ಬಂದಿರುವುದು”.

“ಸರಿಯಾದ ಮಾತು, ಸಂಗತಿ ಏನು?”

“ಸಂಗತಿ ಒಂದರ್ಥದಲ್ಲಿ ನಿನ್ನ ಸ್ವಂತದ್ದು. ಇನ್ನೊಂದರ್ಥದಲ್ಲಿ ರಾಷ್ಟ್ರದ ಕ್ಷೇಮವನ್ನು ಕುರಿತದ್ದು. ನಿನ್ನ ಸ್ಥಾನದ ಪ್ರತಿಷ್ಠೆಯನ್ನು ಕುರಿತದ್ದು.”

“ಹೌದೇ! ಎಂದ ಮೇಲೆ ಇದನ್ನು ತಿಳಿಸುವುದಕ್ಕೆ ಎರಡು ದಿನ ತಡ ಮಾಡಬಾರದಾಗಿತ್ತು. ಅಲ್ಲವೆ?”

“ಒಪ್ಪಿದೆ.”

“ಇನ್ನು ತಡಮಾಡದೆ ಹೇಳು. ಆಚಾರ್ಯನ ನುಡಿಯನ್ನು ಕೇಳಲು ಮನಸ್ಸು ತವಕ ಪಡುತ್ತಿದೆ.”

“ಸಂಗತಿ ನಿನ್ನ ರಾಣಿಯನ್ನು ಕುರಿತದ್ದು.”

“ಸರಿ.”

“ಆಕೆ ಒಂದು ವಿವರದಲ್ಲಿ ನಡೆದುಕೊಳ್ಳುತ್ತಿರುವ ರೀತಿ ಅವಳ ಸ್ಥಾನದ ಗೌರವಕ್ಕೆ ತಕ್ಕದಾಗಿಲ್ಲ ಎಂದು ಜನ ಹೇಳಿಕೊಳ್ಳುತ್ತಿದಾರೆ. ಇದನ್ನು ನಿನಗೆ ತಿಳಿಸಲು ಧೈರ್ಯ ಯಾರಿಗೂ ಇಲ್ಲ. ಇರುತ್ತ, ಇದು ನಿನ್ನ ಮನಸ್ಸಿಗೆ ಬರಬೇಕು. ಹೀಗೆಂದು ನಾನು ಈ ಹೊಣೆಯನ್ನು ಹೊತ್ತು ಬಂದಿದೇನೆ.”

“ನನಗೆ ತತ್ತ್ವವನ್ನು ಕಲಿಸಿದ ಗುರು ನೀನು, ರಸ್ಟಿಕಸ್. ನೀನಲ್ಲದೆ ಬೇರೆ ಯಾರು ನನಗೆ ಈ ಉಪಕಾರವನ್ನು ಮಾಡುವರು? ಸಂಕೋಚವಿಲ್ಲದೆ ಹೇಳು. ಆಕೆ ಮಾಡಿರುವ ತಪ್ಪು ಏನು?”

“ಹೇಳಲು ನನಗೆ ಬಾಯಿ ಬರುತ್ತಿಲ್ಲ. ಆಕೆ ನಿನ್ನ ವಿಷಯಕ್ಕೆ ಸರಿಯಾಗಿ ನಡೆದುಕೊಳ್ಳುತ್ತಿಲ್ಲ ಎಂದು ಜನರಿಗೆ ಕಂಡಿದೆ.”

“ನನ್ನ ವಿಷಯಕ್ಕೆ ಸರಿಯಾಗಿ ನಡೆದುಕೊಳ್ಳುತ್ತಿಲ್ಲವೆ? ಹಾಗಿದ್ದರೆ ಅದು ನನಗೆ ಕಂಡಿರಬೇಕು. ನನಗೆ ಕಾಣದೆ ಬೇರೆಯವರಿಗೆ ಕಂಡಿತೇ?”

“ರಾಣಿ ತನ್ನ ಸ್ಥಾನದ ಗೌರವವನ್ನು ಮರೆತು ಆಫೀಡಿಯಸ್ ಕ್ಯಾಸಿಯಸ್‌ಗೆ ಸಲಿಗೆ ತೋರಿಸಿದ್ದಾರೆ, ಅವನು ಸಲಿಗೆಯಿಂದ ನಡೆಯಲು ಒಪ್ಪಿದ್ದಾರೆ, ಎಂದು ಜನರ ಮಾತು.”

“ಸಂಗತಿ ಮುಖ್ಯವಾದದ್ದು ಹೌದು, ಆಚಾರ್ಯ. ರಾಣಿ ಹೀಗೆ ನಡೆಯಬಾರದು. ಆದರೆ ನಾನು ಆಕೆಯಲ್ಲಿ ಇಂಥ ಲೋಪವನ್ನು ಕಂಡಿಲ್ಲ.”

“ಆಕೆ ಮತ್ತೊಬ್ಬನನ್ನು ಹೇಗೆ ಕಾಣುತ್ತಾರೆ ಅದು ನಿನ್ನ ಕಣ್ಣಿಗೆ ಬೀಳುವ ವಿಷಯ ಅಲ್ಲವಲ್ಲ.”

“ಸರಿ. ಇರುತ್ತ, ಆಕೆ ನನ್ನ ವಿಷಯಕ್ಕೆ ಎಂದಿನಂತೆ ವಿಶ್ವಾಸವಾಗಿ ನಡೆದುಕೊಳ್ಳುತ್ತಿದಾರೆ. ಆ ನಡತೆಯಲ್ಲಿ ಎಳ್ಳಷ್ಟು ಕೊರತೆ ಕಂಡಿಲ್ಲ. ಅವಿಶ್ವಾಸಿಯಾದ ಹೆಂಡತಿ ಗಂಡನೊಂದಿಗೆ ಹೀಗೆ ನಡೆದಾಳೆ?”

“ಹೀಗೆ ನಡೆಯುವುದು ಅಸಾಧ್ಯವಲ್ಲ. ಅಲ್ಲದೆ ಅವಿಶ್ವಾಸ ಅಲ್ಲದಿದ್ದರೂ ನೋಡುವವರಿಗೆ ಚೆನ್ನ ಅಲ್ಲದ ನಡತೆ ರಾಣಿಯಲ್ಲಿ ತಪ್ಪು ಆಗುತ್ತದೆ. ಚಕ್ರವರ್ತಿಯ ಸ್ಥಾನ ರಾಷ್ಟ್ರ ಜೀವನದಲ್ಲಿ ಮೇಟಿ. ರಾಷ್ಟ್ರ ಜೀವನದಲ್ಲಿ ಅದರ ಪ್ರತಿಷ್ಠೆಗೆ ಇರುವ ಬೆಲೆ ಬೇರೆ ಯಾವ ಸಂಗತಿಗೂ ಇಲ್ಲ. ಆ ಪ್ರತಿಷ್ಠೆಯನ್ನು ರಾಣಿ ಕಾಪಾಡಬೇಕು. ನಾನು ಸತ್ಯವಂತೆಯಾಗಿದ್ದೇನೆ ಎಂಬ ತಿಳಿವಳಿಕೆಯಲ್ಲಿ ಅಜಾಗ್ರತೆಯಿಂದ ನಡೆದುಕೊಳ್ಳಬಾರದು.”

“ಒಪ್ಪಿದೆ. ಈಗ ನಾನು ಈ ಪ್ರತಿಷ್ಠೆಯನ್ನು ಕಾಪಾಡುವುದಕ್ಕೆ ಏನು ಮಾಡಬೇಕೆಂದು ನಿನ್ನ ಸೂಚನೆ?”

"ಜನರ ಈ ಮಾತು ನಿನ್ನ ಕಿವಿಗೆ ಬಂದಿದೆ, ರಾಣಿ ಇದಕ್ಕೆ ಎಡೆಕೊಡಬಾರದು, ಎಂದು ನೀನು ಆಕೆಗೆ ಏಕಾಂತದಲ್ಲಿ ತಿಳಿಸಬೇಕು. ಇದು ನನಗೆ ತೋರುತ್ತಿರುವ ಅಪೇಕ್ಷೆ. ನನ್ನಂತೆ ಹಲವರಿಗೆ ಇದ್ದೀತು."

"ಅಚಾರ್ಯ, ನೀನು ನನಗೆ ತತ್ತ್ವ ಕಲಿಸಿದ ಗುರು. ಜನರು ಆಡುವ ಮಾತಿಗೆ ಏನು ಬೆಲೆ ಕೊಡಬಹುದು ಎನ್ನುವುದನ್ನು ನಾನು ನನ್ನ ಪ್ರಾಯದಲ್ಲಿ ನಿನ್ನಿಂದ ಕಲಿತೆ. 'ಹೊಗಳುವರು ತೆಗಳುವರು ನಿನ್ನಂತೆ ಮಾನವರು. ಪರಿಮಿತಿಯ ತಿಳಿವಳಿಕೆಯ ಜನ. ನಿತ್ಯ ಜೀವರಲ್ಲ. ಇಂದು ಇದ್ದಾರೆ. ಮೂರು ದಿನದಾಚೆ ಇರುವರಲ್ಲ. ಇಂಥ ಜೀವಿಗಳ ಹೊಗಳಿಕೆ ತೆಗಳಿಕೆಗೆ ಅತಿಯಾಗಿ ಬೆಲೆಕೊಡಬೇಡ.' ಹೀಗೆಂದು ನೀನೇ ನನಗೆ ಹೇಳಿದ್ದೀಯಲ್ಲ."

"ಹೇಳಿದ್ದೇನೆ ಪ್ರಭು."

"ನಾನು ಈ ಪಾಠವನ್ನು ಭದ್ರಮಾಡಿಕೊಂಡಿದ್ದೇನೆ. ಇದನ್ನು ಬಿಟ್ಟು ಬೇರೆಯಾಗಿ ನಡೆಯಲಾರೆ."

"ರಾಣಿಯವರಿಗೆ ಈ ಮಾತನ್ನು ಹೇಳಲಾರೆ ಅಲ್ಲ."

"ಹೇಳಲಾರೆ, ಎನ್ನುವುದಕ್ಕಿಂತ ಹೇಳುವುದು ಸರಿಯಾಗುವುದಿಲ್ಲ ಎಂದೇನು. ನಾನು ಕಾಣುತ್ತಿರುವ ಮಟ್ಟಿಗೆ ಆಕೆ ನನ್ನ ವಿಷಯದಲ್ಲಿ ಸತ್ಯವಂತೆಯಾಗಿ ನಡೆದುಕೊಳ್ಳುತ್ತಿದ್ದಾರೆ. ಒಲವಿನಿಂದ ನಡೆದುಕೊಳ್ಳುತ್ತಿದ್ದಾರೆ. ಶೀಲವಂತೆ, ಪ್ರೇಮಿ, ವಿಧೇಯೆ, ಎಂದು ನನ್ನ ಮನಸ್ಸಿಗೆ ಒಪ್ಪಿರುವ ಪತ್ನಿಗೆ ನಾನು, ಬೀದಿ ಹೋಕರ ಮಾತಿಗಾಗಿ, ತಪ್ಪಿ ಏಕೆ ಮಾತನಾಡಲಿ? ಗಂಡಿಗೆ ಒಂದು ಪ್ರತಿಷ್ಠೆ ಇರುವಂತೆ ಹೆಣ್ಣಿಗೆ ಒಂದು ಪ್ರತಿಷ್ಠೆ ಇದೆ ಅಲ್ಲವೆ? ನನ್ನ ತಾಯಿ ನಿನ್ನ ತಾಯನ್ನು ಕುರಿತು ಒಬ್ಬರು ಒಂದು ಕೆಟ್ಟ ಮಾತನ್ನಾಡಿದ್ದರೆ ನಾವು ಒಡನೆ ಅದು ದಿಟ ಇರಬಹುದು ಎನ್ನುತ್ತಿದ್ದೆವೆ? ತಾಯಿಯಲ್ಲ, ಹೆಂಡತಿ. ಕೇಳುವಮಾತೆಲ್ಲ ದಿಟ ಎಂದು ತಿಳಿದು ಹೀಗೆ ಎಚ್ಚರ ಹೇಳಬಹುದೆ? ಇವಳೇನು, ಪ್ರಪಂಚವನ್ನು ಕಾಣದ ಮುಗ್ಧ ಬಾಲೆಯೆ? ಹನ್ನೊಂದು ಮಕ್ಕಳ ತಾಯಿ. ಈ ವಯಸ್ಸಿನಲ್ಲಿ ಇವಳು ತನ್ನ ಮಕ್ಕಳ ತಂದೆಯನ್ನು ಮರೆತು ಹೊಸಬನೊಂದಿಗೆ ಸ್ನೇಹದಿಂದ

ನಡೆಯುವುದು ಸಾಧ್ಯವೆ? ಸಂಭವವೆ? ಈಕೆಯಲ್ಲಿ ತಪ್ಪಿಲ್ಲ ಎಂದು ತಿಳಿದಿರುವ ನನಗೆ ಇಲ್ಲಿ ಪ್ರಶ್ನೆಯೇ ಇಲ್ಲ. ಆಕೆ ಸರಿಯಾಗಿ ನಡೆಯುತ್ತಿದ್ದಾರೆ ಎಂಬ ನಿಶ್ಚಯದಲ್ಲಿ ನಾನು ಸಮಾಧಾನವಾಗಿರುತ್ತೇನೆ."

"ಸ್ಥಾನದ ಗೌರವದ ಮಾತು?"

"ನನ್ನ ತಿಳುವಳಿಕೆ ತಪ್ಪಾಗಿ, ಆ ಗೌರವಕ್ಕೆ ಚ್ಯುತಿ ಬಂದರೆ ಅದು ರಾಷ್ಟ್ರದ ದುರ್ದೈವ. ಆ ದುರ್ದೈವದಿಂದ ಅದು ತಿಳಿವಳಿಕೆ ಸಾಲದ ಮನುಷ್ಯನನ್ನು ಚಕ್ರವರ್ತಿಯಾಗಿ ಪಡೆದಿದೆ."

"ಆಯಿತು ಪ್ರಭು. ನನ್ನ ನಿನ್ನ ಮಧ್ಯದ ಗಾಢವಾದ ವಿಶ್ವಾಸವನ್ನು ನೆಚ್ಚಿ ನಿನ್ನೊಂದಿಗೆ ಈ ಪ್ರಸ್ತಾಪಮಾಡುವ ಗೋಜಿಗೆ ಹೋದೆ. ಸ್ನೇಹವನ್ನು ತಪ್ಪಿ ಬಳಸಿದೆ ಎಂದು ನಿನಗೆ ತೋರಬಾರದು. ನನ್ನ ಕರ್ತವ್ಯವನ್ನು ನಾನು ಮಾಡಿ ಆಯಿತು. ನಿನ್ನ ನಿರ್ಣಯ ನಿನ್ನ ಸ್ವಭಾವದ ಉನ್ನತಿಗೆ ತಕ್ಕದಾಗಿದೆ."

ಅಂದು ಇಷ್ಟು ಮಾತು ನಡೆಯಿತು. ಇನ್ನೇನು ತಾನು ಅಪ್ಪಣೆ ಪಡೆದು ಹೊರಡಬೇಕು. ಅಷ್ಟರಲ್ಲಿ ರಾಣಿ ಒಂದು ತಟ್ಟೆಯಲ್ಲಿ ಪಾನೀಯದ ಬಟ್ಟಲೆರಡನ್ನು ಇಟ್ಟುಕೊಂಡು ಒಳಕ್ಕೆ ಬಂದಳು. ಆಕೆಯನ್ನು ಕಂಡು ತನ್ನ ಚೇತನ ಹಾರಿ ಬಿದ್ದಿತು. ಆಫಿಡಿಯಸ್ ಹಿಂದೆ ಹೋದಳೆಂಬ ಹೆಂಗಸು, ಏನು ಇದು, ಅರಮನೆಯಲ್ಲಿದ್ದಾಳಲ್ಲ. ಹೋದದ್ದೆ ಸುಳ್ಳೊ, ಇಲ್ಲ ಹೋಗಿದ್ದು ಹಿಂತಿರುಗಿದಳೋ? ಇಲ್ಲ ಹೋದದ್ದು ಬೇರೆ ಯಾವುದೋ ಸ್ಥಳಕ್ಕೋ? ಹೀಗೆ ತನ್ನೊಳಗೆ ಮನಸ್ಸು ಸುರುಳಿ ಸುತ್ತುತ್ತಿದ್ದಂತೆ ರಾಣಿ ಹತ್ತಿರ ಬಂದಳು. ತಾನು ಕೈ ಮುಗಿದು ಎದ್ದು ನಿಂತನು, ರಾಣಿ, "ಏಳಬೇಡಿ. ಕುಳ್ಳಿರಿ" ಎಂದು ಹೇಳಿ, ತನ್ನ ಬಳಿಗೆ ಬಂದು, ಒಂದು ಬಟ್ಟಲನ್ನು ತನಗೆ ಕೊಟ್ಟು ಇನ್ನೊಂದನ್ನು ಚಕ್ರವರ್ತಿಗೆ ಒಪ್ಪಿಸಿದಳು. "ನೀವು ಏನೋ ಮಾತನಾಡುತ್ತಿದ್ದಿರಿ. ನಾನು ಬಂದು ಅದನ್ನ ತಡೆದೆ," ಎಂದಳು.

ತಾನು, "ಇಲ್ಲ, ಮಹಾತಾಯಿ. ಮಾತು ಮುಗಿದಿತ್ತು. ಹೊರಡುವುದರಲ್ಲಿದ್ದೆ. ತಾವು ದಯಮಾಡಿಸಿದಿರಿ," ಎಂದನು. ಆಕೆ, "ಸಂತೋಷ", ಎಂದು ನಗುಮುಖದಿಂದ ನುಡಿದು ಹೊರಟು ಹೋದಳು.

ತಾನು ಚಕ್ರವರ್ತಿಗೆ, "ರಾಣಿಯವರು ದಿನವೂ ಈ ಕೆಲಸವನ್ನ ತಾನೇ ಮಾಡುತ್ತಾರಲ್ಲ?" ಎಂದನು.

"ಅರಸ ರಾಜ್ಯದ ಕೆಲಸಕ್ಕಾಗಿ ಅರಸ; ಸ್ವಂತ ಜೀವನದಲ್ಲಿ ಸಾಮಾನ್ಯ ಮಾನವ; ಚಕ್ರವರ್ತಿ ಅವನ ರಾಣಿ ಅರಮನೆಯಲ್ಲಿ, ಒಬ್ಬ ನಾಗರಿಕ ಅವನ ಪತ್ನಿ ಊರಿನ ತಮ್ಮ ಮನೆಯಲ್ಲಿ, ಒಬ್ಬ ದಾಸ ಅವನ ಹೆಂಡತಿ ಊರ ಕೊನೆಯ ಒಂದು ಗುಡಿಸಿಲಲ್ಲಿ, ಹೇಗೆ ಬಾಳುತ್ತಾರೆ ಹಾಗೆ ಬಾಳಬೇಕು; ಅರಮನೆಯಲ್ಲೂ ಸರಳವಾಗಿ ಬಾಳುವುದು ಸಾಧ್ಯ ಎನ್ನುವುದನ್ನು ನಾವು ಲೋಕಕ್ಕೆ ತೋರಿಸಬೇಕು: ಎಂದು ನಾನು ಈಕೆಗೆ ಮದುವೆ ಆದ ಹೊಸದರಲ್ಲಿ ಹೇಳಿದೆ. ಸುಮಾರು ನಲವತ್ತು ವರುಷದ ಹಿಂದೆ ಹೇಳಿದ ಈ ಮಾತನ್ನು ಈ ನನ್ನ ಸಂಗಾತಿ ನೆನಪಿನಲ್ಲಿ ಇಟ್ಟುಕೊಂಡಿದ್ದಾಳೆ. ತಪ್ಪದೆ ನಡೆಸುತ್ತಿದ್ದಾಳೆ. ಈ ಹೊತ್ತಿನಲ್ಲಿ ನನಗೆ ಈ ಪಾನವನ್ನು ತಂದುಕೊಡುವುದು ಆ ನಡವಳಿಕೆಯ ಒಂದು ಭಾಗ, ನಾನು ಪ್ರವಾಸದಲ್ಲಿ ಇರುವಾಗ ವಿಧಿಯಿಲ್ಲ. ಅರಮನೆಯಲ್ಲಿ ಇರುವ ದಿನ ಇದು ಯಾವುದೂ ತಪ್ಪುವುದಿಲ್ಲ. ನನಗೆ ಆಗಬೇಕಾದ ಉಪಚಾರವೆಲ್ಲ ನನ್ನ ರಾಣಿ ತಾನು ಸ್ವತಃ ನೋಡಿಕೊಳ್ಳುತ್ತಾಳೆ."

"ಸಂತೋಷ ಪ್ರಭು. ಸಾವಿರ ಕಾಲ ಹೀಗೆಯೇ ಸುಖವಾಗಿ ಬಾಳಿ," ಎಂದು ಹೇಳಿ ತಾನು ಅಪ್ಪಣೆ ಪಡೆದು ಹೊರಟು ಬಂದನು.

ಕೆಲವು ದಿನ ಕಳೆದಿದೆ. ಆಫಿಡಿಯಸ್ ಯೋಗ್ಯ ಸೇವಕನಲ್ಲ ಎನ್ನುವುದು ಕಂಡಿತು. ತನ್ನ ಅಧಿಕಾರದಲ್ಲಿ ಅವನು ಚಕ್ರವರ್ತಿಗೆ ವಿರೋಧವಾಗಿ ನಡೆದುಕೊಂಡನು. ಅವನನ್ನು ಅಡಗಿಸಲು ಚಕ್ರವರ್ತಿಯೇ ಹೋಗಬೇಕಾಯಿತು. ಆ ಪ್ರಯಾಣದಲ್ಲಿ ರಾಣಿಯೂ ಅವನೊಡನೆ ಹೋದಳು. ಚಕ್ರವರ್ತಿ ಆ ಪ್ರದೇಶವನ್ನು ಸೇರುವ ಮೊದಲೇ ಅವನ ಪಕ್ಷದ ಜನ ಆಫಿಡಿಯಸ್‌ನನ್ನು ಕೊಂದು ಮುಗಿಸಿದರು. ಚಕ್ರವರ್ತಿ ದ್ರೋಹಿಯ ವಿಷಯದಲ್ಲಿ ಉದಾತ್ತ ರೀತಿಯಲ್ಲಿ ನಡೆದುಕೊಂಡನು. ವಿಧಿ ನಿಯಮ. ಆ ಪ್ರವಾಸದ ಮಧ್ಯದಲ್ಲಿ ರಾಣಿ ತೀರಿಕೊಂಡಳು. ಚಕ್ರವರ್ತಿ ಒಬ್ಬನಾಗಿ ಹಿಂತಿರುಗಿದನು.

ಪ್ರಭುವಿನ ಜೀವನದ ಈ ಮೂರು ವಿಷಯ ಅಲ್ಲದೆ ತತ್ತ್ವವನ್ನು ಕುರಿತ ಒಂದು ವಿವರದಲ್ಲಿ ತನಗೆ ಚಕ್ರವರ್ತಿಗೆ ಅಭಿಪ್ರಾಯ ಭೇದ ಕಂಡಿತ್ತು. ಈಚೆಗೆ ಒಂದು ದಿನ ತಾನು ಮನುಷ್ಯನ ನಡತೆಯ ವಿಷಯ ಮಾತನಾಡುವಾಗ ಒಂದು ಸೂತ್ರವನ್ನು ಸೂಚಿಸಿದನು. "ಯಾವನೇ ಆಗಲಿ, ಎಷ್ಟೇ ಜ್ಞಾನಿಯಾದರೂ, ನಾನು ನನ್ನದೆನ್ನುವದನ್ನು ತೊರೆದಿದ್ದೇನೆಂದು ಎಷ್ಟು ಖಚಿತವಾಗಿ ತಿಳಿದಿದ್ದರೂ, ಈ ನಾನು ಎನ್ನುವುದು ಇರುವವರೆಗೆ ಲೋಕದೊಡನೆ ಅವನ ಸಂಬಂಧ ಪೂರ್ಣವಾಗಿ ಸಮರಸ ಆಗುವುದು ಸಾಧ್ಯವಲ್ಲ. ಜೀವನದ ಸುಖ ಈ ಪೂರ್ಣ ಸಾಮರಸ್ಯವನ್ನು ಅವಲಂಬಿಸಿದೆ. ಎಂದ ಮೇಲೆ, ನಾನು ಎನ್ನುವುದು ಇರುವಷ್ಟು ಕಾಲ ಆ ಸುಖ ಅವನ ಪಾಲಿಗೆ ಇಲ್ಲ. ನಾನು; ನನ್ನ ಎದುರಿಗೆ ಲೋಕ; ನಾನು ಎನ್ನುವುದನ್ನು ಬಿಟ್ಟು ಲೋಕದಲ್ಲಿ ಲೀನವಾಗಿ ನಾನು ಪೂರ್ಣ ಸುಖವನ್ನು ಅನುಭವಿಸಬಹುದು. ನಾನು ಎನ್ನುವುದನ್ನು ಎಷ್ಟು ಅಲ್ಪವಾಗಿ ಆದರೂ ಉಳಿಸಿಕೊಂಡು ಪೂರ್ಣ ಸುಖವನ್ನು ಬಯಸುವುದು ವ್ಯರ್ಥ ಆಪೇಕ್ಷೆ."

ಈ ಸೂತ್ರವನ್ನು ತಾನು ವಿವರಿಸಿದಾಗ ಚಕ್ರವರ್ತಿ, "ನಾನು ಎನ್ನುವುದು ಇಲ್ಲದೆ ಜೀವನ ಸಾಧ್ಯವೇ ಅಲ್ಲ. 'ನಾನು' ಇರಬೇಕು. ಅದು ನಿರ್ಮಲವಾಗಬೇಕು; ನಿಷ್ಕಲಂಕ, ನಿಷ್ಕಲ್ಮಷ ಆಗಬೇಕು. ಯಾವನೂ ಇಷ್ಟನ್ನು ಸಾಧಿಸಬಹುದು. ಸುಲಭವಾಗಿ ಅಲ್ಲ, ಕಷ್ಟ ಪಟ್ಟು. ಇದು ಹೊರತು 'ನಾನು' ಎನ್ನುವುದು ಇಲ್ಲದೆ ಲೋಕದಲ್ಲಿ ಬೆರೆಯುವುದು ಎಂದರೇನು? ಅದು ವ್ಯರ್ಥ ಅಪೇಕ್ಷೆ," ಎಂದನು.

ಸ್ವಲ್ಪ ಹೊತ್ತು ಬಿಟ್ಟು ಚಕ್ರವರ್ತಿ ತನ್ನನ್ನು, "ನನ್ನ ಸ್ವಾರ್ಥ ಯಾವುದೇ ಸಂದರ್ಭದಲ್ಲಿ ನನ್ನನ್ನು ತಪ್ಪು ದಾರಿಗೆ ಎಳೆದಿದೆಯೆಂದು ನೀನು ಪರ್ಯಾಯವಾಗಿ ಹೇಳುತ್ತಿಲ್ಲ ಅಲ್ಲ?" ಎಂದು ಕೇಳಿದನು. ತಾನು, "ನಿನ್ನ ಪ್ರೇಮ ನನಗೆ ಕೊಟ್ಟಿರುವ ಸಲಿಗೆಯನ್ನು ಬಳಸಿ ನಾನು ನನಗೆ ಎಂದೇ ಇರಲಿ ತೋಚಿದ ಸಂಗತಿಯನ್ನು ಮರೆಮಾಚದೆ ನಿನಗೆ ಹೇಳುತ್ತ ಬಂದಿದೇನೆ. ನಾನು ಏನನ್ನೇ ಆಗಲಿ ನಿನಗೆ ಪರ್ಯಾಯವಾಗಿ ಹೇಳಬೇಕಾದ ಕಾರಣ ಇಲ್ಲ. ನನ್ನ ಪ್ರಭು ನನಗೆ ತೋರಿಸುತ್ತಿರುವ ಪ್ರೀತಿ, ನನ್ನಲ್ಲಿಟ್ಟಿರುವ ನಂಬಿಕೆ, ಇಂಥವು, ನಾನು ನನ್ನ ಮನಸ್ಸನ್ನೆಲ್ಲ ನಿನ್ನೆದುರಿಗೆ ಧೈರ್ಯವಾಗಿ ತೆರೆದಿಡಬಲ್ಲೆ," ಎಂದಿದ್ದನು.

ಈ ನಾಲ್ಕು ಸಂಗತಿಯಲ್ಲದೆ ಬೇರೆ ಎಂದೇ ಆಗಲಿ ತಾನು ಚಕ್ರವರ್ತಿಗೆ ಇಷ್ಟ ಅಲ್ಲದ ಮಾತನ್ನು ಹೇಳಿದವನಲ್ಲ. 'ರಸ್ಟಿಕಸ್‌ನ ವಿಷಯ ನನಗೆ ಬೇಸರ ಆದರೂ ನಾನು ಅವನಿಗೆ ಕೆಡುಕು ಮಾಡಲಿಲ್ಲ,' ಎಂದು ಚಕ್ರವರ್ತಿ ತನ್ನ ಆತ್ಮವೃತ್ತದಲ್ಲಿ ಬರೆಯಬೇಕಾದ ಮಾತೇ ಇದು? ಆಯಿತು. ಎಂಥ ಒಳ್ಳೆಯವನಾದರೂ ಮನುಷ್ಯ ಮನುಷ್ಯನೇ. ಮಾರ್ಕಸ್ ಆರೀಲಿಯಸ್, ಕೋಟಿ ಅಲ್ಲ, ಹತ್ತು ಕೋಟಿಯಲ್ಲಿ ಒಬ್ಬ ಎಂದು ಹೊಗಳಬಹುದಾದ ಮನುಷ್ಯ. ಆದರೂ ಅವನು ಒಬ್ಬ ಮನುಷ್ಯ. ಎಷ್ಟು ಒಳ್ಳೆಯವನಾದರೂ ಅವನಲ್ಲಿ ಒಂದು 'ನಾನು' ಇದೆ. ಅದು ಸಂದರ್ಭಕ್ಕೆ ತಕ್ಕಂತೆ ಒಂದು ಭಾವವನ್ನು ಅನುಭವಿಸುತ್ತದೆ. ಅದರಿಂದ ಸುಖವನ್ನೋ, ಕಷ್ಟವನ್ನೋ, ಸಮಾಧಾನವನ್ನೋ, ಬೇಸರವನ್ನೋ ಪಡೆಯುತ್ತದೆ. ಪಾಪ, ಆಯಿತು, ಇಂಥ ಪದವಿಯಲ್ಲಿ ಇದ್ದು ಇಂಥ ಬಾಳನ್ನು ಬಾಳಿದ ಇನ್ನೊಬ್ಬ ಈ ಲೋಕದಲ್ಲಿರಬಹುದೇ? ತನ್ನ ಸ್ಥಾನದ ಹೊಣೆಯನ್ನು ಪೂರ್ಣವಾಗಿ ಹೊತ್ತ ಕಾರಣವೇ ಇವನು ಅರವತ್ತು ತುಂಬುವ ಮುನ್ನ ಕಣ್ಣು ಮುಚ್ಚಿಕೊಂಡನು. ಕಣ್ಣು ಮುಚ್ಚಿಕೊಂಡನು ಸರಿ; ಆದರೆ ಅಪ್ರತಿಮ ಅಧಿರಾಜ ಎಂಬ ಹೆಸರನ್ನು ಗಳಿಸಿದನು. ಆ ಯಶಸ್ಸು ಸಾವಿರ ಕಾಲಕ್ಕೂ ನಿಲ್ಲುತ್ತದೆ. ಅದು ಅವನ ಭಾಗ್ಯ. ಇಂಥ ಒಬ್ಬ ಮಹಾತ್ಮನನ್ನು ನೋಡಿದೆನೇ ಇದು ನನ್ನ ಭಾಗ್ಯ.

ಹೀಗೆಂದುಕೊಂಡು ರಸ್ಟಿಕಸ್ ಸಮಾಧಾನ ತಂದುಕೊಂಡನು.

ಜಡೇ ನಂಜುಂಡೇಶ್ವರ

ನಮ್ಮ ಒಬ್ಬ ಸೋದರ ಲೇಖಕರು ಹಲವು ವರ್ಷಗಳ ಹಿಂದೆ ಕನ್ನಡದ ಕೆಲಸಕ್ಕಾಗಿ ನಂಜನಗೂಡಿಗೆ ಹೋಗಿದ್ದು ಅಲ್ಲಿ ಕೇಳಿದ ಒಂದು ಸಂಗತಿಯನ್ನು ಹೇಳಿದರು.

ಪುಣ್ಯಕ್ಷೇತ್ರಕ್ಕೆ ಹೋದಮೇಲೆ ದೇವರ ಸನ್ನಿಧಿಗೆ ಹೋಗದೆ ಬರುವುದುಂಟೆ? ಇವರು ಪೂಜೆಗೆಂದು ನಂಜುಂಡೇಶ್ವರನ ದೇವಾಲಯಕ್ಕೆ ಹೋಗಿದ್ದರು. ಪೂಜೆ ಮುಗಿಸಿಕೊಂಡು ಬರುತ್ತ ಇದ್ದಾಗ ಸ್ಥಳದ ಸೇವಕರೊಬ್ಬರು ಕ್ಷೇತ್ರದ ಮಹಿಮೆಗಳನ್ನು ಹೊಗಳುತ್ತ ಒಮ್ಮೆ ನಡೆದ ಈ ಸಂಗತಿಯನ್ನು ತಿಳಿಸಿದರು.

ಸುಮಾರು ನೂರು ವರುಷದ ಹಿಂದೆ ಮೈಸೂರ ಅರಸರು ಶ್ರೀ ಮುಮ್ಮಡಿ ಕೃಷ್ಣರಾಜರು ಪದವಿಯನ್ನು ಕಳೆದುಕೊಂಡು ತಮ್ಮ ಅರಮನೆಯಲ್ಲಿ ವನವಾಸ ಅನುಭವಿಸುತ್ತಿದ್ದ ಕಾಲ. ಪ್ರಭುಗಳು ಹಬ್ಬ ಹುಣ್ಣಿಮೆಗೆ ಎಂದು ಆಗಾಗ ನಂಜನಗೂಡಿಗೆ ದಯಮಾಡಿಸಿ ಅರಮನೆಯಲ್ಲಿ ದಿನ ಎರಡುದಿನ ನಿಂತು ಪೂಜೆಯ ಹೊತ್ತಿಗೆ ಆಲಯಕ್ಕೆ ಹೋಗಿ ಸೇವೆಯೆಲ್ಲ ನಡೆದಮೇಲೆ ಪ್ರಸಾದವನ್ನು ತೆಗೆದುಕೊಂಡು ಹಿಂದಿರುಗುವರು. ಆಗಿನ ದಿನದಲ್ಲಿ ಇಲ್ಲಿ ದೇವಾಲಯದ ಮುಖ್ಯಾಧಿಕಾರಿಯಾಗಿ ಆಗಮಿಕರೊಬ್ಬರಿದ್ದರು. ಅವರದು ದೀಕ್ಷಿತ ಮನೆತನ. ಅವರು ಕೂಡ ಬಂದು ಯಜ್ಞವನ್ನು ಮಾಡಿದ್ದರಂತೆ. ಹೀಗೆ ಅವರು ವಂಶದ ಕಾರಣದಿಂದಲೂ ಸ್ವತಃ ಯಜ್ಞ ನಡೆಸಿಯೂ, ದೀಕ್ಷಿತರು. ಪ್ರಭುಗಳು ನಂಜನಗೂಡಿಗೆ ಬಂದಾಗ ಅವರಲ್ಲಿಗೆ ಹೋಗಿ ಮರ್ಯಾದೆ ಒಪ್ಪಿಸಿ, ಪ್ರಭು ಆಲಯಕ್ಕೆ ದಯಮಾಡಿಸುವ ವೇಳೆಯನ್ನು ತಿಳಿದುಕೊಂಡು ಬಂದು, ಆ ವೇಳೆಗೆ ಸರಿಯಾಗಿ ಎಲ್ಲ ಏರ್ಪಾಡನ್ನೂ ಮಾಡಿ ಸಿದ್ಧವಾಗಿರುವುದು ಇವರ ವಾಡಿಕೆ. ಒಂದೊಂದು ಸಲವೂ ಇವರು ಪ್ರಭುಗಳಿಗಾಗಿ ಮಲ್ಲಿಗೆ ಮೊಗ್ಗಿನ ದಂಡೆಹಾರ ಒಂದನ್ನು ಮಾಡಿಸುವರು. ಅದನ್ನು ತಾವೇ ತಂದು ಪೂಜೆಯ ಹೊತ್ತು ದೇವರ ಮುಡಿಗೆ ಸಮರ್ಪಿಸಿ ಪೂಜೆ ಮುಗಿದ ಮೇಲೆ

ಪ್ರಸಾದವಾಗಿ ಅದನ್ನು ತಂದು ಪ್ರಭುಗಳ ಕೊರಳಿಗೆ ಹಾಕುವರು. ಪ್ರಭು ಅನುಗ್ರಹವನ್ನು ಸ್ವೀಕರಿಸಿ ಆರಮನೆಗೆ ಹೋಗುವರು.

ದೀಕ್ಷಿತರು ಒಳ್ಳೆಯ ವಂಶದವರಷ್ಟೇ ಅಲ್ಲದೆ ಒಳ್ಳೆಯ ಪಂಡಿತರೂ ಹೌದು. ಆಲಯದ ಎಲ್ಲ ಸೇವೆಯನ್ನೂ ತುಂಬ ಶ್ರದ್ಧೆಯಿಂದ ನೋಡಿಕೊಳ್ಳುತಿದ್ದರು. ಊರಿನ ಜನಕ್ಕೆಲ್ಲ ಇವರು ನಂಜುಡೇಶ್ವರನ ಮೆಚ್ಚಿನ ಭಕ್ತರು ಎಂದು ತಿಳುವಳಿಕೆ.

ದೀಕ್ಷಿತರು ಭಕ್ತರಲ್ಲದೆ ಇರಲಿಲ್ಲ. ಭಕ್ತರೇ, ಇವರಿಗೆ ದೇವರಲ್ಲಿ ನಂಬಿಕೆ ಉಂಟು; ಅವನು ಕಾಪಾಡುತ್ತಿದ್ದಾನೆ ಎಂಬ ನಂಬಿಕೆಯೂ ಉಂಟು. ಇರುತ್ತ ಇವರಲ್ಲಿ ಒಂದು ದೌರ್ಬಲ್ಯ ಇತ್ತು. ಆಲಯದ ದೇವದಾಸಿಯರಲ್ಲಿ ನಂಜುಂಡಿಯೆಂಬ ಚೆಲುವೆ ಒಬ್ಬಳು ಇದ್ದಳು. ಇವರು ಅವಳಲ್ಲಿ ಸ್ನೇಹ ಬೆಳೆಸಿದ್ದರು. ನಂಜುಂಡಿಗೆ ಒಬ್ಬ ಮಗಳಿದ್ದಳು. ಅವಳ ಹೆಸರು ಪುಟ್ಟನಂಜಿ. ದೀಕ್ಷಿತರ ಈ ಸಂಬಂಧದ ಮಾತನ್ನು ಬಲ್ಲ ಜನರು ಪುಟ್ಟನಂಜಿ ದೀಕ್ಷಿತರ ಮಗಳು ಎಂದು ಹೇಳುತ್ತಿದ್ದರು.

ನಂಜುಂಡಿ ತನ್ನ ದಿನದಲ್ಲಿ ಬಹು ಚೆನ್ನಾಗಿ ನೃತ್ಯ ಮಾಡುತ್ತಿದ್ದ ಕಲೆಗಾತಿ. ಈಗ ಅವಳಿಗೆ ವಯಸ್ಸಾಗಿತ್ತು. ಅವಳು ತನ್ನ ಮಗಳಿಗೆ ನೃತ್ಯದಲ್ಲಿ ಅಭ್ಯಾಸಕೊಟ್ಟಿದ್ದಳು. ಅವಳನ್ನು ತನಗಿಂತ ಚೆನ್ನಾಗಿ ನರ್ತಿಸಬಲ್ಲ ಕಲೆಗಾತಿಯಾಗಿ ಮಾಡಿದ್ದಳು. ಪ್ರಭುಗಳು ನಂಜನಗೂಡಿಗೆ ಬಂದುನಿಂತ ದಿನಗಳಲ್ಲಿ, ಆಲಯದಲ್ಲಿ ಪೂಜೆ ಮುಗಿಸಿಕೊಂಡು ಬಂದಮೇಲೆ ರಾತ್ರಿ ಒಂದಷ್ಟು ಹೊತ್ತು ಆರಮನೆಯಲ್ಲಿ ನೃತ್ಯ ನಡೆಯುವುದು. ಇದು ಒಂದು ವಾಡಿಕೆ ಆಗಿತ್ತು.

ಒಂದು ಬಾರಿ ಪ್ರಭುಗಳು ನಂಜನಗೂಡಿಗೆ ದಯಮಾಡಿಸಿದ್ದಾರೆ. ಆ ರಾತ್ರಿ ಅವರ ಸನ್ನಿಧಿಯಲ್ಲಿ ಪುಟ್ಟನಂಜಿಯ ಮೊದಲ ನೃತ್ಯ ಎಂದು ಏರ್ಪಾಡಾಗಿದೆ. ದೀಕ್ಷಿತರು ಎಂದಿನಂತೆ ಮಲ್ಲಿಗೆ ಮೊಗ್ಗಿನ ದಂಡೆಹಾರವನ್ನು ಮಾಡಿಸಿ ಮನೆಗೆ ತರಿಸಿಕೊಂಡಿದ್ದಾರೆ. ಅದನ್ನು ತೆಗೆದುಕೊಂಡು ದೇವಾಲಯಕ್ಕೆಂದು ಹೊರಟಿದ್ದಾರೆ. ದೀಪಹಚ್ಚಿ ಒಂದು ಗಳಿಗೆ ಆಗಿದೆ. ಆಲಯಕ್ಕೆ ಹೋಗುತ್ತ ಬಲಕ್ಕೆ ಒಂದು ಓಣಿಯಲ್ಲಿ ನಂಜುಂಡಿಯ ಮನೆ. ದೀಕ್ಷಿತರಿಗೆ ಅದೇನೋ ತೋಚಿ ಅವರ ಆ ಮನೆ ಒಳಕ್ಕೆ ಹೋದರು. ಇವರು ಒಳಕ್ಕೆ

ಹೋದಂತೆ ನಂಜುಂಡಿ, ಪುಟ್ಟನಂಜಿ, ಇಬ್ಬರೂ ಇವರ ಎದುರಿಗೆ ಬಂದರು. ದೀಕ್ಷಿತರು ತೋಳಮೇಲೆ ಇಟ್ಟುಕೊಂಡು ಹೋಗಿದ್ದ ಹಾರವನ್ನು ತೆಗೆದು ಆಟಕ್ಕೆಂದು ಪುಟ್ಟನಂಜಿಯ ಕೊರಳಿಗೆ ಹಾಕಿದರು. ಅದು ಅವರು ತನ್ನ ಮಗಳನ್ನು ತುಂಬ ಮೆಚ್ಚಿಕೊಂಡು ಇದ್ದದ್ದರ ಗುರುತು. "ಹಾರ ನಿನ್ನ ಮಗಳಿಗೆ ಚೆನ್ನಾಗಿ ಒಪ್ಪುತ್ತೆ ಅಲ್ಲ, ನಂಜುಂಡಿ?" ಎಂದರು. ನಂಜುಂಡಿ, "ದೇವರಿಗೆ ಒಪ್ಪಿಸುವ ಹಾರಾನೇ?" ಎಂದು ಸ್ವಲ್ಪ ಭಯದಿಂದ ಕೇಳಿದಳು. ದೀಕ್ಷಿತರು, "ಹೌದು, ಅದರಿಂದೇನು? ತನ್ನ ಮಗುವಿನ ಕೊರಳಿಗೆ ಹಾಕಿ ತಂದ ಹಾರ. ದೇವರಿಗೆ ಬೇಡ ಎನಿಸುತ್ತದೆಯೇ?" ಎಂದರು. ಹುಡುಗಿಗೆ "ಹಾರ ತೆಗೆದುಕೊಡು" ಎಂದರು. ಪುಟ್ಟ ನಂಜಿ ಹಾರವನ್ನು ತೆಗೆದಳು. ಇವರಿಗೆ ಒಪ್ಪಿಸಿದಳು. ಇವರು ಅದನ್ನು ತೆಗೆದುಕೊಂಡು ಆಲಯಕ್ಕೆ ಬಂದರು. ವಾಡಿಕೆಯಂತೆ ನಂಜುಂಡೇಶ್ವರನ ಲಿಂಗವನ್ನು ಅದರಿಂದ ಅಲಂಕರಿಸಿದರು.

ಪೂಜೆ ಸಕಾಲದಲ್ಲಿ ಆರಂಭ ಆಯಿತು. ಅದು ಅರ್ಧ ನಡೆದಿದೆ. ಪ್ರಭುಗಳು ದಯಮಾಡಿಸಿದರು. ದೀಕ್ಷಿತರು ವಾಡಿಕೆಯ ಮರ್ಯಾದೆಗಳಿಂದ ಅವರನ್ನು ಬರಮಾಡಿಕೊಂಡು ಒಳಗೆ ನಡೆಸಿಕೊಂಡು ಹೋಗಿ ಶುಕನಾಸಿಯಲ್ಲಿ ಉಚಿತ ಸ್ಥಾನದಲ್ಲಿ ಅವರನ್ನು ನಿಲ್ಲಿಸಿದರು. ತಾವು ಅವರ ಎದುರಿಗೆ ನಿಂತರು. ಪೂಜೆ ಎಲ್ಲ ಮುಗಿಯಿತು. ರಾಜಾಶೀರ್ವಾದ ಆಯಿತು. ಪ್ರಸಾದ ಕೊಡಬೇಕು. ದೀಕ್ಷಿತರು ಮುದ್ದಿನ ದಂಡೆಹಾರವನ್ನು ಎತ್ತಿ ತಂದು ಪ್ರಭುವಿನ ಕೊರಳಿಗೆ ಹಾಕಿದರು. ಎದೆಗೆ ಆತುಕೊಂಡಿದ್ದ ಹಾರದ ಚೆಲುವನ್ನು ನೋಡಲು ಪ್ರಭುಗಳು ಎರಡು ಕೈಯಿಂದಲೂ ಅದನ್ನು ಎತ್ತಿ ಮೇಲಕ್ಕೆ ಹಿಡಿದುಕೊಂಡರು. ಅವರ ಕಣ್ಣು ಬಹು ಸೂಕ್ಷ್ಮ. ಹಾರಕ್ಕೆ ಸುತ್ತಿಕೊಂಡು ಒಂದು ಎಳೆ ಕೂದಲು ಇರುವುದು ಅವರಿಗೆ ಕಂಡಿತು. ಅಂತ ಅರ್ಥ ಏನೂ ಇಲ್ಲದೆ ಅವರು ದೀಕ್ಷಿತರಿಗೆ "ಇದು ಏನು ದೀಕ್ಷಿತರೆ? ನಂಜುಂಡೇಶ್ವರನಿಗೆ ಜಡೆ ಬೆಳೆದಿರುವಂತೆ ಕಾಣುತ್ತದಲ್ಲಾ" ಎಂದರು. ದೊರೆಗಳ ಕಣ್ಣಿನಂತೆ ದೀಕ್ಷಿತರ ಬುದ್ಧಿಯ ಬಹು ಸೂಕ್ಷ್ಮ. ಪುಟ್ಟನಂಜಿಯ ತಲೆಯ ಕೂದಲ ಎಳೆ ಹಾರದಲ್ಲಿ ಸಿಕ್ಕಿಕೊಂಡು ಬಂದಿರಬೇಕು ಎಂದು ಅವರಿಗೆ ತಕ್ಷಣ ಹೊಳೆಯಿತು. ಅವರು ಸ್ವಲ್ಪವೂ ಹಿಂತೆಗೆಯದೆ, "ನಂಜುಂಡೇಶ್ವರ

ಭಕ್ತರಿಗೆ ಸದಾಪ್ರತ್ಯಕ್ಷ, ಪ್ರಭುಗಳೆ! ಅವನು ಜಟಾಧರ. ಅವನು ಜಡೆಯಿಂದ ಒಂದು ಎಳೆ ಕೂದಲನ್ನು ಪ್ರಭುಗಳ ಪ್ರಸಾದವಾಗಿ ಅನುಗ್ರಹಿಸಿದ್ದರೆ ಆಶ್ಚರ್ಯ ಇಲ್ಲ. ಪ್ರಭುಗಳು ಅಂಥ ಭಕ್ತರು ಇದನ್ನು ಲೋಕವೇ ಬಲ್ಲದು," ಎಂದರು.

ಮಾತು ಎತ್ತಿ ಆಗಿತ್ತು. ಪ್ರಭು ಅದನ್ನು ಅಲ್ಲಿಗೆ ಬಿಡಲಿಲ್ಲ. "ನನ್ನ ಭಕ್ತಿ ಅಲ್ಲ. ನಿಮ್ಮ ತಪಸ್ಸು ದೊಡ್ಡದು. ಯಾಕೆಂದರೆ ನೀವು ನಿಮ್ಮ ದೇವರ ಲಿಂಗ ಜಡೆ ಧರಿಸಿಕೊಂಡು ಕಾಣುವಂತೆ ಮಾಡಬಲ್ಲಿರಿ" ಎಂದರು. "ನನ್ನ ತಪಸ್ಸಲ್ಲ ಮಹಾಸ್ವಾಮಿ. ದೇವರ ಅಪಾರ ವಾತ್ಸಲ್ಯ ಅದನ್ನ ಮಾಡುತ್ತೆ. ನೀನು ಜಡೆ ಧರಿಸಿಕೊಂಡು ದರ್ಶನವನ್ನು ಅನುಗ್ರಹಿಸು ಎಂದು ನಾನು ಭಕ್ತಿಯಿಂದ ಪ್ರಾರ್ಥಿಸಿದರೆ, ನನ್ನ ದೇವರು ಆ ದರ್ಶನವನ್ನು ಅನುಗ್ರಹಿಸುತ್ತಾನೆ."

"ಹಾಗಂತೀರಾ?"

"ಸಂದೇಹವೇನು, ಮಹಾಸ್ವಾಮಿ? ಅವನ ಶಕ್ತಿ ಅನಂತ. ಅವನ ಕೃಪೆ ಅನಂತ. ಲಿಂಗದ ಮೇಲೆ ಜಡೆ ಇರುವಂತೆ ಕಾಣಲಿ ಎಂದು ಬೇಡಿದ ಅದು ಕಾಣುವುದು ನಿಶ್ಚಯ."

ಪ್ರಭುಗಳಿಗೆ ಏನು ತೋರಿತೋ, ಅವರು "ಎಂದರೆ ಈಗ ತಾವು ಕುಳಿತು ಮನಸ್ಸಿಟ್ಟು, ಬೇಡಿಕೊಂಡರೆ ಲಿಂಗದ ಮೇಲೆ ಜಡೆ ಕಾಣುತ್ತದೆ?" ಎಂದರು.

"ಕಾಣುತ್ತೆ, ಮಹಾಸ್ವಾಮಿ"

"ಹೇಗೂ ಭಗವಂತನ ಅನುಗ್ರಹ ಇಷ್ಟನ್ನು ನೋಡಿದ್ದಾಯಿತು. ಮತ್ತಷ್ಟನ್ನು ನೋಡುವ ಭಾಗ್ಯ ಇದ್ದರೆ ಅದನ್ನು ನೋಡಿಯೇ ಬಿಡೋಣ. ಜಡೆ ಕಾಣುವುದಕ್ಕೆ ತಾವು ಎಷ್ಟು ಹೊತ್ತು ತಪಸ್ಸು ಮಾಡಬೇಕು?"

"ಹೀಗೆಯೇ ಇಲ್ಲಿಯೇ ಕುಳಿತು ಸೂರ್ಯೋದಯದವರೆಗಾದರೂ ಧ್ಯಾನ ಮಾಡಬೇಕು, ಮಹಾಸ್ವಾಮಿ"

"ನಮಗಾಗಿ ಇದನ್ನು ಮಾಡುತ್ತೀರಾ?"

"ಮಾಡುತ್ತೇನೆ ಮಹಾಸ್ವಾಮಿ."

"ಸಂತೋಷ, ಬೆಳಗಾಗ ದರ್ಶನಕ್ಕೆ ಬರುತ್ತೇವೆ. ತಮ್ಮ ತಪಸ್ಸು ನಡೆಯಲಿ". ಹೀಗೆಂದು ಪ್ರಭುಗಳು ಆಲಯದಿಂದ ಹೊರಟರು. ಅರಮನೆ ತೆರಳಿದರು.

ಪ್ರಭು ದೀಕ್ಷಿತರ ಮಧ್ಯದ ಇಷ್ಟೆಲ್ಲ ಮಾತು ತುಂಬ ಮೆಲ್ಲನೆಯ ದನಿಯಲ್ಲಿ ನಡೆದಿತ್ತು. ಹತ್ತಿರದ ಇಬ್ಬರು ಮುವ್ವರಿಗೆ ಮಾತ್ರ ಅದೆಲ್ಲ ಕೇಳಿತ್ತು. ಉಳಿದವರಿಗೆ ಈ ಸಲ್ಲಾಪ ಏನು ಎನ್ನುವುದು ಅಷ್ಟಾಗಿ ತಿಳಿಯದು. ಆಲಯದ ಸೇವಕರು ಬಂದಿದ್ದವರಿಗೆಲ್ಲ ಪ್ರಸಾದವನ್ನು ಕೊಟ್ಟರು. ಭಕ್ತ ಜನವೆಲ್ಲ ಹೊರಟು ಹೋಯಿತು.

ದೀಕ್ಷಿತರಿಗೆ ತಾನು ಎಂಥ ಅಕ್ಷಮ್ಯ ಅಪರಾಧ ಮಾಡಿದೆ ಎಂಬುದು ಮನಮುಟ್ಟಿತು. ದೇವರಿಗೆ ಎಂದು ಮಾಡಿಸಿದ್ದ ಹಾರವನ್ನು ಮಗಳ ಕೊರಳಿಗೆ ಹಾಕಿ ತಂದದ್ದಲ್ಲವೆ ಈ ಅನರ್ಥಕ್ಕೆ ಕಾರಣ? ಈಗ ತಾನು ಪ್ರಭುಗಳಿಗೆ ಮಾತು ಕೊಟ್ಟಿದ್ದಂತೆ ಬೆಳಗ್ಗೆ ಲಿಂಗ ಜಡೆ ಧರಿಸಿರುವುದನ್ನು ತೋರಿಸಬೇಕು. ತೋರಿಸಲಿಲ್ಲ ಅವರನ್ನು ಕಾಣಿಸಿಕೊಳ್ಳಬಾರದು. ದೇವಾಲಯದ ಯಾಜಮಾನ್ಯವನ್ನು ತೊರೆದು ತೊಲಗಬೇಕು. ತೊಲಗಬೇಕು: ತೊಲಗಿ? ಊರಿನಲ್ಲಿರಬೇಕೆ? ಏನೆಂದು? ಆ ಯೋಚನೆಯೇ ಅವರಿಗೆ ಬೇಡವೆನ್ನಿಸಿತು. ಹಾಗೆ ಬಾಳುವುದಕ್ಕಿಂತ ಕಪಿನೀನದಿಯ ಪುಣ್ಯತೀರ್ಥದಲ್ಲಿ ಮುಳುಗಿ ಪ್ರಾಣಬಿಡುವುದು ಒಳ್ಳೇದು. ಹೀಗೆಂದುಕೊಂಡು ದೀಕ್ಷಿತರು ಗರ್ಭಗುಡಿಯ ಹೊಸಲಿನ ಹೊರಗಡೆ ಕುಳಿತರು. ರಾತ್ರಿಯೆಲ್ಲ ಧ್ಯಾನಮಾಡುವುದು. ಉದಯದ ವೇಳೆಗೆ ಏನು ಮಾಡೆಂದು ಪ್ರೇರಣೆ ಬಂದರೆ ಹಾಗೆ ನಡೆಯುವುದು. ಹೀಗೆ ನಿಶ್ಚಯಿಸಿ ದೀಕ್ಷಿತರು ಗುಡಿಯ ಅರ್ಚಕ ಒಬ್ಬನಿಗೆ, "ನಾನು ಇಲ್ಲಿಯೇ ಹೊರಗಡೆ ಕೈಕಾಲು ತೊಳೆದುಕೊಂಡು ಬರುತ್ತೇನೆ. ನನಗೆ ಸ್ವಲ್ಪ ಹಾಲು ತರಬೇಕೆಂದು ನಮ್ಮ ಮನೆಗೆ ಹೇಳಿ ಕಳುಹಿಸು," ಎಂದರು. ಅವನು ಒಬ್ಬ ಆಳನ್ನು ಮನೆಗೆ ಕಳುಹಿಸಿ ಮರಳಿ ಬಂದು "ಹೇಳಿ ಕಳುಹಿಸಿದೆ" ಎಂದು ಇವರಿಗೆ ತಿಳಿಸಿದನು.

ಎರಡು ಗಳಿಗೆ ಕಳೆದಿದೆ. ದೀಕ್ಷಿತರ ಮಗ ಮನೆಯಿಂದ ಒಂದು ಚೆಂಬಿನಲ್ಲಿ ಹಾಲನ್ನು ತಂದರು. ತಂದು ತಂದೆಯ ಬಳಿ ಇಟ್ಟರು. "ನಾನು ಜೊತೆಗೆ ಇರಲೆ?" ಎಂದು

ಕೇಳಿದರು. "ಬೇಡ; ಯಾರೂ ಇರಬೇಡಿ. ಅರ್ಚಕರೂ ಆಳುಗಳೂ ಆಷ್ಟೇ. ಯಾರೂ ಇಲ್ಲಿ ಹತ್ತಿರ ಇರಬೇಡಿ."

ಮಗ ಹೊರಟು ಹೋದರು. ಆಳುಗಳು, ಅರ್ಚಕರು, ಯಾರೂ ದೀಕ್ಷಿತರ ಬಳಿಗೆ ಸುಳಿಯಲಿಲ್ಲ.

ಧ್ಯಾನ ಮಾಡುತ್ತ ಕುಳಿತಿದ್ದ ದೀಕ್ಷಿತರಿಗೆ ಕುಳಿತಿದ್ದಂತೆಯೇ ನಿದ್ದೆ ಬಂದಿತು. ಅವರು ಗೋಡೆಗೆ ಒರಗಿ ನಿದ್ದೆ ಹೋದರು. ಒಂದು ನಿದ್ದೆ ಆಗಿ ಎಚ್ಚತ್ತು ಮತ್ತೆ ಧ್ಯಾನ ಮಾಡುತ್ತ ಕುಳಿತರು. ಮತ್ತೆ ನಿದ್ದೆ ಬಂದಿತು. ಮನೆ ನಿದ್ದೆ ಹೋಗಿ ಎಚ್ಚರಗೊಂಡರು. "ತಂದೇ, ನನಗೆ ನಿನ್ನ ಪ್ರೇರಣೆ ಏನು?" ಎಂದು ಕೇಳುತ್ತ ಲಿಂಗದ ಕಡೆ ನೋಡಿದರು. ಎಲ! ಆಶ್ಚರ್ಯವೆ! ಇದೇನು ದಿಟವೇ, ಭ್ರಮೆಯೆ? ಲಿಂಗದ ಮೇಲೆ ಕೂದಲ ಹೊದಿಕೆ ಕಾಣುತ್ತಿದೆ. ಮುಂಭಾಗ ಸ್ವಲ್ಪ ಮಾತ್ರ ಬಿಟ್ಟಿದೆ. ಎರಡು ಪಕ್ಕಕ್ಕೂ ಕೂದಲು. ಹಿಂದುಗಡೆಗೂ ಇರಬೇಕು. ಇದೇನು ಎಂದು ಇವರು ಕಣ್ಣು ಮುಚ್ಚಿ ಮತ್ತೆ ತೆರೆದು ನೋಡಿದರು. ಲಿಂಗದ ಮೇಲೆ ಕೂದಲು ಇದೆ. ಕೂದಲು ಇದೆ ಎನ್ನುವುದ ಭ್ರಾಂತಿಯಲ್ಲ, ದಿಟ.

"ದೇವರೇ, ನೀನು ಎಂಥ ಕರುಣಾಳು! ನಾನು ನೀತಿ ಭ್ರಷ್ಟ. ತಪ್ಪು ಮಾಡಿದೆ. ಇದು ಸ್ಪಷ್ಟ. ಇದು ಹೀಗಿರುತ್ತ ನೀನು ನನ್ನ ಮರ್ಯಾದೆಯನ್ನು ಕಾಯುವುದಕ್ಕಾಗಿ, ನಾನು ಹೇಳಿದೆ ಎಂಬ ಕಾರಣದಿಂದ, ಜಟೆಯನ್ನು ಧರಿಸಿದೆಯಾ?

"ಕರುಣಾಳು, ದೀನರಕ್ಷಕ"

ದೀಕ್ಷಿತರಿಗೆ, ಹತ್ತಿರಹೋಗಿ ಜಡೆ ಹೇಗೆ ಲಿಂಗವನ್ನು ಮುಸುಕಿಕೊಂಡಿದೆ ಎಂದು ನೋಡೋಣವೇ ಎನ್ನಿಸಿತು. ಅದೇ ಕ್ಷಣ "ಛೇ ದೈವ ಮೂಲವನ್ನು ಪರೀಕ್ಷಿಸುವುದೇ? ನದೀಮೂಲ, ಋಷಿಮೂಲ, ಮಾತೃಮೂಲ ಇದನ ಪರೀಕ್ಷಿಸಬಾರದು, ಎಂದು ಶ್ಲೋಕ ಇದೆಯಲ್ಲ. ದೇವ ಮೂಲವನ್ನು ಪರೀಕ್ಷಿಸುವುದು ಅಷ್ಟೇ ದುಷ್ಟ. ದೈವ ಒಂದು ಅದ್ಭುತವನ್ನು ಮೆರೆದಿರುವಾಗ ಅದರ ಸ್ವರೂಪವನ್ನು ಬಿಡಿಸಿ ನೋಡುವುದಕ್ಕೆ ನಾನು ಯಾರು? ದೈವ ಅದ್ಭುತವನ್ನು ಕರುಣಿಸಿದೆ. ನಾನು ಅದನ್ನು ಒಪ್ಪಿಕೊಳ್ಳಬೇಕು," ಎಂದುಕೊಂಡರು. ಲಿಂಗಕ್ಕೆ ಕೈಮುಗಿದು ಕುಳಿತಲ್ಲೇ ಸ್ಥಿರವಾಗಿ ಕುಳಿತಿದ್ದರು.

ಉದಯದ ವೇಳೆ. ಒಬ್ಬ ಅರ್ಚಕ ಬಂದ ದೀಕ್ಷಿತರು ಅವನಿಗೆ, "ಲಿಂಗ ಜಡೆಯನ್ನು ಧರಿಸಿದೆ. ದೇವರು ಅದ್ಭುತವನ್ನು ಕರುಣಿಸಿದ್ದಾರೆ. ನೀನು ಜಟೆಯನ್ನು ಮುಟ್ಟಬೇಡ. ವಾಡಿಕೆಯ ಸೇವೆಯನ್ನೆಲ್ಲ ಉಳಿದಂತೆ ಕ್ರಮವಾಗಿಮಾಡು," ಎಂದು ಅವನಿಗೆ ಹೇಳಿ ನದಿಗೆ ಹೋದರು.

ಅರ್ಚಕ ಉಳಿದ ಅರ್ಚಕರಿಗೆ ಹೇಳಿ, ಅವರು ಹೊರಗೆ ಬಂದು ಜನರಿಗೆ ಹೇಳಿ, ಒಂದು ಗಳಿಗೆಯ ಒಳಗೆ ಊರಿನಲ್ಲೆಲ್ಲ ಉತ್ಸಾಹವೋ ಉತ್ಸಾಹ, "ನಮ್ಮ ದೀಕ್ಷಿತರು ಬೇಡಿಕೊಂಡರು ಎನ್ನುವುದಕ್ಕಾಗಿ ನಂಜುಂಡೇಶ್ವರ ಉದಯದ ವೇಳೆಗೆ ಜಡೆ ಧರಿಸಿ ದರ್ಶನಕೊಟ್ಟಿದಾರಂತೆ," ಎಂದುಕೊಂಡು ಊರೂರೆ ಸ್ನಾನ ಮಾಡಿಕೊಂಡು ಗುಡಿಯ ಕಡೆಗೆ ನಡೆದುಬಂದಿತು. ಸಂಗತಿ ಅರಮನೆಯ ಬಾಗಿಲ ಆಳುಗಳಿಗೆ ಮುಟ್ಟಿ, ಅವರಿಂದ ಒಳಗಿನ ಸೇವಕರಿಗೆ ತಿಳಿದು, ಸ್ನಾನಕ್ಕೆ ಸಿದ್ಧರಾಗುತ್ತಿದ್ದ ಪ್ರಭುಗಳ ಕಿವಿಗೂ ಅಷ್ಟರಲ್ಲಿ ತಿಳಿಯಿತು.

ಪ್ರಭುಗಳಿಗೆ ತುಂಬ ಆಶ್ಚರ್ಯವಾಯಿತು. ಏನು, ಈ ದೀಕ್ಷಿತ ಏನಾದರೂ ಆಟ ಹೂಡಿದ್ದಾನೋ ಎಂದು ಅವರಿಗೆ ಸ್ವಲ್ಪ ಸಂದೇಹ. "ಆಯಿತು ನೋಡೋಣ" ಎಂದುಕೊಂಡರು. ಆಹ್ನಿಕ ಮುಗಿಸಿ, ಸ್ವಲ್ಪ ಉಪಹಾರ ತೆಗೆದುಕೊಂಡು, "ಸ್ವಾಮಿ ದರ್ಶನಕ್ಕೆ ಬರಬಹುದು ಎನ್ನುವಾಗ ನನಗೆ ತಿಳಿಸಿ" ಎಂದು ದೀಕ್ಷಿತರಿಗೆ ಹೇಳಿ ಕಳಿಸಿದರು. ದೀಕ್ಷಿತರು "ಇಲ್ಲಿ ಎಲ್ಲ ಅಣಿಯಾಗಿದೆ. ಪ್ರಭುಗಳು ಯಾವಾಗಲಾದರೂ ಪಾದ ಬೆಳೆಸಬಹುದು," ಎಂದು ಹೇಳಿ ಕಳಿಸಿದರು.

ಪ್ರಭುಗಳು ರಾಣಿಯವರೊಂದಿಗೆ, ದೇವರಿಗೆ ಒಪ್ಪಿಸಲು ಅಣಿಮಾಡಿದ್ದ ಉಪಾಯನಗಳ ತಟ್ಟೆಗಳನ್ನು ಹೊತ್ತ ಸೇವಕರೊಂದಿಗೆ, ಆಲಯಕ್ಕೆ ಬಿಜಮಾಡಿದರು. ದೀಕ್ಷಿತರು ಬಾಗಿಲ ಬಳಿಗೆ ಬಂದು, ಅವರನ್ನು ಬರಮಾಡಿಕೊಂಡು, "ಶ್ರೀಕಂಠೇಶ್ವರ ಭಕ್ತ ಪರಾಧೀನ; ಭಕ್ತರಾದ ತಮ್ಮ ಶುದ್ಧ ಹೃದಯದ ಅಪೇಕ್ಷೆಗೆ ಒಲಿದು ದೇವರು ಜಡೆ ತಳೆದು ದರ್ಶನ ಅನುಗ್ರಹಿಸಲು ಕಾದಿದ್ದಾರೆ, ಪ್ರಭು," ಎಂದರು. ಪ್ರಭುಗಳು, "ಸಂತೋಷ, ದೀಕ್ಷಿತರೆ, ನಾವು ನಿನ್ನೆಯೇ ಹೇಳಲಿಲ್ಲವೆ? ಇದು ನಮ್ಮ ಭಕ್ತಿಯ ಮಾತಲ್ಲ. ನಿಮ್ಮ ತಪಸ್ಸಿನ

ಪ್ರಭಾವ," ಎಂದರು. ಅವರ ಮನಸ್ಸಿಗೆ ಆಗ ಮುಟ್ಟಿದ್ದು "ಈ ದೀಕ್ಷಿತ ನಿಜವಾಗಿ ಈ ಮಾತನ್ನು ನಂಬಿ ಹೇಳುತ್ತಿದ್ದಾನೆ, ಇವನಲ್ಲಿ ಕಪಟವಿಲ್ಲ, ಇವನು ಮೋಸಮಾಡುತ್ತಿಲ್ಲ, ಅದ್ಭುತ ನಿಜವಾಗಿ ನಡೆದಿದೆ ಎಂದೇ ಇವನು ತಿಳಿದಿದಾನೆ," ಎನ್ನುವುದು.

ಪ್ರಭುಗಳು ಶುಕನಾಸಿಯಲ್ಲಿ ವಾಡಿಕೆಯ ತೆರದಲ್ಲಿ ನಿಂತರು. ಪೂಜೆ ಮುಗಿಯಿತು. ಅವರ ಮನಸ್ಸಿನಲ್ಲಿ ಒಂದು ಯೋಚನೆ. "ಲಿಂಗದಮೇಲೆ ಹೊದಿದಿರುವ ಕೂದಲು ತನಗೆ ಕೊಟ್ಟ ಪ್ರಸಾದದ ಹಾರದಲ್ಲಿ ಕಂಡಿದ್ದ ಬಣ್ಣದ ಕೂದಲೇ ಸಂದೇಹವಿಲ್ಲ. ಇದು ಲಿಂಗದಲ್ಲಿ ಬೆಳೆದಿರುವುದು ಸಾಧ್ಯವೇ? ಇಲ್ಲ, ಹೊದಿಕೆಯಾಗಿ ಅದನ್ನು ಮುಚ್ಚಿದೆಯೋ? ಇದನ್ನು ನೋಡುವುದೇ? ನೆರೆದಿರುವ ಜನರ ಎದುರಲ್ಲಿ? ದೀಕ್ಷಿತರು ಸುಳ್ಳು ಹೇಳುತ್ತಿದಾರೋ ಎಂಬುದನ್ನು ಪರೀಕ್ಷಿಸುವ ರೀತಿಯಲ್ಲಿ!"

ಪ್ರಭುಗಳ ಮನಸ್ಸಿನಲ್ಲಿ ಈ ಯೋಚನೆಯು ಹಾಯುತ್ತಿದ್ದಂತೆಯೇ ದೀಕ್ಷಿತರು ಹೇಳಿದರು. "ಧ್ಯಾನಮಾಡಿ ಕುಳಿತಿದ್ದವನು ಒಂದೆರಡುಬಾರಿ ಮೈ ಮರೆತು ನಿದ್ರೆ ಹೋಗಿ ಎಚ್ಚತ್ತು ನೋಡಿದಾಗ ಈ ಅದ್ಭುತ ಕಂಡಿತು, ಪ್ರಭುಗಳೆ! ಇದು ಉಂಟೆ ಎಂದು ನನಗೆ ಯೋಚನೆ, ಇರಲಾಗದು ಎಂದೇ ಮನಸ್ಸು. ಎಂದಮೇಲೆ ಇದು ಹೇಗೆ ಇಲ್ಲಿದೆ ಎಂದು ನೋಡಬೇಕು. ನೋಡುವುದೇ ಎಂದು ಕೊಂಡೆ. ಹಿರಿಯರ ವಚನ ಒಂದಿದೆ. ಪೂರ್ವದ ಶ್ಲೋಕ: 'ನದೀಮೂಲ ಋಷಿಮೂಲ ಮಾತೃಮೂಲ ನಿರೀಕ್ಷಣಂ ದುಷ್ಟಮಾಹುಃ ತಥಾ ದುಷ್ಟಂ ದೈವಮೂಲ ನಿರೀಕ್ಷಣಂ.' ನದೀಮೂಲ, ಋಷಿಮೂಲ, ಮಾತೃಮೂಲ ಇವನ್ನು ಪರೀಕ್ಷಿಸಬಾರದು. ಹಾಗೆ ಮಾಡುವುದು ದುಷ್ಟ. ಹಾಗೆಯೇ ದುಷ್ಟ, ದೈವ ಮೂಲವನ್ನು ಪರೀಕ್ಷಿಸುವುದು. ದೈವ ಮಾಡಿದ್ದನ್ನು ಒಪ್ಪಿಕೊಳ್ಳುವುದೇ ಭಕ್ತಿಯ ಲಕ್ಷಣ. ಅದೇ ಉಚಿತ ವರ್ತನ. ಒಪ್ಪಿಕೊಳ್ಳದೆ ಪರೀಕ್ಷಿಸೋಣ ಎನ್ನುವುದು ದೈವದ ವಿಷಯಕ್ಕೆ ನಂಬಿಕೆ ಸಾಲದೆ ಇರುವುದರ ಲಕ್ಷಣ. ಅಂತತಃ ಭಕ್ತಿಗೆ ಅಪನಂಬಿಕೆಗೆ ಇರುವ ವ್ಯತ್ಯಾಸವೇ ಇದು. ಎದುರಿಗೆ ಲಿಂಗ ಇದೆ; ನಂಬಿದೆವು; ಅದು ದೇವರು. ನಂಬಲಿಲ್ಲ; ಅದು ಬರಿಯ ಕಲ್ಲು. ಲಾಲಿಸಿದರೆ ಮಕ್ಕಳು, ಪೂಜಿಸಿದರೆ ದೇವರು ಎಂದು ಸಾಮತಿ ಮಾತು ಇದೆ. ಇಲ್ಲಿ ಈ ಲಿಂಗ ಇದೆ. ದೇಶವೆಲ್ಲ ಇದನ್ನು ಪೂಜಿಸುತ್ತಿದೆ. ಇದು ದೇವರು. ಊರ ಹೊರಗಡೆ ಒಂದು

ಹಾಳು ಗುಡಿಯಲ್ಲಿ ಒಂದು ಲಿಂಗ ಇದೆ. ಅದಕ್ಕೆ ಪೂಜೆ ನಡೆಯುತ್ತಿಲ್ಲ. ಅದು ದೇವರಲ್ಲ. ಪೂಜೆಯ ದೃಷ್ಟಿಯಿಂದ ನೋಡಿದರೆ ಈ ಲಿಂಗ ನಂಜುಂಡೇಶ್ವರನ ಲಿಂಗ, ಪೂಜಿಸದ ದೃಷ್ಟಿಯಿಂದ ನೋಡುವವನ ಪಾಲಿಗೆ ಇದೇ ಲಿಂಗ ಆ ಪಾಳು ಗುಡಿಯ ಲಿಂಗದಂತೆಯೇ", ಎಂದರು. ಪ್ರಭುಗಳಿಗೆ ನನ್ನ ಮನಸ್ಸಿನ ಯೋಚನೆ ಈತನಿಗೆ ಇಷ್ಟು ಸ್ಪಷ್ಟವಾಗಿ ತಿಳಿಯಿತಲ್ಲ ಎಂದು ಸಹ ಅಚ್ಚರಿ. ಅವರು "ತಮ್ಮ ತಪಸ್ಸು ಹೇಗೆ ಹಾಗೆ ತಮ್ಮ ಮನಸ್ಸಿನ ರೀತಿಯೂ ಹಿರಿಯವು, ದೀಕ್ಷಿತರೆ! ತುಂಬು ಜ್ಞಾನದ ಮಾತನ್ನು ಆಡಿದ್ದೀರಿ. ನಮಗೆ ನಂಬಿಕೆಯ ದಾರಿಯನ್ನು ತಿಳಿಸಿದ್ದೀರಿ. ಉಪಕಾರ ಆಯಿತು. ಸಂತೋಷ, ಪ್ರಸಾದ ಅನುಗ್ರಹಿಸಿ. ನಾವು ಹೊರಡುತ್ತೇವೆ," ಎಂದರು. ದೀಕ್ಷಿತರು ಈಗ ಪ್ರಭುಗಳಿಗೆ ಮತ್ತೆ ಒಂದು ಹಾರವನ್ನು ಅರ್ಪಿಸಿ ಪ್ರಸಾದವನ್ನು ಒಪ್ಪಿಸಿದರು. ರಾಣಿಯರಿಗೆ ಪರಿವಾರದ ಮಂದಿಗೆ ಎಲ್ಲಾ ಪ್ರಸಾದ ವಿನಿಯೋಗ ಆಯಿತು. ಪ್ರಭುಗಳು ಅರಮನೆಗೆ ಹೊರಟರು.

ಲಿಂಗಕ್ಕೆ ಜಡೆ ಬಂದಿತು ಎನ್ನುವುದು ಮಾತ್ರ ಜನಕ್ಕೆ ತಿಳಿಯಿತು. ಅದು ಬಂದಿತು ಹೇಗೆ? ಇದನ್ನು ಯಾರೂ ಅರಿಯರು. ದೀಕ್ಷಿತರೇ ಅರಿಯರು. ಅದು ಹೇಗಾಯಿತು?

ಜಡೆಯ ದರ್ಶನ ಪಡೆದು ಪ್ರಭುಗಳು ಹೊರಟ ಬಳಿಕ ದೀಕ್ಷಿತರು ದೇವಾಲಯದಿಂದ ಹೊರಟು ತಮ್ಮ ಮನೆಗೆ ಹೋದರು. ಅವರ ಕುಮಾರ ದೇವಾಲಯಕ್ಕೆ ಬಂದಿದ್ದು ತಂದೆಯೊಡನೆ ನಡೆದರು.

ಬೀದಿಗೆ ಬಂದ ಮೇಲೆ ದೀಕ್ಷಿತರು ಮಗನಿಗೆ, "ಈ ಕೂದಲ ಗೌಸು ಲಿಂಗದ ಮೇಲೆ ಹೇಗೆ ಬಂತೋ ತಿಳಿಯಲಿಲ್ಲ," ಎಂದರು.

ಮಗ : "ಮನೇಲಿ ಹೇಳುತ್ತೇನೆ."

ತಂದೆ : "ನೀನು ಹಾಕಿದೆಯ?"

ಮಗ : "ಮನೇಲಿ ಹೇಳುತ್ತೇನೆ ಎಂದೆನಲ್ಲ".

ಇವರು ಮನೆ ಸೇರಿ, ಮನೆಯಮಂದಿ "ದೇವರು ಕಾಪಾಡಿದರು" ಎಂದು ಯಜಮಾನನ್ನು ಅಭಿನಂದಿಸಿದ ಬಳಿಕ, ಮಗ ತಂದೆಯನ್ನು ಕೋಣೆಯೊಳಕ್ಕೆ ಕರೆದುಕೊಂಡುಹೋಗಿ ನಡೆದಿದ್ದ ಸಂಗತಿಯನ್ನು ಅವರಿಗೆ ತಿಳಿಸಿದರು.

ಕೂದಲೆಳೆಯ ಹಾರದೊಂದಿಗೆ ಪ್ರಭುಗಳು ಅರಮನೆಗೆ ಹೋದರು. ಆರೋಗಣೆ ಆಗಿ ಅವರು ಪುಟ್ಟನಂಜಿಯ ನೃತ್ಯವನ್ನು ನೋಡಬೇಕು. ಪುಟ್ಟ ನಂಜಿ ನೃತ್ಯಕ್ಕೆ ಸಜ್ಜಾಗಿ ತಾಯಜೊತೆಗೆ ಅರಮನೆಗೆ ಬಂದಿದ್ದಳು. ಅಲ್ಲಿ ಅವಳಿಗೆ, ಪ್ರಸಾದದ ಹಾರದಲ್ಲಿ ಕೂದಲ ಎಳೆ ಇದ್ದ ಮಾತು ಕಿವಿಗೆ ಬಿತ್ತು. ಬೆಳಗಿನ ವೇಳೆಗೆ ಲಿಂಗದ ಮೇಲೆ ಜಡೆ ಇರುತ್ತದೆ ಎಂದು ದೀಕ್ಷಿತರು ಮಾತು ಕೊಟ್ಟದ್ದೂ ತಿಳಿಯಿತು. ತನ್ನ ಕೂದಲ ಎಳೆ ಇಷ್ಟು ಅನರ್ಥಕ್ಕೆ ಕಾರಣ ಆಯಿತೇ ಎಂದು ಅವಳಿಗೆ ಅಪಾರ ದುಃಖ. ಈ ದುಃಖದ ಸ್ಥಿತಿಯಲ್ಲಿ ಅವಳು ಕುಣಿಯುವುದು ಅಸಾಧ್ಯ. ಕುಣಿದಳೋ ಹೆಜ್ಜೆ ತಪ್ಪುವುದೇ ದಿಟ. ಅವಳು ತಾಯಿಗೆ, "ಅಮ್ಮಾ ಅಜ್ಜನ ಕೊರಳಿಗೇ ಕೇಡು ಬಂದಿದೆ. ನಾನು ಈಗ ಕುಣಿಯಲಾರೆ. ರಂಗಾಸಾನೀ ರತ್ನಾಸಾನೀ ಯಾರಾದರೂ ಬಂದು ಕುಣೀಲಿ. ನನಗೆ ಮೈಯಲ್ಲಿ ಚೆನ್ನಾಗಿಲ್ಲ ಅಂತ ಹೇಳಿ ಮನೆಗೆ ಹೋಗೋಕೆ ಅಪ್ಪಣೆ ಬೇಡು," ಎಂದಳು. ಅಮ್ಮ ಮನೆವಾರ್ತೆಯವರಿಗೆ ಅರಿಕೆ ಮಾಡಿ ಅವರು ಪ್ರಭುಗಳಿಗೆ ನಿವೇದಿಸಿದರು. ಅವರು "ಬಹು ಚೆನ್ನಾಗಿ ಕುಣೀತಾಳೆ ಅಂದರು. ನೋಡೋಣ ಅಂದುಕೊಂಡೆವು. ಮೈಯಲ್ಲಿ ಚೆನ್ನಾಗಿಲ್ಲ ಅಂದಮೇಲೆ ಏನು ಮಾಡುವುದು? ಈ ಹೊತ್ತು ಬೇಡ ಬಿಡು," ಎಂದು ಅಪ್ಪಣೆ ಕೊಡಿಸಿದರು. ಬೇರೆ ಯಾರದೂ ನೃತ್ಯವೂ ಇಲ್ಲ. ಪುಟ್ಟನಂಜಿ ಮನೆಗೆ ಬಂದು ತನಗೆ (ದೀಕ್ಷಿತರ ಮಗನಿಗೆ,) "ಒಡನೆ ಬನ್ನಿ, ತುರುತ್ ಕೆಲಸ ಇದೆ," ಅಂತ ಹೇಳಿ ಕಳುಹಿಸಿದಳು. ಈತ ಹೋದರು. ಅವಳು "ಅಜ್ಜ ದೇವರಿಗೆ ಅಂತ ತಂದಿದ್ದ ಹಾರಾನ ಅವರಿಗೆ ತಿಳಿಯದೆ ನಾನು ಹುಡುಗಾಟಕ್ಕೆ ನನ್ನ ಕೊರಳಿಗೆ ಹಾಕಿಕೊಂಡು ತೆಗೆದಿಟ್ಟೆ. ಅದರಲ್ಲಿ ನನ್ನ ಕೂದಲು ಸಿಕ್ಕಿಕೊಂಡಿರಬೇಕು. ಲಿಂಗದ ಮೇಲೆ ಕೂದಲು ಬೆಳೆಯುವುದುಂಟೆ? ಅಥವಾ ಬೆಳೀತು. ನನ್ನ ಕೂದಲಂಥಾ ಕೂದಲೇ ಬೆಳೆಯುತ್ತೆಯೆ? ಪ್ರಭುಗಳು ಹಾರದಲ್ಲಿ ಸಿಕ್ಕಿಕೊಂಡಿದ್ದ ಕೂದಲನ್ನ ಲಿಂಗದ ಮೇಲೆ ಕೂದಲನ್ನ ಹೋಲಿಸಿ ಇದು ಬೇರೆ ಅಂತ ಕಂಡರೆ ಗತಿ ಏನು? ಇದಕ್ಕೆ ಒಂದು ಉಪಾಯ ನನಗೆ ಈ ಕ್ಷಣ ಹೊಳೀತು. ಅದನ್ನ ನೀವು ನಡೆಸಿಕೊಡಬೇಕು," ಎಂದಳು.

"ಸಂಗತಿಯೇನೋ ತುಂಬ ಅಪಾಯದ್ದು. ಏನು ಮಾಡೋಣ ಎನ್ನುತೀ?"

"ನನ್ನ ಕೂದಲನ್ನ ಕತ್ತರಿಸಿ ರೇಷ್ಮೆ ಬಟ್ಟೆಗೆ ಹೊಲಿದು ಒಂದು ಗೌಸು ಮಾಡಿಕೊಡುತ್ತೇನೆ. ನೀವು ತಂದೆಯವರನ್ನ ನೋಡೋಕೆ ಅಂತ ಹೋಗಿ ಅದನ್ನ ಅವರಿಗೆ ಕೊಟ್ಟು ಬನ್ನಿ. ಅವರು ಅದನ್ನು ಲಿಂಗಕ್ಕೆ ಹೊದಿಕೆ ಹಾಗೆ ಹೊದಿಸಲಿ. ಜಡೆ ಅಂತೂ ಬಂದ ಹಾಗಾಯಿತು. ಮುಂದಕ್ಕೆ ಏನೋ. ದೇವರು ನಡೆಸಿದ ಹಾಗೆ ಆಗಲಿ."

"ಇದನ್ನ ಯಾರೂ ನೋಡದ ಹಾಗೆ ಮಾಡಬೇಕು."

"ಹೌದು."

"ಆಯಿತು. ಸ್ವಲ್ಪ ಹೊತ್ತು ಬಿಟ್ಟು ಎಲ್ಲರೂ ಮಲಗಿದ ಮೇಲೆ ಮಾಡಿದರೆ ಆಯಿತು."

"ಹೌದು."

"ಆಗಲಿ, ಮಾಡುತೇನೆ."

ಮಗ ತಂದೆಗೆ ಹಾಲನ್ನು ಕೊಟ್ಟು ಮನೆಗೆ ಬಂದು ಎರಡುಗಳಿಗೆ ಬಿಟ್ಟು ನಂಜುಂಡಿಯ ಮನೆಗೆ ಹೋದರು. ಗೌಸು ಸಿದ್ಧವಾಗಿತ್ತು. ಅದನ್ನು ತೆಗೆದುಕೊಂಡು ದೇವಾಲಯಕ್ಕೆ ಹೋದರು. ಬಾಗಿಲಲ್ಲಿ ಒಬ್ಬ ಆಳು ಎಚ್ಚರವಾಗಿದ್ದ. ಉಳಿದವರು ನಿದ್ದೆಯಲ್ಲಿದ್ದರು. ಒಳಗೆ ಇದ್ದ ನಾಲ್ಕು ಜನ ತಮ್ಮ ತಮ್ಮ ಸ್ಥಳಗಳಲ್ಲಿ ನಿದ್ದೆಯಲ್ಲಿದಾರೆ. ಇವರು ಶುಕನಾಸಿಯನ್ನು ಹೊಕ್ಕರು. ತಂದೆ ನಿದ್ರೆಯಲ್ಲಿದ್ದಾರೆ. ಎಬ್ಬಿಸಬೇಕು. ಎಬ್ಬಿಸುವುದು ಏಕೆ ಎಂದು ಇವರು ಗರ್ಭಗುಡಿಯೊಳಕ್ಕೆ ತಾವೇ ಹೋದರು. ಗೌಸನ್ನ ಲಿಂಗಕ್ಕೆ ಸರಿಯಾಗಿ ಹೊದಿಸಿ ಹೊರಕ್ಕೆ ಬಂದು ಬಿಟ್ಟರು. ಮನೆಯನ್ನು ಸೇರಿದರು.

ಮಗನ ವಿವರಣೆಯನ್ನು ಕೇಳಿ ದೀಕ್ಷಿತರಿಗೆ ಆಶ್ಚರ್ಯ, ಸಂತೋಷ. ಎಲ ಹುಡುಗಿ! ಎಂಥ ಜಾಣೆ ಇದು? ಯಾರಿಗೆ ತೋರಬೇಕು ಈ ತಂತ್ರ? ಅದೂ ಎಷ್ಟು ಬೇಗನೆ? ದೇವರೆ ಇವರಿಗೆ ಈ ಬುದ್ಧಿಯನ್ನು ಕೊಟ್ಟು ತನ್ನನ್ನು ಕಾಪಾಡಿದನು. ಇದು ದೇವರ ಅಪಾರ ಕೃಪೆ. ಸಂದೇಹ ಇಲ್ಲ.

ಆ ದಿನವೂ ಪುಟ್ಟನಂಜಿ ಕುಣಿಯುವ ಸ್ಥಿತಿಯಲ್ಲಿಲ್ಲ ಎಂದು ನಂಜುಂಡಿ ಬೆಳಗಾಗ ಅರಮನೆಗೆ ಹೋಗಿ ಮನೆವಾರ್ತೆಯವರಲ್ಲಿ ವಿಜ್ಞಾಪಿಸಿದಳು. ಇದು ಪ್ರಭುಗಳಿಗೆ ವರದಿ ಆಗಿ ಅವರು, "ಒಳ್ಳೆಯದು. ಬಂದು ದೇವರ ಸೇವೆ ನಡೆಸಿ ಆಯಿತು. ಈ ಹೊತ್ತು ಇಲ್ಲಿ

ನಿಲ್ಲುವ ಕೆಲಸ ಇಲ್ಲ. ಮೈಸೂರಿಗೆ ಹೊರಡೋಣ," ಎಂದರು. ಆಗಲೇ ತಮ್ಮ ವಾಹನದಲ್ಲಿ ಕುಳಿತು ಪ್ರಯಾಣ ಬೆಳೆಸಿದರು.

ಗೌಸನ್ನು ಮೂರುದಿನ ಲಿಂಗದ ಮೇಲೆ ಬಿಟ್ಟಿದ್ದು ಮರುದಿನ ದೀಕ್ಷಿತರು ಯಾರೂ ಕಾಣದವೇಳೆ ತಾವೇ ಎತ್ತಿ ತಂದು ಬಿಟ್ಟರು.

ನಡೆದಿದ್ದ ಸಂಗತಿ ಪುಟ್ಟನಂಜಿ, ಅವಳ ತಾಯಿ, ದೀಕ್ಷಿತರು, ಅವರ ಕುಮಾರರು, ಇವರಿಗೆ ಹೊರತು ಬೇರೆ ಯಾರಿಗೂ ತಿಳಿಯದು. ಇವರು ಯಾರೂ ಆದರ ಮಾತನ್ನು ಯಾರೊಡನೆಯ ಎತ್ತಲಿಲ್ಲ. ಲಿಂಗದ ಮೇಲೆ ಕೂದಲು ಬೆಳೆದದ್ದು ಹೀಗೆ ಒಂದು ಪವಾಡವಾಗಿ ಜನರ ನೆನಪಿನಲ್ಲಿ ಉಳಿಯಿತು; ಈಗಲೂ ಉಳಿದಿದೆ.

ದುರದೃಷ್ಟದ ಹೆಣ್ಣು

ನನ್ನ ಪರಿಚಯದ ಪೋಲೀಸ್ ಅಧಿಕಾರಿಯೊಬ್ಬರು ನನಗೆ ಈ ಕಥೆಯನ್ನು ಹೇಳಿದರು.

* * * *

ಈಗ್ಗೆ ಸುಮಾರು ನಲವತ್ತು ವರ್ಷಗಳ ಹಿಂದೆ ನಾನು ನಗರದ ಕೋರ್ಟ್ ಒಂದರಲ್ಲಿ ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರ್ ಆಗಿ ಇದ್ದೆ. ಆಗ ನಗರದ ಒಂದು ಭಾಗದ ಪೋಲಿಸ್ ಇನ್ಸ್‌ಪೆಕ್ಟರು ಕೋರ್ಟಿನಲ್ಲಿ ಒಬ್ಬ ತರುಣನ ಮೇಲೆ ಕೊಲೆ ಆಪಾದನೆ ಮಾಡಿ ಒಂದು ಮೊಕದ್ದಮೆಯನ್ನು ತಂದರು. ಅದರಲ್ಲಿ ಸಾಕ್ಷಿಗಳನ್ನು ವಿಚಾರಿಸಿ ಮ್ಯಾಜಿಸ್ಟ್ರೇಟರಿಗೆ ವಿವರಗಳನ್ನು ತಿಳಿಸುವ ಕೆಲಸ ನನ್ನದಾಯಿತು. ಆಗ ನನ್ನ ಗಮನಕ್ಕೆ ಬಂದ ದುರಂತದ ಕಥೆ ಇದು.

ಒಬ್ಬ ತರುಣಿ. ಚೆಲುವೆ. ಕುಣಿಗಲು ಹೆಬ್ಬೂರಿಗೆ ಮಧ್ಯೆ ಇರುವ ಒಂದು ಹಳ್ಳಿಯವಳು. ಹಳ್ಳಿಯ ಹೆಸರು.... ಹೆಸರನ್ನು ಮರೆತಿದ್ದೇನೆ. ಇವಳ ತಂದೆ ತಾಯಿಗೆ ಇವರು ಐವರು ಹೆಣ್ಣು ಮಕ್ಕಳು. ಈ ತರುಣಿ ಹಿರಿಯಳು, ಬಡ ಮನೆತನ. ಮಕ್ಕಳಿಗೆ ಮದುವೆ ಮಾಡಬೇಕು. ಮಾಡುವುದು ಹೇಗೆ? ತಂದೆ ಚಿಂತಿಸುತ್ತಿದ್ದಾನೆ. ಪಕ್ಕದ ಊರಿನ ಇವರ ಜನರ ಒಬ್ಬ ತರುಣ ಒಂದು ದಿನ ಇವರ ಮನೆಗೆ ಬಂದ. “ನಾನು ಬೆಂಗಳೂರಿಗೆ ಹೋಗಿ ಕೆಲಸ ಹಿಡಿದು ಅಲ್ಲಿ ಬಾಳಬೇಕೆಂದಿದ್ದೇನೆ. ಒಬ್ಬ ಹೋಗುವುದು ಬೇಡ, ಮದುವೆಯಾಗಿ ಹೆಂಡರೊಡನೆ ಹೋಗೋಣ, ಎಂತ ಮಾಡಿದ್ದೇನೆ. ನಿನ್ನ ಹಿರಿಯ ಮಗಳನ್ನು ನನಗೆ ಕೊಡು. ಮದುವೆ ಆಗಿ ಅವಳನ್ನು ಬೆಂಗಳೂರಿಗೆ ಒಯ್ಯುತ್ತೇನೆ,” ಎಂದ. ತಂದೆಗೆ ಇದು ಅನಿರೀಕ್ಷಿತ ಭಾಗ್ಯ. ಹುಡುಗ ಎತ್ತರವಾಗಿದ್ದಾನೆ, ಲಕ್ಷಣವಾಗಿದ್ದಾನೆ. ಅವನ ಹಿಂದು ಮುಂದು ಸ್ವಲ್ಪ ವಿಚಾರಿಸಿ ತಂದೆ ಮಗಳನ್ನು ಅವನಿಗೆ ಕೊಡಲು ಒಪ್ಪಿದ. ಮದುವೆ ಆಯಿತು. ಅಳಿಯ ಮಗಳು ಬೆಂಗಳೂರಿಗೆ ಎಂದು ಬಂದರು.

ಬೆಂಗಳೂರಿಗೆ ಬಂದು ಅಳಿಯ ಮಾರ್ಕೆಟ್ ಬಳಿ ನಗರದ ಒಂದು ಭಾಗದಲ್ಲಿ ಒಂದು ಬೀದಿಯಲ್ಲಿ ವಿಚಾರಿಸಿ ಒಂದು ವಾಸದ ಮನೆಯ ಬದಿಗೆ ಇದ್ದ ಮೂರು ಕೋಣೆಗಳ ಸಣ್ಣ ಮನೆ ಒಂದನ್ನು ಬಾಡಿಗೆಗೆ ತೆಗೆದುಕೊಂಡ; ಅದರಲ್ಲಿ ನಿಂತ. ತರುಣಿ ಬಹಳ ಬಲ್ಲವಳೇನಲ್ಲ; ಆದರೆ ಗಂಡಹೆಂಡಿರ ಸಂಬಂಧ ಏನೆಂದು ಬಲ್ಲಳು. ಮದುವೆ ಆದ ಈ ತರುಣ ಊರಿನಲ್ಲಿದ್ದ ಎರಡು ದಿನದಲ್ಲಿ, ಬೆಂಗಳೂರಿಗೆ ಬಂದು ಈ ಮನೆಯಲ್ಲಿ ನಿಂತ ಮೇಲೆ ಕೆಲವು ದಿನ ಇವಳೊಡನೆ ಈ ಸಂಬಂಧವನ್ನು ಬೆಳೆಸಲಿಲ್ಲ. ಬೆಳೆಸಲಿಲ್ಲ ಎಂದುಕೊಂಡರೂ ಇದು ಏಕೆ ಇರಬಹುದು ಎಂದು ಇವಳು ಯೋಚಿಸಲಿಲ್ಲ. ಒಬ್ಬರಿಗೊಬ್ಬರು ಹೊಸತು. ನಾಲ್ಕು ದಿನ ಜೊತೆಗಿದ್ದು ಪರಿಚಯ ಬೆಳೆಯಲಿ, ಸಂಕೋಚ ಹರಿಯಲಿ, ಎಂತ ತಡೆದಿದ್ದಾನು. ಇದು ಇವಳ ಮನಸ್ಸಿನ ಹಿಂಬದಿಯ ಯೋಚನೆ. ಬಂದ ಮೂರು ದಿನದಲ್ಲಿ ತರುಣ, ತನಗೆ ಒಂದು ಕೆಲಸ ಸಿಕ್ಕಿದೆ, ದಿನಕ್ಕೆ ಮೂರು ನಾಲ್ಕು ರೂಪಾಯಿ ಅಷ್ಟು ಕೂಲಿ ದೊರೆಯುತ್ತದೆ ಎಂದುಹೇಳಿದ. ಊರಿಂದ ತಂದಿದ್ದ ನಾಲ್ಕೈದು ರೂಪಾಯಿಯಲ್ಲಿ ಅವನು ಮನೆಗೆ ಸಾಮಾನೆಲ್ಲ ತಂದಿದ್ದ. ಇವಳು ಅಡಿಗೆ ಮಾಡಿದ್ದಳು. ಈ ಕೆಲಸ ದೊರೆಯಿತು ಎಂದ ಮೇಲೆ ಅವನು ಮತ್ತಷ್ಟು ಸಾಮಾನು ತಂದ, ಮನೆಯೊಳಗೆ ಇಟ್ಟ.

ವಾರ ಕಳೆದಿದೆ; ತರುಣ ಆ ಸಂಜೆ ಮನೆಗೆ ಬರುತ್ತ ಜೊತೆಗೆ ಒಬ್ಬ ಮನುಷ್ಯನನ್ನು ಕರೆತಂದ. ಹೆಂಡತಿಗೆ, “ಇವರು ನನ್ನ ಸ್ನೇಹಿತರು; ನಮಗೆ ಸ್ವಲ್ಪ ಚಹಾ ಕೊಡು,” ಎಂದು ಹೇಳಿದ. ಹುಡುಗಿ ಹಳ್ಳಿಯಲ್ಲಿ ಚಹಾ ಕಂಡಿದ್ದವಳಲ್ಲ; ಬೆಂಗಳೂರಿಗೆ ಬಂದ ದಿನ ಇವರಿಬ್ಬರೂ ಒಂದು ಅಂಗಡಿಯಲ್ಲಿ ಕುಳಿತು ಚಹಾ ತೆಗೆದುಕೊಂಡರು. ಆಗ ಗಂಡ ಹೆಂಡತಿಗೆ ಚಹಾ ಮಾಡುವುದು ಹೇಗೆ ಎಂದು ತಿಳಿಸಿದ್ದ. ಮನೆಯಲ್ಲಿ ನಿಂತ ದಿನದಿಂದ ಸ್ವಲ್ಪ ಫಲಾಹಾರ, ಜೊತೆಗೆ ಚಹ ಮಾಡುವುದನ್ನು ಇವಳಿಗೆ ತಿಳಿಸಿಕೊಟ್ಟಿದ್ದ. ಹುಡುಗಿ ಗಂಡನಿಗೆಂದು ಮಾಡಿದ್ದ ಫಲಾಹಾರ ಸ್ವಲ್ಪವನ್ನು ಅತಿಥಿಗೆ ಕೊಟ್ಟಳು; ಚಹ ಮಾಡಿ ಅವನಿಗೆ ಗಂಡನಿಗೆ ಕೊಟ್ಟಳು. ಸ್ವಲ್ಪ ಹೊತ್ತು ಅತಿಥಿಯೊಂದಿಗೆ ಮಾತನಾಡುತ್ತಿದ್ದ ಗಂಡ ಹೆಂಡತಿಗೆ, “ನಾನು ಪೇಟೆಗೆ ಹೋಗಿಬರಬೇಕಾಗಿದೆ. ಇವರು ಇಲ್ಲಿಯೇ ಇರುತ್ತಾರೆ.

ನಿನ್ನನ್ನು ವಿಚಾರಿಸಿಕೊಳ್ಳುತ್ತಾರೆ. ನೀನು ಭಯಪಡಬೇಡ," ಎಂದು ಹೇಳಿದ; ಮನೆಯಿಂದ ಹೊರಕ್ಕೆ ನಡೆದ. ಹೋಗುತ್ತ ಬಾಗಿಲನ್ನು ಮುಂದಕ್ಕೆ ಎಳೆದುಕೊಂಡು ಹೋದ.

ಹುಡುಗಿಗೆ ಎದೆ ಬಡಿದುಕೊಂಡಿತು. ಅವಳಿಗೆ ಇವನ ಮಾತಿನ ಹಿಂದು ಮುಂದು ತಿಳಿಯಲಿಲ್ಲ. ಯಾರನ್ನೋ ಕರೆತಂದು, ಒಬ್ಬಳಾಗಿರುವ ತನ್ನೊಂದಿಗೆ ಬಿಟ್ಟು, ಇವರು ವಿಚಾರಿಸಿಕೊಳ್ಳುತ್ತಾರೆ, ಭಯಪಡಬೇಡ, ಎಂದನೇ, ಹೀಗೆಂದರೇನು? ಬಾಗಿಲು ಬೇರೆ ಮುಂದಕ್ಕೆ ಎಳೆದುಕೊಂಡು ಹೋಗಿದಾನೆ. ವಿವರ ತಿಳಿಯದೆ ಯೋಚನೆ ಬಹುವೇಗದಿಂದ ಹರಿದು, ಇದು ಏನೋ ಕೇಡು ಅಡಸಿದೆ ಎಂದು ಅವಳ ಮನಸ್ಸಿಗೆ ತೋರಿತು.

ತಾನು ಏನು ಮಾಡಬೇಕು, ಹೇಗೆ ನಡೆದುಕೊಳ್ಳಬೇಕು?

ಒಳಗಿನ ಕೋಣೆಯಲ್ಲಿ ಇವಳು ನಿಂತಿದ್ದಾಳೆ; ಅದು ಅಡಿಗೆಮನೆ. ಮಧ್ಯದ ಕೋಣೆಯಲ್ಲಿ ಅತಿಥಿ ಕುಳಿತಿದ್ದಾನೆ. ಬಲಕ್ಕೆ ಮಲಗುವ ಕೋಣೆ.

ಕ್ಷಣ ಬಿಟ್ಟು ಅತಿಥಿ, "ಬಾ ಹುಡುಗಿ, ಇಲ್ಲಿ ಕುಳಿತುಕೊ, ನನ್ನ ಗೆಳೆಯ ನಾನು ನಿನ್ನನ್ನು ನೋಡಿಕೊಳ್ಳಬೇಕೆಂದು ಹೇಳಿದ್ದಾನೆ," ಎಂದು ತನ್ನ ಪಕ್ಕದಲ್ಲಿ ಸ್ಥಳ ತೋರಿಸಿದ.

ಹುಡುಗಿ ಬೆಕ್ಕಸದಿಂದ ಇವನ ಕಡೆ ನೋಡಿದಳು. "ನನ್ನ ಗಂಡ ನಿಮಗೆ ಏನು ಹೇಳಿದ್ದಾನೋ ನನಗೆ ತಿಳಿಯದು. ನನಗೆ ಹೇಳಿದ್ದು ಏನು ಅದು ಸರಿಯಾಗಿ ತಿಳಿದಿಲ್ಲ. ಈಗ ನೀವು ನನ್ನೊಂದಿಗೆ ಸಲಿಗೆ ಮಾಡಬೇಡಿ. ಈಗ ಹೊರಟುಹೋಗಿ. ನನ್ನ ಗಂಡ ಹಿಂತಿರುಗಿದ ಮೇಲೆ ಅವನೊಂದಿಗೆ ಮಾತನಾಡಿ ಏನು ಮಾಡಬೇಕು ತಿಳಿಯುತ್ತೇನೆ," ಎಂದಳು.

"ಎಲೆ, ಹಸುಮಗುವೆ, ನನ್ನ ಕರೆತಂದು ಇಲ್ಲಿ ಕೂರಿಸಿ, ನಿನ್ನಿಂದ ಚಹಾ ಕೊಡಿಸಿ, ನೋಡಿಕೋತಾರೆ ಭಯ ಬೇಡ ಎಂತ ಹೇಳಿ ನಮ್ಮಿಬ್ಬರನ್ನ ಬಿಟ್ಟು ಹೊರಕ್ಕೆ ಹೋಗಿದ್ದಾನೆ ನಿನ್ನ ಗಂಡ. ಯಾಕಿರಬಹುದು ಅವನು ಹೀಗೆ ಮಾಡಿರೋದು? ನಿನಗೆ

ತೋಚೋದಿಲ್ಲವೆ? ಅಂಥ ಹಸುಮಗುವೆ ನೀನು? ಬಾಯಲ್ಲಿ ಬೆರಳಿಟ್ಟರೆ ಕಚ್ಚೋದನ್ನ ಕಾಣದೆ?”

ಹೀಗೆಂದು ಅತಿಥಿ ಒಂದು ಪೊಟ್ಟಣವನ್ನು ಒಳ ಕಿಸೆಯಿಂದ ತೆಗೆದು ಅದರಿಂದ ಒಂದು ಹೂವಿನ ಹಾರ, ಒಂದು ಅತ್ತರ್ ಸೀಸೆ, ಹಾಲುಫೇಡ ಪೊಟ್ಟಣವನ್ನು ತೆಗೆದು, ಹೂ ಫೇಡಪೊಟ್ಟಣಗಳನ್ನು ಇವಳಿಗೆ ತೋರಿಸಿದನು. “ಇದನ್ನೆಲ್ಲ ನಿನಗೆ ಅಂತ ತಂದಿದ್ದೇನೆ, ಬಾ, ತಕೋ. ಹತ್ತಿರ ಕೂತುಕೊ. ಜೊತೆಗೆ ಇರು. ಇರೋಣ ಅಂತಲೇ ನಾನು ಬಂದದ್ದು. ಇರುವಿಯಂತೆ, ಬಾ ಅಂತ ಹೇಳಿ ನಿನ್ನ ಗಂಡ ಕರೆತಂದ.”

ಹುಡುಗಿಗೆ ಇದು ದಿಟ ಎನ್ನುವುದು ಕಂಡಿತು. ಕಂಡೂ, ಇದು ಏನು ಈ ಗಂಡನ ಆಟ? ತಾನು ಜೊತೆಗೆ ಇರಲಿಲ್ಲ. ಬೇರೆ ಒಬ್ಬನನ್ನು ಕರೆತಂದಿದ್ದಾನೆ. ಇವನು ಮದುವೆ ಆದದ್ದು ಇದಕ್ಕಾಗಿಯೇ?

ಒಂದೆರಡು ಕ್ಷಣ ತಡೆದು ಅವಳು, “ಒಳ್ಳೇದು, ನಾನು ಗಂಡನ್ನ ಕೇಳಿ ತಿಳುಕೊಳ್ಳುತ್ತೇನೆ. ಈಗ ಬೇಡ, ನೀವು ಇನ್ನೊಮ್ಮೆ ಬನ್ನಿ,” ಎಂದಳು.

ಅತಿಥಿ ಹುಡುಗಿ ತೀರಾ ಮುಗ್ಧ ಎನ್ನುವುದನ್ನು ಕಂಡನು. ಅವನು ಆಚಾರ ಬಿಟ್ಟ ಮನುಷ್ಯ ಹೌದು. ಆದರೆ ದುಷ್ಟನಲ್ಲ. ಹುಡುಗಿಯನ್ನು ಬಲವಂತ ಪಡಿಸಲಿಲ್ಲ. “ಆಯಿತು, ನಾ ಬರ್ತೆನೆ,” ಎಂದು ಎದ್ದು ಬಾಗಿಲು ತೆರೆದು ಹೊರಟುಹೋದ.

ಸುಮಾರು ಎರಡು ಗಂಟೆ ಕಳೆದು ಗಂಡ ಹಿಂದಿರುಗಿದ. ಕದವನ್ನು ತೆರೆದು ಮನೆ ಒಳಕ್ಕೆ ಬಂದ. ಹೆಂಡತಿ ಒಳಕೋಣೆಯಲ್ಲಿ ಕುಳಿತಿದ್ದಾಳೆ. ಮಧ್ಯದ ಕೋಣೆಯಲ್ಲಿ ಹೂವು, ಫೇಡ, ಅತ್ತರ್ ಸೀಸೆ ಎಲ್ಲ ನೆಲದ ಮೇಲಿದೆ. ಅತಿಥಿ ಇಲ್ಲ. ಅವನು “ಅವರು ಎಲ್ಲಿ” ಎಂದು ಹೆಂಡತಿಯನ್ನು ಕೇಳಿದ.

ಹೆಂಡತಿ, “ನಿನ್ನ ಅವರು ಎಲ್ಲಿ ಅಂತ ನಾನೇನು ಬಲ್ಲೆ? ನೀನು ಅಲ್ಲ, ತಾನು ನನ್ನ ಗಂಡ ಅಂದರು. ಹೌದೇ ಅಂತ ಗಂಡನ್ನ ಕೇಳಿ ತಿಳುಕೋತೇನೆ, ನೀವಿನೊಮ್ಮೆ ಬನ್ನಿ ಅಂದೆ, ಹೊರಟುಹೋದರು.”

"ಅಯ್ಯೋ ಹುಚ್ಚಿ. ನನ್ನ ಗಂಡ ಅಂದು ನೀನು ಪಡೋ ಸುಖ ಏನು? ನನಗೆ ಬಹಳ ಅಂದರೆ ದಿನಕ್ಕೆ ಮೂರು ರೂಪಾಯಿ ನಾಲ್ಕು ರೂಪಾಯಿ ಕೂಲಿ ಸಿಗುತ್ತೆ. ಈ ಮನುಷ್ಯ ಇಲ್ಲಿಗೆ ಬರೋ ಮುನ್ನ ಹತ್ತು ರೂಪಾಯಿ ಕೊಟ್ಟ. ಇಕೋ ರೂಪಾಯಿ," ಎಂದು ಸೊಂಟದಿಂದ ಹತ್ತು ರೂಪಾಯಿ ನೋಟೊಂದನ್ನು ಸೆಳೆದು ಇವಳಿಗೆ ನೀಡುತ್ತ, "ಇದು ನಿನ್ನದು, ನೀನೇ ಇಟ್ಟುಕೊ, ನೀನ್ಬ ಉಂಡು ಉಟ್ಟು ರಾಣಿಯಂತೆ ಬಾಳು, ನನ್ನನ್ನ ನೋಡಿಕೋ. ನಾನೊಬ್ಬ ಕೂಲಿ; ನೀನು ನನ್ನ ಹೆಂಡತಿ; ನಮ್ಮ ಬಾಳುವೆ ಏನು ಬಾಳುವೆ? ಇದು ಬಾಳುವೆ. ಕೈತುಂಬ ಹಣ, ಸುಖವಾಗಿರಬಹುದು."

ಹುಡುಗಿಗೆ ಇವನ ಮಾತನ್ನು ಕೇಳಿ ಆಶ್ಚರ್ಯವಾಯಿತು. ಸಾಮಾನ್ಯವಾಗಿ ಗಂಡನಾದವನು ತನ್ನ ಹೆಂಡಿರಾದವಳು ಬೇರೆ ಒಬ್ಬನ ಕಡೆ ನೋಡಿದರೆ ಸಹಿಸುವುದಿಲ್ಲ. ಈ ಗಂಡನ ತೀರು ಇದೇನಿಷ್ಟು ಬೇರೆಯಾಗಿದೆ?

ಏಕೆ ಇಷ್ಟು ಬೇರೆ ಆಗಿರಬಹುದು? ಇವನು ತನ್ನೊಂದಿಗೆ ಗಂಡಾಗಿ ಬಾಳಿಲ್ಲ. ಇದು ಸಂಕೋಚದಿಂದ ತಡೆದುಕೊಂಡದ್ದಲ್ಲ. ಇವನು ಗಂಡು ಅಲ್ಲವೊ?

ಹೇಗೆ ತಿಳಿಯುವುದು? ತಾನು ಸುಮ್ಮನಿರುತ್ತ ಬೇರೆಯವನನ್ನು ಕರೆದು ತಂದಿದ್ದಾನೆ. ಅದರಿಂದ ಊಹಿಸಬೇಕು.

ಇವನು ಗಂಡಲ್ಲ.

"ನಾನು ನಿನ್ನ ಒಂದು ಮಾತು ಕೇಳುತೇನೆ. ನೀನು ನನಗೆ ದಿಟ ಹೇಳಬೇಕು."

"ಏನು ಮಾತು?"

"ಮದುವೆ ಆಗಿ ವಾರ ಆಗತಾ ಬಂತು. ನೀನು ನನ್ನ ಮುಟ್ಟಿಲ್ಲ, ಯಾಕೆ? ನೀ ಗಂಡಲ್ಲವೆ?"

"ಅಲ್ಲ."

ಸಂಗತಿ ಇದು ಇರಬೇಕು ಎಂದು ಇವಳಿಗೆ ತೋರಿತ್ತಾದರೂ ಇದೇ ಎಂದು ತಿಳಿದಾಗ ಅವಳ ಅಂತರ್ಯದಲ್ಲಿ ಏನೋ ಇರಿದಂತಾಯಿತು. ಒಂದು ನಿಮಿಷ ನಿರಾಶೆಯ

ನೋವನ್ನನುಭವಿಸಿ ಅವಳು, "ನನ್ನನ್ನ ಇತರರಿಗೆ ಒಪ್ಪಿಸಿ ಅನ್ನ ಗಳಿಸೋಕೆ ಮದುವೆ ಆದಿಯಾ?" ಎಂದಳು.

"ಹೌದು."

"ನಿನಗೆ ನಾಚಿಕೆ ಇಲ್ಲವೆ?"

"ಇಲ್ಲ."

"ನೀನು ನನ್ನನ್ನು ಹಾಳುಮಾಡಿದೆಯಲ್ಲ."

"ಹಾಳೇನು ಮಾಡಿದೆ? ನಿನಗೇನು ಕಡಿಮೆಯಾಯಿತು? ದೊರೆಗಳನ್ನು ತಂದು ನಿನ್ನ ಕಾಲ ಮೇಲೆ ಹಾಕತೇನೆ. ಅವರನ್ನ ಆಳು. ಬರೀ ನನ್ನ ಹೆಂಡತಿ ಆಗಿದ್ದರೆ ನೀನು ಕಾಣಬಹುದಾದ ವೈಭೋಗ ಏನು?"

ತನ್ನನ್ನು ಕೈಹಿಡಿದ ಗಂಡಲ್ಲದ ಈ ಗಂಡಿನ ಮನಸ್ಸಿನ ಸ್ಥಿತಿಯನ್ನು ನೋಡಿ ಹುಡುಗಿಗೆ ಕ್ಷಣ ಸಹಿಸಬಾರದ ಬೇಸರ ಆಯಿತು. ಉತ್ತರ ಕ್ಷಣ ಆಳವಿಲ್ಲದ ಕನಿಕರ ಆಯಿತು.

ಅಯ್ಯೋ ಪಾಪವೇ. ತನ್ನದು ಎಂತ ಒಂದು ಹೆಣ್ಣು ಇದ್ದೂ ಅದರೊಡನೆ ಬಾಳುವ ಪುಣ್ಯ ಇಲ್ಲದೆ ಹೋದ ಈ ಪ್ರಾಣಿಯ ಪಾಡು ಇದೇನು ಪಾಡು?

ಅವಳು ಮತ್ತೆ ಎರಡು ನಿಮಿಷ ಬಿಟ್ಟು, "ನೀನು ಹೇಳುತ್ತಿರುವಂತೆ ನಡೆಯುವುದೇ ನನಗೆ ತೋರುತ್ತಿಲ್ಲ. ರಾತ್ರಿ ಕಳೆಯಲಿ, ಹೇಳುತ್ತೇನೆ" ಎಂದಳು. ಅವನು, ಆಯಿತು, ಎಂದ.

ರಾತ್ರಿಯೆಲ್ಲಾ ಅವಳು ಯೋಚನೆ ಮಾಡಿದಳು. ಇವನು ಹೇಳುತ್ತಿರುವಂತೆ ಬಾಳುವುದು ಚನ್ನವಲ್ಲ. ಹಾಗಂತ ಒಲ್ಲೆ ಎಂದಳು, ದಾರಿಯೇನು? ಊರಿಗೆ ಹಿಂದಕ್ಕೆ ಹೋಗಬೇಕು. ಇವನು ಗಂಡಲ್ಲ, ಮದುವೆ ಸುಳ್ಳು ಎನ್ನಬೇಕು; ತಾಯ ಮನೆಯಲ್ಲಿ ನಿಲ್ಲಬೇಕು. ಎಂಥ ನಗೆಗೇಡು. ಒಬ್ಬ ಬಂದು ತನ್ನನ್ನು ಮದುವೆ ಆಗುತ್ತೇನೆ ಎಂದಾಗ ತನಗೆ ಆದ ಸಂತೋಷ ಅದೆಷ್ಟು? ಜನ ನೋಡಿ ನಕ್ಕಾರು ಎನ್ನುವ ಭಯ ಇಲ್ಲದಿದ್ದರೆ ತಾನು ಆ ಸಂತೋಷಕ್ಕೆ ಕುಣಿಯುತ್ತಿದ್ದಳು. ಪ್ರಾಯದ ಹುಡುಗಿಗೆ ತಕ್ಕ ಗಂಡ ಒಬ್ಬ ತನ್ನನ್ನು ಮದುವೆಯಾಗುತ್ತಾನೆ ಎಂಬ ಮಾತಿಗಿಂತ ಹೆಚ್ಚು ಭಾಗ್ಯದ ಮಾತು ಒಂದಿಲ್ಲ.

ಹುಡುಗಿ ಪುಣ್ಯಶಾಲಿ ಎಂದು ತಂದೆ ತಾಯಿ ಪಟ್ಟ ಸಂತೋಷ ಎಷ್ಟು? ಊರಿನ ತಮ್ಮ ಜನ ಹೊಗಳಿದ್ದೆಷ್ಟು? ಗಂಡನೊಂದಿಗೆ ಬಾಳು ನಡೆಸಲು ಬೆಂಗಳೂರಿಗೆಂದು ಹೊರಟಾಗ ಮನೆಯ ಜನಕ್ಕೆ ಏನು ಸಂಭ್ರಮ? ತನ್ನದು ಎಷ್ಟು ಸಡಗರ? ಮದುವೆ ಸುಳ್ಳು ಎಂತ ಹಿಂದಿರುಗಿದರೆ ಇದೆಲ್ಲ ಹೀನಾಯ ಅಷ್ಟೇ ಆಗುತ್ತದೆ. ನನ್ನ ಅದೃಷ್ಟ ಇಷ್ಟೇ ಅಂತ ಈ ಹೀನಾಯವನ್ನು ಸಹಿಸಿಕೊಳ್ಳುವುದೇ, ಇಲ್ಲ ಅದೃಷ್ಟ ಇಷ್ಟೇ ಆಯಿತು ಎಂತ ಇಲ್ಲಿ ಇವನು ಒದಗಿಸಿರುವ ಗತಿಯನ್ನು ಒಪ್ಪಿಕೊಳ್ಳುವುದೇ?

ಚಿಂತೆಯಲ್ಲಿ ಹುಡುಗಿಗೆ ಬಹುಹೊತ್ತು ನಿದ್ರೆ ಬರಲಿಲ್ಲ. ನಡುರಾತ್ರಿಯಲ್ಲಿ ನಿದ್ದೆ ಹತ್ತಿತು. ಸ್ವಲ್ಪ ಹೊತ್ತಿನ ಮೇಲೆ ಎಚ್ಚರ ಆಯಿತು. ಬುದ್ಧಿ ತುಂಬ ತಿಳಿಯಾಗಿದ್ದಂತೆ ತೋರಿತು. ಆ ಅವಸ್ಥೆಯಲ್ಲಿ ಅವಳಿಗೆ ಇಲ್ಲಿಯೇ ಇದ್ದು ಇವನು ಹೇಳುವಂತೆ ಬಾಳುವುದೇ ಸದ್ಯಕ್ಕೆ ಸರಿ ಎನ್ನಿಸಿತು.

ಬೆಳಗಾಗ ಈ ಮನುಷ್ಯ ಎದ್ದಾಗ ಇವಳು ಅವನಿಗೆ, “ಊರಿಗೆ ಹೋಗೋಣವೇ ಅಂದುಕೊಂಡೆ. ತಂದೆ ತಾಯಿಗೆ ದುಃಖ ಆಗುತ್ತೆ. ಜನ ನಗತಾರೆ. ನನಗೆ ಈ ಎರಡೂ ಬೇಡ ಅನ್ನಿಸುತಾ ಇದೆ. ನೀನು ಹೇಳಿದಂತೆ ಬಾಳುತೇನೆ,” ಎಂದಳು.

ಹಿಂದಿನ ಸಂಜೆ ಬಂದಿದ್ದ ಮನುಷ್ಯ ಆ ಸಂಜೆ ಬಂದ. ಹುಡುಗಿ ಅವನನ್ನು ಬರಮಾಡಿಕೊಂಡಳು. ರಾತ್ರಿಯನ್ನು ಅವನೊಡನೆ ಕಳೆದಳು. ಗಂಡನಲ್ಲ. ಆದರೂ ಬಯಸಿದ ಗಂಡು. ತಾನೇ ಬಯಸಿದ್ದಲ್ಲ; ಅವನು ಬಯಸಿ ತಾನು ಒಪ್ಪಿದ್ದು. ಇವನೇ ಮದುವೆಯಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು. ತನ್ನ ಪಾಲಿಗೆ ಈ ಪುಣ್ಯ ಇಲ್ಲವಾಯಿತೇ !

ಎಂದರೆ ಆ ಬಾಳು ಅಸಹ್ಯ ಎನ್ನಿಸಲಿಲ್ಲ.

ಮಾರನೆಯ ದಿನ ಇವಳು ಗಂಡನಿಗೆ, “ನೀನು ಕಾಸಿನ ಆಸೆಗೆ ದಿನಾ ಒಬ್ಬನನ್ನು ಕರೆತರಬೇಡ, ನಾನು ಆಗಲಿ ಎಂದ ದಿನ ಒಬ್ಬನನ್ನು ಕರೆದು ತಾ,” ಎಂದಳು.

“ನಿನ್ನ ನಾನು ಬಲವಂತ ಪಡಿಸೋಲ್ಲ. ಅಂದರೆ ಮನುಷ್ಯ ಬಾರದ ದಿನ ನಮಗೆ ಕಾಸಿಲ್ಲ.”

“ಬೇಡ.”

"ನಿನ್ನಿಷ್ಟ."

ಮಧ್ಯಾಹ್ನ ಊಟದ ವೇಳೆಗೆ ಇನ್ನೊಂದು ಯೋಚನೆ ಬಂದಿತು. "ನೀನು ಕರೆತಂದವರನ್ನೆಲ್ಲಾ ನಾನು ಒಪ್ಪಬೇಕು ಎನ್ನಬೇಡ. ಬಂದವನು ಬೇಡ ಎನಿಸಿದರೆ ನಾನು ನನ್ನ ಮೈಯಲ್ಲಿ ಚನ್ನಾಗಿಲ್ಲ ಅಂತೀನೆ. ನೀನು ಅವನನ್ನು ಹಿಂದಕ್ಕೆ ಕಳುಹಿಸಬೇಕು. ಬಲವಂತ ಮಾಡಕೂಡದು."

"ಬಲವಂತ ಮಾಡೋದಿಲ್ಲ ಅಂತ ಹೇಳಿದ್ದೇನಲ್ಲಾ. ಇರುತ್ತಾ, ಜೊತೆ ಬೇಡಿ ಬಂದವನಿಗೆ ಜೊತೆ ಇಲ್ಲವಾದರೆ ಅವನು ಕೋಪ ಮಾಡಿಕೊಂಡು ಹೋಗುತಾನೆ. ಕಾಸು ಹಿಂದಕ್ಕೆ ಕೊಡಬೇಕು."

"ಅದಕ್ಕೆ ನಾ ಏನೂ ಮಾಡೋ ಹಾಗಿಲ್ಲ. ಒಲ್ಲೆ ಅನ್ನಿಸಿದ ಗಂಡನ್ನ ನಾನು ನೆರೆಯಲಾರೆ."

"ಆಯಿತು."

ಈ ಒಪ್ಪಂದದ ಪ್ರಕಾರ ಹತ್ತು ದಿನ ಬಾಳು ನಡೆಯಿತು. ಆಮೇಲೆ ಒಂದು ದಿನ ಇವನು ಒಬ್ಬ ಮನುಷ್ಯನನ್ನು ಕರೆತಂದ. ಇವಳು ತನಗೆ ಮೈಯಲ್ಲಿ ಚನ್ನಾಗಿಲ್ಲ ಎಂದಳು. ಗಂಡನಾದವನು ಆ ಬಂದವನಿಗೆ, "ಅವಳಿಗೆ ಮೈಯಲ್ಲಿ ಚೆನ್ನಾಗಿಲ್ಲವಂತಪ್ಪಾ, ನೀನು ಎರಡು ದಿನ ಬಿಟ್ಟು ಬಾ," ಎಂದ. ಅವನು, "ಲೋ ಕತ್ತೆ, ನಿನಗೆ ಬುದ್ಧಿ ಇದೆಯೇನೊ? ಮೈಯಲ್ಲಿ ಸರಿಯಾಗಿದೆ ಅಂತ ಮೊದಲೇ ತಿಳುಕೊಳ್ಳದೆ ನನ್ನ ಹತ್ತಿರ ಕಾಸು ತಕ್ಕೊಂಡು ನೀನು ಯಾಕೆ ಕರೆತಂದೆ?" ಎಂತ ಅವನನ್ನು ಒಂದು ಕೆಟ್ಟ ಮಾತಿನಿಂದ ಬೈದ. ಇವನು, "ನಿನ್ನ ಕಾಸನ್ನ ನೀ ತಗೊಂಡು ಹೋಗು, ಬೈದುಗಿದ್ದು ರಂಪು ಮಾಡಬೇಡ," ಎಂದ. ಅವನ ಹಣಾನ ಅವನಿಗೆ ಹಿಂದಕ್ಕೆ ಕೊಟ್ಟ.

ಆ ಮನುಷ್ಯ ಹೊರಟುಹೋದ. ಈ ಗಂಡನಾದವನು ತಿರುಗಿ ಹಿಂದಕ್ಕೆ ಹೋಗಿ ಇನ್ನೊಬ್ಬನನ್ನು ಕರೆದು ತಂದ. ಮೊದಲಲ್ಲಿ ಬಂದಿದ್ದ ಮನುಷ್ಯ ಅದೆತ್ತಲೋ ಹೋಗಿದ್ದು ಅದೇ ದಾರಿಯಲ್ಲಿ ಹಿಂದಿರುಗುತ್ತಿದ್ದಾನೆ. ಈ ಮನೆಯವನು, ಅವನ ಜೊತೆಗೆ ಬೇರೊಬ್ಬ ಗಂಡು ನಿಂತಿದ್ದಾರೆ. ಇದೇನು? ಇವನು ಇನ್ನೊಬ್ಬನನ್ನು ಕರೆದುತಂದಿದ್ದಾನೆ?

ಇದನ್ನು ತಿಳಿಯಬೇಕು ಎಂದು ಇವನು ಎದುರು ಮನೆಯ ನೆರಳಿನಲ್ಲಿ ಒಂದು ಗೋಡೆಯ ಬದಿಗೆ ನಿಂತ.

ಮನೆಯ ಬಾಗಿಲು ತೆರೆಯಿತು. ಜೊತೆಯ ಮನುಷ್ಯ ಒಳಕ್ಕೆ ಹೋದ. ಮನೆಯವನು ಅವನೊಡನೆ ಒಳಕ್ಕೆ ಹೊಕ್ಕು ಎರಡು ಕ್ಷಣದಲ್ಲಿ ಹಿಂದಕ್ಕೆ ಬಂದ. ಒಳಗೆ ಬಾಗಿಲ ಅಗಳಿ ಹಾಕಿದ ಸದ್ದು ಆಯಿತು.

ಬಾಗಿಲು ತೆರೆದು ಹೊರಗಿನ ಮನುಷ್ಯ ಒಳಕ್ಕೆ ಹೋದಾಗ ಅವನ ಮುಖದ ಮೇಲೆ ಚೆನ್ನಾಗಿ ಬೆಳಕುಬಿತ್ತು. ಅವನು ಇವನು ಬಲ್ಲ ಒಬ್ಬ ಮನುಷ್ಯ. "ಎಲ, ಮೈಯಲ್ಲಿ ಚನ್ನಾಗಿಲ್ಲ ಎಂದವಳು ಇವನನ್ನು ಒಪ್ಪಿಕೊಂಡಿದಾಳೆ. ಇವಳ ಅರ್ಥ ನೀನು ಬೇಡ ಎಂದಷ್ಟೇ. ಅಯ್ಯ ಏನಹಂಕಾರ ಇವರದು? ಸೂಳೆಗೆ ಈ ಕೊಬ್ಬು!"

ಆ ಇನ್ನೊಬ್ಬ ತನಗಿಂತ ರೂಪವಂತ. ತನಗಿಂತ ಸ್ವಲ್ಪ ಕಿರಿಯ ಕೂಡ. ಆಗಲಿ, ತನ್ನಿಂದ ಆದರೆ ಈ ಇಬ್ಬರಿಗೂ ಏನಾದರೂ ಶಿಕ್ಷೆ ಮಾಡಬೇಕು.

ಮಾರನೆಯ ರಾತ್ರಿ ಈ ಮನುಷ್ಯ ಸುಮಾರು ಅದೇ ಹೊತ್ತಿನಲ್ಲಿ ಎದುರು ಮನೆಯ ಗೋಡೆಯ ನೆರಳಲ್ಲಿ ಮರೆಯಾಗಿ ನಿಂತಿದ್ದಾನೆ. ಮನೆಯ ಮನುಷ್ಯ ಯಾರನ್ನೋ ಕರೆತಂದ. ಆ ಹೊತ್ತಿಗೆ ಸರಿಯಾಗಿ ಹಿಂದಿನ ದಿನ ಬಂದಿದ್ದ ಇವನ ಪರಿಚಯದ ಆ ತರುಣ ತಾನೇ ಬಂದ. ಮನೆ ಬಾಗಿಲ ಮುಂದೆ ಮೂರು ಜನ ಸೇರಿದರು. ಇವರ ಮಧ್ಯೆ ಮೆಲ್ಲನೆ ದನಿಯಲ್ಲಿ ಏನೋ ಮಾತು ನಡೆಯಿತು. ಅದು ಇವನಿಗೆ ಕೇಳಿಸಲಿಲ್ಲ. ಐದು ನಿಮಿಷದಲ್ಲಿ ಬಾಗಿಲು ತೆರೆಯಿತು. ಹೆಂಗಸು ಹಿಂದಿನ ದಿನ ಬಂದಿದ್ದ ತರುಣನನ್ನು ಬಳಿಗೆ ಕರೆದು ಅವನಿಗೆ ಏನೋ ಹೇಳಿದಳು. ಆಮೇಲೆ ಗಂಡನಿಗೆ, "ನನಗೆ ಮೈಲಿ ಚನ್ನಾಗಿಲ್ಲ. ಇವರನ್ನು ಇನ್ನೊಂದು ದಿನ ಬರಹೇಳು," ಎಂದಳು. ಗಂಡ ತಾನು ಕರೆ ತಂದಿದ್ದ ಮನುಷ್ಯನಿಗೆ ಅವನು ಕೊಟ್ಟಿದ್ದ ಹಣವನ್ನು ಹಿಂತಿರುಗಿಸಿದ; ಅವನನ್ನು ಕಳುಹಿಸಿಬಿಟ್ಟ. ತರುಣ ತಾನೂ ಅಲ್ಲಿಂದ ಹೊರಟು ಇನ್ನೊಂದು ದಿಕ್ಕಿಗೆ ಹೋದ. ಐದು ನಿಮಿಷ ಕಳೆದಿದೆ. ಅವನು ತಿರುಗಿ ಬಂದ. ಬಾಗಿಲ ಬಳಿ ಹೋಗಿ ಮೆಲ್ಲನೆ ಬೆರಳಿಂದ ಅದರ ಮೇಲೆ ಸದ್ದು ಮಾಡಿದ. ಬಾಗಿಲು ತೆರೆಯಿತು. ತರುಣ ಒಳಕ್ಕೆ ಹೋದ, "ಓ, ಈ ಗಂಡ ಕರೆತಂದ

ಮನುಷ್ಯ ಇವಳಿಗೆ ಬೇಡ. ಹಿಂದಿನ ದಿನ ಬಂದಿದ್ದವನು ಬೇಕು.” ಹೀಗೆಂದುಕೊಂಡು ಈ ಮರೆಯಲ್ಲಿ ನಿಂತಿದ್ದ ಮನುಷ್ಯ ಅಲ್ಲಿಂದ ಹೊರಟುಹೋದ. ಹೊರಗಿಂದ ನೋಡಿದವನಿಗೆ ಕಂಡದ್ದಿಷ್ಟು. ಒಳಗೆ ಆದದ್ದೇನು?

ಹುಡುಗಿ ಹಿಂದಿನ ದಿನ ಬಂದಿದ್ದು, ಇಂದು ಮರಳಿಬಂದ ಆ ತರುಣನನ್ನು ತುಂಬ ಒಪ್ಪಿಕೊಂಡಳು. ಅವನಿಗೆ ತನ್ನ ಗೋಳನ್ನು ತೋಡಿಕೊಂಡಳು. “ನಿನಗೆ ಮದುವೆ ಆಗಿಲ್ಲ ಅಲ್ಲ?”

“ಇಲ್ಲ.”

“ನಿನಗೆ, ತೋಚಿದ ದಿನ ಇಲ್ಲಿಗೆ ಬಂದು ನನ್ನ ಜೊತೆಗೆ ಇದ್ದು ಹೋಗುವುದು ಸಾಕು ಎನ್ನಿಸುತ್ತೆಯೇ? ನನ್ನ ಜೊತೆಗೆ ಬಾಳಬಹುದು ಎನ್ನಿಸುತ್ತಿದೆಯೇ?”

“ಹೇಗೆ ಬಾಳುವುದು? ನಿನ್ನ ಗಂಡ ಇದಾನಲ್ಲ?”

“ಅವನು ಗಂಡ ಆದರೆ ನಿನ್ನನ್ನು ನನ್ನ ಹತ್ತಿರ ಬಿಡುತ್ತಿದ್ದನೆ? ಬೇರೆ ಹತ್ತು ಜನವನ್ನ ನನ್ನ ಬಳಿಗೆ ಕರೆತರುತ್ತಿದ್ದನೆ? ಮದುವೆ ಆದ, ದಿಟ; ಆಗಿ ಏನು? ಅವನು ಗಂಡು ಅಲ್ಲ. ಬಯಸಿದವರಿಗೆ ನನ್ನ ಕೊಟ್ಟು ಕಾಸು ಗಳಿಸುತಾ ಇದ್ದಾನೆ. ನೀನು ಮನಸ್ಸು ಮಾಡಿದರೆ ನಾನು ಬದುಕಿಕೊಳ್ಳುತ್ತೇನೆ. ನೀನು ನನಗೆ ಬೇಕು. ನಾನು ನಿನಗೆ ಬೇಕೇ?”

“ಏನು ಮಾಡು ಅಂತೀ, ಹೇಳು, ಮಾಡುತೇನೆ.”

“ಇವನೊಂದಿಗೆ ಮಾತಾಡಿ ಇವನು ನನ್ನನ್ನು ಬಿಡೋ ಹಾಗೆ ಮಾಡಿ ನನ್ನ ಮದುವೆಯಾಗು. ನಾನು ನಿನ್ನ ಹೆಣ್ಣಾಗತೇನೆ. ಹತ್ತು ಜನ ಮುಟ್ಟಿದ ಎಂಜಲು ಹೆಣ್ಣನ್ನು ಮುಟ್ಟಿ ಹೋಗುವ ಪಾಡು ಬೇಡ ನಿನಗೆ. ನಿನಗೆ ಬೇಕಾದ ಹೆಣ್ಣನ್ನ ನಿನ್ನ ಹೆಣ್ಣು ಅಂತ ಮಾಡಿಕೊ.”

“ಆಯಿತು. ನಿನ್ನ ಮಾತು ಸರಿ ಅಂತ ಕಾಣುತ್ತೆ. ಅವನು ಒಪ್ಪುತ್ತಾನೆಯೇ, ನೋಡಬೇಕು.”

“ವರಮಾನ ತಪ್ಪುತ್ತೆ ಅಂತ ಅವನು, ಒಪ್ಪೋದಿಲ್ಲ ಅನ್ನಬಹುದು. ನೀನು ಬಲವಂತ ಮಾಡಿ ಭಯಪಡಿಸಿ ಏನು ಬೇಕು ಅದನ್ನ ಹೇಳಿ ಅವನು ಒಪ್ಪೋ ಹಾಗೆ ಮಾಡಬೇಕು.

ನನಗೆ ನೀನೇ ದಿಕ್ಕು; ನನ್ನನ್ನು ಕಾಪಾಡು," ಹೀಗೆಂದು ಹುಡುಗಿ ಅವನ ಕಾಲಮೇಲೆ ಬಿದ್ದಳು. ತರುಣ ಅವಳನ್ನು ಹಿಡಿದು ಎತ್ತಿದ. "ಅವನು ನಿನ್ನನ್ನು ಬಿಟ್ಟರೂ ಸರಿ; ಬಿಡೋದಿಲ್ಲ ಅಂದರೂ ಸರಿ; ನಿನಗೆ ಬೇರೆ ಗಂಡು ಯಾರೂ ಬೇಡ ಅಂತ ಅನ್ನತಿದ್ದೀ: ನನ್ನ ಒಪ್ಪಿಕೊಂಡಿದ್ದೀ. ನನ್ನನ್ನ ಒಪ್ಪಿದವಳು ಬೇರೆ ಗಂಡು ಬೇಡ ಎಂದರೆ ಅವಳಿಚ್ಛೆ ನಾನು ನಡೆಸಿಕೊಡಬೇಕು. ನಡೆಸುತೇನೆ," ಎಂದನು.

ಮಾರನೆಯ ಸಂಜೆ ಹುಡುಗಿ ಗಂಡನಿಗೆ, "ಈ ಹೊತ್ತು ನೀ ಯಾರನ್ನೂ ಕರೆತರಬೇಡ, ನಿನ್ನೆ ಬಂದಿದ್ದನಲ್ಲಾ ಅವನೇ ಬರತಾನೆ. ನಿನ್ನೊಂದಿಗೇನೋ ಮಾತನಾಡಬೇಕು ಅಂದ," ಎಂದ.

"ಅವನೇನೋ ಮನುಷ್ಯ ಒಳ್ಳೆಯವನೇ, ಇರುತಾ ಕೊಡೋದಷ್ಟೇನೂ ಇಲ್ಲ. ಬೇರೆಯವರು ಎರಡು ಪಟ್ಟು ಮೂರು ಪಟ್ಟು ಹಣ ಕೊಡತಾರೆ."

"ಸರಿ, ಅವನಿಗೆ ಎಲ್ಲಾ ಹೇಳು."

ಆ ದಿನ ತರುಣ ಸ್ವಲ್ಪ ಹೊತ್ತಾಗಿ ಬಂದ. ತನಗಾಗಿ ಕಾದಿದ್ದ ಗಂಡನಿಗೆ "ನಾನು ನಿನ್ನೊಂದಿಗೆ ಮಾತನಾಡಬೇಕು ಅಂತ ಹೇಳಿದ್ದೆ. ಅದಕ್ಕಾಗಿ ನಿಂತಿದ್ದೀಯಲ್ಲ?" ಎಂದ.

"ಹೌದು."

"ನೀನು ನನ್ನ ಮಾತಿಗೆ ಕೋಪ ಮಾಡಬಾರದು. ನನ್ನ ಮಾತು ಸರಿಯಾಗಿ ತಿಳಕೊಂಡು ನಾನು ಹೇಳಿದ್ದನ್ನು ಮಾಡು. ಇಲ್ಲಿ ನಾವೀಗ ಮೂರು ಜನ ಇದ್ದೀವಲ್ಲ. ಮೂವರಿಗೂ ಒಳ್ಳೆಯದಾಗುತ್ತೆ."

"ಏನು ಹೇಳು?"

"ನೀನು ನಿನ್ನ ಹೆಂಡತಿ ಅನ್ನೋ ಹೆಂಗಸನ್ನ ಹತ್ತು ಜನಕ್ಕೆ ಒಪ್ಪಿಸಿ ಕಾಸು ಗಳಿಸುತ್ತಾ ಇದ್ದೀ. ಇದು ಗಂಡ ಮಾಡೋ ಕೆಲಸ ಅಲ್ಲ. ಮರ್ಯಾದೇ ಜೀವನ ಅಲ್ಲ."

"ಅದಕಾಗಿ?"

"ನೀನು ಇದನ್ನ ಮಾಡತಿರೋದು ಯಾತರಿಂದ? ನೀನು ಗಂಡಲ್ಲ. ಅಲ್ಲ?"

"ಅಲ್ಲ."

“ನೀನು ಇವಳನ್ನ ಮದುವೆ ಆದಿ. ಗಂಡಲ್ಲದೋನು ಮಾಡಿಕೊಂಡ ಮದುವೆ ಮದುವೆ ಅಲ್ಲ.”

“ಅಲ್ಲ.”

“ನೀನು ಇವಳನ್ನ ಬಿಡು. ನೀನು ಜೀವನ ಸಂಪಾದಿಸೋಕೆ ನಾನು ದಾರಿ ತೋರಿಸತೇನೆ. ಈಗ ನಡಿತಾ ಇರೋ ಈ ಕೆಲಸಾನ ಈ ಕ್ಷಣದಿಂದ ಬಿಡಬೇಕು”

“ಬಿಡಬೇಕು! ಯಾರೋ ನೀನು ನನಗೆ ಇದನ್ನ ಹೇಳೋದಕ್ಕೆ? ನೀನು ಇಲ್ಲಿ ನಿಲ್ಲಕೂಡದು. ಇಲ್ಲಿಂದ ತೊಲಗಬೇಕು.”

“ಲೋ ಕತ್ತೆ, ಗಂಡಲ್ಲದ ಮುಟ್ಠಾಳ, ಇದಕ್ಕಾಗಿ ಮದುವೆ ಆದಿ, ಅಂತ ನಾನು ಊರಿಗೆ ಹೇಳಿದರೆ ಜನಾ ನಿನ್ನ ಏನು ಮಾಡೀತು ಬಲ್ಲೆಯಾ?”

“ಈ ಮಾತು ಹೇಳತಿರೋ ನೀನು ಕತ್ತೆ. ನನ್ನ ಮನೆಗೆ ಬಂದು ತಲೆ ಹರಟೆ ಮಾತಾಡತಿದ್ದೀ. ಪೋಲಿಸ್ನೋರ ಕರೆದು ನಿನ್ನನ್ನ ಒಡೆಸಿ ಕಳುಹಿಸಲಾ?”

“ಪೋಲಿಸ್ನೋರನ್ನ ಕಂಡ ಸೂಳೇಮಗನೇನೋ ನೀನು? ಹೆಣದತ್ತ ಮುಂಡೇದೆ. ನೀನೊಬ್ಬ ಮನುಷ್ಯನೇನೊ? ಗಂಡೇ ಅಲ್ಲದೆ, ಗಂಡು ಅಂತ ಹೆಣ್ಣಿನ ಅಪ್ಪನ್ನ ಅಮ್ಮನ್ನ ನಂಬಿಸಿ, ತಿಳೀದ ಹುಡುಗೀನ ಬೆಳ್ಳಿಸಿ ಮದುವೆ ಆಗಿ ಕರೆತಂದು, ಇಲ್ಲಿ ನಾಯ ಬಾಳು ಬಾಳಸತೀಯಲ್ಲಾ, ನೀನು ಪೋಲೀಸ್ನೋರನ್ನ ಬೇರೆ ಕರೆತರತೀಯ? ನಾನು ಕರೆತರತೇನೆ ಪೋಲಿಸ್ನೋರನ್ನ. ನೀನು ಏನ್ಮಾಡತಿದ್ದೀ ಅಂತ ಹೇಳತೇನೆ. ಅವರು ನಿನಗೆ ಏನು ಮಾಡತಾರೆ ಬಲ್ಲೆಯಾ?”

“ಲೋ, ತಲೆಯಲ್ಲಾ ಹರಟಬೇಡ, ನಡೀ ಆಚೆಗೆ! ನಡೆಯಲಿಲ್ಲ, ನಾನು ಒದ್ದು ಕಳಿಸತೇನೆ.”

“ಒದೀತೀಯಾ, ಹೆಣ್ಣಿಗ ಮಗನೆ! ಎಷ್ಟು ಧೈರ್ಯವೋ ನಿಂದು!”

“ಧೈರ್ಯ! ಹೋಗು ಅಂದರೆ ಹೋಗದೆ ಇದ್ದರೆ ಸುಮ್ಮಗಿರತೇನಾ. ತಗೋ ಮರ್ಯಾದೇನ!” ಹೀಗೆಂದು ಗಂಡನಾದವನು ಇವನಿಗೆ ಕೆನ್ನೆಯ ಮೇಲೆ ಛಳೀರಂತ ಒಂದು ಪೆಟ್ಟನ್ನು ಕೊಟ್ಟ. ಮಾತು ಬೆಳೆದದ್ದನ್ನು ಕೇಳುತ್ತ, ಇದು ಹೇಗೆ ಮುಗಿಯುತ್ತದೋ

ಎಂದು ಭಯಪಡುತ್ತ, ಹುಡುಗಿ ಅಡಿಗೆಯ ಕೋಣೆಯ ಬಾಗಿಲಲ್ಲಿದ್ದವಳು ಇದನ್ನು ನೋಡಿ ಅಯ್ಯೋ ಎಂದು ಕೂಗಿಕೊಂಡಳು. "ಪಾಪಿ, ಅವನನ್ನು ಹೊಡೀತೀಯಾ?" ಎಂದಳು. ಹಾಗೆ ಹೇಳಿ ಅವನನ್ನು ನೋಡುತ್ತಿದ್ದಾಳೆ. ಪೆಟ್ಟು ತಿಂದ ತರುಣ ಕೋಪದಿಂದ ಕೆಂಡವಾದ. ಹುಲಿಯಂತೆ ಇವನ ಮೇಲೆ ಹಾರಿದ. ಇವನನ್ನು ಕೆಳಕ್ಕೆ ಕೆಡವಿದ. ಅವನ ಬಾಯನ್ನು ಒಂದು ಕೈಯಿಂದ ಮುಚ್ಚಿ ತಲೆಯ ಮೇಲೆ ಬಲಗೈಯಿಂದ ರಪರಪನೆ ಹೊಡೆದ. ಅವನನ್ನು ಕೂಗಿಕೊಳ್ಳುವುದಕ್ಕೆ ಬಿಡದೆ ಮೆಟ್ಟಿ ಹಿಡಿದು, ಅವುಕಿ ಒಂದು ನಿಮಿಷ ಕೈ ಎತ್ತದೆ ಕುಳಿತಿದ್ದ.

ಗಂಡನಾಗಿದ್ದವನು ಸತ್ತು ಹೆಣವಾಗಿದ್ದ.

ಪ್ರೇಯಸಿಯ ಹಗೆಯನ್ನು ಕೊಂದು ತರುಣ ಎದ್ದು ಶವದ ಪಕ್ಕದಲ್ಲಿ ನಿಂತ. ಅವಳು, "ಏನು ಮಾಡಿಬಿಟ್ಟೆ ನೀನು? ನಿನ್ನ ಗಲ್ಲಿಗೆ ಹಾಕುತಾರಲ್ಲ," ಎಂದಳು.

"ಹಾಕಲಿ ಬಿಡು. ಈ ಸೂಳೇಮಗ ನಿನ್ನ ಈ ಗತಿಗೆ ತಂದನೇ ಅಂತ ಕೋಪ. ಕೊಲ್ಲೋಣ ಅಂತ ಇರಲಿಲ್ಲ. ಅದು ಕೊಲ್ಲಿಸಿಬಿಟ್ಟಿತು."

"ಈಗೇನು ಗತಿ?"

"ನೀನು ಭಯಪಡಬೇಡ. ಇದು ಯಾರಿಗೆ ಗೊತ್ತಾಗಬೇಕು? ನಾ ಹೋಗಿ ಒಂದು ಗಾಡಿ ತಂದು ಇದನ್ನ ತಗೊಂಡುಹೋಗಿ ಎತ್ತಲಾಗೋ ಎಸೆದು ಬಂದು ಬಿಡತೇನೆ. ಪರದೇಶಿ ಹೆಣ. ಯಾರದು ಅಂತ ಯಾರಿಗೆ ತಿಳಿಯುತ್ತೆ? ಕೊಂದೋರು ಯಾರು ಅಂತ ಯಾರಿಗೆ ಗೊತ್ತಾಗುತ್ತೆ? ನೀ ಧೈರ್ಯವಾಗಿರು. ನಾ ಹೋಗಿ ಒಂದು ಗಾಡಿ ತರತೇನೆ".

"ಅಯ್ಯೋ, ನಾ ಈ ಹೆಣದೊಂದಿಗೆ ಒಬ್ಬಳೇ ಇರಲಾರೆ. ನನ್ನ ಹೊರಗೆ ಬಿಡು. ನಾ ಎಲ್ಲೋ ಇರತೇನೆ. ತಿರುಗಿ ಬಂದಾಗ ನನ್ನ ಹತ್ತಿರ ಬಾ."

"ಆಗಲಿ, ಬಾ."

ತರುಣ ಹುಡುಗಿಯನ್ನು ಎಳೆದು ಕಟ್ಟಿಕೊಂಡು, "ನಾನು ನಿನ್ನ ಗಂಡ ಅಂತ ಇಟ್ಟುಕೊ. ನಾಳೆ ಮದುವೆ ಆಗೋಣ, ನೀ ಭಯಪಡಬೇಡ," ಎಂದು ಹೇಳಿ ಅವಳೊಡನೆ ಹೊರಕ್ಕೆ ಬಂದು ಬಾಗಿಲಿಗೆ ಬೀಗ ಹಾಕಿ ಅವಳನ್ನು ಹೊರಕ್ಕೆ

ಕರೆದುಕೊಂಡು ಹೋದ. ಅವಳೊಡನೆ ತನ್ನ ವಾಸದ ಮನೆಗೆ ಹೋದ. ಅಲ್ಲಿ ಅವನ ತಾಯಿ, ಒಬ್ಬ ತಂಗಿ ಇದ್ದರು. “ಈಕೆ ನನ್ನ ಗುರುತಿನ ಒಬ್ಬ ಹೆಣ್ಣು ಮಗಳು; ಬೇರೆ ಊರಿಂದ ಬಂದಿದ್ದಾರೆ; ಈ ರಾತ್ರಿ ಇರಬೇಕಾಗಿದೆ ಎಂದರು; ನಮ್ಮ ಮನೆಯಲ್ಲಿರಿ, ನಮ್ಮ ಅಮ್ಮ ನಿಮ್ಮನ್ನು ನೋಡಿಕೊಳ್ಳುತ್ತಾರೆ ಎಂತ ಹೇಳಿದೇನೆ, ಅಮ್ಮ. ಈಕೆ ಇಲ್ಲಿರತಾರೆ. ಅವರನ್ನ ನೋಡಿಕೊ,” ಎಂತ ತಾಯಿಗೆ ಹೇಳಿದ, ತಾಯಿ, “ಆಗಲಪ್ಪ” ಎಂದು ಇವಳನ್ನು “ಬಾಮ್ಮ, ಕುಳಿತುಕೋ” ಎಂದು ಬರಮಾಡಿಕೊಂಡಳು.

ತರುಣ ಹಿಂದಕ್ಕೆ ಬಂದ. ಬರುತ್ತಾ ಒಂದು ಬಾಡಿಗೆ ಜಟಕಾ ಗಾಡಿಯನ್ನು ತಂದ. ಮನೆ ಒಳಕ್ಕೆ ಹೋಗಿ ಒಂದು ಗೋಣಿಚೀಲದಲ್ಲಿ ಹೆಣವನ್ನು ಹೇಗೋ ಮಡಿಸಿ ತುಂಬಿದ. ಚೀಲದ ಬಾಯಿಗೆ ಬಿಗಿಯಾಗಿ ಒಂದು ಹಗ್ಗವನ್ನು ಕಟ್ಟಿದ. ಚೀಲವನ್ನು ಹೊತ್ತು ಹೊರಕ್ಕೆ ತಂದು, ಮತ್ತೆ ಬಾಗಿಲಿಗೆ ಬೀಗ ಹಾಕಿ, ಚೀಲವನ್ನು ಗಾಡಿಯಲ್ಲಿಟ್ಟು ತಾನೂ ಕುಳಿತು, ಗಾಡಿಯವನಿಗೆ, “ಬನ್ನೇರುಘಟ್ಟದ ರಸ್ತೆಯಲ್ಲಿ ಹೋಗಬೇಕು, ನಡಿ,” ಎಂದ. ಗಾಡಿ ಹೊರಟಿತು.

ಇವನು ಇದೆಲ್ಲಾ ಯಾರಿಗೂ ತಿಳಿಯದು ಎಂದುಕೊಂಡಿದ್ದಾನೆ. ಹೆಣ್ಣು ತನ್ನನ್ನು ಒಲ್ಲದೆ ಇವನನ್ನು ಬರಮಾಡಿಕೊಂಡಳು ಎಂದು ಇವನ ಮೇಲೆ ಛಲ ಇಟ್ಟಿದ್ದ ಹಿಂದಿನ ದಿನದ ಆ ಮನುಷ್ಯ ಎದುರು ಮನೆಯ ಆ ನೆರಳ ಮರೆಯಿಂದ ಈ ಎಲ್ಲವನ್ನೂ ನೋಡುತ್ತಿದ್ದಾನೆ. ಏನಾಯಿತು ಎಂದು ಅವನು ಕಾಣ. ಆದರೆ ಏನೋ ಆಗಿದೆ ಅದು ನಿಶ್ಚಯ. ಇದೇನು, ಮನೆಯಲ್ಲಿ ಅವರು ಮೂವರಿದ್ದರು. ಹೆಂಗಸು, ಆ ಗಂಡ, ಈ ಗಿರಾಕಿ. ಹೆಂಗಸು ಹೊರಗೆ ಬಂದಳು, ಇವನು ಹೊರಗೆ ಬಂದ; ಗಂಡ? ಇವನು ಬೀಗ ಹಾಕಿಕೊಂಡು ಹೋಗಿದ್ದಾನಲ್ಲ, ಅವನು ಒಳಗಡೆ ಇರಬೇಕು. ಇದ್ದರೆ ಮಲಗಿ ನಿದ್ರಿಸುತ್ತಿರಬೇಕು. ಬೀಗ ಯಾಕೆ? ಆಯಿತು. ಇವನು ಈ ಒಂದು ಮೂಟೆಯನ್ನು ಹೊರಗೆ ತಂದನಲ್ಲ. ಅದು ಏನು ಮೂಟೆ?

ಏನಿರಬಹುದು ಎಂದು ಚಿಂತಿಸುತ್ತಾ ಅವನು ಇದು ಏನಿದ್ದರೂ ಕಂಡು ಹಿಡಿಯಬೇಕು ಎಂದುಕೊಂಡು ಈ ಜಟಕಾಗಾಡಿ ಎಲ್ಲಿಗೋ ಹೋಗಿದೆ, ಇವನು

ಅದರಲ್ಲಿ ಹಿಂತಿರುಗಬೇಕು, ಗಾಡಿ ಜಟಕಾಗಳು ನಿಲ್ಲುವ ಸ್ಥಳಕ್ಕೆ ಬಂದೀತು, ಅಲ್ಲಿ ನಿಂತಿದ್ದು ಅದು ಯಾರದು ಜಟಕಾ ತಿಳಿದುಕೊಳ್ಳಬೇಕು ಎಂದುಕೊಂಡ.

ಮನುಷ್ಯನ ಛಲ ಇಷ್ಟನ್ನು ಸಹಿಸಬಹುದೇ ನಮಗೆ ತೋರುವುದಿಲ್ಲ. ಇವನು ಸಹಿಸಿದ. ಇವನು ನಿರೀಕ್ಷಿಸಿದಂತೆ ಎರಡು ಗಂಟೆಯ ಬಳಿಕ ಈ ತರುಣ ಅದೇ ಗಾಡಿಯಲ್ಲಿ ಗಾಡಿಗಳ ಚೌಕಕ್ಕೆ ಬಂದ. ಇಳಿದು ತನ್ನಂತೆ ಹೊರಟ. ಅಲ್ಲಿ ಇನ್ನೂ ಒಂದೆರಡು ಜಟಕಾ ಗಾಡಿಗಳಿದ್ದುವು. ಅವುಗಳನ್ನು ನಡೆಸುವವರು ಬದಿಯಲ್ಲಿ ಮಲಗಿದ್ದರು. ಇವನು ಈ ಗಾಡಿಯ ಬಳಿಗೆ ಹೋಗಿ, “ಅಯ್ಯಾ ಬಾಡಿಗೆ ಬರ್ತೀಯಾ?” ಅಂದ. ಗಾಡಿಯವನ್ನು. “ಇಲ್ಲಪ್ಪ ಈಗಾಗಲೇ ಕುದುರೆ ಬಾಳ ದಣಿದಿದೆ,” ಅಂದ.

“ನಿನ್ನ ಹೆಸರೇನು?”

“ಲತೀಫ್”

ಈ ಮನುಷ್ಯ ತನ್ನ ಮನೆಗೆ ಹೋದ.

ಮಾರನೆಯ ಬೆಳಿಗ್ಗೆ ಈ ಮನೆಯ ಹತ್ತಿರ ಬಂದು ನೋಡುತ್ತಾನೆ. ಬೀಗ ಹಾಕಿಯೇ ಇದೆ. ಹೆಂಗಸು ಹಿಂದಕ್ಕೆ ಬಂದಿಲ್ಲ. ಗೆಣೆಯ ಅವಳನ್ನು ಎಲ್ಲಿಗೊ ಕರೆದು ಒಯ್ದಿದ್ದಾನೆ. ಏನು, ತನ್ನ ಮನೆಗೋ? ಇರಬೇಕು. ಸರಿ ರಾತ್ರಿಯಲ್ಲಿ ತನಗೆ ಒಲಿದ ಹೆಣ್ಣನ್ನು ಬೇರೆ ಎಲ್ಲಿಗೆ ಒಯ್ದಾನು? ನೋಡೋಣ ಎಂದು ಇವನು ತರುಣನ ಮನೆಯ ಮುಂದುಗಡೆ ಹಾಯ್ದು. ಮನೆಯ ಕಡೆ ನೋಡಿದ; ಅಲ್ಲಿ ಈ ಹುಡುಗಿ ಇರುವುದನ್ನು ಕಂಡ.

ಅವನಿಗೆ ಹೊಳೆಯಿತು: ಈ ಹುಡುಗ ಇವಳ ಗಂಡನನ್ನು ಕೊಂದಿರಬೇಕು.

ಅವನು ಹೊರಕ್ಕೆ ತಂದ ಮೂಟೆ, ಆ ಹೆಣದ ಮೂಟೆ. ಇವನು ಹೆಣವನ್ನು ಗಾಡಿಯಲ್ಲಿ ಒಯ್ದು ಎಲ್ಲಿಯೋ ಹುಗಿದು ಬಂದಿದ್ದಾನೆ.

ಒಳ್ಳೇದೇ ಆಯಿತಲ್ಲ. ಪೋಲೀಸಿನೋರಿಗೆ ಹೇಳಿದರೆ ಇವರಿಬ್ಬರಿಗೂ ಆಗಬೇಕಾದದ್ದು ಆಗತ್ತೆ.

ಇವನು ಪೋಲಿಸ್ ಸ್ಟೇಷನ್ನಿಗೆ ಹೋಗಿ ಮನೆಯ ಗುರುತು, ತರುಣಿಯ ಗುರುತು, ತರುಣನ ಹೆಸರು, ಮನೆ ಗುರುತು, ಮೂಟೆಯನ್ನು ಒಯ್ದ ಜಟಕಾ ಗಾಡಿಯ ಒಡೆಯನ

ಹೆಸರು, ಇದೆಲ್ಲವನ್ನೂ ಹೇಳಿ, “ನನಗೇನೋ ಸಂಶಯ, ವಿಚಾರಿಸಿ,” ಅಂತ ದೂರುಕೊಟ್ಟ.

ಲತೀಫ್ ಸಿಕ್ಕಿದ. ತಾನು ಒಂದು ಮೂಟೆಯನ್ನು ಒಯ್ದದ್ದು ದಿಟ. ಅದನ್ನು ಅವನು ಬನ್ನೇರುಘಟ್ಟದ ರಸ್ತೆಯಲ್ಲಿ ಇಂಥ ಕಡೆಯವರೆಗೆ ತೆಗೆದುಕೊಂಡು ಹೋದ ಮೇಲೆ ಬಾಡಿಗೆ ಗೊತ್ತುಮಾಡಿದ್ದವನು ಆ ಮೂಟೆಯನ್ನು ಹತ್ತಿರದ ಊರಿನ ಒಳಕ್ಕೆ ತೆಗೆದುಕೊಂಡು ಹೋದ ಎಂದು ಹೇಳಿದ.

ಪೋಲಿಸಿನವರು ಗಾಡಿಯಲ್ಲಿ ಕುಳಿತು ಆ ಸ್ಥಳಕ್ಕೆ ಹೋದರು. ಊರ ಮುಂದಕ್ಕೆ ಹೋಗುವ ವೇಳೆಗೆ ಅಲ್ಲಿ ಜನರ ಗುಂಪು ಸೇರಿದೆ. ಗುಂಪಿನ ಜನ ಹೇಳಿದರು: ದಾರಿಯ ಒಂದು ಮೋರಿಯ ಅಡಿಗೆ ಒಂದು ಮೂಟೆ ಬಿದ್ದಿತ್ತು; ಇದು ಏನು ಎಂದು ಎತ್ತಿ ನೋಡಿದರೆ ಅದರಲ್ಲಿ ಒಂದು ಹೆಣ ಇತ್ತು; ತಮ್ಮ ಊರಿನ ಯಾರಿಗೇ ಆಗಲಿ ತಿಳಿದ ಒಬ್ಬನ ಹೆಣ ಅಲ್ಲ; ಇದು ಬೇರೆ ಊರಿನ ಯಾರದೋ ಹೆಣ; ಯಾರೋ ತಂದು ಹಾಕಿರಬೇಕು.

ಆ ಊರಿನ ಪಟೇಲ ಸಂಗತಿಯನ್ನು ತಿಳಿಸಿ ಹತ್ತಿರದ ಪೋಲಿಸ್ ಸ್ಟೇಷನ್‌ಗೆ ವರದಿ ಮಾಡಬೇಕು ಎಂತ ಯೋಚಿಸುತ್ತಿದ್ದಾನೆ. ಬೆಂಗಳೂರಿನ ಪೋಲಿಸ್ ಇನ್‌ಸ್ಪೆಕ್ಟರ್ ಅಲ್ಲಿ ಸೇರಿದರು. ಹೆಣವನ್ನು ವಶಕ್ಕೆ ತೆಗೆದುಕೊಂಡು ಬೆಂಗಳೂರಿಗೆ ಬಂದರು.

ಮುಂದಿನ ಮಾತು ಹೇಳಬೇಕಾದದ್ದು ಬಹಳ ಇಲ್ಲ. ಹುಡುಗಿ, “ಇದು ತನ್ನನ್ನು ಮದುವೆಯಾದ ನಪುಂಸಕ ಗಂಡನ ಹೆಣ, ಇವನು ನಾನು ಒಲಿದಿರುವ ಗಂಡು, ಇವನು ಅವನನ್ನು ಕೋಪದಲ್ಲಿ ಕೊಂದ,” ಎಂದು ಎಲ್ಲ ಸಂಗತಿಯನ್ನೂ ಹೇಳಿದಳು. ತರುಣ, “ಈ ಮುಟ್ಠಾಳ, ಗಂಡೇ ಅಲ್ಲದವನು, ಇವಳನ್ನು ಮದುವೆಯಾಗಿ ಬೆಂಗಳೂರಿಗೆ ಬಂದು ಇವಳ ಮೈಯನ್ನು ಮಾರಿ ಹಣಗಳಿಸೋಕೆ ನೋಡಿದ. ನೀನು ಮಾಡುತ್ತಿರುವುದು ಸರಿಯಲ್ಲ, ನೀನು ಇವಳನ್ನು ಬಿಟ್ಟುಬಿಡು, ನಾನು ಮದುವೆಯಾಗುತ್ತೇನೆ, ಎಂತ ನಾ ಹೇಳಿದೆ, ಇವನು ಕೇಳಲಿಲ್ಲ. ಇವಳನ್ನು ಕುರಿತು ಕೆಟ್ಟ ಮಾತಾಡಿದ. ನನ್ನ ಕುರಿತು ಕೆಟ್ಟ

ಮಾತಾಡಿದ. ನನ್ನನ್ನು ಹೊಡೆದ. ನನಗೆ ಕೋಪ ಬಂತು. ಅವನ್ನ ಕೆಳಕ್ಕೆ ಕೆಡವಿ ಕತ್ತು ಹಿಸುಕಿದೆ. ಕೊಲ್ಲಬೇಕು ಅಂತ ಇರಲಿಲ್ಲ. ಆದರೂ ಕೊಂದುಬಿಟ್ಟೆ," ಎಂದು ಒಪ್ಪಿಕೊಂಡ.

ಪೋಲಿಸ್ ಇನ್‌ಸ್ಪೆಕ್ಟರ್ ಇವರ ಹೇಳಿಕೆಗಳನ್ನು ಸೂಕ್ಷ್ಮವಾಗಿ ಬರೆದುಕೊಂಡು, "ಕೊಲೆ ಮಾಡಿದ್ದು ತಪ್ಪು, ಆದರೆ ಇವನು ಮಾಡಿದ ಅನ್ಯಾಯ, ಬಹು ಕೆಟ್ಟ ಅನ್ಯಾಯ, ಇದನ್ನು ಮಾಡಿದನಲ್ಲ ಎಂಬ ಕೋಪದ ಮೇಲೆ ಹೊಡೆದೆ. ಉದ್ದೇಶ ಇಲ್ಲದೆ ಕೊಲೆ ಆಯಿತು, ಎಂತ ಹೇಳಿದರೆ ಕೋರ್ಟ್ ಕಡಿಮೆ ಶಿಕ್ಷೆ ಕೊಡುತ್ತದೆ. ಈ ಮಾತನ್ನು ಮ್ಯಾಜಿಸ್ಟ್ರೇಟರ ಎದುರಲ್ಲಿ ಹೀಗೆಯೇ ಹೇಳುತ್ತೀರಾ?" ಎಂದು ಇವರಿಬ್ಬರನ್ನೂ ಕೇಳಿದರು. ಇವರು ಹೇಳುತ್ತೇವೆ ಎಂದರು.

ಎರಡೂ ಹೇಳಿಕೆ ಒಬ್ಬ ಮ್ಯಾಜಿಸ್ಟ್ರೇಟರ ಮುಂದೆ ರೆಕಾರ್ಡಾದುವು. ಈ ಕೇಸನ್ನು ನಾನು ನಡೆಸಬೇಕಾಯಿತು.

ಕೋರ್ಟಿನಲ್ಲಿ ಸಾಕ್ಷಿಗಳ ವಿಚಾರಣೆ ಏನೂ ಕಷ್ಟವಾಗಲಿಲ್ಲ. ಮದುವೆಯಾದನೆಂಬ ಅಯೋಗ್ಯ ಆ ಮನುಷ್ಯ ಹುಡುಗಿಗೆ ಮಾಡಿದ ಅನ್ಯಾಯ ಮಾಡಬಾರದ ಅನ್ಯಾಯ, ಇಂಥ ಪಾಪಿಯನ್ನು ಕೊಂದದ್ದು ಒಂದು ಪಾಪ ಅಲ್ಲ, ಎಂದು ಸಾಕ್ಷ್ಯವನ್ನು ಕೇಳಿದ ಎಲ್ಲರಿಗೂ ತೋರಿತು. ನಾನು ಹೀಗೆ ಹೇಳುವಂತಿಲ್ಲ. ಮ್ಯಾಜಿಸ್ಟ್ರೇಟರು ಹೀಗೆ ಅನ್ನುವಂತಿಲ್ಲ. ಆದರೂ ನಮ್ಮ ಮನಸ್ಸು ಹೀಗೆಯೇ ಇದ್ದಿತು. ಮ್ಯಾಜಿಸ್ಟ್ರೇಟರು ಅಪರಾಧಿಯನ್ನು ಸೆಷನ್ಸ್ ವಿಚಾರಣೆಗೆ ಗುರಿಮಾಡಿ ಆಜ್ಞೆ ಮಾಡಿದರು.

ಸೆಷನ್ಸ್ ಕೋರ್ಟಿನಲ್ಲಿ ಇದೇ ಮಾತು ಪ್ರಮಾಣವಾಯಿತು. ಅಪರಾಧಿ ಪರದ ಲಾಯರು, "ಇದು ಕೊಲೆ ಆಗುವುದಿಲ್ಲ, ಉದ್ದೇಶವಿಲ್ಲದೆ ನಡೆದ ಸಾವು ಆಗುತ್ತದೆ, ಸಂದರ್ಭವನ್ನು ಗಮನಿಸಿದರೆ ತೀರ ಕಡಿಮೆ ಶಿಕ್ಷೆಯನ್ನು ಕೊಡಬೇಕು ಎಂದು ಕೋರ್ಟ್ ಸನ್ನಿಧಾನಕ್ಕೆ ತೋರಬೇಕು. ಇದನ್ನು ನಾನು ಹೇಳಬೇಕಾಗಿಲ್ಲ," ಎಂದು ವಿಜ್ಞಾಪನೆ ಮಾಡಿದರು.

ಜಡ್ಜರು ಎಷ್ಟು ಶಿಕ್ಷೆ ಕೊಟ್ಟಿರೋ ನನಗೆ ನೆನಪಿಲ್ಲ. ಅದು ಕೊಲೆಗೆ ಕೊಡುವ ಶಿಕ್ಷೆ ಅಲ್ಲ. ಹುಡುಗ ಒಂದು ವರ್ಷವೋ ಎರಡು ವರ್ಷವೋ ಸೆರೆಗೆ ಹೋಗಬೇಕಾಯಿತು.

ಸೆರೆಯಿಂದ ಬಂದು ಇವನು ಆ ಹುಡುಗಿಯನ್ನು ಮದುವೆಯಾದನೆ ನನಗೆ ತಿಳಿಯದು. ಆಗಿರಬಹುದು.

ಸಂನ್ಯಾಸ ಅಲ್ಲದ ಸಂನ್ಯಾಸ

ಇದು ಗೆಳೆಯ ನಾಡಿಗರು ಹೇಳಿದ ಒಂದು ಕಥೆ.

ನರಸಿಂಹಯ್ಯ ನಮ್ಮೂರಿನ ಒಂದು ಶಾಲೆಯಲ್ಲಿ ಉಪಾಧ್ಯಾಯರಾಗಿದ್ದರು. ಅವರ ವಿಷಯ ಎರಡು ಸಂಗತಿ ಈ ಕಥೆಗೆ ಮುಖ್ಯ. ಮೊದಲನೆಯದು ಅವರು ಯಾವ ಕೆಲಸಕ್ಕೂ ಐದು ನಿಮಿಷ ತಡವಾಗಿ ಹೋಗುವುದು ವಾಡಿಕೆ. ಎರಡನೆಯದು ಅವರಿಗೆ ಎಳೆಯ ಬೆಂಡೇಕಾಯಿ ಹುಳಿ ಎಂದರೆ ತುಂಬ ಆಸೆ.

ಆಚಾರವಂತರಾಗಿ ಬೆಳೆದವರು ಇವರು ಕ್ರಮವಾಗಿ ದೇವರ ಪೂಜೆ ಮಾಡಿ ಊಟಮಾಡಬೇಕು. ದೇವರ ಪೂಜೆಯಲ್ಲಿ ಯಾವುದನ್ನೂ ಮೊಟಕು ಮಾಡುವಂತಿಲ್ಲ. ಅದಾದ ಮೇಲೆ ಮಾಡುವ ಊಟವನ್ನು ಎಷ್ಟು ಬೇಗವಾದರೂ ಮಾಡಬಹುದು. ಎಂದರೆ ಹೆಂಡತಿ ಆ ವೇಳೆಗೆ ಅಡಿಗೆ ಮಾಡಿ ಸಿದ್ಧವಿರಬೇಕು. ಒಂದೊಂದು ದಿವಸ ಈ ಅಡಿಗೆ ಆಗುವುದರಲ್ಲಿ ತಡ ಆಗುವುದುಂಟು. ಹೀಗಾಗಿ ವಾರದಲ್ಲಿ ಮೂರುದಿನ ಇವರು ಶಾಲೆಗೆ ಹೊತ್ತು ಮೀರಿ ಹೋಗುವರು. ಒಂದೊಂದು ಬಾರಿಯೂ ಮುಖ್ಯೋಪಾಧ್ಯಾಯರು, “ಏನು ನರಸಿಂಹಯ್ಯ, ನಿಮಗೆ ಹೊತ್ತಿಗೆ ಸರಿಯಾಗಿ ಬರೋಣ ಎನ್ನುವುದಿಲ್ಲ,” ಎನ್ನುವರು. ನರಸಿಂಹಯ್ಯ, “ನಿನ್ನೆ ಹೊತ್ತಿಗೆ ಮುಂಚೇನೇ ಬಂದೆ ಸ್ವಾಮಿ. ಇವತ್ತೇನೋ ತಡವಾಯಿತು,” ಎನ್ನುವರು. ಆ ಹಿಂದಿನ ದಿನದ ಮಾತು ಕೆಲವು ವೇಳೆ ದಿಟ ಅಲ್ಲ. ಮುಖ್ಯೋಪಾಧ್ಯಾಯರು ಅಂಥ ದಿನ, “ಏನಪ್ಪಾ ನಿಮ್ಮ ಮಾತು? ನಿನ್ನೇನೂ ಹೊತ್ತು ಮಾಡಿಕೊಂಡೇ ಬಂದಿರಿ,” ಎನ್ನಬೇಕು. ಇವರು, “ತಪ್ಪಾಯಿತು ಸ್ವಾಮಿ, ಕ್ಷಮಿಸಬೇಕು,” ಎನ್ನುವರು. ತಮ್ಮ ತರಗತಿಗೆ ಹೋಗಿ ಕುಳಿತು ಪಾಠ ಆರಂಭಿಸುವರು.

ಬೆಂಡೇಕಾಯಿ ಹುಳಿಯ ಇವರ ರುಚಿ ಇವರಿಗೆ ಚಿಕ್ಕಂದಿನಿಂದ ಬಂದದ್ದು. ಇವರು ಒಂದು ಅಗ್ರಹಾರದಲ್ಲಿ ಹುಟ್ಟಿ ಬೆಳೆದರಂತೆ. ಅದರ ಹತ್ತಿರದಲ್ಲಿ ಕಾಯಿ ಪಲ್ಯಗಳ ತೋಟಗಳು. ಯಾವ ಕಾಯಿ ಯಾವ ಪಲ್ಯವೂ ಅಡಿಗೆಗೆ ತಕ್ಕ ಹದದಲ್ಲಿ ಇರುವಾಗ

ಇವರಿಗೆ ಸಿಕ್ಕುವುದು. ಇವರ ತಾಯಿ ಎಳೆಯ ಬೆಂಡೆಯಕಾಯಿ ಹುಳಿಯನ್ನು ಬಹು ಚೆನ್ನಾಗಿ ಮಾಡುತ್ತಿದ್ದರಂತೆ. ಅದರ ರುಚಿಯೇ ರುಚಿ. ಅದರ ಮುಖ್ಯಲಕ್ಷಣ, ಹುಳಿ ಎಂತ ಹಿಂಡಿದ್ದ ಹುಳಿ ಕುದಿದು ಆಯಿತು ಎಂದರೆ ಸಾಲದು. ಚೆನ್ನಾಗಿ ಕುದಿಯಬೇಕು. ಆ ಮೇಲೆ ಇನ್ನಷ್ಟು ಕುದಿಯಬೇಕು. ಅದರಾಚೆಗೆ ಮತ್ತಷ್ಟು ಕುದಿದು ಹುಳಿಯಾಗಿ ಹಿಂಡಿದ್ದ ರಸ ಸೀಯಾಗಿ ಮುಗಿದಿರಬೇಕು. ಎಂದರೇನೇ ಆ ಹುಳಿ ದಿಟವಾಗಿ ಇವರ ಬೆಂಡೇಕಾಯಿ ಹುಳಿ. ಇವರ ತಂದೆಗೆ ಈ ಹುಳಿ ಎಂದರೆ ಬಹಳ ಪ್ರೀತಿ. ತಂದೆಯಿಂದ ಮಗನಿಗೆ ಈ ಪ್ರೀತಿ ಸಹಜವಾಗಿ ಇಳಿದು ಬಂದಿತ್ತು.

ಎಷ್ಟೋ ವರುಷಗಳ ಹಿಂದಿನ ಮಾತು. ನಮ್ಮ ಊರಿಗೆ ಶಿವಗಂಗೆ ಸ್ವಾಮಿಗಳು ದಯಮಾಡಿಸಿದ್ದರು. ಆ ಸ್ವಾಮಿಗಳ ಮಾತು ಈಗ ಅನೇಕರಿಗೆ ಮರೆತು ಹೋಗಿದೆ. ನನ್ನ ವಯಸ್ಸಿನ ಜನಕ್ಕೆ ಜ್ಞಾಪಕ ಇರಬೇಕು. ಶಿವಗಂಗೆ ಶೃಂಗೇರಿ ಮಠದ ಅಧೀನ ಮಠ ಆಗಿದ್ದರೂ ಈ ಸ್ವಾಮಿಗಳು ಒಳ್ಳೆಯ ಪಂಡಿತರಾಗಿ, ಸಭೆಗಳನ್ನು ಕುರಿತು ಚೆನ್ನಾಗಿ ಉಪದೇಶ ಮಾಡುವ ಶಕ್ತಿಯನ್ನು ಬೆಳಸಿಕೊಂಡು, ಶೃಂಗೇರಿಯ ಸ್ವಾಮಿಗಳಿಗೆ ಜೊತೆ ಜೊತೆ ಎನ್ನುವಷ್ಟು ಹಿರಿಯರೆನಿಸಿಕೊಂಡಿದ್ದರು. ನರಸಿಂಹಯ್ಯ ಇವರ ಬಿಡಾರಕ್ಕೆ ಹೋಗಿ ಅವರ ಕೆಲಸದಲ್ಲಿ ಸಹಾಯ ಮಾಡಿ, ಮನೆಗೆ ಬಂದು ಊಟ ಮಾಡಿ, ಶಾಲೆಗೆ ಹೋಗುವರು. ಸ್ವಾಮಿಗಳು ನಮ್ಮ ಊರಿನಲ್ಲಿ ಒಂದು ತಿಂಗಳ ದಿನ ಇದ್ದರು. ಅದರಲ್ಲಿ ಹತ್ತು ದಿನ ನರಸಿಂಹಯ್ಯ ಶಾಲೆಗೆ ಹೊತ್ತು ಮಾಡಿಕೊಂಡು ಹೋದರು. ಮುಖ್ಯೋಪಾಧ್ಯಾಯರು ಆಕ್ಷೇಪಿಸಿದ್ದಕ್ಕೆ, "ಸ್ವಾಮಿಗಳ ಬಿಡಾರದಲ್ಲಿ ಕೆಲಸ ಮಾಡಿಕೊಡಬೇಕಾಯಿತು. ಬರೋದು ತಡ ಆಯಿತು ಸ್ವಾಮಿ, ಮನ್ನಿಸಬೇಕು", ಎಂದರು. ಮುಖ್ಯೋಪಾಧ್ಯಾಯರು, "ನರಸಿಂಹಯ್ಯ, ಸ್ಕೂಲಿನ ಕೆಲಸ ಸಂಬಳ ತೆಗೆದುಕೊಂಡು ಮಾಡೋ ಕೆಲಸ. ಮಠದ ಕೆಲಸ ಭಕ್ತಿಗಾಗಿ ಮಾಡೋ ಕೆಲಸ. ಅದನ್ನ ಮಾಡಿ. ಅಡ್ಡಿ ಇಲ್ಲ. ಇಲ್ಲಿ ತಪ್ಪು ಮಾಡಿ ಅಲ್ಲಿ ಸೇವೆ ಮಾಡಿದೆ ಅನ್ನೋದು ಸರಿ ಅಲ್ಲ. ಇದನ್ನ ತಿಳುಕೊಳ್ಳಿ," ಎನ್ನುವರು.

ಗುರುಗಳು ಊರಿನಿಂದ ಮುಂದಕ್ಕೆ ಹೋದಮೇಲೆ ನರಸಿಂಹಯ್ಯನವರು ಹೊತ್ತು ಕಳೆದು ಹೋಗುವುದಕ್ಕೆ ಈ ಕಾರಣ ಇಲ್ಲ ಆಯಿತು. ಆಮೇಲೆ ಅವರು ಹಿಂದಿನ ವಾಡಿಕೆಯಂತೆ ಎಷ್ಟೋ ಅಷ್ಟೇ ತಪ್ಪುವವರು. ಒಂದು ದಿನ ಏನಾಗಿದೆ, ಇವರು ಮಾರ್ಕೆಟ್‌ನ ಒಳಕ್ಕೆ ಹೋದಾಗ ಇವರ ವಾಡಿಕೆಯ ಕಾಯಿಪಲ್ಯದ ಅಂಗಡಿಯಲ್ಲಿ ಎಳೆ ಬೆಂಡೇಕಾಯಿ ಒಂದು ದೊಡ್ಡ ರಾಶೀನೇ ಇದ್ದು ಬಿಟ್ಟಿತ್ತು. ಇವರಿಗೆ ಅದನ್ನು ನೋಡಿದ್ದೆ ಬಾಯಲ್ಲಿ ನೀರೂರಿತು. ಇದನ್ನು ತಗೊಂಡು ಹೋಗಿ ಹುಳಿ ಮಾಡಿಸಿ ಊಟ ಮಾಡಬೇಕು ಎಂದು ಅವರು ಸಂಕಲ್ಪ ಮಾಡಿದರು. ಹತ್ತಿರ ನಿಂತಿದ್ದ ಒಬ್ಬರನ್ನು ಈಗ ಹೊತ್ತು ಏನಾಯಿತು ಎಂದು ಕೇಳಿದರು. ಹತ್ತಿರ ಹತ್ತಿರ ಹತ್ತು ಗಂಟೆ. ಹನ್ನೊಂದು ಗಂಟೆಗೆ ಶಾಲೆಗೆ ಹೋಗಬೇಕು. ಹುಳಿ ಮಾಡಿಸಿ ಉಂಡು ಶಾಲೆಗೆ ಹನ್ನೊಂದು ಗಂಟೆಗೆ ಹೋಗುವುದು ಸಾಧ್ಯವಿಲ್ಲ. ಇದಕ್ಕೆ ಒಂದು ಉಪಾಯ. ಬೆಂಡೇ ಕಾಯನ್ನು ಮನೆಗೆ ತೆಗೆದುಕೊಂಡು ಹೋಗುತ್ತಾ ಮುಖ್ಯೋಪಾಧ್ಯಾಯರ ಮನೆ ಹತ್ತಿರ ಕ್ಷಣ ನಿಂತು, 'ಈ ಹೊತ್ತು ಶಾಲೆಗೆ ಸ್ವಲ್ಪ ತಡವಾಗಿ ಬರುತ್ತೇನೆ,' ಅಂತ ತಿಳಿಸಿ ಮನೆಗೆ ಹೋಗುವುದು. ಬೆಂಡೇಕಾಯನ್ನು ಕೊಂಡುಕೊಂಡು ಇವರು ಮುಖ್ಯೋಪಾಧ್ಯಾಯರ ಮನೆಯ ಹತ್ತಿರ ನಿಂತು ಹೊತ್ತಾಗಿ ಶಾಲೆಗೆ ಬರಲು ಅಪ್ಪಣೆ ಕೇಳಿ ಮನೆಗೆ ಹೋದರು. ಬೆಂಡೇಕಾಯನ್ನು ಅಡಿಗೆ ಮನೆಯಲ್ಲಿ ಹಾಕಿ ಹೆಂಡತಿಗೆ, "ಇದೋ ನೋಡು ಒಳ್ಳೆ ಬೆಂಡೇಕಾಯಿ, ಇಂಥ ಎಳೆ ಕಾಯಿ ಸಾಮಾನ್ಯವಾಗಿ ಅಂಗಡಿಗೆ ಬರೋದೇ ಇಲ್ಲ. ಇವತ್ತು ಬಂದಿತ್ತು ಒಳ್ಳೆ ಹುಳಿ ಮಾಡು," ಎಂದು ಹೇಳಿದರು.

ಗಂಡನಿಗೆ ಬೆಂಡೇಕಾಯಿ ಹುಳಿ ಎಂದರೆ ಆಸೆ ಎಂದು ಹೆಂಡತಿ ಬಲ್ಲರು. ಅವರ ತಾಯಿ ಹುಳಿಯನ್ನು ಹೇಗೆ ಕುದಿಸಿ ಕುದಿಸಿ ರುಚಿ ಮಾಡುತ್ತಿದ್ದರು ಎನ್ನುವುದನ್ನು ಗಂಡನಿಂದ ಕೇಳಿ ತಾವೂ ಹಾಗೆಯೇ ರುಚಿಯ ಹುಳಿಯನ್ನು ಮಾಡಬಲ್ಲರು. ಈ ಮುನ್ನ ಮಾಡಿದ್ದರು, ಗಂಡನನ್ನು ಒಪ್ಪಿಸಿದ್ದರು.

ಹೌದು. ಈ ತರ್ತೀಪಿನ ಹುಳಿಯನ್ನು ಮಾಡುವುದಕ್ಕೆ ಈಗ ಹೊತ್ತೆಲ್ಲಿ? ಯಜಮಾನ ಹನ್ನೊಂದು ಗಂಟೆಗೆ ಮುಂದಾಗಿ ಶಾಲೆಗೆ ಹೋಗಬೇಕು. ಹುಳಿಯನ್ನು ಅವಸರದಲ್ಲಿ

ಮಾಡಿ ರುಚಿ ಕೆಡಿಸಿ ಬಡಿಸುವುದಕ್ಕಿಂತ ರಾತ್ರಿ ಸಾವಕಾಶವಾಗಿ ಅಡಿಗೆ ಮಾಡಿ ಬಡಿಸುವುದು ಸರಿ, ಹೀಗೆಂದು ಆಕೆ ಆ ಮೊದಲೇ ಒಲೆ ಮೇಲೆ ಇಟ್ಟಿದ್ದ ಅಡುಗೆಯನ್ನೇ ಮುಂದುವರಿಸಿದರು. ಬೆಂಡೇಕಾಯಿ ಹುಳಿಯನ್ನು ಮಾಡಲಿಲ್ಲ.

ಹುಳಿಯನ್ನು ಈಗಲೇ ಮಾಡು ಎಂದು ಗಂಡ ಹೇಳಿದಾಗ ಈಕೆ, "ಹುಳಿ ಕುದಿಯೋದು ಹೊತ್ತಾಗುತ್ತಲ್ಲ. ಶಾಲೆ ವೇಳೆ ಮೀರುತ್ತೆ," ಎನ್ನಬಹುದಾಗಿತ್ತು. ಆಕೆ ಹೇಳಲಿಲ್ಲ. ಈತ ತಾನಾಗಿ, ಹುಳಿ ಚೆನ್ನಾಗಿ ಕುದಿಯಲಿ, ಶಾಲೆಗೆ ಹೊತ್ತಾಗಿ ಬರುತ್ತೇನೆ ಅಂತ ದೊಡ್ಡೋರ ಹತ್ತಿರ ಹೇಳಿದ್ದೇನೆ, ಎಂತ ತಾನೇ ಹೆಂಡತಿಗೆ ತಿಳಿಸಬಹುದಾಗಿತ್ತು. ತಿಳಿಸಲಿಲ್ಲ. ಸಣ್ಣ ವಿಷಯ. ಆದರೆ ಮುಖ್ಯ ವಿಷಯ. ಆದರೆ ನಮ್ಮ ಬಾಳುಗಳನ್ನು ನಡೆಸುವ ವಿಧಿ ಅನೇಕ ವೇಳೆ ನಮ್ಮಿಂದ ಇಂಥ ತಪ್ಪನ್ನು ಮಾಡಿಸುತ್ತದೆ. ಅದರಿಂದ ನಾವು ಎಣಿಸದಂಥ ಅನರ್ಥ ಆಗುತ್ತದೆ.

ನರಸಿಂಹಯ್ಯ ಸ್ನಾನ ಮಾಡಿ ದೇವರ ಪೂಜೆ ಮುಗಿಸಿ ಊಟಕ್ಕೆ ಕುಳಿತರು. ಹೆಂಡತಿ ವಾಡಿಕೆಯಂತೆ ಪಲ್ಯ, ಅನ್ನ ಬಡಿಸಿ ಕೆಲವು ನಿಮಿಷ ಬಿಟ್ಟು ಹುಳಿಯನ್ನು ತಂದು ಬಡಿಸಿದರು. ಅದು ಬದನೇಕಾಯಿ ಹುಳಿ, ಬೆಂಡೇಕಾಯಿ ಹುಳಿಯಲ್ಲ.

"ಇದು ಏನು? ಬೆಂಡೇಕಾಯಿ ಹುಳಿ ಮಾಡಲಿಲ್ಲವೆ?"

"ಬೆಂಡೇಕಾಯಿ ಹುಳಿ ತುಂಬ ಕುದಿಸಬೇಕಲ್ಲ. ಹೊತ್ತಿಲ್ಲ. ರಾತ್ರಿಗೆ ಮಾಡೋಣ ಅಂತ ಇಟ್ಟೆ. ಈ ಹುಳಿ ಒಲೆ ಮೇಲೆ ಇತ್ತು. ಅರ್ಧ ಅಡಿಗೆ ಆಗಿತ್ತು. ಇದನ್ನೇ ಮಾಡಿದೆ."

"ಲೇ ಪಾಪಿ ಹೆಂಗಸೇ, ಯಾಕೆ ಹೀಗಾದೆ ನೀನು? ನಾನು, ಅದೇ ಕೆಲಸ ಆಸೆ ಅಂತ, ಬೆಂಡೇಕಾಯಿ ತಂದುಕೊಟ್ಟು ಅಡಿಗೆ ಮಾಡಿ ಎಲೆಗೆ ಹಾಕು ಅಂದರೆ ನನ್ನ ಮಾತು ಮೀರಿ ನೀನು ಈ ಬದನೇಕಾಯಿ ಹುಳಿ ಬಡಿಸುತಾ ಇದೀಯಲ್ಲ. ನೀನೊಬ್ಬ ಹೆಂಡತೀನೇ? ನಾನೊಬ್ಬ ಗಂಡನೇ? ನಾನು ಹೇಳಿದ ಮೇಲೂ ನನ್ನ ಮಾತು ನಡೆಸದೇ ಇದ್ದರೆ ಈ ಗಂಡ ಹೆಂಡತಿ ಸಂಬಂಧ ಯಾತರದು? ಯಾಕೆ ಮದುವೆ ಆಗೋದು? ಮಣ್ಣು ಹುಯ್ಕೊಳ್ಳೋಕೆ? ಇಕೋ ಈಗ ಮುಗಿಯಿತು ಈ ಗಂಡ ಹೆಂಡತಿ ಅನ್ನೋ ಮಾತು. ನಾನು

ತಲೇ ಮೇಲೆ ಗುಡ್ಡೆ ಹಾಕಿಕೊಂಡು ಹೋಗುತ್ತೇನೆ. ನೀನು ಇಚ್ಚೆಗೆ ಬಂದಂತೆ ನಡಕೊಂಡು ಸುಖವಾಗಿ ಬಾಳು."

ಹೀಗೆ ಹೇಳಿ ನರಸಿಂಹಯ್ಯ ಊಟವನ್ನು ಅಲ್ಲಿ ನಿಲ್ಲಿಸಿ ಪರಿಷೇಚನ ಮಾಡಿದರು. ಎಲೆಯಿಂದ ಎದ್ದು ಬಿಟ್ಟರು.

ಹೆಂಡತಿಗೆ ಹಿಂದು ಮುಂದು ತೋರಲಿಲ್ಲ. "ಅಯ್ಯೋ ಯಾಕೆ ಹೀಗೆ ಕೋಪ ಮಾಡುತ್ತೀರಿ? ಶಾಲೆಗೆ ಹೊತ್ತಾಗುತ್ತಲ್ಲಾ ಅಂತ ನಾನು ಈ ಹುಳೀನೇ ಮಾಡಿಬಿಟ್ಟೆ. ಅದಕ್ಕೆ ಇಷ್ಟು ಕೋಪಾನೇ? ಊಟಾನೇ ಬಿಟ್ಟು ಬಿಟ್ಟಿರಲ್ಲ," ಎಂದು ಆಕೆ ಅಂಗಲಾಚಿದರು.

ಹೆಂಡತಿ ಅಂಗಲಾಚಿದರು ಅಂತ ಕೋಪಾನ ತಡಕೊಂಡ ಗಂಡ ಒಬ್ಬ ಉಂಟೇ? ನರಸಿಂಹಯ್ಯ ಅವರ ಮಾತಿಗೆ ಕಿವಿ ಕೊಡಲಿಲ್ಲ. ಕೈ ತೊಳಕೊಂಡವರು ಮೇಲೆ ಒಂದು ಬಟ್ಟೆ ಒಂದು ಟವಲ್ ಹಾಕಿಕೊಂಡು ಕೋಟಿನ ಜೇಬಿನಲ್ಲಿದ್ದ ನಾಲ್ಕು ಕಾಸನ್ನು ಸೊಂಟದಲ್ಲಿ ಸಿಕ್ಕಿಸಿಕೊಂಡು ಹೊರಕ್ಕೆ ನಡೆದುಬಿಟ್ಟರು. ಶಾಲೆ ಬಳಿಗೆ ಹೋಗಿ, ಮುಖ್ಯೋಪಾಧ್ಯಾಯರು ಇನ್ನೂ ಬಂದಿರಲಿಲ್ಲ ಅನ್ನೋದನ್ನ ಕಂಡು, ಕಾಗದ ಬರೆದರಾಯ್ತು ಎಂದುಕೊಂಡು, ನೇರವಾಗಿ ಮೂರು ಹರಿದಾರಿಯಲ್ಲಿ ಸ್ವಾಮಿಗಳು ತಂಗಿದ್ದ ಊರಿನ ದಾರಿ ಹಿಡಿದು ನಡೆದರು.

ಹೊತ್ತು ಇಳಿಯುವ ವೇಳೆಗೆ ಆ ಊರನ್ನು ಸೇರಿ ಸ್ವಾಮಿಗಳ ಬಿಡಾರಕ್ಕೆ ಬಂದರು. "ಏನು ನೀವು ಬಂದಿರಲ್ಲಾ" ಅಂತ ಮಠದವರು ಕೇಳಿದಾಗ, "ಸ್ವಾಮಿಗಳನ್ನು ಬಿಟ್ಟಿರೋದು ಕಷ್ಟ ಆಯಿತು. ಸೇವೆ ಮಾಡೋಣ ಎಂತ ಬಂದೆ," ಎಂದು ಉತ್ತರ ಹೇಳಿದರು.

ಸಂಜೆ ಸ್ವಾಮಿಗಳು ಉಪದೇಶದ ಮಾತನಾಡಿದಾಗ ಊರಿನ ಹತ್ತು ಜನದೊಂದಿಗೆ ಇವರು ತಾವೂ ಅಲ್ಲಿ ಕುಳಿತಿದ್ದರು. ಸ್ವಾಮಿಗಳು, "ಏನು ನರಸಿಂಹಯ್ಯ, ಇನ್ನಷ್ಟು ದಿನ ಹತ್ತಿರ ಇರಬೇಕು ಅಂತ ಬಂದಿರಂತಲ್ಲಾ. ಶಾಲೆಯ ಕೆಲಸದ ಮಾತು ಹೇಗೆ?" ಎಂದು ಕೇಳಿದರು. ನರಸಿಂಹಯ್ಯ, "ಎಲ್ಲಾ ನಾಳೆ ಬೆಳಿಗ್ಗೆ ಅರಿಕೆ ಮಾಡುತ್ತೇನೆ," ಅಂತ ಹೇಳಿದರು.

ಬೆಳಿಗ್ಗೆ ಸ್ವಾಮಿಗಳ ಸ್ನಾನಕ್ಕೆ ತಾವೇ ನೀರು ಕೊಟ್ಟು ಉಪಚಾರ ಮಾಡಿ ಅವರು ಆಹ್ನಿಕಕ್ಕೆ ಕುಳಿತ ಮೇಲೆ ತಾವೂ ಸ್ನಾನ ಮಾಡಿ, ಮಡಿಯಾಗಿ ಅವರ ಬಳಿಗೆ ಬಂದರು. ಸ್ವಾಮಿಗಳು ಸ್ವಲ್ಪ ಹೊತ್ತಿನ ಮೇಲೆ, "ಏನು, ಅರಿಕೆ ಮಾಡುತ್ತೇನೆ ಅಂದಿರಲ್ಲಾ," ಎಂತ ಇವರನ್ನು ಕೇಳಿದರು.

"ನನಗೆ ಸಂಸಾರದಲ್ಲಿ ಬೇಸರ ಹುಟ್ಟಿದೆ. ಸಂನ್ಯಾಸಿ ಆಗೋಣ ಎನ್ನಿಸುತ್ತಿದೆ. ತಾವು ಅನುಗ್ರಹ ಮಾಡಿ ನನಗೆ ಸಂನ್ಯಾಸ ಕೊಡಬೇಕು."

"ಯಾಕಪ್ಪಾ, ವಾರದ ಹಿಂದೆ ನಿಮ್ಮೂರಿನಲ್ಲಿ ಇದ್ದಾಗ ಈ ಯೋಚನೆ ಇರಲಿಲ್ಲ. ನಾವು ನಿಮ್ಮೂರನ್ನು ಬಿಟ್ಟ ಮೇಲೆ ನಿಮಗೆ ಈ ವೈರಾಗ್ಯ ಯಾಕೆ ಬಂತು?"

"ಅದೆಲ್ಲಾ ಸಣ್ಣ ಮಾತು. ಗುರುಗಳ ಉಪದೇಶ ಕಿವಿಗೆ ಬಿದ್ದೊಡನೆಯೇ ಮನಸ್ಸನ್ನು ಮುಟ್ಟುತ್ತೆಯೇ? ನಮ್ಮಂಥ ಜಡರಿಗೆ? ಸ್ವಲ್ಪ ತಡವಾಗಿ ಮನಸ್ಸನ್ನು ಮುಟ್ಟಿತು. ಸಂಸಾರ ಸಾಕು ಅನ್ನೋ ಹಾಗೆ ಮಾಡಿತು."

"ಸರಿ, ಸಂಸಾರ ಸಾಕು ಅನ್ನೋದು ತಪ್ಪಲ್ಲ. ಅಂದರೆ ನಿಮಗೆ ಅಂಥ ವಯಸ್ಸೇನೂ ಆಗಿಲ್ಲ. ಯಾಕೆ ಅವಸರ?"

"ವಯಸ್ಸಾಗಿಲ್ಲ. ಅದರೂ ಗುರುಗಳ ಅನುಗ್ರಹ. ಉಪದೇಶದ ಮಹಿಮೆ. ಮನಸ್ಸಿಗೆ ಜಿಹಾಸೆ. ಗುರುಗಳೇ ಅಪ್ಪಣೆ ಕೊಡಿಸಿದಿರಿ. ವೈರಾಗ್ಯ ಯಾವಾಗ ಎಲ್ಲಿ ಮೂಡಿದರೂ ಆಗ ಅಲ್ಲಿ ಸಂನ್ಯಾಸವನ್ನು ಮಾಡಬೇಕು. ನನ್ನದು ಆ ಸ್ಥಿತಿ. ಈ ಮನಸ್ಸನ್ನು ತರಿಸಿದ ಗುರುಗಳು ಆ ಆಶೆಯನ್ನು ಸಫಲ ಮಾಡಬೇಕು."

ಗುರುಗಳು ಸ್ವಲ್ಪ ಆಲೋಚನೆ ಮಾಡಿದರು. ಅಮೇಲೆ, "ನಾಳೆಯೋ ನಾಡಿದ್ದೋ ಕೊಡುತ್ತೇವೆ. ಇರಿ," ಎಂದರು.

ನರಸಿಂಹಯ್ಯ ಅಪ್ಪಣೆ ಎಂದರು. ಮಾರನೆಯ ದಿನ ಸ್ವಾಮಿಗಳು ಕರೆಯುತ್ತಾರೆ ಎಂದು ನೋಡಿದರು. ಕರೆಯಲಿಲ್ಲ. ಮೂರನೆಯ ದಿನ ಕರೆಯ ಬಹುದು ಎಂದುಕೊಂಡರು. ಮಧ್ಯಾಹ್ನದ ಪೂಜೆಯ ಹೊತ್ತಿನವರೆಗೂ ಸ್ವಾಮಿಗಳು ಕರೆಯುವ ಸೂಚನೆ ಕಾಣಲಿಲ್ಲ. ಆಗ ಇವರು ಸ್ವಾಮಿಗಳ ಸನ್ನಿಧಿಗೆ ಹೋಗಿ, "ಈ ಹೊತ್ತು ಸಂನ್ಯಾಸ

ಅನುಗ್ರಹ ಮಾಡುವುದಾಗಿ ಅಪ್ಪಣೆ ಕೊಡಿಸಿದಿರಿ. ಎರಡು ದಿವಸ ಕಾದೆ. ಈಗ ಅನುಗ್ರಹಿಸಬೇಕು," ಎಂತ ಬೇಡಿದರು.

ಸ್ವಾಮಿಗಳು, ಆಗಲಿ, ಎಂದರು. ನರಸಿಂಹಯ್ಯನಿಗೆ ವಿಧ್ಯುಕ್ತವಾಗಿ ತುರೀಯಾಶ್ರಮವನ್ನು ಅನುಗ್ರಹಿಸಿದರು.

ಆ ದಿನ ಹೊಸ ಸಂನ್ಯಾಸಿಗೆ ಸ್ವಾಮಿಗಳ ಜೊತೆಯಲ್ಲೇ ಭಿಕ್ಷೆ ಸ್ವಾಮಿಗಳಿಗೆ ನಮಸ್ಕಾರ ಮಾಡಲು ಬಂದವರೆಲ್ಲಾ ಹೊಸ ಸಂನ್ಯಾಸಿಗೂ ನಮಸ್ಕಾರ ಮಾಡಿದರು. ಅವರಲ್ಲಿ ಹಲವರು ಇವರನ್ನು ಬಲ್ಲವರು. ಕೆಲವರು ಇವರ ಬಂಧುಗಳು ಕೂಡ. ಅವರೆಲ್ಲರಿಗೂ, ಇದೇನು ಇವನು ಸನ್ಯಾಸಿಯಾದ, ಎಂತ ವಿಸ್ಮಯ.

ಮೂರುದಿನ ಆ ಊರಿನಲ್ಲಿದ್ದು ಸ್ವಾಮಿಗಳು ಮುಂದಿನ ಊರಿಗೆ ಎಂದು ಪ್ರಯಾಣ ಬೆಳೆಸಿದರು. ಹೊಸ ಸಂನ್ಯಾಸಿ ಅವರ ಜೊತೆಗೆ ಪ್ರಯಾಣ ಮಾಡಿದ. ಮುಂದಿನ ಊರು ತಕ್ಕಷ್ಟು ದೊಡ್ಡ ಊರು. ಇವರ ಜನ ಹಲವರ ಮನೆ ಇದ್ದ ಊರು. ಸಂನ್ಯಾಸಿ ಅಲ್ಲಿ ಮನೆಗಳಿಗೆ ಭಿಕ್ಷೆಗೆ ಬಂದಿರುವುದಾಗಿ ಹೇಳಿದ. ಮನೆಗಳವರು, "ಅವಶ್ಯ ಬನ್ನಿ. ಮನೆಯಿಂದ ಮನೆಗೆ ಹೊಗುವುದು ಬೇಡ. ಒಂದು ದಿನ ಒಂದು ಮನೆಯ ಭಿಕ್ಷೆ ನಡೆಯಲಿ. ನೀವು ಈ ಗ್ರಾಮದಲ್ಲಿ ಇರುವಷ್ಟು ದಿವಸ ನಾವು ನೋಡಿಕೊಳ್ಳುತ್ತೇವೆ," ಎಂದರು.

ನರಸಿಂಹಯ್ಯ ಮಾಡಿಕೊಂಡ ಈ ಏರ್ಪಾಡಿನ ವಿಷಯ ತಿಳಿದು ಸ್ವಾಮಿಗಳು ತುಂಬಾ ಸಂತೋಷಪಟ್ಟರು. "ನಿಮ್ಮ ಯೋಚನೆ ಒಳ್ಳೆಯದು ಸ್ವಾಮಿಗಳೆ. ಇರುತ್ತಾ ಈ ಬಿಡಾರದಲ್ಲಿ ನಡೆಯುತ್ತಿರುವುದು ಊರಿನ ಅಭಿಮಾನಿ ಜನರ ಭಿಕ್ಷೆ. ನಿಮಗೂ ನಮ್ಮಂತೆ ಇಲ್ಲಿಯೇ ಭಿಕ್ಷೆ ನಡೆಯಲಿ," ಎಂದರು. ಶಿಷ್ಯ, "ಗುರುಗಳ ಅಪ್ಪಣೆ," ಎಂದರು, ಗುರುಗಳ ಜೊತೆಯಲ್ಲಿಯೇ ಭಿಕ್ಷೆ ಪಡೆದರು.

ಆ ಬಾರಿ ಸ್ವಾಮಿಗಳು ಒಟ್ಟಿನಲ್ಲಿ ಆರು ತಿಂಗಳು ಈ ಪ್ರವಾಸ ನಡೆಸಿದರು.

ಅದು ಮುಗಿಯುವವರೆಗೆ ಸಂನ್ಯಾಸಿ ನರಸಿಂಹಯ್ಯ ಅವರ ಜೊತೆಯಲ್ಲಿ ಇದ್ದು ಬಿಟ್ಟರು. ಸಂನ್ಯಾಸಿ ಜೀವನದ ಕ್ರಮವನ್ನು ಎಳೆ ತಪ್ಪದೆ ನಡೆಸಿದರು.

ಶಿವಗಂಗೆಯನ್ನು ಮುಟ್ಟಿದ ವಾರದ ಬಳಿಕ ಮಠದ ಮನೆವಾರ್ತೆಯವರು ಸಂನ್ಯಾಸಿ ನರಸಿಂಹಯ್ಯನವರಿಗೆ ಉಪಾಯವಾಗಿ ಒಂದು ಮಾತು ಹೇಳಿದರು.

"ಸಂನ್ಯಾಸದ ಕ್ರಮದ ಅನುಷ್ಠಾನವನ್ನು ಗುರುಗಳ ಸಮ್ಮುಖದಲ್ಲಿಯೇ ಪಾಠ ಮಾಡಿ ಆಯಿತು. ಇನ್ನು ತಾವು ಇಲ್ಲಿ ಇರಬೇಕಾದ ಕಾರಣ ಇಲ್ಲ. ಸ್ವತಂತ್ರವಾಗಿ ಆಶ್ರಮ ಧರ್ಮವನ್ನು ನಡೆಸುತ್ತ, ಸಮಾಜ ಸೇವೆ ಮಾಡುತ್ತ ಸಂನ್ಯಾಸದಲ್ಲಿ ಬೆಳೆದು ಸಿದ್ಧಿ ಪಡೆಯಬಹುದು," ಎಂದರು.

ಇದರ ಅರ್ಥ, ನೀನು ಇನ್ನು ಇಲ್ಲಿರುವುದು ಬೇಡ ಎನ್ನುವುದು ಅಷ್ಟೆ. ಇದೇನು ಗುರುಗಳ ಇಚ್ಛೆಯೋ? ಇದನ್ನು ತಿಳಿಯುವುದು ಹೇಗೆ? ಗುರುಗಳನ್ನು ಕೇಳುವುದಕ್ಕೆ ಆಗುತ್ತದೆಯೇ? ನರಸಿಂಹಯ್ಯ, "ಆಯಿತು ಸ್ವಾಮಿ," ಎಂದರು. ಆ ದಿನದ ಭಿಕ್ಷೆ ಮುಗಿದ ಮೇಲೆ ಗುರು ಸನ್ನಿಧಿಯಲ್ಲಿ "ನಾಲ್ಕು ತಿಂಗಳು ಸನ್ನಿಧಾನದಲ್ಲೇ ನಿಂತು ಆಶ್ರಮದ ಅನುಷ್ಠಾನದ ಕ್ರಮವನ್ನು ತಿಳಿದಾಯಿತು. ಇನ್ನು ನಾನು ಸ್ವತಂತ್ರನಾಗಿ ಇರುವುದಕ್ಕೆ ಅನುಗ್ರಹ ಅಪ್ಪಣೆ ಆಗಬೇಕು," ಎಂದರು. ಗುರುಗಳು, "ಒಳ್ಳೆಯದು ಸ್ವಾಮಿಗಳೆ, ಹೋಗಿ ಬನ್ನಿ. ಆಶ್ರಮ ಧರ್ಮವನ್ನು ನಿಷ್ಠೆಯಿಂದ ಪಾಲಿಸಿ, ನಿಮ್ಮ ತಪಸ್ಸು ಸಿದ್ಧಿಸಲಿ," ಎಂದು ಅಪ್ಪಣೆ ಕೊಡಿಸಿದರು. ನರಸಿಂಹಯ್ಯ ಗುರುಗಳಿಗೆ ವಂದನೆ ಸಲ್ಲಿಸಿ ಶಿವಗಂಗೆಯಿಂದ ಹೊರಟು ಬಂದರು.

ಶಿವಗಂಗೆಯಿಂದ ಹೊರಟರು ಸರಿ. ಬಂದದ್ದು ಎಲ್ಲಿಗೆ?

ಸಂನ್ಯಾಸದ ಸುಖ ನರಸಿಂಹಯ್ಯನಿಗೆ ಕಂಡದ್ದು ಈಗಲೇ.

ಶಿವಗಂಗೆಯನ್ನು ಬಿಟ್ಟಿದ್ದೆ ನರಸಿಂಹಯ್ಯನಿಗೆ ಎಲ್ಲಿಗೆ ಹೋಗುವುದು ಎಂಬ ಪ್ರಶ್ನೆ ಎದುರಿಗೆ ನಿಂತಿತು. ಮೈಮೇಲಿನ ಬಟ್ಟೆ, ಒಂದು ಹೆಚ್ಚು ಪಂಚೆ. ರಾತ್ರಿ ಹೊದೆಯಲು ಒಂದು ಹಚ್ಚಡ. ಕೈಯಲ್ಲಿ ಈತ ಹೊರಡುವಾಗ ಗುರುಗಳು ಇವರ ಕೈಯಲ್ಲಿ ಇಟ್ಟ ಐದು ರೂಪಾಯಿ. ಇಷ್ಟನ್ನಿಟ್ಟುಕೊಂಡು ಈ ಬಿಡಿ ಸಂನ್ಯಾಸಿ ತನ್ನ ಹೊಸ ಜೀವನವನ್ನು ಆರಂಭಿಸಿದರು. ಸದ್ಯ ಕೈಯಲ್ಲಿ ಐದು ರೂಪಾಯಿ ಇತ್ತಲ್ಲ. ಇದನ್ನು ಈತ ಕೇಳಲಿಲ್ಲ. ನಿರೀಕ್ಷಿಸಿರಲೂ ಇಲ್ಲ. ಗುರು ತಾವೇ ಕೊಟ್ಟಿದ್ದರು. ಎಂಥ ಕರುಣಾಳು ತನ್ನ ಗುರು.

ನರಸಿಂಹಯ್ಯನಿಗೆ ಅವರು ಎಂಥಾ ಮುಂದಾಲೋಚನೆಯ ಜನ ಎಂದು ಆಶ್ಚರ್ಯವಾಯಿತು. ಡಾಬ್ಸ್‌ಪೇಟೆಗಂತೂ ಹೋಗಬೇಕಲ್ಲ. ಅಲ್ಲಿ ಯೋಚಿಸಬೇಕು. ಮುಂದೆ ಎಲ್ಲಿಗೆ ಅಂತ. ನರಸಿಂಹಯ್ಯ ಡಾಬ್ಸ್‌ಪೇಟೆಗೆ ಬಂದರು. ಊರಲ್ಲಿ ಸ್ಮಾರ್ತ ಬ್ರಾಹ್ಮಣರು ಯಾರಿದಾರೆ ವಿಚಾರಿಸಿದರು. ತಾನು ಅಡಿಗೆ ಮಾಡಿ ಊಟ ಮಾಡುವುದು ಕೂಡದು. ಊಟ ಬೇಕೆಂದರೆ ಅದು ಯಾರಾದರೂ ಸಂಸಾರಿಗರು ನೀಡಿದ ಭಿಕ್ಷೆ ಆಗಬೇಕು. ಸಂಸಾರಿಗ ಕೆಲಸವನ್ನು ಹುಡುಕುವಂತೆ ಸಂನ್ಯಾಸಿ ಭಿಕ್ಷೆ ನೀಡುವ ಸಂಸಾರಿಗಳನ್ನು ಹುಡುಕಬೇಕು. ಆಗ ಅಲ್ಲಿ ಪೊಲೀಸ್ ಕೆಲಸದಲ್ಲಿದ್ದಾತ ಒಬ್ಬ ಸ್ಮಾರ್ತ ಬ್ರಾಹ್ಮಣ. ಆತ ಶಿವಗಂಗೆಗೆ ಹೋಗಿದ್ದವರು. ಅಲ್ಲಿ ಇವರನ್ನು ನೋಡಿದ್ದವರು. ದೈವ ಕೃಪೆ ಎಂಬಂತೆ ಇವರನ್ನು ಕಂಡದ್ದೇ ಆತ, “ನಮಸ್ಕಾರ ಸ್ವಾಮಿಗಳಿಗೆ. ಏನು ಹೀಗೆ ದಯಮಾಡಿಸಿದೀರಲ್ಲಾ?” ಎಂದರು. ಸ್ವಾಮಿ, “ನಾನು ಶಿವಗಂಗೆಯನ್ನು ಬಿಟ್ಟು ಬಂದಿದೇನೆ. ಬಿಡಿ ಸಂನ್ಯಾಸಿ ಜೀವನ ನಡೆಸಬೇಕು. ಭಿಕ್ಷೆ ನೀಡುವವರು ದೊರೆತು, ಭಿಕ್ಷೆ ಎಂತ ನೀಡಿದರೆ ಭಿಕ್ಷೆ,” ಎಂದರು. ಆತ, “ಅಯ್ಯೋ ಸ್ವಾಮಿ, ಎಂಥ ದೊಡ್ಡ ಮಾತಾಯಿತು. ತಮ್ಮಂಥವರು ದಯಮಾಡುವುದು ನಮ್ಮ ಪುಣ್ಯ. ಈ ದಿನ ನಮ್ಮಲ್ಲಿ ಆಗಲಿ,” ಎಂದರು. ಆ ದಿನ ಅವರ ಮನೆಯಲ್ಲಿ ಪೂಜೆ, ಊಟ. ಸಂಜೆ ಅವರಿಗೆ, ಅವರ ಮನೆಯವರಿಗೆ, ಅವರು ಕರೆಸಿದ ಊರಿನ ನಾಲ್ಕು ಜನಕ್ಕೆ, ಸಣ್ಣ ಒಂದು ಉಪದೇಶ ಭಾಷಣ. ಇವರು ಮಕ್ಕಳಿಗೆ ಪಾಠ ಹೇಳಿದ್ದವರು. ಗುರುಗಳಾದ ಸ್ವಾಮಿಗಳು ನಾಲ್ಕು ತಿಂಗಳು ಜನಕ್ಕೆ ಹೇಳಿದ್ದ ಮಾತನ್ನು ಕೇಳಿ ಕೇಳಿ ಪಾಠ ಆಗಿದ್ದ ವಿಷಯ. ನರಸಿಂಹಯ್ಯ ಚೆನ್ನಾಗಿಯೇ ಮಾತನಾಡಿದರು. ಕೇಳಿದವರು, “ಸ್ವಾಮಿಗಳು ಬಹು ಚೆನ್ನಾಗಿ ಉಪದೇಶ ಮಾಡುತ್ತಾರೆ,” ಎಂದರು. ಮಾರನೆಯ ದಿನ ಬೆಳಗಾಗ ಎದ್ದು ಸ್ನಾನಮಾಡಿ ಸಂನ್ಯಾಸಿ ತುಮಕೂರಿಗೆ ಹೋಗುವುದು ಎಂತ ನಿಶ್ಚಯಿಸಿದರು. ಮನೆಯಾತ ಇವರಿಗೆ ತಟ್ಟೆಯಲ್ಲಿ ವೀಳೆಯದೊಂದಿಗೆ ಐದು ರೂಪಾಯಿ ದಕ್ಷಿಣೆ ಒಪ್ಪಿಸಿದರು. ಅದನ್ನು ತೆಗೆದುಕೊಂಡು ಇವರು ತುಮಕೂರಿಗೆ ನಡೆದರು.

ತುಮಕೂರಿನಲ್ಲಿ, ತಾನು ಬಿಡಿ ಸಂನ್ಯಾಸಿ, ಭಿಕ್ಷೆಗೆ ಕಾದಿರುವವನು, ಎಂಬುದನ್ನು ತಮ್ಮ ಪರಿಚಯದ ಒಬ್ಬರಿಗೆ ತಿಳಿಸಿ, ಅವರಿಂದ ಒಂದು ದಿನದ ಭಿಕ್ಷೆ ಪಡೆದು, ಅವರು ಕರೆದು ತಂದ ಹತ್ತು ಜನರಿಗೆ ಸಂಜೆ ಉಪದೇಶದ ಮಾತನ್ನು ಹೇಳಿ ಅವರಿಂದ ಒಂದೊಂದು ದಿನ ಭಿಕ್ಷೆಗೆ ದಯಮಾಡಬೇಕು ಎಂದು ಆಹ್ವಾನ ಪಡೆದು, ಇವರು ಹತ್ತು ದಿನ ಅಲ್ಲಿ ಇದ್ದರು. ಒಂದು ದಿನಕ್ಕೆ ಹೆಚ್ಚು ಒಂದು ಊರಿನಲ್ಲಿ ನಿಲ್ಲುವುದು ಸಂನ್ಯಾಸ ಧರ್ಮಕ್ಕೆ ವಿರೋಧ. ಇಂಥದರಲ್ಲಿ ಹತ್ತು ದಿನ ಒಂದೇ ಊರಿನಲ್ಲಿದ್ದು ಹತ್ತು ಮನೆಯಲ್ಲಿ ಭಿಕ್ಷೆ ಪಡೆದ ಮೇಲೆ ಮತ್ತೆ ಅದೇ ಮನೆಗಳಿಗೆ ಭಿಕ್ಷೆಗೆಂದು ಹೋಗುವುದು ಯುಕ್ತ ಅಲ್ಲ. ಹನ್ನೊಂದನೆಯ ದಿನ ಇವರು ಬೇರೆ ಊರಿಗೆ ಹೋಗಬೇಕು. ಸ್ನಾನಮಾಡಿ ಹೊರಟು ಇವರು ಬೆಂಗಳೂರಿಗೆ ಹೋಗುವುದು ಎಂದು ನಿಶ್ಚಯ ಮಾಡಿಕೊಂಡರು. ಅಲ್ಲಿಗೆ ರೈಲಿನಲ್ಲಿ ಹೊರಟರು.

ತುಮಕೂರಿನಲ್ಲಿ ಇದ್ದ ಹತ್ತು ದಿನದಲ್ಲಿ ಇವರು, ಬೆಂಗಳೂರಿನಲ್ಲಿ ವಾಜಪೇಯಂ ಮನೆಯವರನ್ನು ಹಿಡಿದರೆ ಕೆಲವು ಕಾಲ ಅಲ್ಲಿರುವುದು ಸಾಧ್ಯ ಎಂದು ತಿಳಿದಿದ್ದರು. ರೈಲಿನಿಂದ ಇಳಿದದ್ದೆ ಅವರ ಮನೆಯನ್ನು ವಿಚಾರಿಸಿಕೊಂಡು ಅಲ್ಲಿಗೆ ಹೋದರು. ಮನೆಯ ಯಜಮಾನರು ಇವರನ್ನು ಬರಮಾಡಿಕೊಂಡು, ಇವರ ಸ್ಥಿತಿಯನ್ನು ತಿಳಿದು ತಮ್ಮ್ಮಲ್ಲಿ ತಮ್ಮ ಸಂಬಂಧದ ಜನರ ಮನೆಗಳಲ್ಲಿ ಹದಿನೈದು ದಿನ ಭಿಕ್ಷೆ ನಡೆಯಲು ಏರ್ಪಾಡು ಮಾಡಿದರು. ಉಪದೇಶವೂ ನಾಲ್ಕು ದಿನ ನಡೆಯಿತು. ಆಮೇಲೆ ಜನ, ಇವರಲ್ಲಿ ದಿನದಿನವೂ ಹೇಳುವ ಹೊಸ ವಿಷಯ ಇಲ್ಲ ಎನ್ನುವುದನ್ನು ಕಂಡು ಉಪದೇಶಕ್ಕೆ ಏರ್ಪಾಡು ಮಾಡಲಿಲ್ಲ. ಒಮ್ಮೆ ಹೋದ ಮನೆಗೆ ಮತ್ತೆ ಭಿಕ್ಷೆಗೆ ಹೋಗುವುದಿಲ್ಲ ಎಂಬ ಇವರ ನಿಯಮ ವಾಜಪೇಯಂ ಮನೆತನದ ಸುತ್ತನ್ನು ಹದಿನೈದು ದಿನದಲ್ಲಿ ಮುಗಿಯಿತು. ನರಸಿಂಹಯ್ಯ ಅಲ್ಲಿಂದ ಕೋಟೆಗೆ ಬಂದರು. ಅಲ್ಲಿ ಹಿರಿಯರನ್ನು ಕಂಡು ಅಲ್ಲಿ ಹತ್ತು ದಿನ ಇದ್ದರು. ಹೀಗೆ ಬೆಂಗಳೂರಿನ ಬೇರೆ ಬೇರೆ ಭಾಗಗಳಲ್ಲಿ ಎರಡು ತಿಂಗಳು ಕಳೆದು ಇವರು ಮೈಸೂರಿಗೆ ಹೋದರು. ಅಲ್ಲಿ ಎರಡು ತಿಂಗಳು. ಅಲ್ಲಿಂದ ಶ್ರೀರಂಗಪಟ್ಟಣ. ಹಿರೋಡೆ, ಅತ್ತಿಕುಪ್ಪೆ, ನಾಗಮಂಗಲ, ಚೆನ್ನರಾಯಪಟ್ಟಣ. ಎಲ್ಲಾ ಸೇರಿ

ಆರು ತಿಂಗಳಾಗಿ ಸಂನ್ಯಾಸಿ ಮತ್ತೆ ತವರಿಗೆ ಬರಲು ನಿಶ್ಚಯಿಸಿದರು. ಒಂದು ದಿನ ಬಂದೂಬಿಟ್ಟರು.

ಬೆಳಿಗ್ಗೆ ಸುಮಾರು ಹನ್ನೊಂದು ಗಂಟೆ ಇವರು ನಮ್ಮೂರ ದೊಡ್ಡ ಬೀದಿಯಲ್ಲಿ ಬರುತ್ತಿದ್ದಾರೆ. ದೈವೇಚ್ಛೆ, ಇವರ ಪೂರ್ವಾಶ್ರಮದ ಹಿರಿಯರು, ಮುಖ್ಯೋಪಾಧ್ಯಾಯರು, ಶಾಲೆಗೆ ಹೋಗಲು ಹೊರಟಿದ್ದವರು, ಇವರಿಗೆ ಎದುರಾದರು. ಇವರು, ಹಿಂದಿನ ವಾಡಿಕೆ, ಅವರಿಗೆ ನಮಸ್ಕಾರ ಮಾಡಿದರು. ಅವರು ನಿಂತು ಇವರತ್ತ ನೋಡಿ, ಸಂನ್ಯಾಸಿಯಿಂದ ನಮಸ್ಕಾರ ಮಾಡಿಸಿಕೊಂಡು ಸುಮ್ಮನಿರುವರುಂಟೆ, ಬಾಗಿ ಇವರಿಗೆ ನಮಸ್ಕಾರ ಮಾಡಿದರು. ಇವರು, "ನನ್ನ ಗುರುತು ತಿಳಿಯಿತೇ?" ಎಂದರು.

ಅವರು, ಆಕಾರದಿಂದ ಅಲ್ಲ, ಧ್ವನಿಯಿಂದ ಇವರನ್ನು ಗುರುತಿಸಿ, "ಏನು, ನಮ್ಮ ನರಸಿಂಹಯ್ಯನವರೇ? ಸ್ವಾಮಿಗಳು?" ಎಂದರು.

"ಹೌದು."

"ನಿಮ್ಮ ಧ್ವನಿಯಿಂದ ಗುರುತಿಸಿದೆ. ವೇಷದಿಂದಲ್ಲ. ಏನು ಸ್ವಾಮಿಗಳೇ. ಯಾರನ್ನೂ ಕೇಳದೆ, ಏನನ್ನೂ ಹೇಳದೆ, ಆರು ತಿಂಗಳ ಹಿಂದೆ ಹೊರಟು ಹೋದಿರಿ. ಯಾರೋ ಹೇಳಿದರು. ಸಂನ್ಯಾಸ ತಕ್ಕೊಂಡಿರಿ ಅಂತ. ನಾನು ನಂಬಲಿಲ್ಲ. ಈಗ ನೋಡಿದರೆ ಅದು ನಿಜ ಅನ್ನೋದು ಕಾಣುತ್ತೆ, ಕೆಲಸ ಬಿಟ್ಟಿದ್ದೇನೆ ಎಂತ ಕೂಡ ಹೇಳದೆ ಹೊರಟು ಹೋದಿರಲ್ಲಾ. ನಾನು ನಿಮ್ಮ ಮಾತು ಏನಂತ ರಿಪೋರ್ಟ್ ಮಾಡಬೇಕು? ಹೀಗೆ ಉಂಟೇ ಸ್ವಾಮಿಗಳೇ?"

ಮುಖ್ಯೋಪಾಧ್ಯಾಯರು ಈ ಪ್ರಶ್ನೆ ಕೇಳುತ್ತಿದ್ದಂತೆಯೇ ನರಸಿಂಹಯ್ಯನವರ ಸಂನ್ಯಾಸ ಅವರಿಗೆ ಒಂದು ಕನಸಿನಂತೆ ತೆಳುವಾಗಿ ಹೋಯಿತು. ಅವರು ಮತ್ತೆ ಸಹಾಯಕ ಶಾಲಾ ಉಪಾಧ್ಯಾಯರಾದರು. "ಏನೋ ಸ್ವಾಮಿ. ಆ ಹೊತ್ತು ಹಾಗೆ ಮಾಡೋಣ ಎನ್ನಿಸಿತು. ಮಾಡಿಬಿಟ್ಟೆ. ಈಗ ಏನು ಮಾಡೋಹಾಗಿದೆ?" ಎಂದರು. ಮುಖ್ಯೋಪಾಧ್ಯಾಯರು, "ನೀವು ಎಲ್ಲಿಗೋ ಹೋಗಿದೀರಿ, ಮತ್ತೆ ಬರುತ್ತೀರಿ, ಎಂತ ಅಂದುಕೊಂಡು ನಾನು ನಿಮಗೆ ಸಂಬಳ ಇಲ್ಲದ ರಜಾ ಆರು ತಿಂಗಳು ಕೊಡಬೇಕು ಅಂತ ರಿಪೋರ್ಟ್‌ಮಾಡಿ

ರಜಾ ತರಿಸಿದೇನೆ. ಸಂನ್ಯಾಸಾನ ಮರೆತು ತಿರುಗಿ ಕೆಲಸಕ್ಕೆ ಬರೋದಾದರೆ ನೋಡಿ, ನಿಮ್ಮ ಕೆಲಸ ನಿಮಗಾಗಿ ಕಾದಿದೆ," ಎಂದರು.

ಈ ಮಾತನ್ನು ನನಗೆ ನಾಲ್ಕು ವರ್ಷಗಳ ನಂತರ ನರಸಿಂಹಯ್ಯನವರೇ ಹೇಳಿದರು.

"ಇದೇನು ದೇವರು ನಿನಗೆ ಈ ಆತಂತ್ರದ ಸಂನ್ಯಾಸ ಸಾಕು ಎಂತ ಹೇಳುತಿದಾರೆಯೇ ಏನು, ಎಂತ ತೋರಿತು. ಹೀಗೆ ತೋರಿ ನಾನು, ಸಂನ್ಯಾಸ ಬಿಡೋದಿಲ್ಲ. ಕೆಲಸಕ್ಕೆ ಬರೋದೆ ಯೋಚಿಸುತ್ತೇನೆಸ್ವಾಮಿ," ಎಂದೆ. ಮುಖ್ಯೋಪಾಧ್ಯಾಯರು, "ಆಗಲಿ, ಇರುತ್ತಾ, ನೀವು ಸಂನ್ಯಾಸದಲ್ಲಿರೊ ಅಷ್ಟು ಕಾಲ ನಮ್ಮಂಥವರ ಮನೆಗಳಲ್ಲಿ ಭಿಕ್ಷೆ ನಡೆಯಬೇಕು. ಈ ಹೊತ್ತು ನಮ್ಮ ಮನೇಲಿ ನಡೀಲಿ. ನಮ್ಮ ಮನೆಗೆ ಹೋಗಿ; ನಾನು ಶಾಲೆಗೆ ಹೋಗಿ, ಒಂದು ಹೊತ್ತು ಬಿಡುವು ಅಂತಾ ಹೇಳಿ ಮನೆಗೆ ಬರುತ್ತೇನೆ," ಎಂದರು. ಆ ದಿನ ಹಾಗೆ ನಡೆಯಿತು.

ನರಸಿಂಹಯ್ಯ ಸಂನ್ಯಾಸಿ ಆಗಿ ಊರಿಗೆ ಬಂದಿದಾರೆ ಎಂತ ತಿಳಿದು ಹತ್ತಾರು ಜನ ಇವರನ್ನು ನೋಡಲು ಬಂದರು. ಅವರ ಹೆಂಡತಿ ಅವರ ತೌರಿಗೆ ಹೋಗಿದ್ದರು. ಅವರು ಬರಲಿಲ್ಲ. ಬಂದರೆ ಏನು ಗತಿ ಎಂದು ಸಂನ್ಯಾಸಿಗೆ ಭಯ ಇತ್ತು. ಏಕೆ, ಈ ಊರಿಗೆ ಬರುವುದು ಎಂತ ಮನಸ್ಸು ಮಾಡಿದಾಗಲೇ, ಈ ರಂಪು ಒಂದು ಆಗುತ್ತೆ ಎಂತ ಅವರು ತಿಳಿದಿದ್ದರು. ತಿಳಿದವರನ್ನು ಅಡ್ಡ ನಿಲ್ಲಿಸಿ ಸಮಾಧಾನ ಪಡಿಸುವುದು ಎಂದು ನಿಶ್ಚಯ ಮಾಡಿಕೊಂಡಿದ್ದರು. ಸದ್ಯ ಅದು ತಪ್ಪಿತು. ತಮಗೆ ತಿಳಿದ ಗೃಹಸ್ಥರು ಸಂನ್ಯಾಸಿಯಾಗಿ ಬಂದಿದಾರೆ ಎಂದ ಮೇಲೆ ಇವರ ಬಂಧುಗಳೆಲ್ಲಾ ಒಬ್ಬೊಬ್ಬರು ಒಂದೊಂದು ದಿನ ಇವರನ್ನು ಭಿಕ್ಷೆಗೆ ಕರೆದರು.

ನರಸಿಂಹಯ್ಯನಿಗೆ, ಬಿಡಿ ಸಂನ್ಯಾಸಿ ಆದರೂ ನೆಂಟರ ಊರಿಗೆ ಹೋದರೆ ಅನ್ನಕ್ಕೆ ಭಯವಿಲ್ಲ. ಎಂಬ ತತ್ವ ಮನಮುಟ್ಟಿತು.

ಮನೆಯಿಂದ ಮನೆಗೆ ಹೋಗುತ್ತ ಒಂದು ದಿನ ಇವರು ತಮ್ಮ ಪೂರ್ವಾಶ್ರಮದ ಹೆಂಡತಿಯ ದೊಡ್ಡ ಅತ್ತೆಯ ಮನೆಗೆ ಹೋದರು. ಆ ದೊಡ್ಡ ಅತ್ತೆ ವಯಸ್ಸಾದ ಹೆಂಗಸು. ಇವರು ಸಂನ್ಯಾಸ ತೆಗೆದುಕೊಂಡದ್ದು ಏಕೆ ಎಂಬುದನ್ನು ಬಲ್ಲರು. ಇವರು ಊರಿಗೆ

ಬಂದದ್ದು ತಿಳಿದ ಒಡನೆಯೇ ಈ ಸಂನ್ಯಾಸದ ಶನಿಯನ್ನು ಬಿಡಿಸಬೇಕು ಎಂದು ಮನಸ್ಸು ಮಾಡಿದರು. ಇವರ ಹೆಂಡತಿಗೆ, "ನಿನ್ನ ಗಂಡ ಸಂನ್ಯಾಸಿ ಆಗಿ ಹಿಂದಿರುಗಿ ಬಂದಿದಾನೆ. ನೀನು ಇಲ್ಲಿಗೆ ಬಾ. ನಮ್ಮ ಮನೇಲಿರು. ಒಂದು ದಿನ ಇವನನ್ನು ನಮ್ಮ ಮನೆಗೆ ಭಿಕ್ಷೆಗೆ ಕರೆಯುತ್ತೇನೆ. ಆಮೇಲೆ ಹೇಗೆ ಮಾಡುವುದು ನೋಡೋಣ," ಎಂದು ಹೇಳಿ ಕಳುಹಿಸಿದರು. ಆಕೆ ಬಂದರು.

ಆ ದಿನ ಅತ್ತೆ ಪೇಟೆಯಿಂದ ಒಳ್ಳೆಯ ಎಳೆಯ ಬೆಂಡೇಕಾಯಿ ತರಿಸಿ ಈ ಹೆಂಡತಿಯ ಕೈಯಲ್ಲಿ ಅದನ್ನ ಸರಸಿಂಹಯ್ಯನ ರುಚಿಯ ತರತೀಪು ಹುಳಿಮಾಡಿಸಿ ಇವರು ಬರುವುದಕ್ಕೆ ಕಾದಿದ್ದರು. ಪುರಾಣದಲ್ಲಿ ಶಿವನ ತಪಸ್ಸನ್ನು ಕೆಡಿಸುವುದಕ್ಕೆ ಮನ್ಮಥ ಕಾದಿದ್ದಂತೆ ಇಂದು ಸಂನ್ಯಾಸಿ ನರಸಿಂಹಯ್ಯನ ಸಂನ್ಯಾಸಕ್ಕೆ ಮೃತ್ಯುವಾಗಿ ಈ ಹುಳಿ ಕಾದಿತ್ತು. ನರಸಿಂಹಯ್ಯ ಬಂದರು. ದೇವರ ಮನೆಯಲ್ಲಿ ಕುಳಿತು ವಾಡಿಕೆಯ ಪೂಜೆ ಮುಗಿಸಿ ಊಟಕ್ಕೆ ಕುಳಿತರು. ಅತ್ತೆ ತಾವು ಮಾಡಿ ಸಿದ್ಧ ಹುಳಿಯನ್ನು ಬಡಿಸಿದರು.

ನರಸಿಂಹಯ್ಯನಿಗೆ ಇದು ಬೆಂಡೇಕಾಯಿ ಹುಳಿ ಎನ್ನುವುದು ಕಂಡದ್ದೇ ಇದೇನಾದರೂ ಇವರ ತಂತ್ರವೋ ಎಂದು ಶಂಕೆ ಹುಟ್ಟಿತು. "ಬೆಂಡೇಕಾಯಿ ಹುಳಿ ಮಾಡಲಿಲ್ಲ ಅಂತ ಹೆಂಡತಿಯನ್ನು ಬಿಟ್ಟೆಯಲ್ಲಾ, ಸಂನ್ಯಾಸಿ ಅದೆಯಲ್ಲಾ ನೀನು ಏತರ ಸಂನ್ಯಾಸಿ?" ಎಂತ ತನ್ನನ್ನು ಈ ಹಿರಿಯೆ ಚಂಡಿಸುತ್ತಾಳೋ ಏನೋ ಎಂದು ಅವರು ಯೋಚಿಸಿಕೊಂಡರು. ಆದರೆ ಆಗ ಏನು ಮಾಡುವಂತಿತ್ತು? ಬಡಿಸಿದ ಹುಳಿಯನ್ನು ಊಟ ಮಾಡಿದರು.

ಹುಳಿ ಬಹು ಚೆನ್ನಾಗಿತ್ತು. ತನ್ನ ತಾಯಿ ಮಾಡುತ್ತಿದ್ದ ಹುಳಿಯೇ ಇದು.

ತನ್ನ ಹೆಂಡತಿಯಾಗಿದ್ದವಳು ಹತ್ತಿರ ಹತ್ತಿರ ಇಷ್ಟೇ ಚೆನ್ನಾಗಿ ಈ ಹುಳಿಯನ್ನು ಮಾಡುತ್ತಿದ್ದಳು. ಆದರೆ ಅದು ನೆನೆಯಬಹುದಾದ ಸಂಗತಿ ಅಲ್ಲ ಊಟ ಮಾಡುತ್ತ ನರಸಿಂಹಯ್ಯ ಯಜಮಾನಿಗೆ, "ಹುಳಿ ಬಹು ಚೆನ್ನಾಗಿದೆ. ನಮ್ಮ ತಾಯಿ ಇಂಥಾ ಹುಳಿ ಮಾಡುತ್ತಿದ್ದರು," ಎಂದರು. ಯಜಮಾನಿ, "ಪೂರ್ವಾಶ್ರಮದ ನಿಮ್ಮ ಹೆಂಡತಿ ನಮ್ಮ ನರಸಮ್ಮನೂ ಈ ಹುಳಿಯನ್ನ ಬಹು ಚೆನ್ನಾಗಿ ಮಾಡುತ್ತಿದ್ದಳು ಅಲ್ಲ?" ಎಂದರು.

ನರಸಿಂಹಯ್ಯ "ಹೌದು" ಎಂದರು.

ಊಟ ಮುಗಿಸಿ ಇವರು ಪಡಸಾಲೆಯಲ್ಲಿ ಕುಳಿತರು. ಮನೆಯ ಜನ ಇವರ ಜೊತೆಗೆ ಕುಳಿತಿದಾರೆ. ಮನೆಯ ಯಜಮಾನರು, "ಹೆಣ್ಣು ಮಕ್ಕಳು ಊಟ ಮಾಡಿ ಬಂದು ನಮಸ್ಕಾರ ಮಾಡಬೇಕು ಅಂತಾರೆ. ಸ್ವಾಮಿಗಳು ಸ್ವಲ್ಪ ಹೊತ್ತು ಕುಳಿತಿರಬಹುದೇ?" ಎಂದರು.

"ಅಗತ್ಯ ಇರುತ್ತೇನೆ."

ಸ್ವಲ್ಪ ಹೊತ್ತು ಆಯಿತು. ಮನೆಯ ಯಜಮಾನಿ ಇತರ ಹೆಣ್ಣು ಮಕ್ಕಳೊಂದಿಗೆ ಬಂದರು. ಅವರ ಮಧ್ಯೆ ನರಸಮ್ಮ ಇದಾರೆ. ಇದು ತಪ್ಪು. ಏನ ಮಾಡುವುದು? ನರಸಿಂಹಯ್ಯ ಯೋಚಿಸುತ್ತಿದ್ದಾರೆ. ಬಹಳ ಯೋಚನೆಗೆ ಅವಕಾಶವಿಲ್ಲ. ಎಲ್ಲರ ನಮಸ್ಕಾರ ಆದ ಮೇಲೆ ನರಸಮ್ಮ ಬಂದು ಇವರ ಕಾಲ ಬಳಿ ಬಿದ್ದಳು. ಕಾಲನ್ನು ಪಟ್ಟಾಗಿ ಹಿಡಿದುಕೊಂಡಳು.

"ನನ್ನನ್ನು ಬಿಟ್ಟು ಹೋದ ದೇವರು ತಿರುಗಿ ಬಂದಿದೀರಿ. ನೀವು ತಿರುಗಿ ನನ್ನನ್ನು ಬಿಡೋದು ಬೇಡ. ನಾವು ನಿಮ್ಮನ್ನು ಬಿಡೋದಿಲ್ಲ."

ನರಸಿಂಹಯ್ಯ, "ಛೇ, ಛೇ, ಇದು ಪಾಪ. ಹೀಗೆಲ್ಲಾ ಮಾಡಬಾರದು," ಎಂದು ಕಾಲನ್ನು ಬಿಡಿಸಿಕೊಳ್ಳಲು ನೋಡಿದರು. ಹೆಂಡತಿ ಬಿಡಲಿಲ್ಲ.

ನರಸಿಂಹಯ್ಯ ಅಸಹಾಯರಾಗಿ ದೇವರು ಮಾಡಿದಂತಾಗಲಿ ಎಂದು ಸುಮ್ಮನೆ ಕುಳಿತರು.

ನಿಮಿಷ ಆಯಿತು. ಎರಡು ನಿಮಿಷ ಆಯಿತು. ಮೂರು ನಿಮಿಷ ಆಯಿತು.

ಹೆಂಡತಿ ಕಾಲನ್ನು ಬಿಡಲಿಲ್ಲ.

ಮನೆಯ ಯಜಮಾನಿ, "ತಿಳಿಯದ ಹುಡುಗಿ. ಆ ಹೊತ್ತು ಏನೋ ಅಜಾಗ್ರತೆಯಲ್ಲಿ ನಿಮ್ಮ ಇಷ್ಟದಂತೆ ನಡೆಯಲಿಲ್ಲ. ಅದಕ್ಕೆ ಅವಳ ಬದುಕನ್ನೇ ಹಾಳು ಮಾಡಿ ಸಂನ್ಯಾಸ ತಕ್ಕೊಳ್ಳೋದೇ, ಸ್ವಾಮಿಗಳೆ? ನೀವು ಏನು ಸುಖ ಪಟ್ಟಿರೋ ನಾನು ಕಾಣೆ. ಸಂನ್ಯಾಸ ಒಂದು ತೀರು ಚೆನ್ನ. ದೊಡ್ಡೋರು ಚಿಕ್ಕೋರು ಎನ್ನದೆ ಜನ ಬಂದು ನಮಸ್ಕಾರ ಮಾಡತ್ತಾರೆ. ಇರುತ್ತಾ, ಮನುಷ್ಯ ಊಟಕ್ಕೆ ಮನೆಯಿಂದ ಮನೆಗೆ ಹೋಗಬೇಕಲ್ಲ. ಇದು

ಚೆನ್ನವೇ? ನಮ್ಮ ಮನೆ ನನ್ನ ಹೆಂಡತಿ ಅಂತ ಬಾಳೋದಕ್ಕೆ ಸಮ ಇನ್ನು ಬಾಳುವೆಯುಂಟೇ? ದೊಡ್ಡ ಮನಸ್ಸು ಮಾಡಿ. ಹೆಂಡತೀನ ಒಪ್ಪಿಕೊಳ್ಳಿ. ಜೊತೆಯಾಗಿ ಬಾಳಿ, ಸಂನ್ಯಾಸ ಸಾಕು," ಎಂದರು.

ನರಸಿಂಹಯ್ಯನಿಗೆ ಏನು ಹೇಳಲೂ ತಿಳಿಯಲಿಲ್ಲ. ಹೆಂಡತಿಯಾಗಿದ್ದವಳು ಕಾಲನ್ನು ಪಟ್ಟಾಗಿ ಹಿಡದಿದ್ದಾಳೆ. ಕಣ್ಣೀರು ಸುರಿಸುತ್ತಿದ್ದಾಳೆ. ಗೊಳೋ ಎಂದು ಅಳುತ್ತಿದ್ದಾಳೆ. ಮಧ್ಯೆ ದೊಡ್ಡ ಅತ್ತೆಯ ಮಾತು ಮಳೆಯ ಹಾಗೆ ಸುರಿಯುತ್ತಿತ್ತು. "ಈ ಬಿಡಿ ಸಂನ್ಯಾಸ ಬೇರೆ. ಶೃಂಗೇರೀದು ಅಲ್ಲ; ಕೆಂಗೇರಿದು ಅಂತಲಾದರೂ ಒಂದು ಮಠ ಇದ್ದರೆ ಅದೊಂದು ಮಾತು. ಸಂಸಾರಿ ಅಂತ ಮನೆ ಇಲ್ಲ. ಸಂನ್ಯಾಸಿ ಅಂತ ಮಠ ಇಲ್ಲ. ಈ ಅಂತರಾಳದ ಬಾಳು ಇದು ಏನು ಬಾಳು? ಮನೆಯಿಂದ ಮನೆಗೆ ಭಿಕ್ಷೆಗೆ ಹೋಗಬೇಕು. ಭಿಕ್ಷೆ ಹಾಕಿದ ಅತ್ತೆ ಆಮೇಲೆ ತಾನು ಸುಖವಾಗಿ ಊಟ ಮಾಡಬೇಕು. ಆಗತ್ತೆಯೇ? ಅತ್ತೆ ಅಲ್ಲ, ಹೆಂಡತಿಯಾಗಿದ್ದವಳೇ ಹಾಕಬೇಕಾಯಿತು; ಅವಳ ಪಾಡೇನು?"

ಮನೆಯ ಯಜಮಾನರು, "ಆ ಕ್ಷಣದ ಕೋಪದಲ್ಲಿ ತಕ್ಕೊಂಡ ಸಂನ್ಯಾಸ ಸಂನ್ಯಾಸ ಅಲ್ಲ. ದೊಡ್ಡವರು ಹೇಳಿದ್ದನ್ನು ಕೇಳಿದೇನೆ. ಸಂನ್ಯಾಸ ಬಿಡಿ ನರಸಿಂಹಯ್ಯ," ಎಂದರು.

ನರಸಿಂಹಯ್ಯ, "ದೇವರ ಇಚ್ಛೆ," ಎಂದರು. ಅವರ ಸಂನ್ಯಾಸ ಆಗ ಮುಗಿಯಿತು.

ತಿಂಗಳ ದಿನದಲ್ಲಿ ಈ ಸಂಗತಿ ಶಿವಗಂಗೆಯಲ್ಲಿ ಸ್ವಾಮಿಗಳ ಕಿವಿಯನ್ನು ಮುಟ್ಟಿತು. ಎಲ್ಲ ವಿವರಗಳನ್ನೂ ಕೇಳಿ ಗುರುಗಳು, "ಏನೂ ತಪ್ಪಿಲ್ಲ. ಆತ ತಾನು ಸಂನ್ಯಾಸಿ ಆದದ್ದು ಒಂದು ಕನಸು ಅಂದುಕೊಂಡು ಅದನ್ನು ಮರೆಯಬೇಕು," ಎಂದರು.

ಗುಡ್ಡದ ದೇವರು

ನಾನು ಕೆಲವು ವರ್ಷಗಳ ಹಿಂದೆ ದಿನವೂ ಬೆಳಗಾಗ ನಮ್ಮ ವಾಸದ ವಿಸ್ತರಣದ ಹತ್ತಿರದ ಹಳ್ಳಿಗಳನ್ನು ದಾಟಿ ಹತ್ತಿರ ಹತ್ತಿರ ಒಂದೂವರೆ ಗಂಟೆ ಗುಡ್ಡ ಬಯಲಿನ ದಾರಿ ನಡೆದು ಮನೆಗೆ ಹಿಂದಿರುಗುವ ವಾಡಿಕೆ ಇಟ್ಟುಕೊಂಡಿದ್ದೆ. ಈಚೆಗೆ ಈ ವಾಡಿಕೆ ತಪ್ಪಿದೆ. ಸುತ್ತುತ್ತಿದ್ದ ದಿನಗಳಲ್ಲಿ ಒಂದು ದಿನ ಮನೆಯಿಂದ ಸುಮಾರು ಎರಡು ಮೈಲಿ ದೂರದಲ್ಲಿ ದಾರಿ ನಡೆಯುತ್ತಿದ್ದೆ. ಹೊಲಗಳನ್ನು ಉಳುವ ದಿನಗಳು. ಕೆಲವು ಹೊಲಗಳಲ್ಲಿ ಗೊಬ್ಬರ ಹಾಕಿರುವರು. ನಾನು ನಡೆಯುತ್ತಿದ್ದ ಹೊಲದಲ್ಲಿ ದಾರಿಯ ಬದಿಗೆ ಒಂದಷ್ಟು ಗೊಬ್ಬರ ಹಾಕಿತ್ತು. ಗೊಬ್ಬರದ ಸ್ವಲ್ಪ ಭಾಗ ದಾರಿಯ ಮೇಲೆ ಬಿದ್ದಿತ್ತು. ಅದರಲ್ಲಿ ಮೂರು ನಾಲ್ಕು ಗಾಜಿನ ಚೂರು ಇದ್ದುವು. ನಾನು ಅಷ್ಟೊಂದು ಯೋಚನೆ ಮಾಡದೆ ತೀರ ಸಹಜವಾಗಿ ಬಗ್ಗಿ ಗಾಜಿನ ಚೂರುಗಳನ್ನು ಎತ್ತಿಕೊಂಡು, ಮುಂದೆ ಜನ ನಡೆಯದ ಒಂದು ಕಡೆಯಲ್ಲಿ ಹಾಕೋಣ ಎಂತ ಮುಂದಕ್ಕೆ ಹೊರಟೆ. ಹಿಂದುಗಡೆಯಿಂದ ದನಿ ಕೇಳಿಸಿತು. “ಏನು ಸ್ವಾಮಿಗಳು ಎತ್ತಿದ್ದು ಗಾಜಿನ ಚೂರಾ?” ನಾನು ಹಿಂತಿರುಗಿ ನೋಡಿದೆ. ಹಳ್ಳಿಯ ಮುದುಕಿ ಒಬ್ಬಾಕೆ ಬರುತ್ತಿದ್ದಾರೆ. ಈ ಮಾತನ್ನು ಕೇಳಿದ್ದಾರೆ. ನಾನು “ಹೌದು ತಾಯಿ” ಎಂದೆ. ಆಕೆ, “ನೀವು ಪುಣ್ಯಾತ್ಮರು. ನಮ್ಮ ಹಿರೇರು ಹೀಗೇ ಬಾಳಿದರು. ಹೀಗೆ ಬಾಳಿ ಅಂತ ಕಿರಿಯೋರಿಗೆ ಹೇಳಿದರು. ಈಗ ಹೇಳೋ ಹಿರಿಯರಿಲ್ಲ. ಕೇಳೋ ಕಿರಿಯರಿಲ್ಲ.” “ಯಾಕೆ ತಾಯಿ, ದಾರೀಲಿ ಬಿದ್ದಿರೊ ಗಾಜಿನ ಚೂರನ್ನ ಈಗಲೂ ಜನ ಎತ್ತಿ ಹಾಕತಾರಲ್ಲ?” “ಅಯ್ಯೋ ನನ್ನಪ್ಪ, ಎತ್ತಿ ಹಾಕತಾರೆ ಯಾರು? ಈ ಹೊತ್ತು ಬೆಳಗಾಗಿನಿಂದ ನೀವು ಬರೋವರೆಗೆ ಎಷ್ಟು ಜನ ಇಲ್ಲಿ ನಡೆದಿರಬೇಕು? ಯಾರೂ ಇದನ್ನ ಎತ್ತಿ ಹಾಕಲಿಲ್ಲ. ಹಿಂದಿನ ಕಾಲದೋರು ನೀವು. ಅದು ನಿಮ್ಮ ಕಣ್ಣಿಗೆ ಬಿತ್ತು. ನೀವು ಎತ್ತಿ ಹಾಕೋಣ ಅಂದುಕೊಂಡಿರಿ.” “ನಾನೂ ಎಲ್ಲ ಕಾಲದಲ್ಲೂ ಎತ್ತಿ ಹಾಕತಾ ಇದ್ದೆನೋ ಇಲ್ಲವೋ. ಈ ನಾಲ್ಕು ವರ್ಷದಲ್ಲಿ ನನಗೇ ಒಂದು ಸಲ ಒಂದು ಗಾಜಿನ ಚೂರು ತಗಲಿ ಗಾಯ ಆಯಿತು.

ನನಗೆ ತಿಳಿದ ಒಂದು ಮಗುವಿಗೆ ಗಾಜು ತಗಲಿ ದೊಡ್ಡ ಹುಣ್ಣೇ ಆಯಿತು. ನನಗೆ ತಿಳಿದ ಹಿರಿಯರೊಬ್ಬರಿಗೆ ಹೀಗೇ ಗಾಯ ಆಗಿ ಅವರು ಆರು ತಿಂಗಳು ನರಳಿದರು. ದಾರೀಲಿ ಗಾಜು ಇದ್ದರೆ ಎತ್ತಿ ಹಾಕೋದು ಒಳ್ಳೇದು ಅಂತ ಆಗಿನಿಂದ ನನಗೆ ತೋಚಿತು." "ಅದೂ ದಿಟ. ಅಂದರೂ, ತಿಳಿದೋರು ಅನ್ನೋರು ಹತ್ತೂ ಜನದ ಕಷ್ಟ ಸುಖ ನೋಡಿಕೋಬೇಕು ಅನ್ನೋದು ಹಿಂದಿನ ಕಾಲಕ್ಕೆ ಊರಿನ ಜನಕ್ಕೆಲ್ಲಾ ತಿಳಿದಿತ್ತು. ಈಗ ಅದು ಮರೆಯುತಾ ಆದೆ. ನಿಮ್ಮಂತವರನ್ನ ನೋಡಿದಾಗ ನೆನಪು ಬರತದೆ."

ಈ ಮಾತನಾಡುತ್ತಾ ನಾವು ದಾರಿ ನಡೆದೆವು. ಇನ್ನು ಹತ್ತು ಹೆಜ್ಜೆ ನಡೆದ ಮೇಲೆ ಮುದುಕಮ್ಮ ಹೇಳಿದರು, "ಇಕೋ ನೋಡಿ. ಗುಡ್ಡದ ಮೇಲೆ ಆ ಗುಡಿ ಇದೆಯಲ್ಲಾ, ಅದು ನಮ್ಮೂರ ದೇವರು. ಹಿರೇರ ದಿನದಲ್ಲಿ ದಿನಾ ತಪ್ಪದೆ ಪೂಜಾರಿ ಒಬ್ಬ ದೇವರಿಗೆ ದೀಪಹಚ್ಚಿ ಕಾಲಮೇಲೆ ಎರಡು ಹೂ ಹಾಕತಾ ಇದ್ದ. ಅವನಿಗೆ ಒಂದು ನೆಲ ಇತ್ತು, ಅದನ್ನ ಯಾರೋ ಮಾಡುತಿದ್ದರು. ವಾರ ತಗೊಂಡೋ ತಕೊಳ್ಳದೇನೋ ಬೆಳೆದ ಕಾಳನ ಅವನಿಗೆ ಕೊಡುತಿದ್ದರು. ವರ್ಷದ ದಿನಕ್ಕೆ ಕಾಳು ಸಾಲದು ಅಂದರೆ ಊರಿನ ದೊಡ್ಡೋರು ನಾಗಳ ಐಗಳ ಕಾಳು ಕೊಟ್ಟು ಅವನ್ನ ಬಾಳಿಸಿದರು. ಹಬ್ಬ ಹುಣ್ಣಿಮೆ ಬಂತು. ಗುಡೀಲಿ ಉತ್ಸವ, ವೈಭೋಗವಾಗಿರೋದು. ಪುಣ್ಯವಂತರು ಚರುಪು ಮಾಡಿಸೋರು. ಬಡವ ಭಿಕಾರಿಗೆ ಕೂಡ ದೇವರ ಪರಸಾದ ಸಿಕ್ಕೋದು. ಎಂದೂ ತಿಂದು ಕಾಣದ ಪದಾರ್ಥಾನ ಉಂಡು ಅವರೂ ಸಂತೋಸಪಟ್ಟರು. ಈಗ ?"

"ಈಗೇನಾಗಿದೆ ತಾಯಿ?"

"ಅಯ್ಯೋ ನನ್ನಪ್ಪ ! ಗುಡೀಲಿ ಪೂಜೆ ಮಾಡೋಕೆ ಮನುಸ ಇಲ್ಲ. ಬಾಗಲು ಮುಚ್ಚಿದ್ದಾರೆ."

"ದಿನಾ ಪೂಜೆಯಿಲ್ಲ?"

"ದಿನಾ ಪೂಜೇನೇ? ದಿನಾ ಪೂಜೆ ಅಂತ ನಾನಂದದ್ದು ನನ್ನ ಹರೆಯದ ದಿನದ ಮಾತು. ಏನು, ಮುವತ್ತು ವರುಸ ಆಗಿರಬಹುದು. ಆಮೇಲೆ ದಿನದ ಪೂಜೆ ತಪ್ಪಿತು. ವಾರಕ್ಕೆ ಒಂದು ದಿನದ ಪೂಜೆ ಅಂತ ಅಷ್ಟು ವರಸ ನಡೆಯಿತು. ಮೂರು ವರಸದ ಹಿಂದೆ

ಪೂಜೆ ಮಾಡೋನಿಗೆ, ಊರಿನ ಹಿರಿಯರಿಗೆ, ಯಾತರದೋ ಜಗಳ ಬಂತು. ಪೂಜೆ ಮಾಡೋನು, "ನನ್ನ ನೀವು ಬಾಳಿಸಿದರೆ ನಾನು ಬಾಳಬಹುದು. ಊರಿನ ಹಿರೇರು ಬಾಳಿಸದೆ ನಾನಿಲ್ಲೇನು ಮಾಡಲಿ? ದೇವರಲ್ಲಿ ದೀಪ ಹಚ್ಚತಾನೇಂತ ನೀವು ಅನ್ನ ಕೊಟ್ಟರೆ ನನಗೆ ಅನ್ನ ಉಂಟು. ಇಲ್ಲ ಅಂದರೆ ನಾನು ಹಸಕೊಂಡು ಇರಬೇಕು. ಹೊಟ್ಟೆಗಿಲ್ಲದೆ ಹಸಕೊಂಡು ನಾನು ದೇವರ ದೀಪ ಹಚ್ಚಿಕೊಂಡು ಇರೋಕಾಗತದಾ?" ಅಂದ. ಇವರು ಅವನ್ನ ನೋಡಿಕೊಳ್ಳುತೀನಿ ಅನ್ನಲಿಲ್ಲ. ಅವನು ದೇವರ ಪಾದದ ಮೇಲೆ ಬಿದ್ದ. ನಾ ಹೋಗಿ ಬರತೀನಿ ಅಂದ. ಹೊಂಟೇ ಹೋದ. ಪೂಜೆ ಯಾರು ಮಾಡಬೇಕು? ಆವತ್ತಿನಿಂದ ಗುಡಿ ಬಾಕಲು ಹಾಕೇ ಅದೆ."

"ಜಗಳ ಆದದ್ದು ಏನು?"

"ದೇವರ ಹೊಲ ಮಾಡತಾ ಇದ್ದನಲ್ಲಾ ಹಿಂದಿನೋನು ಒಬ್ಬ, ಅವ ತೀರಿಕೊಂಡ. ಹೊಸದಾಗಿ ಒಬ್ಬನ್ನ ಅದನ್ನ ಮಾಡೋಕೆ ನೇಮಿಸಿದರು. ಅವನು ಬೆಳೆದದ್ದರಲ್ಲಿ ಹಿಂದಿನೋನು ಕೊಡುತ್ತಾ ಇದ್ದ ಪಾಲು ಕೊಡೋಕೆ ಒಪ್ಪಲಿಲ್ಲ. "ಪೂಜಾರಿ ಆದರೇನು, ಬೇರೆಯಾದರೇನು, ನೆಲಾನ ಹೀಗೆ ಮಾಡಿದೋರು ಗುತ್ತಿಗೆ ಅಂತ ಕೊಡತಾರೆ, ನಾನು ಗುತ್ತಿಗೆ ಕೊಡತೇನೆ, ಅದಕ್ಕೆ ಹೆಚ್ಚು ಕೊಡೋದಿಲ್ಲ," ಅಂದ. ಬೇರೆ ಯಾರೂ ಬೆಳೆದದ್ದರ ಮೂರು ಪಾಲು ಅವನಿಗೆ ಕೊಟ್ಟು ಉಳಿದ ಪಾಲಿಗೆ ಮಾಡತೇನೆ, ಅನ್ನಲಿಲ್ಲ. ಪುಣ್ಯವಂತರು ನಾಲ್ಕು ಮಂದಿ ಇದ್ದರು. ಯಾರೋ ಒಬ್ಬರು ಈ ಮಾತನ್ನ ಅನ್ನಬಹುದಾಗಿತ್ತು. ಯಾರೂ ಅನ್ನಲಿಲ್ಲ. ಪೂಜಾರಿಗೆ ಬರೋ ಕಾಳು ಕಮ್ಮಿ ಆಯಿತು. ಅದನ್ನ ಪುಣ್ಯವಂತ ತುಂಬಿ ಕೊಡಬೇಕು. ನಾಲ್ಕು ಜನ ಮಾತನಾಡಿಕೊಂಡು 'ನಾನಷ್ಟು ಕೋಡುತ್ತೇನೆ, ನೀನಿಷ್ಟು ಕೊಡು' ಅಂತ, ಗೊತ್ತು ಮಾತನಾಡಿ ಕೊಡಬಹುದಾಗಿತ್ತು. ಮಾತನಾಡಿದರು. ಒಪ್ಪಂದಕ್ಕೆ ಬರಲಿಲ್ಲ. 'ನೀನಷ್ಟೇ ಕೊಟ್ಟರೆ ನಾನೇಕೆ ಹೆಚ್ಚು ಕೊಡಲಿ,' ಅಂತ ಒಬ್ಬರ ಮೇಲೆ ಒಬ್ಬರ ಪೋಟಿ. ವರ್ಷದ ಮಧ್ಯೆ ಇನ್ನೇನು ಪೂಜಾರಿ ಹೊರಟೇ ಹೋದಾನು ಅನ್ನೋವಾಗ ಊರ ಮಂದಿ ಎಲ್ಲಾ ಸೇರಿ ಬಡವರು ಬಳ್ಳ ಕೊಳಗ ಕೊಟ್ಟು ಪುಣ್ಯವಂತರು ಕೊಡೋ ಅಷ್ಟು ಕೊಟ್ಟು ಅವನ್ನು ಸಮದಾಯಿಸಿದ್ದಾಯಿತು. ಅವ ನಿಂತ.

ಅದಾದ ಸ್ವಲ್ಪ ದಿನಕ್ಕೆ ದೀವಳಿಗೆ, ಕಾರ್ತೀಕ, ದೀಪದ ಹಬ್ಬ. ಪೂಣ್ಯವಂತರು ಒಂದು ದಿನ ಒಬ್ಬೊಬ್ಬರು, ಅಲ್ಲದವರು ಇಬ್ಬರು ಮೂವರು ಸೇರಿ ಒಂದು ದಿನ, ಚೆರುಪು ಮಾಡಿಸುತ್ತಿದ್ದರು. ಚೆರುಪಿನಲ್ಲಿ ಪೂಜಾರಿ ತನ್ನ ಪಾಲು ಅಂತ ಉಳಿಸಿಕೊಂಡು ಮಿಕ್ಕದ್ದನ್ನು ಹಂಚತಾ ಇದ್ದ. ಆ ಬಾರಿ ಹೊಸದಾಗಿ ಮನೆಯ ಯಜಮಾನ ಆದ ಒಬ್ಬ ತಾನು ಸೇವೆ ಮಾಡಿಸಿದ ದಿನ ಪೂಜಾರಿಗೆ, 'ನೀ ಯಾಕೆ ಅಷ್ಟು ಇಟ್ಟುಕೊಳ್ಳತೀ? ಒಬ್ಬರಿಗೆ ಕೊಡೋ ಅಷ್ಟು ತಕೋ; ಇಪ್ಪತ್ತು ಜನಕ್ಕೆ ಆಗೋ ಅಷ್ಟು ಯಾಕೆ ನಿನಗೆ? ಅದನ್ನ ಎಲ್ಲರಿಗೂ ಹಂಚು,' ಅಂದ. ಅವ ಊರಿನ ದೊಡ್ಡವರಲ್ಲಿ ಒಬ್ಬ. ಅವನಿಗೆ ಎದುರಾಡೋ ಜನ ಯಾರು? ಪೂಜಾರಿ ಬೇಡಿಕೊಂಡ 'ಇಪ್ಪತ್ತು ಜನರದ್ದಲ್ಲ ಹಿರಿಯರೆ, ನಾಲ್ಕೋ ಐದೋ ಜನದ್ದು ಆಗಬಹುದು. ಹಿಂದಿನಿಂದ ಪೂಜಾರಿ ಇಷ್ಟು ಇಟ್ಟುಕೊಳ್ಳೋದು ವಾಡಿಕೆ. ಹಂಗಂತ ಇಟ್ಟುಕೊಂಡಿದೀನಿ, ಬ್ಯಾಡ ಅಂದರೆ ಬ್ಯಾಡ, ಕೊಟ್ಟು ಬಿಡತೀನಿ.' 'ಬ್ಯಾಡ ಅಂತೇನೆ, ಕೊಟ್ಟುಬಿಡು.' ಪೂಜಾರಿ ತನ್ನದು ಅಂತ ಇಟ್ಟುಕೊಂಡಿದ್ದನ್ನ ತಂದು ಇವರೆದುರಿಗೆ ಇಟ್ಟು ಬಿಟ್ಟ. ಇವರು ಅದನ್ನ ಎಲ್ಲರಿಗೂ ಹಂಚಿಬಿಟ್ಟರು. ಆಮೇಲೆ ದೀಪಗಳ ಹಬ್ಬ ಮುಗಿಯೋವರೆಗೆ ಇದ್ದವನೆ ಪೂಜಾರಿ ಮಾರನೇ ದಿನ ಊರಿನ ಉಳಿದ ಹಿರಿಯರಿಗೆ ಹೇಳಿ ಬಿಟ್ಟು ಊರು ತೊರೆದ, ನಡೆದೇ ಬಿಟ್ಟ."

"ಈ ಜಗಳ ತೆಗೆದ ದೊಡ್ಡ ಮನುಷ್ಯ ಬೇರೆ ಪೂಜಾರೀನ ಕರೆದು ತರೋ ಯೋಚನೆ ಮಾಡಲಿಲ್ಲವೇ?"

"ಇವನು ತಾನೇ ಒಂದು ತರ ಮನುಷ್ಯ, ಊರಿನ ಜನಕ್ಕೆ ಹೇಳಿದ. 'ಊರಿನ ಜನ ನಾವು ಒಬ್ಬೊಬ್ಬರು ಒಂದೊಂದು ದಿನ ಹೋಗಿ ದೇವರ ಹತ್ತಿರ ದೀಪ ಹಚ್ಚೋಣ. ದೀಪ ಹಚ್ಚೋಕೆ ಪೂಜಾರೀನೆ ಬೇಕೆ?' ಅಂದ. ಮಾಡಿದರೆ ಮಾಡಬಹುದು. ಅಂದರೆ ಜನರು ಮಾಡಿಯಾರೆ? ಇವನ ಮಾತು ಕೇಳಿ ಒಂದು ಹತ್ತು ಮಂದಿ ತಿಂಗಳ ದಿನ ದೀಪ ಹಚ್ಚಿದರು. ಆಮೇಲೆ ವಾರಕ್ಕೊಂದು ದಿನ, ಈಗೀಗ ತಿಂಗಳಿಗೊಂದು ದಿನ ಯಾರೋ ದೀಪ ಹಚ್ಚತಾರೆ. ಚೆರುಪಿನ ಮಾತು ಬಂತು. ಈ ನಮ್ಮ ಹಿರಿಯ ಹೇಳಿದ. 'ಪೂಜಾರಿ ಒಬ್ಬ ಚೆರುಪು ಮಾಡಿ ಅದನ್ನ ನಾವೆಲ್ಲ ಹಂಚಿಕೊಳ್ಳೋದು ಯಾಕೆ? ಎಲ್ಲಾರೂ ನಮ್ಮ ನಮ್ಮ

ಮನೆಯಿಂದ ಚೆರುಪು ತಗೊಂಡು ಹೋಗಿ ದೇವರ ಮುಂದಿಟ್ಟು ಪ್ರಸಾದ ಮಾಡಿ ತಂದರಾಯಿತು.’ ಹತ್ತು ಮಂದಿ ‘ಹೌದು, ಯಾಕಾಗದು’, ಅಂದರು. ಅಷ್ಟೋ ಇಷ್ಟೋ ಇರೋರು ಇವರು ಚೆರುಪು ಮಾಡಿದರಲ್ಲ. ಬಡವ ಹೆಂಗೆ ಚೆರುಪು ಮಾಡೋದು? ಅವನು ಚೆರುಪು ಮಾಡಲಿಲ್ಲ. ಅವನಿಗೆ ಪರಸಾದ ಇಲ್ಲ. ಊರ ಮಂದಿ ಎಲ್ಲಾ ದೇವರ ಮಕ್ಕಳು ಅಂದಾಗ ಪುಣ್ಯವಂತ ಮಾಡಿಸಿದ ಚೆರುಪು ಬಡವನ ಕೈಗೆ ಬೀಳುತಾ ಇತ್ತು. ಈಗ ಅದು ನಿಂತುಹೋಯಿತು. ನಾವು ಚೆರುಪು ತಂದಿದೀವಿ, ಕೊಡ್ತೀವಿ ಬನ್ನಿ ಅಂತ ಕರೆದರು ಅನ್ನಿ. ಯಾರ ಮನೆಗೆ ಯಾರು ಹೋಗಬೇಕು? ದೇವರದು ಪರಸಾದ; ಪೂಜಾರಿ ಕೊಟ್ಟದ್ದು: ಯಾರೂ ಕೈಚಾಚಬಹುದು. ಇವರ ಮನೇಲಿ ಪರಸಾದ ಕೊಡತೀವಿ ಅಂದರೆ ಎಂಥ ಬಡವನಿಗೂ ಕೈಚಾಚೋಕೆ ನಾಚಿಕೆ. ಈ ಘಟ್ಟಕ್ಕೆ ಬಂತು ಗುಡೀ ಕತೆ.

“ಈಗ ಹಬ್ಬದ ದಿನ. ನಾವೇ ಹೋಗಿ ಚೆರುಪು ಮಾಡೋದು ಅನ್ನೋದು ನಿಂತು ಹೋಗ್ಯದೆ. ತಿಂಗಳಲ್ಲಿ ಒಂದು ದಿನ ದೀಪ ಅನ್ನೋದು ಇಲ್ಲ. ನಾನು ದೀಪ ಹಚ್ಚಲಿಲ್ಲ. ದೇವರಿಗೆ ಕತ್ತಲಾ? ಇರುತಾ ದೇವರು ಅಂತ ದೀಪ ಹಚ್ಚಿ, ನಿಲ್ಲಿಸೋ ಪುಣ್ಯ ಊರಿಗೆ ಇಲ್ಲವಾಯಿತು.”

“ಹಾಗಾದರೆ ಏನು? ಗುಡಿ ಬಾಗಲು ಮುಚ್ಚಿಯೇ ಹೋಯಿತೇ ತಾಯಿ?”

“ಅಷ್ಟೇ ಬಿಡಿ. ವಾರದ ಹಿಂದೆ ನಾನು ಒಂದು ದಿನ ಹೋಗಿ ದೀಪ ಹಚ್ಚಿ ಪಾದ ಮುಟ್ಟಿ ಮೊಕ್ಕಿ ಬಂದೆ. ದೇವರ ಕಳೆ ಎಂದಿನಂತೆ ಅದೆ. ಎಷ್ಟೋ ವರ್ಸ ನಡೆದ ಪೂಜೆ ಮಡುಕಟ್ಟಿದೆ. ನಾವು ಪೂಜೆ ಮಾಡಲಿಲ್ಲ. ಅದು ಇನ್ನು ಬೆಳೆಯೋದಿಲ್ಲ. ವರ್ಸ ಎರಡು ವರ್ಸ ಹಿಂಗೆ ಆದರೆ ಮಡು ಬತ್ತುತದೆ. ಆಗ್ಗೆ ಕಳೆ ಇರುತ್ತೋ ಇಲ್ಲೋ. ಆದಾಗುವ ಮುನ್ನ ದೇವರು ಮನಸ್ಸು ಮಾಡಿ ಒಬ್ಬ ಪೂಜಾರೀನ ಕರೆಸಿಕೋಬೇಕು. ಮನಸ್ಸು ಮಾಡೋದಿಲ್ಲ. ಗುಡಿ ಗುಡಿಯಾಗಿ ಉಳಿಯೋದಿಲ್ಲ. ದೇಗುಲ ಆಗುತ್ತದೆ.”

ಟಾಂಗಾ ಹುಸೇನ

ನಲವತ್ತು ನಲವತ್ತೈದು ವರ್ಷಗಳ ಹಿಂದೆ ನಾನು ನಮ್ಮ ಸಾಹಿತ್ಯ ಸಮ್ಮೇಳನ ಒಂದಕ್ಕಾಗಿ ಉತ್ತರ ಕರ್ಣಾಟಕದ ಒಂದು ಸಣ್ಣ ಸಂಸ್ಥಾನದ ಮುಖ್ಯ ಪಟ್ಟಣಕ್ಕೆ ಹೋಗಿದ್ದೆ. ಸಂಸ್ಥಾನದ ಹೆಸರು ನಾನು ಹೇಳುವ ಸಂಗತಿಗೆ ಅಷ್ಟು ಪ್ರಕೃತವಲ್ಲ. ಆದ್ದರಿಂದ ನಾನು ಅದರ ಹೆಸರನ್ನು ಹೇಳುವುದಿಲ್ಲ. ಈ ಸಂಸ್ಥಾನಗಳೆಲ್ಲ ಕನ್ನಡ ಭೂಮಿಯ ಭಾಗಗಳು, ಎಂದರೆ ಅವುಗಳಲ್ಲಿ ವಾಸ ಮಾಡುವ ಜನ ನೂರಕ್ಕೆ ತೊಂಬತ್ತು ಕನ್ನಡದ ಜನ. ಈ ರಾಜ್ಯಗಳಲ್ಲಿ ಮಹಾರಾಷ್ಟ್ರದ ಜನರು ರಾಜರು ಎಂದು ಆಳುತ್ತಿರುವುದರಿಂದ ಕನ್ನಡಕ್ಕೆ ಮುಖ್ಯಸ್ಥಾನ ಇಲ್ಲ. ರಾಜರ ಭಾಷೆ ಆದ ಮಹಾರಾಷ್ಟ್ರ ಭಾಷೆಯೇ ಆಡಳಿತದ ಭಾಷೆ ಮತ್ತು ವಿದ್ಯಾಭ್ಯಾಸದ ಭಾಷೆ. ರಾಜ್ಯಗಳ ಕನ್ನಡ ಜನರು ಸರಕಾರದೊಂದಿಗೆ ವ್ಯವಹಾರಕ್ಕಾಗಿ ಹೊರತು ಉಳಿದಂತೆ ಕನ್ನಡವನ್ನೇ ಬಳಸುವರು. ಇವರು ಆಗಾಗ ನಮ್ಮ ಸಂಸ್ಥಾನದಲ್ಲಿ ಒಟ್ಟು ಕನ್ನಡನಾಡಿಗಾಗಿ ಏರ್ಪಟ್ಟಿದ್ದ ನಮ್ಮ ಪರಿಷತ್ತನ್ನು ತಮ್ಮಲ್ಲಿ ಒಂದು ಸಮ್ಮೇಳನವನ್ನು ನಡೆಸಿ, ಎಂದು ಕರೆಯುತ್ತಿದ್ದರು. ಆ ಸಂಸ್ಥಾನದ ಜನ ಹೀಗೆ ಕರೆದು ನಮ್ಮ ಪರಿಷತ್ತು ಏರ್ಪಡಿಸಿದ್ದ ಇಂಥ ಒಂದು ಸಮ್ಮೇಳನಕ್ಕೆ ಎಂದೇ ನಾನು ಆ ಊರಿಗೆ ಹೋದೆ.

ನಮ್ಮ ಮನೆತನ ಮಹಾರಾಷ್ಟ್ರ ದೇಶಸ್ಥ. ಹಿಂದೆ ಒಂದು ಕಾಲದಲ್ಲಿ ನಮ್ಮವರು ತುಂಬ ಜನ ಮೈಸೂರು ಸಂಸ್ಥಾನದಲ್ಲಿ ಹತ್ತಾರು ಸ್ಥಳಗಳಿಗೆ ಬಂದು ಬೀಡುಮಾಡಿಕೊಂಡು ನಿಂತರು. ಹೀಗೆ ಬಂದು ಮೈಸೂರು ಊರಿನಲ್ಲಿ ನಿಂತವರಲ್ಲಿ ನಮ್ಮ ಹಿರಿಯರೂ ಇದ್ದರು. ಇಲ್ಲಿ ಬಾಳುತ್ತಿರುವುದಾದರೂ ನಾವು ಸಂಬಂಧಗಳಿಗಾಗಿ ಉತ್ತರ ಕರ್ಣಾಟಕದ ನಮ್ಮ ಜನರೊಂದಿಗೆ ಸಂಪರ್ಕವನ್ನು ಉಳಿಸಿಕೊಂಡಿದ್ದೇವೆ. ಆ ದಿನಗಳಲ್ಲಿ ನನ್ನ ಒಬ್ಬ ಮಗಳಿಗೆ ಈ ಸಮ್ಮೇಳನ ನಡೆಯುತ್ತಿದ್ದ ಊರಿನ ದೊಡ್ಡ ಮನುಷ್ಯರೊಬ್ಬರ ಮಕ್ಕಳಲ್ಲಿ ಒಬ್ಬವರನನ್ನು ಹುಡುಕೋಣ ಎನ್ನುವುದೂ ನನ್ನ ಉದ್ದೇಶ ಇದ್ದಿತು.

ಸಮ್ಮೇಳನ ಬಹು ಚೆನ್ನಾಗಿ ನಡೆಯಿತು. ಸಂಸ್ಥಾನದ ಅರಸರು ಅದಕ್ಕೆ ಬರಲಿಲ್ಲ. ಆದರೆ ಸಮ್ಮೇಳನ ನಡೆಯುವುದು ಸಂತೋಷ ಎಂದು ತಿಳಿಸಿದ್ದರು. ಮತ್ತು ಸಮ್ಮೇಳನ ನಡೆಸುವ ವೆಚ್ಚಕ್ಕಾಗಿ ಅದನ್ನು ಏರ್ಪಡಿಸಿದ ಪ್ರಮುಖರ ಸಮಿತಿಗೆ ಸ್ವಲ್ಪ ಧನಸಹಾಯವನ್ನು ನೀಡಿದ್ದರು.

ಎರಡು ದಿನ ಸಮ್ಮೇಳನ ನಡೆದು ಮೂರನೆಯ ಪೂರ್ವಾಹ್ನ ಯಾವ ಕಾರ್ಯಕ್ರಮವೂ ಇಲ್ಲದೆ, ಅತಿಥಿಗಳು ಸ್ಥಳವನ್ನು ನೋಡುವುದು ಪ್ರಮುಖರ ಪರಿಚಯವನ್ನು ಮಾಡಿಕೊಳ್ಳುವುದು, ಎನ್ನುವುದಕ್ಕೆ ಮೀಸಲಾಗಿತ್ತು. ಆ ವೇಳೆ ಸಂಸ್ಥಾನದಲ್ಲಿ ಲಾಯರಾಗಿದ್ದ ನಮ್ಮ ಮಿತ್ರರೊಬ್ಬರು ತಮ್ಮ ಮಿತ್ರರು ಹಲವರು ನಮ್ಮನ್ನು ಸ್ವಲ್ಪ ದೂರದಲ್ಲಿರುವ ಹೊಳೆಯ ಬದಿಯ ತಮ್ಮ ಊರಿಗೆ ಬನ್ನಿ ಎಂದು ಆಹ್ವಾನಿಸಿದರು. ಒಳ್ಳೆಯ ಕೆಲಸವೇ ಆಯಿತು ಎಂದು ನಾವು ಒಪ್ಪಿದೆವು. ಎರಡು ಬಾಡಿಗೆ ಟಾಂಗಾಗಳಲ್ಲಿ ಕುಳಿತು ಆ ಊರಿಗೆ ಎಂದು ಹೋದೆವು. ಎರಡು ಗಾಡಿಗಳೂ ಇಬ್ಬರು ಮುಸಲ್ಮಾನರವು. ನಾವು ಕುಳಿತ ಗಾಡಿಯ ಒಡೆಯನ ಹೆಸರು ಹುಸೇನ. ಅವನು ನಮ್ಮನ್ನು ತುಂಬ ಮರ್ಯಾದೆಯಿಂದ ಬರಮಾಡಿಕೊಂಡು, ಗಾಡಿಯಲ್ಲಿ ಕುಳ್ಳಿರಿಸಿ, ಆಮೇಲೆ ತಾನು ಗಾಡಿಯ ಮುಂದೆ ಕುಳಿತು ನಮ್ಮ ಸತ್ಕರ್ತ ಮಿತ್ರರನ್ನು, “ಹೊರಡುವುದೇ ಗುರುಗಳೇ?” ಎಂತ ಕೇಳಿದ.

ಮಿತ್ರರು, “ಹೊರಡಪ್ಪ,” ಎಂದರು.

ಗಾಡಿ ಹೊರಟಮೇಲೆ ಮಿತ್ರರು ಹೇಳಿದರು: “ನಮ್ಮ ಹುಸೇನ ಬಹು ಒಳ್ಳೆ ಮನುಷ್ಯ. ತುಂಬ ಜಾಣನೂ ಹೌದು. ನಾನು ಸಂಸ್ಥಾನದ ಬೇರೆ ಊರಿನಲ್ಲಿ ಲಾಯರಾಗಿ ಇದ್ದೇನೆ. ಇರುತ್ತ ಇಲ್ಲಿಗೂ ಬಹಳ ಸಲ ಬರಬೇಕಾಗುತ್ತದೆ. ಅಂಥ ವೇಳೆಯೆಲ್ಲ ಹುಸೇನನೇ ನನ್ನನ್ನು ನೋಡಿಕೊಳ್ಳುತ್ತಾನೆ.”

ಹುಸೇನ ನಕ್ಕ. “ದಣಿಗಳು ನನ್ನ ನೋಡಿಕೊಳ್ಳುತ್ತಾರೆ. ಅದನ್ನ ತಿರುಗಿಸಿ ನಾನು ಅವರನ್ನ ನೋಡಿಕೊಳ್ಳೋದು ಅಂತ ಹೇಳತಾ ಇದಾರೆ,” ಎಂದ. ನಮ್ಮ ಮಿತ್ರರು ನಕ್ಕರು. ನಾವೂ ನಕ್ಕೆವು. ಹುಸೇನನ ಮಾತು ಒಬ್ಬ ಜಾಣನ ಮಾತು. ಅವರು ಹೇಳಿದ ಒಳ್ಳೆಯ

ಮಾತನ್ನು ಅವನು ಶ್ರಮವಿಲ್ಲದೆ ಹಿಂತಿರುಗಿಸಿ ಅವರಿಗೆ ಒಪ್ಪಿಸಿದ್ದ. ಗಾಡಿ ಸ್ವಲ್ಪ ದೂರ ಹೋಗಿದೆ. ಹುಸೇನ ತಾನೇ ಮಿತ್ರರನ್ನು, "ನಮ್ಮದೊರೆ ನಿಮ್ಮ ಸಭೆ ವೆಚ್ಚಕ್ಕೆ ಅಂತ ಅಷ್ಟು ರೊಕ್ಕ ಕೊಟ್ಟಿದಾರಂತೆ. ಹೌದೆ ಗುರುವೆ?" ಎಂತ ಕೇಳಿದ.

"ಕೊಟ್ಟಿದಾರೆ, ಹುಸೇನ."

"ಕೊಟ್ಟು ಒಳ್ಳೇದು ಮಾಡಿದರು. ಅಂದರೆ ಹಿರೇರು ಕೊಟ್ಟಿದ್ದರು ಅಂತ ಇವರೂ ಕೊಟ್ಟಿದ್ದಾರೆ. ತಮ್ಮ ಮನಸು ತಮ್ಮ ಇಚ್ಛೆ ಅಂತ ಅಲ್ಲ."

"ಯಾಕೆ ಹಾಗಂತೀ? ನಮ್ಮ ಈ ದೊರೆ ಜನರು ನಡಸೋ ಉತ್ಸವಕ್ಕೆ ಸಾಮಾನ್ಯವಾಗಿ ಕಾಸು ಕೊಡುವುದಿಲ್ಲವೇ?"

"ಕೊಡುತ್ತಾರೆ. ಅಷ್ಟೇ ದಿಟ. ಕೊಡೋದಿಲ್ಲ. ಕೊಡದೀರ ಇದ್ದರೆ ಜನ ತಂಟೆ ಮಾಡಿಯಾರು ಅನ್ನೋ ಭಯ ಇದ್ದರೆ ಕೊಡತಾರೆ."

"ಹಾಗಂತೀಯ? ಅಂದರೆ ಈಗ ನಡೀತಿರೊ ಸಭೆ ಮುಖಂಡರನ್ನ ಒಪ್ಪಿಸೋಣ ಅಂತ ಸಹಾಯ ಕೊಟ್ಟಿದ್ದಾರೆ ಅಂತೀಯಲ್ಲ?"

"ಹೌದು ಗುರುಗಳೆ. ಊರಿನ ಹಿರಿಯರು ನಾಲ್ವರ ಹೆಸರನ್ನು ಹೇಳಿ ಇವರೆಲ್ಲಾ ಸಭೆ ಆಗಬೇಕು ಅಂದರು. ದೊರೆಗೆ ಮನಸ್ಸಿಲ್ಲ. ಇರುತಾ ಬ್ಯಾಡ ಅನ್ನೋ ಧೈರ್ಯ ಇಲ್ಲ. ಮನಸ್ಸಿನಲ್ಲಿ ಬೇಸರು. ಆದರೂ ನಡಿಯಲಿ ಅಂದಿದಾನೆ. ಬೇರೆ ದಾರಿಯಿಲ್ಲ. ರೊಕ್ಕಾನೂ ಕೊಟ್ಟಿದಾನೆ. ಮಾಡುವುದೇನು? ನುಂಗೋ ತುತ್ತು ಅಲ್ಲ. ಆದರೂ ನುಂಗಬೇಕು."

"ಏನು ಹುಸೇನ! ಮೊದಲು ದೊರೆ ಬರುತ್ತಾರೆ ಹೋಗತಾರೆ ಎಂದವನು ಈಗ ಕೊಡತಾನೆ, ಬರತಾನೆ ಅಂತ ಮಾತು ಬೇರೆ ಮಾಡಿದೆಯಲ್ಲ. ದೊರೆ ನಿನಗೆ ಏನಾದರೂ ಕೆಡಕುಮಾಡಿದ್ದಾರೋ? ಅವರು ಅಂದರೆ ನಿನಗೆ ಬೇಸರ ಅಂತ ಕಾಣುತ್ತೆ."

"ಹೌದು ಗುರುಗಳೆ, ಬೇಸರು. ಇರೋ ಬೇಸರನ್ನ ಬಚ್ಚಿಟ್ಟು ಮಾಡೋದೇನ? ಹೇಳಿ ಕಳಕೊಳ್ಳಬೇಕು. ಗುರುಗಳು, ದೊಡ್ಡವರು ನಾಲ್ಕು ಜನ, ಗಾಡೀಲಿ ಕುಳಿತಿದ್ದೀರಿ ಕೇಳೋದಾದರೆ ಹೇಳೋಣ ಅನ್ನಿಸಿತು. ಮಾತು ಬಂದು ಬಿಟ್ಟಿತು."

“ಹಾಗಾದರೇನು? ಹೇಳಬೇಕಾದ ಸಂಗತಿ ತಕ್ಕಷ್ಟು ಇರಬೇಕು. ನಿನಗೂ ದೊರೆಗಳಿಗೂ ಹಿಂದಿನಿಂದ ಸಂಬಂಧ ಏನಾದರೂ ಇತ್ತೇ ಹ್ಯಾಗೆ?”

“ಇತ್ತು ಗುರುಗಳೆ. ನಮ್ಮ ಹಿರೇರು ಅರಮನೆ ಎಂಜಲು ಉಂಡು ಬಾಳಿದವರು. ನಾನೂ ಹಾಗೇ ಬೆಳೆದೆ. ಈಗ ದೊರೆ ಆಗಿದ್ದಾನಲ್ಲ, ಇವನ ತಂದೇ ದಿನದಲ್ಲಿ ನಮ್ಮ ಮನೆ ಜನ ಎಲ್ಲ ಅರಮನೆ ಊಳಿಗ ಮಾಡಿ ಬಾಳಿದರು. ಇವನ ತಂದೆ ದಿನಕ್ಕೇನೇ ಈ ಮೋಟಾರ್ ಕಾರ್ ಅನ್ನೋದು ಬಂತು. ಅರಸರು ಕುದುರೆ ಗಾಡೀಲಿ ಕುಳಿತು ಹೋಗೋದು ಅನ್ನೋದು ನಿಂತು ಹೋಯಿತು. ಅದರೂ ಅವರು ಹಬ್ಬ ಹುಣ್ಣಿಮೆ ಪರ್ವದ ದಿನದಲ್ಲಿ ಗಾಡಿಯಲ್ಲಿ ಕುಳಿತು ಗುಡಿಗೆ ಹೋಗೋದು, ಮದಿವೆಗೆ ಬರೋದು, ಮೆರವಣಿಗೆ ಹೋಗೋದು, ಇಂಥಾದ್ದ ಇಟ್ಟುಕೊಂಡಿದ್ದರು. ಅವರು ಹೋದರು; ಈ ಹುಡುಗ ದೊರೆ ಆದ; ಹಳೇ ಮಾತೆಲ್ಲ ಅಳಿಸಿ ಹೋಯಿತು. ಇವನ ಮದುವೆ ಆದ ದಿನ ಇವರ ತಂದೆ ಇವನ್ನ ಇವನ ರಾಣೀನ ಇಕ್ಟೋರಿಯಾದಲ್ಲಿ ಕುಳ್ಳಿರಿಸಿ, ಚಾವಣಿ ತಗ್ಗಿಸಿ, ಊರಿನ ಹತ್ತು ಬೀದೀಲಿ ಮೆರೆಸಿದರು. ಆ ಹೂವೇನು, ಆ ಗಂಧವೇನು? ಆ ಗುಡಿ ಆ ಬಾವುಟ ಏನು? ಆ ಬಾಣ ಆ ಬಿರುಸು ಏನು? ಊರು ಮಾತ್ರ ಅಲ್ಲ. ನಾಡಿನ ಹತ್ತು ಊರಿನಮಂದಿ ಬಂದು ಕಣ್ಣಿಗೆ ಹಬ್ಬಮಾಡಿಕೊಂಡರು. ಆಯಿತು. ಪಟ್ಟ ಕಟ್ಟಿದ್ದೆ ಈ ಅರಸ ಇವನ್ನ ಮೆರೆಸಿದ್ದ ಇಕ್ಟೋರಿಯಾ ಕೂಡ ಉಳಿಯದ ಹಂಗೆ ಹಿಂದಿನೋವು ಗಾಡಿ ಎಲ್ಲಾನೂ ಮಾರಿ ಮುಗಿಸಿಬಿಟ್ಟ. ಹಿಂದೆ ಅರಸ ಗಾಡೀಲಿ ಕುಳಿತಾಗ, ಹಿಂದೆ ಎರಡು ಕುದುರೆ ಮೇಲೆ ಪೋಷಾಕು ಹಾಕಿಕೊಂಡು ಇಬ್ಬರು ಸವಾರರು ಇರುತಾ ಇದ್ದರು. ಇವನು ಗಾಡಿಯಲ್ಲಿ ಕೂಡಲೇ ಇಲ್ಲ. ಮೋಟಾರ ಹಿಂದೆ ಸವಾರ ಏನು ಮಾಡೋದು? ಸವಾರರೂ ಇಲ್ಲ. ಕಾವಲೂ ಇಲ್ಲ. ಅರಸ ಅರಸಾಗಿ ಉಳಿಯಲಿಲ್ಲ. ಯಾವೋನೋ ಸಾವುಕಾರನಂತೆ ಆಗಿ ಬಿಟ್ಟ. ನಾವು ಹುಡುಗರಾಗಿದ್ದಾಗ ಅರಸರ ವೈಭವ ನೋಡಿ ಸಂತೋಷಪಟ್ಟೆವು. ನಮ್ಮ ಮಕ್ಕಳಿಗೆ ಆ ಪುಣ್ಯ ಇಲ್ಲ ಆಯಿತು. ಕುದುರೆ ಯಾವಾಗ ಇಲ್ಲ ಅವನ್ನ ನೋಡಿಕೊಳ್ಳುತ್ತಿದ್ದ ನನಗೆ ಕೆಲಸ ಇಲ್ಲ. ಅರಮನೆ ನಮ್ಮನ್ನ ಏನು ಮಾಡಿಕೊಬೇಕು? ನಮ್ಮ ತಂದಿತಾಯಿ ಮುದುಕರಾಗಿದ್ದರು. ಅವರಿಗೆ ಅರಮನೆ

ಮುಪ್ಪಿನ ಸಂಬಳ ಮೂರು ಹಣ ಕೊಡುತಿತ್ತು. ನನಗೆ ಸಂಬಳ ಬರಬೇಕೆಂದರೆ ನಾನು ದುಡಿಯಬೇಕು. ನಾನು ದುಡಿಯೋನೇ, ದುಡಿಯಲಾರೆ ಅನ್ನೋ ಮೈಗಳ್ಳ ಅಲ್ಲ. ಅಂದರೆ ಇವರು ನನಗೆ ಕಸ ಗುಡಿಸೋರ ಮೇಸ್ತ್ರಿ ಕೆಲಸಮಾಡು ಅಂದರು. ನನಗೆ ಒಲ್ಲೆ ಅನ್ನಿಸಿತು. ನಾನು ದಣಿಗಳಿಗೆ, 'ಮನ್ನಿಸಬೇಕು. ನಾನು ಕಲಿತಿರೋದು ಕುದುರೆ ಕೆಲಸ ಒಂದು. ಒಂದು ಕುದುರೇನ ಇಟ್ಟುಕೊಂಡು ಹೆಂಗೋ ಬದುಕಿಕೋತೀನಿ, ಅರಮನೆ ಊಳಿಗದಿಂದ ಬಿಟ್ಟುಕೊಡಿ,' ಅಂದೆ. 'ನಾವು ಹೇಳಿದ ಕೆಲಸ ನಿನ್ನ ಮರ್ಯಾದೆಗೆ ಕಡಿಮೆ ಆಯಿತಾ? ಆಗೋದಿಲ್ಲ ಅಂದರೆ ಬೇಡ. ನಿನಗೆ ಒಪ್ಪಿದ ಕೆಲಸ ಮಾಡಿಕೊಂಡು ಅನ್ನ ಗಳಿಸು ಹೋಗು,' ಅಂದರು. ಕೆಲಸದಿಂದ ಬಿಟ್ಟು ಕೊಡಿ ಅಂದಾಗ, ಬಾಳದಿನ ಸೇವೆ ಮಾಡಿದೋರಮಗ, ನಮ್ಮೊಂದಿಗೆ ಇರೋ ಅಂತ ಹೇಳೋಕೆ ಇವನಿಗೆ ತೋರಲಿಲ್ಲ. ಬಿಟ್ಟು ಕೊಡತಾ ನಾಲ್ಕು ಕಾಸು ಕೊಟ್ಟರು. ಕೈಲಿದ್ದ ಮೂರು ಕಾಸು, ಹೆಂಡತಿ ಒಡವೆ ಮಾರಿ ಆರು ಕಾಸು, ಸಾಲ ಅಂತ ಹತ್ತು ಕಾಸು, ಎಲ್ಲಾ ಸೇರಿಸಿ ಈ ಕುದುರೆ, ಈ ಗಾಡಿ ಕೊಂಡೆ. ನಡೆಸುತಾ ಇದ್ದೀನಿ. ಗಂಡ ಹೆಂಡತಿ ಅರೆ ಹೊಟ್ಟೆ ಉಂಡು ಹೆಂಗೋ ಮಕ್ಕಳಿಗೆ ಅನ್ನ ಹಾಕಿ ಬಡತನದ ಭಂಗ ಪಡತಾ ಇದೀವಿ. ಆದರೇನು ಸ್ವಾಮಿ. ಮನಸ್ಸಿಗೆ ಸಮಾಧಾನ ಇಲ್ಲ. ನಾನು ಕೆಟ್ಟೆ ಅಂತ ಅಲ್ಲ. ನಮ್ಮ ದೊರೆ ಮನೆ ಕೆಟ್ಟಿತೇ ಅಂತ. ನೋಡಿ, ದಣಿಗಳೇ, ಈ ದೊರೆ ಆದೋರ ಮನಸ್ಸು ದೊರೆಮನಸ್ಸು ಆಗದೇ ಇದ್ದರೆ ಈ ನೆಲದ ಮೇಲೆ ಬಾಳೋ ಜನದ ಪಾಡು ಕಡುಕಷ್ಟ. ನೋಡಿ, ಈ ಸಲ ಮಳೆ ಇಲ್ಲ. ಬೆಳೆ ಕೆಟ್ಟು ಹೋಯಿತು. ಬೂಮಿ, ಇಕೋ ನೋಡಿ, ಬಲ ಎಡ ಹೆಂಗಾಗದೆ. ಬೆಳೆ ಇಲ್ಲಲ್ಲಾ. ಆದರೂ ನೆಲಹಿಡಿದೋನು ಈ ಸರಕಾರಕ್ಕೆ ಕಂದಾಯ ತೆರಬೇಕು. ಸವಾಚಾರ್ ಬೆಳೆದು ಸಾಡೇ ಸಾತ್ ಕೊಡಬೇಕು. ಮನೇ ಮಂದೀನೆಲ್ಲಾ ಕೂಡಿಕೊಂಡು ಅಡೇವರ್ಷ ದುಡಿದ ರೈತನಿಂದ ಸರಕಾರ ಏನು ತಕ್ಕೊಳ್ಳಬಹುದು? ಅವನಿಗೆ ಅವನ ಹೆಂಡರಿಗೆ ಮನೆಮಕ್ಕಳಿಗೆ ವರ್ಷದ ಅಂಬಲಿಗೆ ಏನುಬೇಕೋ ಆದ ಬಿಟ್ಟು ಮೇಲೆ ಉಳಿದದ್ದನ್ನಲ್ಲವೆ ತಾ ಅನ್ನಬಹುದು? ದಿಟವಾಗಿ ಈ ತಗೊಳ್ಳೋದು ಬಿಡೋದು ಹಿಂಗದೆ; ತಗೊಳ್ಳೋದು ಚೆನ್ನಾಗಿ ಬೆಳೆದ ದಿನದಲ್ಲಿ ತಗೊಂಡದ್ದೆಷ್ಟೋ ಅಷ್ಟು. ಉಳಿದದ್ದು ಮನೆಮಂದಿಗೆ ಮೂರು

ತಿಂಗಳ ಗ್ರಾಸ ಅಲ್ಲ. ಮೂರು ತಿಂಗಳು ಊಟ ಮಾಡಿ ಇನ್ನು ಒಂಬತ್ತು ತಿಂಗಳು ಬದುಕೋದು ಹೆಂಗೆ? ಅಪ್ಪಾ ಇಷ್ಟು ತಕ್ಕೊಳ್ಳಬೇಡ, ನನಗೆ ಕಷ್ಟ ಆಗತದೆ ಅಂತ ರೈತ ಹೇಳಬೇಕು. ಯಾರಿಗೆ ಮಾಮಲೇದಾರನಿಗೆ. ಅವನದು ಒಂದೇ ಮಾತು. ದೊರೆಗಳ ಪಟ್ಟಿ ನಿನ್ನಿಂದ ಈಟು ಬರಬೇಕು ಅಂತ ಹೇಳಿದೆ. ಅಷ್ಟು ಕೊಡು. ನಾ ಹೊರಟೆ; ಕೊಡಲಿಲ್ಲ, ನಾ ನಿನ್ನ ಮನೆ ಒಳಕ್ಕೆ ಹೊಕ್ಕು ನಿನ್ನ ಪಾತ್ರೆ ಪದಾರ್ಥ ಹೊರಕ್ಕೆ ತಂದು ಹರಾಜು ಹಾಕೋನು. ಅದು ಬೇಡ ಅಂದೆ. ನಿನ್ನ ನೇಗಿಲನ್ನೋ ಎತ್ತನ್ನೊ ಹರಾಜು ಹಾಕಬೇಕು. ಅವನಷ್ಟಕ್ಕೆ ಅವನ ಮಾತು ಸರೀನೇ. ಅವನು ದೊರೇನ ಸುದಾರಿಸಿಕೋಬೇಕಲ್ಲ. ರೈತನ ಮಾತು? ಎತ್ತು, ನೇಗಿಲು, ಕಂದಾಯಕ್ಕೆ ಅಂತಾ ಹೋದರೆ ಗೇಮೆ ಏನು ಮಾಡೋದು? ಹೆಂಡರ ಮೈಮೇಲೆ ಬಟ್ಟೆ ಇಲ್ಲದಿದ್ದರೂ ಆಯ್ತು. ಸರಕಾರದ ಕಂದಾಯ ಕೊಡದೆ ಇರೋ ಹಂಗಿಲ್ಲ. ನಾಡ ಮಂದಿ ಈ ತ್ರಾಸ ಪಡತಾ ಅದೆ ಅನ್ನೋದು ದೊರೇ ಮನಸಿಗೆ ಬಂದಿಲ್ಲ. ಅವನದು ಏನಿದ್ದರೂ ತನ್ನ ಥಾಲೀಲಿ ಒಳ್ಳೇ ಊಟ ಇರಬೇಕು, ಇದಿರಿಗೆ ಮಡದಿ ನಗತಿರಬೇಕು. ಆಯಿತು. ತನ್ನ ಹಂಗೆ ರೈತನಿಗೂ ಸ್ವಲ್ಪಾನ ಇರೋದು ಬೇಕು ಅನ್ನೋದು ಇವನಿಗೆ ತಿಳಿಯಬಾರದೆ? ರೈತನ್ನ ಕೆಡಿಸಿ ಇಷ್ಟು ಕಾಸು ಸೇರಿಸೋದು ಯಾಕೆ? ನಾಡಿಗೆ ಒಳ್ಳೇದು ಮಾಡೋಕೆ ಅಂತ. ಒಳ್ಳೇದು. ನಮ್ಮನ್ನು ಕೆಡಿಸಿ ಸರಕಾರ ಕಾಸನ್ನ ಕೂಡಿಸಿತು. ಯಾವ ಒಳ್ಳೇದು ಮಾಡಿತು? ಕೆರೇನೇ? ಬಾವೀನೇ? ಸಾಲು ಮರವೆ? ತೋಪೆ? ಗುಡೀನೇ? ಗುಂಡಾರವೆ? ಯಾವುದೂ ಕಾಣೋಲ್ಲ. ಕಾಣೋದು ಏನು? ದೊರೆ ಚೆನ್ನಾಗಿ ಉಂಡು ತಿಂದು ಆಟ ಆಡಿಕೊಂಡು ದೊಡ್ಡ ಸರಕಾರಕ್ಕೆ ಕಪ್ಪ ತೆತ್ತುಕೊಂಡು, ದೊಡ್ಡವರು ನಾಲ್ಕು ಜನ ಬಂದರೆ ಅವರನ್ನ ನೋಡಿಕೊಂಡು ಪುಣ್ಯವಂತನ ಬಾಳು ಬಾಳೋದು. ಇದು ದೊರೆತನವೇ, ದಣಿಗಳೇ? ನಾಡ ಮಂದಿ, ಯಾವುದೋ ಕೆಲಸ ಮಾಡತೀವಿ, ನಾಲ್ಕು ಕಾಸು ಸಹಾಯ ಮಾಡಿ ಅಂದರೆ, ಈ ವೆಚ್ಚ, ಆ ವೆಚ್ಚ ಆಯಿತು, ಈ ಸಲ ಇಲ್ಲ, ಮುಂದಿನ ಸಲ ನೋಡೋಣ ಅಂತಾರೆ. ಆ ಮುಂದಿನ ಸಲ ಬರೋದಿಲ್ಲ ಬಿಡಿ. ಒಳ್ಳೇ ಕೆಲಸಕ್ಕೆ ಕಾಸಿಲ್ಲದೀರ ಇದ್ದರೂ ಇವರಿಗೆ ಯಾವುದೋ ಪೋಲಿಗೆ ಕಾಸುಂಟು. ಈ ಸಲ ಈ ದೊರೆ ವಿಲಾಯತಿಗೆ ಹೋಗಿ ಬಂದ. ವಿಲಾಯತಿಗೆ ಹೋಗೋದು ಬರೋದು ಅಂದ

ಮೇಲೆ ಎಷ್ಟು ಸಾವಿರ ರೊಕ್ಕ ವೆಚ್ಚ ಆಗಿರಬೇಕು? ವಿಲಾಯತಿಗೆ ಹೋಗಿ ಬಂದ ದೊರೆ ನೋಡೋಕೆ ಬಂದ ಮಂದಿಗೆ ತಾನು, ತನ್ನ ರಾಣಿ, ಇಷ್ಟು ಊರು, ಇಷ್ಟು ಮಂದಿ, ಇಷ್ಟು ಅರಮನೆ, ಇಷ್ಟು ಗೊಬ್ಬರ ನೋಡಿದಿವಿ ಅಂತ ಬಣ್ಣಿಸಿದ. ಅರಸು ತಂದಿ, ನಾಡ ಮಂದಿ ಮಕ್ಕಳು. ಪರಸೆಗೆ ಹೋದ ತಂದಿ ಮನೆಗೆ ಬಂದು, ನಾ ಪರಿಸಿ ನೋಡಿದೆ ಅಂತ ಮನೆ ಮಕ್ಕಳಿಗೆ ಹೇಳಿ ಸುಮ್ಮನಾಗತಾನಾ? ಬೆಂಡು ಬತ್ತಾಸು ತರತಾನೆ. ಕೊಳ್ಳಿ ಅಂತ ಕೊಡತಾನೆ. ಈ ತಂದಿ ಜಾತ್ರೆ ನೋಡಿದ್ದು ಆಸೇ. ಬೆಂಡಿಲ್ಲ ಬತ್ತಾಸಿಲ್ಲ. ಇವ ಯಾತರ ತಂದಿ? ನಾವು ಯಾತರ ಮಕ್ಕಳು? ತರಲ್ಲ ಬಿಡಿ ದಣಿಗಳೇ? ಸುತ್ತಿಕೊಂಡು ಬರೋದರಲ್ಲಿ ಸಾವಿರ ಸಾವಿರ ವೆಚ್ಚ ಮಾಡಿದ ಈ ತಂದಿ ಊರಿಗೆ ಬಂದೋನು ನಮ್ಮಂಥವರಿಗೆ ನಾಲ್ಕು ದುಡ್ಡು ಕೈಗೆ ಹಾಕಿ ಬೇಕಾದ್ದು ಕೊಳ್ಳಿರೋ ಅಂದಿದ್ದರೆ ನಮಗೆ ಏಸು ಸಂತೋಸ ಆಗತಿತ್ತು. ಕೊಟ್ಟ ನಾಲ್ಕು ದುಡ್ಡನ್ನ ನಾಲ್ಕು ವರಹ ಅಂತ ತಿಳಿದು ನಾವು, ದೊರೆ ತಂದಿ ಹೌದು ಅನ್ನತಾ ಇದ್ದಿವಿ. ಅನ್ನೋ ಪುಣ್ಯ ನಮಗಿಲ್ಲ. ಅನ್ನಿಸಿಕೋ ಪುಣ್ಯ ಇವನಿಗಿಲ್ಲ. ಇವನು ಹಿಂಗಾಗೋದಕ್ಕೆ ದಣಿಗಳೆ, ಇವನೇ ಹೊಣೆ ಅಲ್ಲ. ಇವನ ಹತ್ತಿರ ಒಬ್ಬ ಪ್ರಧಾನ ಇದ್ದಾನೆ. ಅಂದರೆ ನಾಡಿನ ಸರಕಾರಾನ ನಡೆಸೋನಲ್ಲ. ಇವನ ಹತ್ತಿರಕ್ಕೆ ಸೇರಿರೋ ಒಬ್ಬ ಮನುಷ್ಯ. ಮೊದಲು ಲಾಯದಲ್ಲಿ ಕಸಾ ಬಳೀತಾ ಇದ್ದೆ. ಈಗ ಕಿವಿ ಮಂತ್ರಿ ಆಗಿದಾನೆ. ಇವನು ಹೆಂಗೆ ಇಂಥ ದೊಡ್ಡೋನು ಆದ ನಾನು ಹೇಳೋದಿಲ್ಲ. ದೊಡ್ಡೋನಾಗಿದಾನೆ. ಆಗಿ ದೊರೆ ಬುದ್ದೀನ ಕೆಡಿಸತಾ ಇದ್ದಾನೆ. ಅವನು ಹೇಳಿದ್ದು ನಡೆಯುತ್ತಾ ಇದೆ. ಈ ದೊರೆ ಅಪ್ಪ ಹಿಂಗಿರಲಿಲ್ಲ. ಅವರ ದಾರೀನ ಬಿಟ್ಟ ಈ ಮಗ ದೊರೆ ಆಗಿ ಆದದ್ದೇನು? ತಂದೆ ಸತ್ತಾಗ ನಾಡ ಮಂದಿ ತಂದೆ ಹೋದನೇ ಅಂತ ಅತ್ತಿತು. ಮಗನ ನಡತಿ ನೋಡಿ, ಪರಮೇಶ್ವರಾ ಇವನಿಂದ ಬಿಡುಗಡೆ ಎಂದು ಅನ್ನತಾ ಇದೆ. ಕೆಟ್ಟ ಮಾತು ಅನ್ನತೀರಾ ದಣಿಗಳೆ? ಜನಕ್ಕೆ ಕಷ್ಟ ಕೊಟ್ಟರೆ ಜನ ಹಿಂಗನ್ನತದೆ. ಎಲ್ಲ ಜನ ಅಲ್ಲ. ಹತ್ತರಲ್ಲಿ ಒಬ್ಬ ಅಂತಾನೆ. ಇನ್ನೊಂಬತ್ತು ಜನ ಹೌದು ಅನ್ನದೆ ಆ ಮಾತನ ಒಪ್ಪತಾರೆ. ಆಯಿತು. ಇದರಿಂದ ದೊರೆಗಾದದ್ದೇನು? ಜನ ಅನ್ನತದೆ ಸರಿ. ಅಂದು ಮಾಡತದೆ ಏನು? ನಾಲಗೆ ಸಿಟ್ಟು ರಟ್ಟೆಯಾಗಿಲ್ಲ, ರಟ್ಟೆಯಾಗಿನ ಸಿಟ್ಟು, ಹೊಟ್ಟೆಯಾಗಿಲ್ಲ. ಮಾಡಿದ್ದನ್ನ

ಮಾಡಿಸಿಕೊಂಡು ಸುಮ್ಮಕೆ ಇರಬೇಕು. ಹೆಂಗೋ, ಆದ ಹಂಗೆ, ಬಾಳತಾ ದಿನ ಕಳೆಯಬೇಕು. ನಾನು ಈ ಅರಸನ ಹತ್ತಿರ ಇದ್ದಿ ಅಂದೆನಲ್ಲ, ಇವನ ತಾತನ ಹತ್ತಿರ ಅಷ್ಟು ವರ್ಷ, ಇವರ ತಂದೆ ಹತ್ತಿರ ಇನ್ನಷ್ಟು ವರ್ಷ ದುಡಿದೋನು ನಾನು. ಅಷ್ಟು ವರ್ಷದಲ್ಲಿ ಅವರ ಹತ್ತಿರ ಇರೋದು ಬ್ಯಾಡ ಅಂತ ಅನ್ನಿಸಲಿಲ್ಲ. ಇವನ ಹತ್ತಿರ ಮೂರು ವರ್ಷದ ಮೇಲೆ ಇರೋದು ನನ್ನಿಂದ ಆಗಲಿಲ್ಲ. ತಂದೆ ತಾತನ ಹತ್ತಿರ ದುಡಿದೋನು ಅನ್ನೋದೂ ಇವನ ಮನಸ್ಸಿಗೆ ತೋಚಲಿಲ್ಲ. ದಿಟ ಇಷ್ಟೇ. ಈ ಜನ ತನ್ನ ಜನ, ಇದು ಬದುಕಬೇಕು, ಅನ್ನೋದು ಇವನಿಗಿಲ್ಲ. ಅಷ್ಟೇ ಅಲ್ಲ. ಯಾವ ಮಂದಿ ಯಾವ ಕೆಲಸ ಮಾಡಬೇಕು, ಅನ್ನೋದೂ ಇವನಿಗೆ ತಿಳಿಯದು. ರಾಜ್ಯದ್ದು ಅಂತ ಒಂದು ಫೌಜು ಇದೆ. ಫೌಜಿನ ಜನಕ್ಕೆ ದಿನಾ ಏನು ಕೆಲಸ, ಸುಮ್ಮನೆ ಯಾಕೆ ಇರಬೇಕು, ಅಂತ ಇವನು ಆ ಜನಾನ ತನ್ನದು ಅನ್ನೋ ಭೂಮಿ ಬೇಸಾಯಕ್ಕೆ ಹೂಡಿದ್ದಾನೆ. ಫೌಜು ಫೌಜಾಗಿ ಇದ್ದರೆ ಇವನ ನೆಲದ ಕೆಲಸಾನ ಬೇರೆ ಜನ ಮಾಡಿ ನಾಲ್ಕು ಕಾಸು ಕೂಲಿ ತಕೊಂಡು ಬಾಳಬಹುದು. ಆ ಕೆಲಸಾನ ಫೌಜಿನ ಜನದಿಂದ ಮಾಡಿಸಿ, ಇವನು ಕಾಸು ಉಳಿಸೋಕೆ ಹವಣಿಸಿದ್ದಾನೆ. ಬೇಸಾಯದ ಕೆಲಸ ಮಾಡಿದ ಮೇಲೆ ಫೌಜಿನ ಜನ ಫೌಜಾಗಿ ಉಳೀತಾರೆಯಾ ದಣಿಗಳೆ? ಅರಸನಿಗೆ ಕಾಸು ಉಳಿಸೋಣ ಅಂತ ತೋರಿತು ಹೊರತು, ಫೌಜ ಫೌಜಾಗಿ ಉಳಿಯಲಿ ಅಂತ ತೋಚಲಿಲ್ಲ. ಜನ ಬಾಳಲಿ ಅನ್ನದ ದೊರೆ ದೊರೆ ಅಲ್ಲ ದಣಿಗಳೆ. ದೊರೆ ಆದೋನು ತನ್ನ ಜನಾನ ಬದುಕಿಸಬೇಕು. ಅವರು ಬದುಕಿದ್ದನ್ನು ನೋಡಿಕೊಂಡು ತಾನು ಬದುಕಬೇಕು. ಈಗ ನೀವೆಲ್ಲಾ ಎಷ್ಟು ದೂರದಿಂದ, ಎಲ್ಲೆಲ್ಲಿಂದ ಬಂದಿದ್ದೀರಿ; ಸಭೆ ನಡೆಸತಾ ಇದ್ದೀರಿ; ಬರೋದು ಎಷ್ಟು ಗಾಸಿ; ಇಲ್ಲಿ ಈ ದುಡಿಯೋದು ಎಷ್ಟು ಗಾಸಿ. ಇದನೆಲ್ಲ ಯಾಕೆ ಕಟ್ಟಿಕೊಂಡಿದೀರಿ? ನಮ್ಮ ಜನಕ್ಕೆ ಒಳ್ಳೆದಾಗಲಿ ಅಂತ ನಿಮ್ಮನ್ನ ನೋಡಿ ಇವನಿಗೆ ಬುದ್ದಿ ಬರಬಾರದೇ ದಣಿಗಳೇ? ಆನೆ ಆನೆ ಆಗಿ ಬಾಳಬೇಕು. ಒಂದು ಬಾರಿಗೆ ಸೇರಕ್ಕಿ ಎತ್ತಿಕೊಂಡು ಬಾಯಿಗೆ ಹುಯ್ಯಕೋಬೇಕು. ಹತ್ತು ಕಾಳು ಕೆಳಗೆ ಉದರತ್ತೆ, ಅದನ್ನ ಇರುವೆ ತಿನ್ನಬೇಕು. ಸೇರು ತಿನ್ನೋ ಆನೆ, ಇರುವೆಗೆ ಕಾಳು ಬಿಡೋದಿಲ್ಲ ಅಂದರೆ ಅದು ಆನೆ ಅಲ್ಲ. ಮೈ ಆನೇದು. ಬುದ್ದಿ ಇರುವೇದು.”

ಹುಸೇನ ಆಡಿದ ಮಾತನ್ನ ನನಗೆ ಜ್ಞಾಪಕ ಇರುವ ಮಟ್ಟಿಗೆ ಅವನ ಪದಗಳನ್ನೇ ಬಳಸಿ ಬರೆದಿದ್ದೇನೆ. ಹೆಂಡತಿ ಮೈ ಅನ್ನುವಾಗ ಮೈಗೆ ಬದಲಾಗಿ ಇವನು ಇವರಕಡೆ ವಾಡಿಕೆಯಾದ ಒಂದು ಅಶ್ಲೀಲ ಪದವನ್ನು ಬಳಸಿದೆ. ಅವನು ಅದನ್ನ ಬಳಸಿದಾಗ ನನಗೆ ಒಡನೆ ಅರ್ಥ ಆಗಲಿಲ್ಲ. ಏನು ಹೇಳಿದ ಅಂತ ಗೆಳೆಯರನ್ನ ಕೇಳಿದೆ. ಅವರು ಅದನ್ನ ಹೇಳಿದರು. ಉಳಿದಂತೆ ಮಾತೆಲ್ಲ ಸುಮಾರು ಅವನು ಹೇಳಿದ ಮಾತು.

ನಮ್ಮ ಸಮ್ಮೇಳನ ಮುಗಿದು ಮೂರು ದಿವಸದಲ್ಲಿ ನಾವು ಹಿಂದಕ್ಕೆ ಬಂದೆವು. ವರನನ್ನ ಹುಡುಕಿಕೊಂಡು ಹೋಗಿದ್ದ ನನ್ನ ಯತ್ನ ಫಲಿಸಿತು. ಆಮೇಲೆ ಮದುವೆ ನಡೆಯಿತು.

ಇದೆಲ್ಲ ನಲವತ್ತು ವರ್ಷಗಳ ಹಿಂದಿನ ಮಾತು. ಅಳಿಯಂದಿರಿಗೆ ಧಾರವಾಡದಲ್ಲಿ ಕೆಲಸ ಆಗಿ ನಾನು ತಿರುಗಿ ಈ ರಾಜಧಾನಿಗೆ ಹೋಗಬೇಕಾದ ಕಾರಣ ಏನೂ ಇಲ್ಲ ಆಯಿತು. ಅಳಿಯಂದಿರು ವಿಶ್ರಾಂತಿ ಪಡೆದು ತಮ್ಮ ಊರಿಗೆ ಹೋಗಿ ನಿಂತರು. ಈ ವರ್ಷ ತಮ್ಮ ತಂದೆಯವರ ದೇಹಸ್ಥಿತಿ ಸರಿಯಾಗಿಲ್ಲ ಎಂದು ಒಂದು ಕಾಗದದಲ್ಲಿ ತಿಳಿಸಿದರು. ನಾನು ಬೀಗರನ್ನ ವಿಚಾರಿಸಿಕೊಳ್ಳುವ ಮರ್ಯಾದೆ ನಡೆಸೋಕೆ ಅಂತ ನಮ್ಮ ಮನೆಯಾಕೆಯೊಡನೆ ಈ ಸ್ಥಳಕ್ಕೆ ಹೋದೆ.

ಸ್ಟೇಷನ್ ಬಳಿ ಅಳಿಯಂದಿರು ಒಂದು ಬಾಡಿಗೆ ಕಾರಿನೊಡನೆ ನಮ್ಮನ್ನು ನಿರೀಕ್ಷಿಸುತ್ತಿದ್ದರು. ಗಾಡಿಯ ಹತ್ತಿರ ಹೋಗುತ್ತಾ ಗಾಡಿನಡೆಸುವವನ ಮುಖ ನನಗೆ ನಾನು ಹಿಂದೆ ಕಂಡಿದ್ದ ಮುಖ ಎನಿಸಿತು. ಗಾಡಿಯಲ್ಲಿ ಕುಳಿತು ಅಳಿಯಂದಿರಿಗೆ ನಾನು ಹೀಗೆಂದು ಹೇಳಿದೆ. ಅವರು, “ನೀವು ಹಿಂದೆ ಬಂದಿದ್ದಾಗ ಇವರ ಅಜ್ಜನ್ನ ನೋಡಿರಬಹುದು. ಅವನು ಒಂದು ಟಾಂಗಾ ಇಟ್ಟಿದ್ದ. ಸ್ವಲ್ಪ ಮಾತನಾಡೋ ಮನುಷ್ಯ. ಅವನ ಗಾಡೀಲಿ ನೀವು ಕೂತಿದ್ದರೆ ಗಾಡಿ ನಡೆಸುತ್ತಾ ಇದ್ದಷ್ಟು ಹೊತ್ತು ನಿಮ್ಮ ಕಿವಿಗೆ ಎಂಥದೋ ಮಾತನ್ನು ತುಂಬಿ ಬಿಟ್ಟಾನು. ಇವನು ಅವನ ಮೊಮ್ಮಗ. ಮುಖದ ಚಹರೆ ಅದೇ,” ಎಂದರು. ನಾನು ಡ್ರೈವರನ್ನ “ನಿನ್ನ ಹೆಸರೇನಪ್ಪಾ” ಅಂತ ಕೇಳಿದೆ. “ಹುಸೇನ ಸ್ವಾಮಿ.” “ಟಾಂಗಾ ಹುಸೇನ ಸಾಬಿಯ ಮೊಮ್ಮಗನೇ ನೀನು?” “ಹೌದು ಸ್ವಾಮಿ.” “ಅಜ್ಜ ಸೌಖ್ಯವಾಗಿದ್ದಾರೋ?” “ಇದ್ದಾರೆ ಸ್ವಾಮಿ. ಮುಪ್ಪು, ಅಂದರೂ ಎಂದಿನಂತೆ

ಚುರುಕಾಗಿದ್ದಾರೆ.” “ತುಂಬಾ ಸಂತೋಷ, ನಲವತ್ತು ವರ್ಷದ ಹಿಂದೆ ಇಲ್ಲಿ ಬಂದಿದ್ದಾಗ ನಿನ್ನ ನೋಡಿದ್ದ ಒಬ್ಬ ಯಜಮಾನರು ನಿನ್ನ ಕಷ್ಟ ಸುಖ ವಿಚಾರಿಸಿದರು, ಊರಿಗೆ ಬಂದಿದ್ದಾರೆ, ಹೋಗಿ ನೋಡೋಕಾದರೆ ನೋಡು, ಅಂತ ಅಜ್ಜನಿಗೆ ಹೇಳು. ಬಾಳಾ ಜಾಣ ಹುಸೇನ್‌ಸಾಬ್, ಅವನೊಂದಿಗೆ ಮಾತನಾಡುವುದು ಚೆನ್ನಾಗಿರುತ್ತೆ.” “ಅಪ್ಪಣೆ ಸ್ವಾಮಿ.”

ಮಾರನೆಯ ದಿನ ಮುದುಕ ಬಂದ. ನಾನು ಬಾಗಿಲಲ್ಲ ನಿಂತಿದ್ದೆ. ಹುಸೇನ ಮುಪ್ಪಿನಿಂದ ಬಹಳ ಬೇರೆಯಾಗಿ ಕಾಣಲಿಲ್ಲ. ಅದೇ ಮುಖಮುದ್ರೆ. ಅದೇ ಸುಟಿ ಕಣ್ಣು. ಮರ್ಯಾದೆಯ ಮಾತಾದ ಮೇಲೆ, “ಬನ್ನಿ ಸಾಹೇಬರೆ ಕುಳಿತುಕೊಳ್ಳಿ. ನಲವತ್ತು ವರ್ಷದ ಹಿಂದೆ ನೋಡಿದ್ದೆ. ಮತ್ತೆ ನಿಮ್ಮನ್ನ ನೋಡತಾ ಇದೇನೆ. ಇದೇ ದೊಡ್ಡ ಸಂತೋಷ,” ಎಂದೆ.

“ನನಗೂ ಸಂತೋಷ ದಣಿಗಳೇ. ನೀವು ನನ್ನ ಬನ್ನಿ ಹೋಗಿ ಅಂತ ನುಡಿಸಬ್ಯಾಡಿ. ಬಾ ಹೋಗು ಅನ್ನುವುದೇ ಚೆನ್ನ. ನನಗೆ ನಿಮ್ಮನ್ನ ನೋಡಿದ್ದ ನೆನಪಿದೆ. ಇಲ್ಲಿ ಒಂದು ಸಭೆಗೆ ದಯಮಾಡಿಸಿದ್ದಿರಿ. ನಮ್ಮ ರಾಯರೊಂದಿಗೆ ನಿಮ್ಮನ್ನ ನಾನು ಗಾಡೀಲಿ ಹೊಳೆ ಬದಿಯವರೆಗೆ ಕರೆದುಕೊಂಡು ಹೋದೆ.”

“ಏನಯ್ಯ, ಎಷ್ಟು ಜನಾನ ಗಾಡಿಯಲ್ಲಿ ಕೂರಿಸಿಕೊಂಡು ಹೋಗಿರಬೇಕು, ಆ ಗಾಡಿ ಯಜಮಾನನಾದೋನು? ಇಂಥದರಲ್ಲಿ ನನ್ನ ನೆನಪಿರೋದು ಆಶ್ಚರ್ಯ.”

“ಎಲ್ಲರದೂ ನೆನಪು ಅಂತ ಅಲ್ಲ. ನೀವು ಆಗ ಊರ ಹಿರಿಯರ ಬೀಗರಾಗುತೀರಿ ಅಂತ ತಿಳಿಯಿತು. ಅದರಿಂದ ಇನ್ನೊಮ್ಮೆ ನೋಡಿ ನೆಪ್ಪಿಟ್ಟುಕೊಂಡೆ. ಆಗ ಮದುವೆಯಾದ ಹುಡುಗ ಊರುಬಿಟ್ಟು ಹೋಗಿದ್ದೋರು ತಿರುಗಿ ಸುಖವಾಗಿ ಬಂದಿದ್ದಾರೆ. ಆ ತಾಯಿ ನಿಮ್ಮ ಮಗಳನ್ನ ನೋಡಿದೆ. ಒಬ್ಬ ರಾಣಿ ಇದ್ದ ಹಂಗೆ ಇದಾರೆ. ಮೊಮ್ಮಗ ನೀವು ನನ್ನನ್ನ ನೋಡಬೇಕು ಅಂದಾಗಲೆ ನಾನು ನಿಮ್ಮನ್ನ ನೆನಕೊಂಡೆ.”

“ಸಂತೋಷ ಹುಸೇನ್ ಸಾಬ್. ನೀನು ಆ ಹೊತ್ತು ಆಡಿದ ಮಾತೆಲ್ಲ ನನಗೆ ಚೆನ್ನಾಗಿ ಜ್ಞಾಪಕ ಇದೆ. ಇಲ್ಲಿಯ ಜನರ ಕಷ್ಟಾನೆಲ್ಲ ಬಿಡಿಸಿ ಬಿಡಿಸಿ ಹೇಳಿದ ಮಾತು ನನಗೆ ಮೂರುದಿನದ ಹಿಂದೆ ಕೇಳಿದ ಮಾತು ಅನ್ನೋ ಹಾಗಿದೆ.”

“ಆ ಹೊತ್ತು ಆ ಕಷ್ಟ ಹಾಗಿತ್ತು ಸ್ವಾಮಿ. ತಾತ ತಂದೆ ನಡೆದ ದಾರಿ ಮರೆತ ನಮ್ಮ ದೊರೆ ತಪ್ಪು ದಾರಿ ಹಿಡಿದಿದ್ದ. ಕಷ್ಟಕ್ಕೆ ಸಿಕ್ಕಿದ ನಾವು ನಮ್ಮ ದುಃಖದಲ್ಲಿ ಅವನ್ನ ಬಯ್ದೆವು. ನಮ್ಮ ಬೈಗಳು ಹಣ್ಣಾಗ್ಗಿ ಅವನ್ನ ಹಾಳು ಮಾಡಿದವು ಅನ್ನೋ ಹಂಗೆ ಅವನು ರಾಜ್ಯ ಕಳಕೊಂಡ; ನಾಲ್ಕು ವರ್ಷದಲ್ಲಿ ಸತ್ತೂ ಹೋದ. ಈಗ ನನಗೆ ಅನ್ನಿಸುತ್ತಾ ಇದೆ, ನಾನು ಬೈದು ಅವನು ಸಾಯೋ ಹಂಗೆ ಮಾಡಿದೆ ಅಂತ. ಕಷ್ಟ ಕೊಟ್ಟು ಅವನು ಪಾಪ ಮಾಡಿದ. ಅವನ್ನು ಬೈದು ನಾವು ಪಾಪ ಮಾಡಿದ್ದಾಯಿತು.”

“ಹಾಗೆ ಅನ್ನೋಕೆ ಕಾರಣ ಇಲ್ಲ ಬಿಡು. ಅವನು ಕೆಟ್ಟ ದೊರೆ ಅಲ್ಲ, ಒಳ್ಳೆ ದೊರೆಯೇ ಆಗಿದ್ದ. ರಾಜ್ಯ ಉಳಿತಿತ್ತೇ? ನಮ್ಮದು ಮೈಸೂರು ರಾಜ್ಯ, ಅದರ ದೊರೆ ಕೆಟ್ಟವರಲ್ಲ. ಅವರ ರಾಜ್ಯಾನೂ ಹೋಯಿತು.”

“ಅಂದರೆ ಅವರಿಗೆ ದೊರೆ ಸಮನಾಗಿ ಗೌರ್ನರ್ ಪದವಿ ಕೊಟ್ಟಿದ್ದಾರಂತಲ್ಲಾ?”

“ಎಲಯ್ಯ. ನೀನಿಷ್ಟೆಲ್ಲಾ ತಿಳುಕೊಂಡಿದೀಯ?”

“ನನಗೆ ಬೇರೆ ಕೆಲಸ ಇಲ್ಲ, ದಣಿಗಳೆ! ನಮ್ಮ ಆ ದೊರೆ ತೀರಿಕೊಂಡ ಮೇಲೆ ಅವರ ಮಗ ಈಗ ದೊರೆಯಾಗಿರೋರು ನನಗೆ ಹೇಳಿ ಕಳುಹಿಸಿದರು. ನಾನು ಅರಮನೆ ಕೆಲಸದಿಂದ ಬಿಡಿಸಿಕೊಳ್ಳೋ ದಿನಕ್ಕೆ ಇವರಿಗೆ ಹತ್ತು ವರ್ಷ ಆಗಿತ್ತು. ಇವರೂ ನನ್ನ ಮಗ ಒಂದೇ ಪ್ರಾಯದ ಹೈಕಳು. ಅರಮನೆ ಬಿಟ್ಟು ಬರ್ತಾ ನಾನು ಈ ದೊರೆ ಮಗನಿಗೆ ಕೈ ಮುಗಿದು ನಾನು ನಾಳೆಯಿಂದ ಬರೋದಿಲ್ಲ ದೊರೆ, ನನ್ನ ಜ್ಞಾಪಕ ಇರಲಿ, ಅಂದೆ. ದೊರೆ ಮಗ, ಇರುತ್ತೆ ಹುಸೇನ, ಹೋಗಿ ಬಾ, ಅಂದರು. ಅದು ಏನು ನನ್ನ ಪುಣ್ಯಾನೋ, ಅವರ ಪುಣ್ಯಾನೋ, ನಾನು ತಮ್ಮನ್ನು ಬಿಟ್ಟು ಹೋಗೋದು ಇವರಿಗೆ ಇಷ್ಟ ಇರಲಿಲ್ಲ. ತಂದೆ ಅಪ್ಪಣೆ ಅಂತ ಇವರು ಒಪ್ಕೊಂಡಿದ್ದರು. ತಂದೆ ತೀರಿಕೊಂಡದ್ದೇ ಮನೆ ಯಜಮಾನ ಇವರು ನನಗೆ ಹೇಳಿ ಕಳಿಸಿದರು. ನಾನು ಹೋಗಿ ಎದುರಿಗೆ ಕೈ ಮುಗಿದು ನಿಂತೆ. ದೊರೆ

ಮಗ, 'ಹುಸೇನ ನೀನು ನಮ್ಮ ತಂದೇವರನ್ನ ಬಿಟ್ಟು ಆಗ ಹೋದದ್ದು ಚನ್ನ ಆಗಲಿಲ್ಲ. ಕಷ್ಟವೋ ನಿಷ್ಠೂರವೋ ಸಹಿಸಿಕೊಳ್ಳಬೇಕಾಗಿತ್ತು. ಆಯಿತು. ಈಗ ನೋಡು, ನಮ್ಮ ಅದೃಷ್ಟ ಇಳಿಮುಖ ಆಯಿತು. ದೊರೆಯಾಗಿದ್ದೋರು ಎಲ್ಲರಂತೆ ಆದರು. ದೊರೆ ಮಗ ಆಗಿದ್ದ ನಾನು ಊರ ಹತ್ತು ಮಂದಿ ಒಂದಿಗೆ ಹನ್ನೊಂದನೆಯವನಾಗಿದ್ದೇನೆ. ಅರಮನೆ ಆಗಿದ್ದದ್ದು ಈಗ ಬರಿ ಮನೆ ಆಗಿದೆ. ಒಂದು ಕಾಲದಲ್ಲಿ ಇಲ್ಲಿ ದುಡಿದವನು ನೀನು ತಿರುಗಿ ಇಲ್ಲಿಗೆ ಬಂದು ದುಡಿಯಬೇಕು. ಏನಂತಿ?' ಅಂದರು.

"ನನಗೆ ಸೆರೆ ಬಿಗಿಯಿತು ದಣಿಗಳೆ. ಹುಡುಗನ ಮುಖ ನೋಡಲಾರದೆ ಹೋದೆ. ಪಾಪಿಗಳು ನಾವು ಇವನ್ನ ಹೀಗೆ ಕೆಡಿಸಿದೆನೇ ಅಂತ ಹೊಟ್ಟೇಲಿ ದುಃಖ ಉಕ್ಕಿತು. ಗಳಗಳ ಅತ್ತುಬಿಟ್ಟೆ. ನಿಮ್ಮ ಪಾಡು ಹೀಗಾಗುವುದನ್ನ ನೋಡೋದು ನನ್ನ ಹಣೇಲಿ ಬರೆದಿತ್ತೇ, ಅಜ್ಜ ಮುತ್ತಜ್ಜನ ಪದವಿ ಮರಿ ಮಗನಿಗೆ ಇಲ್ಲವಾಯಿತೇ? ಅಳು ತಡಕೊಂಡು ನಾನು ಹೇಳಿದೆ: "ನನ್ನ ದಣಿ, ನಾನು ಈ ಮನೇನ ಬಿಟ್ಟು ಹೋಗಬಾರದಾಗಿತ್ತು. ಹೋದೆ ತಪ್ಪಾಯಿತು. ಈಗ ಮನೆ ತಿರುಗ ಕರೆದದೆ. ಇಕೋ ಬಂದಿದೀನೆ. ಈ ಉಸಿರಿರೋ ಅಷ್ಟು ದಿನ ನಿನ್ನ ಊಳಿಗ ಮಾಡತೇನೆ," ಅಂದೆ.

"ಅರಮನೆ ಅರಮನೆ ಆಗಿಲ್ಲ. ದೊರೆಮಗೆ ದೊರೆಮಗ ಅಲ್ಲ. ಅಂದರೂ ಅಜ್ಜ, ಮುತ್ತಜ್ಜ ಹೇಗೆ ದೊಡ್ಡ ಬಾಳು ಬಾಳಿದರು ಹಾಗೆ ಅವರ ಈ ಮರಿ ಮಗ ದೊಡ್ಡದಾಗಿ ಬಾಳತಾ ಇದ್ದಾನೆ. ನಾನುಹಿಂದೆ ದುಡಿದೆ ಅಂತ ದೊರೆ ನನಗೆ ಒಂದು ಪಿಂಛನ್ ಕೊಡುತ್ತಾ ಇದ್ದಾರೆ. ನಾಲ್ಕು ಕಾಸು ಗಳಿಸೋ ದಾರಿ ಮಾಡಿಕೊಂಡಿದ್ದಾರೆ. ನಾಲ್ಕು ಮೋಟಾರ್ ಕಾರು ಇಟ್ಟು ಬಾಡಿಗೆಗೆ ಕೊಡುತ್ತಾ ಇದ್ದಾರೆ. ನನ್ನ ಮೊಮ್ಮಗನ್ನ ಒಂದು ಗಾಡಿ ನಡಿಸೋ ಕೆಲಸಕ್ಕೆ ನೇಮಿಸಿಕೊಂಡಿದ್ದಾರೆ. ಆವತ್ತು ನಾನು ಇವರ ತಂದೇನ ಏನೇನು ಕೆಟ್ಟ ಮಾತು ಆಡಿ ಬೈದನೋ ಅದೆಲ್ಲ ತಪ್ಪು ಅಂತ ನಾನು ಕೆನ್ನೆ ತಟ್ಟಿಕೊಳ್ಳೋ ಹಂಗೆ ಮಾಡಿದ್ದಾನೆ ದೊರೆ. ದೊರೆತನ ಹೋಯ್ತು; ಹೋಗುತಾ ಒಳ್ಳೇತನಾನ ಇಟ್ಟು ಹೋಗ್ಯದೆ".

ಮುದುಕನ ಮಾತನ್ನ ಕೇಳಿ ನನಗೆ ತುಂಬ ಸಂತೋಷ ಆಯಿತು. ಇನ್ನು ಸ್ವಲ್ಪ ಹೊತ್ತು ಅವನನ್ನ ಕೂರಿಸಿಕೊಂಡು ಅದು ಇದು ಬೇರೆ ಮಾತನ್ನಾಡಿ, ಅವನಿಗೆ ಎಲೆ ಅಡಿಕೆ ಮರ್ಯಾದೆ ಕೊಟ್ಟು ಕಳುಹಿಸಿದೆ.

ಪದವಿಯ ಅಪಾಯ

ಈ ಬಾರಿ ನಾನು ಟಾಂಗಾ ಹುಸೇನ್ ಸಾಬಿ ಊರಿಗೆ ಹೋಗಿದ್ದಾಗ ಅವನು ಹಿಂದಿನ ದೊರೆಯನ್ನು ಕುರಿತು ಮಾತನಾಡುವಾಗ ಬೇರೆ ಒಬ್ಬ ದೊರೆಯ ಕತೆಯನ್ನು ಹೇಳಿದ.

* * * *

“ನಮ್ಮ ದೊರೆ ನಡೆಕೊಂಡದ್ದು ಚೆನ್ನಾಗಲಿಲ್ಲ ಅಂತ ಹಿಂದೆ ಒಂದು ದಿನ ನಾನು ನಿಮಗೆ ಅರಿಕೆ ಮಾಡಿದ್ದೆನಲ್ಲ. ಎಲ್ಲ ದೊರೆಗಳೂ ಹಿಂಗಲ್ಲ. ಅವರ ಅಜ್ಜ ಅವರಪ್ಪನೇ ಎಷ್ಟೋ ಚಂದಾಗಿ ಬಾಳಿದ್ದರು ಅಂತ ಹೇಳಿದೆ ನೋಡಿ. ಇರುತಾ ನಾಲ್ಕು ಜನದಲ್ಲಿ ಒಬ್ಬ ದೊರೆಯಾದೋನು ನಮ್ಮ ಈ ದೊರೆ ಹಂಗೆ ತಪ್ಪಿ ನಡೆಯುತ್ತಾನೆ. ಇದು ಅರ್ಧ ಮನುಷ್ಯನ ತಪ್ಪು, ಇನ್ನು ಅರ್ಧ ಪದವೀ ತಪ್ಪು.

“ಒಂದು ಸಭೆಗೆ ಅಂತ ನಿಮ್ಮ ಸೀಮೆಯಿಂದ ಸ್ವಾಮಿಗಳು ನೀವೆಲ್ಲ ನಮ್ಮ ಊರಿಗೆ ಆ ಬಾರಿ ಬಂದಿದ್ದಿರಲ್ಲ, ಅದರಾಚೆಗೆ ಹತ್ತು ವರುಷದಲ್ಲಿ ನಿಮ್ಮ ಸಭೆ ತಿರುಗಿ ಇತ್ತ ಸೇರಿತು. ಇಲ್ಲಿಗೆ ಬರುತಾ ದಾರೀಲಿ ಇರೋ ದೊಡ್ಡ ಊರಲ್ಲಿ. ನೀವೂ ಅದಕ್ಕೆ ಬಂದಿದ್ದಿರಿ. ನೆನಪಿದೆ ಅಲ್ಲ?”

ನಾನು ಜ್ಞಾಪಕ ಮಾಡಿಕೊಂಡೆ. ಅವನ ಮಾತು ದಿಟ. “ನಿಮ್ಮ ಪಕ್ಕದ ರಾಜ್ಯದ ಊರಲ್ಲ ನೀ ಹೇಳೋದು?”

“ಹೌದು, ಅದೇ. ನಾನು ಆ ಸಭೇಗೆ ಅಂತ ನಮ್ಮ ಊರಿನ ಹಿರಿಯರನ್ನ ಕರೆ ತಂದಿದ್ದೆ. ದೂರದಿಂದ ನಿಮ್ಮನ್ನ ನೋಡಿದೆ. ಹತ್ತು ವರುಷದ ಹಿಂದೆ ನಮ್ಮ ಊರಿಗೆ ಬಂದಿದ್ದೋರು ಅಂತ ಗುರ್ತೂ ಹಿಡಿದೆ.”

“ಎಲ! ಏನು ನೆನಪು ನಿನದು ಸಾಹೆಬ್! ನಾನು ಅಂತ ತಿಳಿದೂ ಮಾತನಾಡಿಸದೆ ಇದ್ದು ಬಿಟ್ಟೆಯಾ?”

"ನಾನೇನು ಬಹಳ ಅಂತ ನಿಮ್ಮಂತಾವರ ಹತ್ತಿರ ಬಂದು, ನಾ ಇಂತವನು ಅಂತ ನೆನವು ಹೇಳಿ ಮಾತನಾಡಲಿ, ಹಿರೇರೆ? ನೀವು ಜಗತಿಮೇಲೆ ಕುಂತಿರೋರು. ನಾನು ಕೆಳಗೆ ಕೂಡೋನು ಸಹಿತ ಅಲ್ಲ. ಆಚೇಲಿದ್ದು ಕೂತೋರನ್ನ ನೋಡೋನು. ಹೊರಗೆ ಕಂಡಿದ್ದರೆ ಕೈ ಮುಗೀತಿದ್ದೆ. ಯಾರು, ಎಲ್ಲೋ ನೋಡಿದ ಹಂಗದೆ, ಅಂದಿದ್ದರೆ, ಹೌದು ಕಂಡಿದ್ದಿರಿ, ಅಂತ ನೆನಪು ಕೊಡತಿದ್ದೆ. ಮಂಚದ ಮೇಲಿದ್ದವರು ನೀವು, ನನಗೆ ಕಂಡಿರಿ. ಪರಿಷೆಯಲ್ಲಿ ನಿಂತವನು ನಾನು ನಿಮಗೆ ಹೆಂಗೆ ಕಾಣಬೇಕು?"

"ಕಂಡಿದ್ದರೆ ನಾನು ನಿನ್ನ ಮಾತನಾಡಿಸತಿದ್ದ ಹುಸೇನ್ ಸಾಬ್."

"ಅದು ದಿಟ ಹಿರೇರೆ, ಆ ಊರಿಂದು ದೊರೆ ಮನೆತನ ಒಂದು ಉಂಟಲ್ಲ. ಅದರ ಒಬ್ಬ ದೊರೇದು ಬುದ್ದಿಗೇಡಿತನದ್ದು ಕತೆ ಹೇಳತಾರೆ. ನಮ್ಮದೊರೆ ಒಬ್ಬನೇ ಅಲ್ಲ ಬುದ್ದಿಗೇಡಿ, ಅವನ ಜೊತೇ ಜನ ಇಂಥಾವರು ಬೇರೆಯವರೂ ಇದ್ದದುಂಟು ಅಂತ ಹೇಳೋಕೆ ಈ ಮಾತು ಎತ್ತಿದೆ."

"ಪಕ್ಕದ ಆ ರಾಜ್ಯದ ದೊರೇನೋ ಅವನು?"

"ಹೌದು. ನೂರು ವರ್ಷಕ್ಕೆ ಹಿಂದಿನ ಮಾತು. ಆಗ ಈ ರಾಜ್ಯಗಳು ಹೊಸದಾಗಿ ಹುಟ್ಟಿಕೊಂಡಿದ್ದವು. ಈ ಸಂಗತಿ ನಿಮಗೆ ತಿಳಿದಿರಬೇಕಲ್ಲ?"

"ಬಿಡಿಸಿಹೇಳು. ನನಗೆ ತಿಳಿದಿರೋ ಸಂಗತೀನೇ ಹೇಳತೇನೆ."

"ಈ ರಾಜ್ಯ ಇವೆಲ್ಲಾ ಇವೆಯಲ್ಲಾ ಸ್ವಾಮಿ, ಐದಾರು ಪುಡಿರಾಜ್ಯ, ಪುಡಿ ರಾಜ್ಯ ಆರು, ಪುಡಿರಾಜರು ಆರು; ಇವರೇನು ಆಳೋಮಂದೀನಾ? ಬ್ರಾಮ್ಮರು. ದೇವರ ಅಂಶದ ದೊರೆ ಇದ್ದ, ಶಿವಾಜಿ ಮಾರಾಜ. ಬರೇ ಒಬ್ಬ ಸರದಾರನ ಮಗ, ಧೀರ; ಬಾದಶಹನಿಗೆ ಸುಲ್ತಾನನಿಗೆ ಎದುರುಬಿದ್ದ. ರಾಜ್ಯ ಕಟ್ಟಿದ, ಮಾರಾಜ ಆದ. ಅವನ ಮಗ ಮೊಮ್ಮಗ ಸುಖವಾಗಿ ಉಂಡರು, ಬೆಳೆದರು. ರಾಜ್ಯ ನಡೆಸೋಕೆ ಛಾತಿ ಇಲ್ಲ. ಅವರ ಮಂತ್ರಿಗಳಾಗಿದ್ದ ಬ್ರಾಮ್ಮಣರು ರಾಜನಿಗಿಂತ ದೊಡ್ಡೋರಾದರು. ನಾವೇ ರಾಜರು ಅಂದರು, ರಾಜನ್ನ ಗೊಂಬೆ ಮಾಡಿದರು. ಈ ರಾಜರ ಹೆಣ್ಣು ಮಕ್ಕಳನ್ನ ಮದುವೆಯಾದೋರು ಮಾವನಮನೆ ಅಧಿಕಾರ ನಡೆಸುತಾ ಹತ್ತು ನಾಡಿನಲ್ಲಿ ದಳವಾಯಿ

ಆಗಿ ನಿಂತರು. ಪರಂಗಿ ಬಂದ. ಪೇಳ್ವೆ ಮನೇನ ಮುರಿದ. ಆಗ ಈ ಜನ, 'ನಮ್ಮ ನಮ್ಮ ನಾಡಿನಲ್ಲಿ ನಾವುರಾಜರು, ನಮ್ಮನ್ನ ನಡೆಸಿ. ನಾವು ನಿಮಗೆ ಕಪ್ಪ ಕೊಡುತೀವಿ' ಅಂದರು. ಪರಂಗಿಯವರು ನೂರು ನಾಡಿನಲ್ಲಿ ತಮ್ಮವರು ನೂರುಜನಾನ ನಾಯಕರಾಗಿ ನಿಲ್ಲಿಸೋಕೆ ಆದೀತಾ? ಒಳ್ಳೆಯದಾಯಿತು ಅಂದರು. 'ನಮ್ಮ. ಕೈ ಕೆಳಗಿರಿ, ನಮ್ಮ ಮಾತು ನಡಸಿ, ನಿಮ್ಮನ್ನ ರಾಜರು ಅಂತ ಕರೆಯುತೀವಿ, ಕಪ್ಪಕೊಡಿ, ಜನಾನ ಚೆನ್ನಾಗಿ ನೋಡಿಕೊಳ್ಳಿ, ನೋಡಿಕೊಳ್ಳಲಿಲ್ಲ ಅಂತ ದೂರು ಬಂದರೆ ನಿಮಗೆ ಒಳ್ಳೇದಾಗೋಲ್ಲ. ಎಚ್ಚರ!' ಅಂದರು. ಆ ಹುಲಿ ಎದುರಿಗೆ ಈ ಕಾಡು ಬೆಕ್ಕು ಎಲ್ಲ, 'ಅಪ್ಪಣೆ, ಅಪ್ಪಣೆ,' ಅಂದುವು; ಪುಟ್ಟ ಪುಟ್ಟ ಹುಲಿ ಆದುವು. ಜನಿವಾರ ಹಾಕ್ಕೊಂಡು ದರ್ಬೆ ಹಿಡಕೊಂಡು ಬ್ರಾಮ್ಮಣನಾಗಿರಬೇಕಾದವನು, ಗಾದೀಮೇಲೆ ಕೂತು ಕತ್ತಿ ಹಿಡಿದು ದೊರೆ ಅಂತ ಕರಕೊಂಡರೆ ಏನಾಯಿತು ಸ್ವಾಮಿ? ದೊರೆ ಆದಾನ? ಹೊರಗಿನೋನು ಮೇಲೆ ಇದ್ದು ದೇಶದಲ್ಲಿ ಗಲಭೆ ಇಲ್ಲದೆ ನೋಡಿಕೊಂಡ. ಇವರು ಈ ಪುಡಿ ರಾಜ್ಯಗಳಲ್ಲಿ ಪುಡಿರಾಜರಾಗಿ ಸುಖವಾಗಿ ಊಟಮಾಡುತಾ ದಿನ ನೂಕಿದರು.

"ಪಕ್ಕದ ರಾಜ್ಯ ಹೊಸದಾಗಿ ರಾಜ್ಯ ಆಗಿನಿಂತ ದಿನದಲ್ಲಿ ಅದಕ್ಕೆ ರಾಜನಾಗಿ ಮಂತ್ರಿ, ದೊರೆಯ ಅಳಿಯ, ಒಬ್ಬ ಇದ್ದ. ಅವನೇ ಹೊಸದೊರೆ. ನೀವು ಹೇಳೋಹಂಗೆ ವಂಶದ ಮೂಲಪುರುಷ. ಅವನಿಗೆ ಮಧ್ಯವಯಸ್ಸು. ಒಬ್ಬ ಹೆಂಡತಿ ಇದ್ದರು, ಇಬ್ಬರು ಮಕ್ಕಳು. ಹೆಂಡತಿ ರಾಣಿ, ಮಕ್ಕಳು ರಾಜಕುಮಾರರು. ಯಜಮಾನ ದೊರೆ ಅಂದ ಮೇಲೆ ಹೆಂಡತಿ ರಾಣಿ, ಮಕ್ಕಳು ರಾಜಕುಮಾರರು.

"ರಾಣಿ ತುಂಬ ಚೆಲುವೆ. ರಾಜನಿಗೆ ಅವಳು ಅಂದರೆ ಪೂರಾ ಮೋಹ. ಅವಳು ಏನು ಬಯಸಿದರೆ ಅದನೆಲ್ಲಾನೂ ಮಾಡಿಕೊಡೋನೇ. ಆ ಊರಿನ ಪಕ್ಕದಲ್ಲಿ ದೊಡ್ಡ ಹೊಳೆ ಇದೆ ನೋಡಿ. ಅದರ ಬದೀಲಿ ಒಬ್ಬ ಸ್ವಾಮಿ ಒಂದು ಆಶ್ರಮ ಮಾಡಿಕೊಂಡು ಇದ್ದ. ಊರಿನ ಹತ್ತು ಜನ ಹಿರೇರು ಸ್ವಾಮೀನ ನಡೆಸಿಕೊಳ್ಳುತ್ತಿದ್ದರು. ಆಶ್ರಮ ಇದ್ದ ಆ ತಾವು ಈ ಸ್ವಾಮಿ ಮಾಡೋ ಜಪಕ್ಕೆ ಸ್ನಾನಕ್ಕೆ ತುಂಬ ಅನುಕೂಲವಾಗಿತ್ತು. ಅಲ್ಲಿ ಹೊಳೆ ಸ್ವಲ್ಪ, ದಡದ ಒಳಕ್ಕೆ ಬಂದು ತಿರುಗಿ ಅಷ್ಟು ದೂರದಲ್ಲಿ ಹಿಂದಕ್ಕೆ ಹೋಗೋದು; ಮಧ್ಯೆ ನೀರು

ಒಳ್ಳೇ ಒಂದು ಹೊಂಡ. ಆಶ್ರಮ ಅಲ್ಲಿ ಯಾವಾಗಿಂದ ಇತ್ತೋ ಯಾರೂ ಕಾಣರು. ರಾಣಿ ಒಂದು ದಿನ ಹೊಳೇಲಿ ಸ್ನಾನ ಮಾಡೋಕೆ ಅಂತ ಹೊರಟು, ಜನಕ್ಕೆ ಕಾಣದಂತೆ ಮರೆಯಾಗಿರುವ ಒಂದು ತಳ ಹುಡುಕುತ, ಈ ಹೊಂಡದ ಬಳಿಗೆ ಬಂದಳು. ಇದೇನು! ತನಗೆ ಅಂತಲೇ ಆಗಿರುವ ಒಂದು ಹೊಂಡ ಅಂತಲೇ ಅವಳಿಗೆ ಕಂಡಿತು. ಅಲ್ಲಿ ನಿಂತಳು. ನೀರಲ್ಲಿಳಿದು, ಮಿಂದು ಅರಮನೆಗೆ ಬಂದಳು.

"ತಿಂಗಳ ದಿನ ಕಳೆದಿದೆ. ತಿರುಗಿ ಒಂದು ಪರ್ವದ ದಿನ; ರಾಣಿ ಹೊಳೇಲಿ ಮೀಯಬೇಕು ಅಂದುಕೊಂಡಳು. ಹಿಂದಿನ ಸಲ ಆಕೆ ಮಿಂದಿದ್ದ ತಳದಲ್ಲಿ ಇನ್ನಷ್ಟು ಮರೆ ಇರೋಹಾಗೆ ತಡಿಕೇನ ತಂದು ಕಟ್ಟಿ ಅಂತ ಅರಮನೆಯವರು ಜನಾನ ಕಳಿಸಿದರು.

"ಆ ಜನ ಬರೋ ವೇಳೆಗೆ ಸ್ವಾಮಿಗಳು ಅಲ್ಲಿ ಸ್ನಾನಕ್ಕೆ ಇಳಿದಿದ್ದರು. ಯಾರಪ್ಪಾ ನೀವು ಅಂತ ಕೇಳಿದರು. ಜನ, 'ರಾಣಿಯವರು ಇಲ್ಲಿ ಸ್ನಾನ ಮಾಡೋಕೆ ಬರತಾರೆ. ಸ್ನಾನಕ್ಕೆ ಅಂತ ಒಂದು ಮರೆಕಟ್ಟಿ ಅಂತ ಕಳಿಸಿದ್ದಾರೆ. ಕಟ್ಟೋಕೆ ಬಂದಿದ್ದೇವೆ,' ಅಂದರು. ಸ್ವಾಮಿಗಳ ಶಿಷ್ಯ ಹತ್ತಿರ ಇದ್ದವರು ಅಲ್ಲಿಗೆ ಬಂದರು. ಇವರ ಮಾತನ್ನು ಕೇಳಿ 'ಅಪ್ಪಾ, ಇದು ಈ ಆಶ್ರಮದ ಹೊಂಡ. ಸ್ವಾಮಿಗಳು ಇಲ್ಲಿಯೇ ಸ್ನಾನಮಾಡತಾರೆ. ದಡದ ಮೇಲೆ ಕುಳಿತು ಜಪ ಮಾಡತಾರೆ. ರಾಣಿಯವರು ಇದನ್ನು ತಗೊಳ್ಳೋದು ಬ್ಯಾಡ ಅಂತ ಹೇಳಿದೆವು ಅಂತ ತಿಳಿಸಿ,' ಎಂದರು. ಸ್ವಾಮಿ ಏನೂ ಹೇಳಲಿಲ್ಲ. ಜನ ಹೋಗಿ ರಾಣಿಗೆ ಹೇಳಿದರು. ಆಕೆಗೆ ಕೋಪವೋ ಕೋಪ. 'ಊರಿನ ಬದಿಗೆ ಹರಿಯೋ ಹೊಳೇಲಿ ಯಾರು ಎಲ್ಲಿ ಬೇಕಾದರೂ ಸ್ನಾನ ಮಾಡಬಹುದು. ತಾನೇ ಆಗಿರುವ ಒಂದು ಹೊಂಡಾನ, ನನ್ನ ಹೊಂಡ ಅನ್ನೋದಕ್ಕೆ ಈ ಸ್ವಾಮಿ ಯಾರು? ಅಲ್ಲಿ ಸ್ನಾನ ಮಾಡತೇನೆ ಅನ್ನೋದು ನಾನು ರಾಣಿ. ನಾನು ಸ್ನಾನ ಮಾಡತೇನೆ ಎಂದರೆ ನೀನು ಇಲ್ಲಿಗೆ ಬರಕೂಡದು ಅಂತ ಯಾರು ಹೇಳೋರು? ಹೋಗಿ, ಮರೆಕಟ್ಟಿ ಹೋಗಿ. ನಾ ಹೇಳಿದೆ ಅಂತ ಸ್ವಾಮಿಗಳಿಗೆ ತಿಳಿಸಿ,' ಎಂದರು. ಆಹೊತ್ತು ಈ ಜನ ಹೋಗಿ ಮರೆಕಟ್ಟಿದರು. ರಾಣಿ ಹೋಗಿ ಸ್ನಾನ ಮಾಡಿಕೊಂಡು ಬಂದರು.

"ಸ್ನಾನ ಮಾಡಿಕೊಂಡು ಬಂದದ್ದೇ, ರಾಣಿಗೆ ತೋರಿತು. ಇನ್ನೊಂದು ಸಲಕ್ಕೆ ಇಷ್ಟೆಲ್ಲಾ ಮಾತು ಬರಬಾರದು. ಸ್ವಾಮೀನ ಈ ಸ್ಥಳದಿಂದ ಬಿಡಿಸಿ ಬೇರೆ ಕಡೆ ಕಳಿಸಬೇಕು. ಇದನ್ನ ತಾನು ಹೇಳುವಂತಿಲ್ಲ. ದೊರೆ ಕೈಲಿ ಹೇಳಿಸಬೇಕು.

"ಆಹೊತ್ತೇ ಅವಳು ದೊರೆಗೆ ಈ ಮಾತನ್ನು ತಿಳಿಸಿದಳು. ದೊರೆ ಮನೆ ವಾರ್ತೆ ಮಣಿಯನ್ನ ಕರೆದು, 'ಹೊಳೆ ಬದೀಲಿ ಆಶ್ರಮ ಇದೆಯಂತೆ. ಅಲ್ಲಿ ಒಬ್ಬ ಸ್ವಾಮಿ ಇದಾರಂತೆ. ರಾಣಿ ಅದರ ತಗ್ಗಿಗಿರುವ ಹೊಂಡ ತಮಗೆ ಸ್ನಾನಕ್ಕೆ ಅನುಕೂಲವಾಗಿದೆ, ಸ್ವಾಮಿ ಅದನ್ನ ನನಗೆ ಬಿಟ್ಟು ಕೊಡಬೇಕು ಅಂತಿದಾರೆ. ಸ್ವಾಮಿ ಆಶ್ರಮಾನ ಬೇರೆ ಕಡೆ ಮಾಡಿಕೊಳ್ಳಲಿ. ಅವರಿಗೆ ಸ್ಥಳ ಹುಡುಕಿ ತಿಳಿಸಿದರೆ ನಾವು ಆಶ್ರಮ ಕಟ್ಟಿ ಕೊಡುತೇವೆ ಅಂತ ಹೇಳಿ,' ಎಂದು ಅಪ್ಪಣೆ ಮಾಡಿದ.

"ಮನೆ ವಾರ್ತೆಯವನು, ರಾಣಿಯರು ಬಹಳ ಅಂದರೆ ವರ್ಷದಲ್ಲಿ ಹತ್ತು ದಿವಸ ಹೊಳೆಗೆ ಹೋದಾರು. ಅದಕ್ಕಾಗಿ ಸ್ವಾಮಿಗಳನ್ನ ಬೇರೆ ಕಡೆಗೆ ಆಶ್ರಮ ಮಾಡಿಕೊಳ್ಳಿ ಅಂತ ಯಾಕೆ ಹೇಳಬೇಕು? ರಾಣಿಯವರು ಬಳಸಬೇಕು ಅಂದ ದಿನ ಹೊಂಡಾನ ನಮಗೆ ಬಿಟ್ಟು ಕೊಡಿ ಅಂತ ಹೇಳಿದರೆ ಸಾಕಲ್ಲ," ಎಂದ. ದೊರೆ, "ಅದೂ ಸರಿಯೇ. ರಾಣಿಯವರನ್ನ ಇದಾಗಬಹುದೇ ಅಂತ ಕೇಳಿ," ಅಂದ.

"ಮನೆವಾರ್ತೆ ರಾಣಿಯವರನ್ನ ಕೇಳಿದ. ಅವರು, 'ಈಗ ಇರುವಂತೆ ವರ್ಷದಲ್ಲಿ ಹತ್ತು ದಿನ ಅನ್ನಬಹುದು. ಸ್ಥಳ ಚೆನ್ನಾಗಿದೆ ಅಂತ ಇನ್ನು ಹತ್ತು ದಿನ ಅಲ್ಲಿಗೆ ಹೋಗೋಣ ಅನ್ನಿಸಿದರೆ ಒಂದೊಂದು ಸಲವೂ ಸ್ವಾಮಿ ಅಪ್ಪಣೇನ ಕೇಳೋಕೆ ಆಗುತ್ತೆಯೇ? ಹೊಂಡಾನ ನಮ್ಮ ವಶಕ್ಕೆ ತಗೊಳ್ಳೋದೇ ಸರಿ. ಹೆಂಗಸರ ಸ್ನಾನಕ್ಕೆ ಮರೆ ಹೊರಚ್ಚು ಇರಬೇಕು. ಸ್ವಾಮಿ ಎಲ್ಲಿ ಸ್ನಾನ ಮಾಡಿದರೆ ಬೇಡ ಅಂದೀತು? ಆಶ್ರಮಾನ ಬೇರೆ ಕಡೆಗೆ ಕಳಿಸೋದೇ ಸರಿ,' ಎಂದರು.

"ಇದು ದೊರೆಗೆ ವರದಿ ಆಯಿತು. ದೊರೆ, 'ನಾ ಆಗಲೇ ಹೇಳಿದೆನಲ್ಲಾ, ಹಾಗೇಂತ ಸ್ವಾಮಿಗಳಿಗೆ ಅರಿಕೆಮಾಡು,' ಎಂದ.

“ಸ್ವಾಮಿಗಳು ಒಪ್ಪಲಿಲ್ಲ. ‘ಆಶ್ರಮ ಎಷ್ಟೋ ಕಾಲದಿಂದ ಇಲ್ಲಿ ಇದ್ದಿದೆ. ಅರಮನೆಯ ಮಂದಿ ಅನುಕೂಲ ಬಹಳ ಮುಖ್ಯ. ಅಡ್ಡಿ ಇಲ್ಲ. ಅವರು ಬೇಕಾದಾಗ ಹೊಂಡಾನ ಬಳಸಲಿ. ಮರೆಗಿರೆ ಬೇಕೂಂದರೆ ಕಟ್ಟಿಸಿಕೊಳ್ಳಲಿ. ಆಶ್ರಮಾನ ಇಲ್ಲಿಂದ ಕಳಚುವುದು ಬೇಡ. ನಾವು ಕೇಳಿಕೊಂಡೆವು ಅಂತ ಪ್ರಭುಗಳಿಗೆ, ರಾಣಿಯವರಿಗೆ ಹೇಳಿ,’ ಎಂದರು.

ರಾಣಿ ಇದಕ್ಕೆ ಒಪ್ಪಲಿಲ್ಲ. ಎಂದಮೇಲೆ ರಾಜರು ಒಪ್ಪೋಹಂಗಿಲ್ಲ. ರಾಜರು ಆಗೋದಿಲ್ಲ ಅಂತ ಹೇಳಿಕಳುಹಿಸಿದರು.

“ಮಾರನೆಯದಿನ ಸ್ವಾಮಿ ತನ್ನ ಶಿಷ್ಯನ್ನ ತಮ್ಮ ಪರವಾಗಿ ದೊರೆಗೆ ಒಂದು ಅರಿಕೆ ಮಾಡೋಕೆ ಕಳುಹಿಸಿದರು. ‘ಅರಮನೆಯ ಮಂದಿ ಹೊಂಡಾನ ಬೇಕಾದಾಗ ಬೇಕಾದಂತೆ ಉಪಯೋಗಿಸಲಿ. ಅವರು ಬಳಸುವ ವೇಳೆಯಲ್ಲಿ ನಾವು ಅಲ್ಲಿ ಹತ್ತಿರ ಹೋಗುವುದಿಲ್ಲ. ನಮಗೆ ಈಗ ಇರುವ ಸ್ಥಳ ಅನುಕೂಲವಾಗಿದೆ. ಬಹುಕಾಲದಿಂದ ಒಗ್ಗಿದೆ. ಇದನ್ನು ಬಿಟ್ಟು ಹೋಗಿ ಎಂದು ಅಪ್ಪಣೆ ಮಾಡುವುದು ಬೇಡ. ಇಷ್ಟನ್ನು ತಿಳಿಸಿ ನಾವಿಲ್ಲಿ ನಿಲ್ಲಬಹುದು ಎಂದು ಅಪ್ಪಣೆಯನ್ನು ಪಡೆದು ಬಾ, ಮಾತು ಏನೇ ಆದರೂ ನಯ ತಪ್ಪಬಾರದು. ಕೋಪ ತಾಪದ ಗೋಜು ಬೇಡ.’

“ಶಿಷ್ಯ, ‘ಅಪ್ಪಣೆ ಸ್ವಾಮಿ,’ ಎಂದ. ದೊರೆಯ ಬಳಿಗೆ ಬಂದ. ‘ಸ್ವಾಮಿಗಳ ಕಡೆಯಿಂದ ಯಾರೋ ಬಂದಿದ್ದಾರೆ. ಪ್ರಭುಗಳನ್ನು ಕಾಣಬೇಕು ಎನ್ನುತ್ತಾರೆ,’ ಎಂತ ಸೇವಕ ದೊರೆಗೆ ತಿಳಿಸಿದ. ‘ಬರಹೇಳು’. ಶಿಷ್ಯ ದೊರೆಯ ಬಳಿಗೆ ಹೋದ. ದೊರೆಗೆ ನಮಸ್ಕಾರ ಮಾಡಿದ. ದೊರೆ ‘ಏನಯ್ಯ ನೀವು ಬಂದಿರೋದು? ಸ್ವಾಮಿ ಕಳಿಸಿದರೆ?’ ಎಂದ. ಶಿಷ್ಯ; ‘ಹೌದು. ಒಂದರಿಕೆ ಮಾಡು ಅಂತ ಕಳಿಸಿದಾರೆ.’ ‘ಏನು ಅರಿಕೆ?’ ಶಿಷ್ಯ ಎಲ್ಲವನ್ನೂ ವಿವರವಾಗಿ ಹೇಳಿದ. ‘ಸ್ವಾಮಿಗಳನ್ನ ಆ ಸ್ಥಳದಿಂದ ಬೇರೆ ಸ್ಥಳಕ್ಕೆ ಹೋಗು ಎಂದು ಹೇಳುವುದು ಮಾತ್ರ ಬೇಡ. ಅಷ್ಟೇ ಅವರ ಪ್ರಾರ್ಥನೆ.’

‘ಅಯ್ಯ, ರಾಣಿಯವರು ತಮ್ಮ ಸ್ನಾನಕ್ಕೆ ಅನುಕೂಲವಾದ ಸ್ಥಳ ಅಂತ ಹೊಳೇದಡದ ಒಂದು ಭಾಗವನ್ನು ಬಯಸಿದರೆ, ಸ್ವಾಮಿ ಅದಕ್ಕೆ ಅಡ್ಡಿ ಹೇಳಬಹುದೇ? ಹೆಣ್ಮಕ್ಕಳು

ಸ್ನಾನಮಾಡೋ ಸ್ಥಳದ ಮೇಲುಗಡೆ ಬದೀಲಿ ನಾವು ಇರತೇನೆ ಅನ್ನಬಹುದೆ? ಇದೇನೋ ಹುಚ್ಚರ ಮಾತು ಆಗಿದೆಯಲ್ಲ.'

ಶಿಷ್ಯನಿಗೆ ತೂಕ ತಪ್ಪಿತು. ಗುರುವನ್ನು ಇವ ಹುಚ್ಚಎಂದ. ಅವನಿಗೆ ಆ ಕ್ಷಣ ಕಂಡದ್ದು ಅಷ್ಟೇ, ಮಿಕ್ಕ ಎಲ್ಲ ಮಾತೂ ಮರೆತು ಹೋಯಿತು.

'ಪ್ರಭುಗಳೆ, ನಮ್ಮ ಗುರುಗಳನ್ನ ಹುಚ್ಚರು ಅಂತಿದ್ದೀರಿ. ಈ ಮಾತು ಹುಚ್ಚು. ದೊಡ್ಡ ಸ್ಥಳದಲ್ಲಿರೋರು ದೊಡ್ಡ ಮಾತಾಡಿ.'

'ಏ, ನಾಲಿಗೆ ಬಿಗಿ ಹಿಡಿ. ದೊಡ್ಡಸ್ಥಳದಲ್ಲಿರೋರನ್ನ ದೊಡ್ಡವರು ಅಂತ ಮಾತನಾಡಿಸು. ಮರೆತರೆ ತಲೆ ತೆಗೆದೇವು!'

'ಏ ಪ್ರಭು, ಗುರುಗಳನ್ನ ಹುಚ್ಚ ಅಂದಿದ್ದೀ. ಇದು ಹುಚ್ಚು ಮಾತು. ತಪ್ಪಾಯಿತು ಅಂತ ಒಪ್ಪಿಕೊ. ಒಪ್ಪಲಿಲ್ಲ ನೀನು ನಿನ್ನ ಪಾತಕಕ್ಕೆ ಮುಂದಿನ ಜನ್ಮದಲ್ಲಿ ಹುಚ್ಚನಾಗಿ ಹುಟ್ಟತೀಯ. ಇದನ್ನ ನಾನು ಹೇಳಿದ್ದಕ್ಕೆ ನನ್ನ ತಲೆ ತೆಗೀತೀನಿ ಅಂತಿದ್ದೀ. ತೆಗಿ ತಲೇನ. ಇನ್ನೊಂದು ಜನ್ಮಕ್ಕೆ ತಲೇತೆಗೆಯೋ ಚಂಡಾಲನಾಗತೀ. ನಮ್ಮ ಗುರುಗಳು ಸತ್ಯವಂತರಾದರೆ ಈ ಮಾತು ತಪ್ಪೋದಿಲ್ಲ. ಜೋಕೆ!'

"ಕೋಪದಲ್ಲಿ ಈ ಮಾತನ್ನಾಡಿ ಶಿಷ್ಯ ಹೊರಟೇಬಿಟ್ಟ. ಇವನ ದಿಟ್ಟತನ ನೋಡಿ ದೊರೆ ಬೆರಗಾದ. ಅವನ್ನ ತಡಿ ಅಂತ ಆಳಿಗೆ ಹೇಳೋಕೆ ಕೂಡ ಅವನಿಗೆ ಆಗಲಿಲ್ಲ. ಕ್ಷಣ ಬಿಟ್ಟು ಇದು ತೋರುವ ಹೊತ್ತಿಗೆ ಶಿಷ್ಯ ಹೊರಟೇ ಹೋಗಿದ್ದ. ಇನ್ನವನ್ನ ಕರೆಯೋದೇನು ಅಂತ ದೊರೆ ಸುಮ್ಮನಾದ.

"ಮಾತು ಹೀಗೆ ಕೆಡದೆ ಇದ್ದರೆ ಸ್ವಾಮಿ ಆಸ್ಥಳ ಬಿಡೋದು ಅನ್ನೋದು ನಾಲ್ಕು ದಿವಸ ಆಚೆ ಆಗಬಹುದಾಗಿತ್ತೇನೋ. ಈಗ ದೊರೆ, ಆ ಸ್ವಾಮಿ ಆ ಸ್ಥಳದಿಂದ ಅವತ್ತೇ ಹೊರಡಬೇಕು, ಅವರಿಗೆ ಬೇರೆ ಕಡೆ ಗೊತ್ತು ಮಾಡಿದ್ದೇವೆ, ಅಂತ ಹೇಳಿ ಕಳಿಸಿದ.

"ದೊರೆ ಹತ್ತಿರ ನಡೆದ ಮಾತನ್ನು ಶಿಷ್ಯ ಹೇಳಿದಾಗ ಗುರು, 'ನಾನು ಯಾವುದು ಬೇಡ ಎಂತ ಹೇಳಿದೆನೋ ನೀನು ಅದನ್ನೇ ಮಾಡಿದೀಯಪ್ಪಾ. ನಾನು ಯಾಕೆ ಹೋಗಬೇಕು ನೀನು ಹೋದರೆ ಸಾಕಲ್ಲ ಅಂತ ನೋಡಿದೆ. ತಪ್ಪಾಯಿತು. ಒಳ್ಳೇದು. ಇಷ್ಟು

ಮಾತಾದಮೇಲೆ, ನಾವು ಇಲ್ಲಿ ನಿಲ್ಲೋದು ಸರಿಯಲ್ಲ. ಈ ದೊರೆಯ ಸೀಮೇಲಿ ನಮಗಿನ್ನು ಸ್ಥಳ ಇಲ್ಲ. ಹೊಳೆ ಬದೀಲಿ ಪಕ್ಕದ ರಾಜ್ಯದಲ್ಲಿ ಒಂದು ಸ್ಥಳ ಮಾಡಿಕೋಬೇಕು. ದೇವರ ಇಚ್ಛೆ ನಮಗೆ ತೀರ ಬೇಕಾದ ಸಾಮಾನು ತೆಗೆದುಕೊಂಡು ಈಗಲೇ ಹೊರಡು. ನಾನೂ ಬರತ್ತೇನೆ.' ಎಂದರು. ತಮ್ಮನ್ನ ನಡೆಸಿಕೊಳ್ಳುತ್ತಿದ್ದ ಹಿರೇ ಜನಕ್ಕೆ ಕೂಡ ತಿಳಿಸದೆ ಎರಡುಗಳಿಗೆಯಲ್ಲಿ ಸ್ಥಳವನ್ನು ಬಿಟ್ಟು ಹೊರಟು ಬಿಟ್ಟರು.

ದೊರೆಯ ಸೇವಕರು ಅಪ್ಪಣೆಯನ್ನು ತಿಳಿಸಲು ಬರುವ ವೇಳೆಗೆ ಸ್ವಾಮಿಗಳು ಹೊರಟೇ ಇದ್ದರು. ಇನ್ನು ಅಪ್ಪಣೆಯನ್ನು ತಿಳಿಸುವುದು ಏನು ಎಂದು ಸೇವಕರು ಹಾಗೆಯೇ ಹಿಂತಿರುಗಿದರು. ದೊರೆಗೆ ಅರಿಕೆ ಮಾಡಿದರು.

"ಗುರು ಬೇರೆ ಸ್ಥಳವನ್ನು ಒಪ್ಪಿಕೊಳ್ಳದೆ ಹೊರಟೇ ಬಿಟ್ಟರೆ ಎಂದು ದೊರೆಗೆ ಸ್ವಲ್ಪ ಬೇಸರ. ಇರುತ್ತ ಅವರು ಎಲ್ಲಿಗೆ ಹೋದಾರು, ತಾನು ಅವರಿಗೆ ಏನಾದರೂ ಸೌಕರ್ಯ ಒದಗಿಸಬೇಕು, ಎನ್ನುವ ವಿಷಯ ಅವನ ಮನಸ್ಸಿಗೆ ಬರಲಿಲ್ಲ.

"ಇದು ಆದದ್ದು ನೂರುವರ್ಷಕ್ಕೆ ಹೆಚ್ಚು ಹಿಂದೆ, ಸ್ವಾಮಿಗಳೆ. ಹತ್ತು ವರ್ಷದ ಹಿಂದೆ ನೀವು ಸಭೆಗೆ ಬಂದಿದ್ದಿರಲ್ಲ ಆಗ ಅಲ್ಲಿ ಈಗಿನ ದೊರೆ ರಾಣಿ ಬಂದಿದ್ದರು. ರಾಣಿ ತಂದೇನೂ ಬಂದಿದ್ದರು. ನಿಮಗೆ ಜ್ಞಾಪಕ ಇದೆಯೇ?"

"ಇದೆ."

"ದೊರೆ ಮಕ್ಕಳು ಇಬ್ಬರು ಅವರ ಜೊತೆಗೆ ಇದ್ದರು. ದೊಡ್ಡವನು ಉದ್ದನಾಗಿದ್ದ. ನೋಡೋದಕ್ಕೆ ಚೆನ್ನಾಗಿದ್ದ. ಚಿಕ್ಕವನು ಸ್ವಲ್ಪ ತಗ್ಗು. ಅವನ್ನೂ ಚೆನ್ನಾಗಿಯೇ ಇದ್ದ. ನೆನಪಿದೆಯೆ?"

"ನೆನಪಿದೆ."

"ಆ ದೊಡ್ಡವನು, ಸ್ವಾಮಿ, ನೋಡೋಕೆ ಚೆನ್ನಾಗಿದ್ದ. ಆದರೆ ಬುದ್ದಿ ಒಂದರ್ಧ ಅಷ್ಟೇ. ಮಾತು ಚೆನ್ನ ಅಲ್ಲ. ನಡತೆ ಚೆನ್ನ ಅಲ್ಲ. ರಾಜನ ಮಗ ಅಂತ ಒಳ್ಳೆ ಬಟ್ಟೆ ಹಾಕ್ಕೊಂಡು ಬೆಡಗಿನ ಬೊಂಬೆ ಅನ್ನೋಹಂಗೆ ನಡೆದಾಡತಾ ಇದ್ದ. ಅಷ್ಟು ಹೊರತು, ಅಪ್ಪನ ದಿನ ಮುಗಿದಮೇಲೆ ದೊರೆ ಆದಾನು, ರಾಜ್ಯಾನ ಆಳಿಯಾನು, ಅನ್ನೋ ಹಂಗೆ ಇರಲಿಲ್ಲ.

“ಹಿಂದಿನದು ಅಂತ ಈ ಕಥೇನ ಕೇಳಿದ್ದ ಜನ, ನೂರು ವರ್ಷದ ಅಂದಿನ ಶಾಪ, ನಮ್ಮ ಹಿರೇರು ಹೇಳಿದ್ದು, ನಾವು ಕೇಳಿದ್ದು, ಈಗ ಫಲ ಬಿಟ್ಟಿದೆ, ಅಂತ ಅಂದುಕೊಂಡರು.”

“ಈಗ ರಾಜ್ಯ ಹೋಯಿತಲ್ಲ. ಹತ್ತು ವರುಷದ ಹಿಂದಿನ ದೊರೆ ರಾಣಿ, ಮಕ್ಕಳು ಏನಾಗಿದ್ದಾರೆ?”

“ನನಗೆ ತಿಳೀದು, ಸ್ವಾಮಿ. ನಾನು ಆ ಸೀಮೆಯವನಲ್ಲ. ಅವರ ಪಾಡು ಏನು ಅಂತ ನಾನು ವಿಚಾರಿಸಿಲ್ಲ.”

ಬಾಳಿನ ಚೌಕಾಬಾರ

ನಮ್ಮ ಸ್ನೇಹಿತರೊಬ್ಬರು ತಮ್ಮ ಮಗಳ ಮದುವೆಯ ವಿಷಯ ಚಿಂತಿಸುತ್ತಿದ್ದಾಗ ತಮ್ಮ ಅಜ್ಜಿ ತಮಗೆ ಹೇಳಿದ ಒಂದು ಸಂಗತಿಯನ್ನು ನನಗೆ ತಿಳಿಸಿದರು.

ಇವರು ಯೋಚನೆ ಮಾಡುತ್ತ ಶತಪಥ ನಡೆಯುತ್ತಿದ್ದಾರೆ. ಅಜ್ಜಿ, "ಅಪ್ಪಾ, ನೀನು ಯಾವುದೋ ಒಂದು ವಿಷಯದಲ್ಲಿ ತುಂಬ ಚಿಂತೆ ಮಾಡತಾ ಇದ್ದೀ ಅಂತ ಕಾಣತ್ತೆ. ಏನು ಸಂಗತಿ, ಹೇಳಬಹುದಾದ ಸಂಗತಿ ಆದರೆ ಹೇಳು," ಎಂದರು.

"ನಮ್ಮ ಲಲಿತಮ್ಮನ್ನ ತಕೊಳ್ಳೋಕೆ ಎರಡು ಮನೆ ಜನ ಬಂದಿದಾರೆ. ಒಬ್ಬ ಹುಡುಗ ಪುಣ್ಯವಂತರ ಮನೆಯವನು; ಅಷ್ಟೇನೂ ಓದಿಲ್ಲ. ಇನ್ನೊಂದು ಸಾಮಾನ್ಯ ಮನೆತನ; ಹುಡುಗ ಓದಿದಾನೆ. ಪುಣ್ಯವಂತರ ಹುಡುಗ, ನೋಡೋಕೆ ಲಕ್ಷಣವಾಗಿದಾನೆ. ಇನ್ನೊಬ್ಬ ಅಷ್ಟೇನೂ ಚನ್ನಾಗಿಲ್ಲ. ಯಾರಿಗೆ ಕೊಡೋದು? ಮನಸ್ಸಿಗೆ ನಿಶ್ಚಯ ಆಗತಾ ಇಲ್ಲ. ಹುಡುಗಿ ಲಕ್ಷಣವಾಗಿರೋ ಹುಡುಗನ್ನ ಒಪ್ಪುತಾಳೆ. ಇನ್ನೊಬ್ಬ ಬೇಡ ಅಂದಿಲ್ಲ. ಆದರೆ ಒಪ್ಪಿದಳು ಅನ್ನೋ ಹಾಗಿಲ್ಲ."

"ನೋಡಪ್ಪ, ಇದೆಲ್ಲ ದೇವರು ನಡಸೋ ದಾರಿ. ನನ್ನ ಮದುವೆ ಮಾತೇ ತಕೋ. ಏನಾಯಿತು ಕೇಳಿದ್ದೀಯಾ?"

"ಇಲ್ಲ ಅಜ್ಜಿ ಹೇಳತೀಯಾ? ಕೇಳತೇನೆ."

"ನಮ್ಮ ಮನೆತನ ಮಳವಳ್ಳಿ. ಮಳವಳ್ಳಿ ಸೀತಾರಾಮಯ್ಯ ಅಂತಾರಲ್ಲ ಅವರು ನಮ್ಮ ಅಜ್ಜ. ನನ್ನ ತಂದೆ ಅತ್ತಿಗುಪ್ಪೆಗೆ ದತ್ತಾಗಿ ಹೋದರು. ನಾನು, ನನ್ನ ಕೂಡ ಹುಟ್ಟಿದವರು, ಎಲ್ಲ ಹುಟ್ಟಿ ಬೆಳೆದದ್ದು ಅಲ್ಲೇ. ನಾನು ಮನೇಲಿ ಹಿರೀ ಮಗಳು; ಮದುವೆ ದಿನ ಬಂತು. ತಂದೆ ತಿಳಿದವರಿಗೆ ಹೇಳಿದ್ದರು. ಸರಿಯಾದ ಹುಡುಗರು ನಿಮಗೆ ತಿಳಿದವರಿದ್ದರೆ ಹೇಳಿ, ನಾನು ವಿಚಾರಿಸಿ ನೋಡಿ ಗೊತ್ತು ಮಾಡುತ್ತೇನೆ, ಅಂತ. ತಂದೆ ದತ್ತಾಗಿ ಬಂದಿದ್ದ ಮನೆ ಪುಣ್ಯವಂತರ ಮನೆ. ಈ ಮನೆಗೆ ಅಳಿಯನಾಗಿ ಬರವುದಕ್ಕೆ ಯಾರಿಗೂ ಸಮ್ಮತವೇ.

ನಾನು ಕುರೂಪಿ ಏನೂ ಅಲ್ಲ. ತಕ್ಕ ಮಟ್ಟಿಗೆ ಇದ್ದೆ. ಅದು ಏನು ಸಂದರ್ಭ ಆಯಿತೋ, ಒಂದು ದಿನ ಅತ್ತಿಗುಪ್ಪೆಗೆ ಮಳವಳ್ಳಿ ಹುಡುಗ ಒಬ್ಬ, ಚನ್ನರಾಯಪಟ್ಟಣದ ಹುಡುಗ ಒಬ್ಬ, ನಮ್ಮವರು ಇಬ್ಬರು ಬಂದರು. ಅದೇ ದಿನ. ಮಳವಳ್ಳಿ ಹುಡುಗ ಇಂಗ್ಲಿಷ್ ಓದುತಾ ಇದ್ದ. ಚನ್ನರಾಯಪಟ್ಟಣದವನು ಓದಿನಲ್ಲಿ ಪ್ರಯೋಜನ ಇಲ್ಲ, ಹಾಡು ಕಲಿತಿದ್ದ. ಆಗ ಮೈಸೂರಿನಲ್ಲಿ ನಮ್ಮ ಆಚಾರ್ರು ಒಬ್ಬರು ಇದ್ದರು, ಅವರ ಹತ್ತಿರ. ಇಬ್ಬರ ಹಿರಿಯರೂ ಕಾಗದ ಬರೆದಿದ್ದರು: "ನಮ್ಮ ಹುಡುಗನ್ನ ಕಳುಹಿಸಿಕೊಟ್ಟಿದ್ದೇವೆ. ದೇವರ ಕೃಪೆ ಇದ್ದು ಕಂಕಣ ಕೂಡಿಬಂದರೆ ಈ ಸಂಬಂಧ ಮಾಡುವುದು ನಮಗೆ ಸಂತೋಷ" ಅಂತ. ಇಬ್ಬರೂ ಒಂದೇ ದಿನ ಬರಬೇಕೆ? ಬಂದರು. ತಂದೆ ಈಗ ಹ್ಯಾಗೆ ಮಾಡಬೇಕು ಅಂತ ಯೋಚನೆ ಮಾಡಿದರು. ತಾಯ ಊರೂ ಅತ್ತಿಗುಪ್ಪೇನೇ, ಅವರ ತಮ್ಮ ಮನೆಗೆ ಬಂದಿದ್ದರು. ಅರ್ಧ ಹಾಸ್ಯವಾಗಿ, ಅರ್ಧ ದಿಟವಾಗಿ, "ಈ ಮಾತಿಗೆ ನೀನು ಏನು ಯೋಚನೆ ಮಾಡತೀ ಭಾವ. ಮಧ್ಯಾಹ್ನ ಇಬ್ಬರು ಹುಡುಗರನ್ನ ಬರಹೇಳು. ಫಲಾಹಾರಕ್ಕೆ ಕೊಡು. ಹುಡುಗಿ ನೋಡಲಿ, ಯಾರನ್ನ ಬೇಕಾದರೂ ಮದುವೆ ಆಗಲಿ ನಿನಗೆ ಯಾಕೆ ಯೋಚನೆ?" ಅಂದರು. ಆಗಲಿ ಅಂತ ಅಪ್ಪ ಹೀಗೆ ಏರ್ಪಾಟು ಮಾಡಿದರು. ಫಲಾಹಾರದ ಹೊತ್ತಿನಲ್ಲಿ ಇಬ್ಬರೂ ಹುಡುಗಿಗಾಗಿ ಬಂದವರು ಎಂದು ಅವರಿಬ್ಬರಿಗೂ ತಿಳಿಯಿತು. ಹುಡುಗರಿಬ್ಬರೂ ತಕ್ಕಮಟ್ಟಿಗೆ ಇದ್ದರು, ಇರತ ಚನ್ನರಾಯಪಟ್ಟಣದ ಹುಡುಗ ಇನ್ನಷ್ಟು ರೂಪವಂತ; ಇದೇನು ಒಂದು ಹುಡುಗಿಗಾಗಿ ನಾವು ಪೈಪೋಟಿ ಮಾಡಬೇಕೇ, ಇದು ಒಂದು ಸ್ವಯಂ ವರವೇ, ಅಂತ ಇಬ್ಬರಿಗೂ ಅನ್ನಿಸಿರಬಹುದು. ಅಂದರೆ ಯಾರೂ ಏನೂ ಹೇಳಲಿಲ್ಲ, ಫಲಾಹಾರ ಮುಗಿದ ಮೇಲೆ ಲೋಕಾಭಿರಾಮವಾಗಿ ಮಾವ ಚನ್ನರಾಯಪಟ್ಟಣದ ಹುಡುಗನಿಗೆ 'ನಾನೇನು ವರಪರೀಕ್ಷೆ ಮಾಡತೇನೆ ಅಂತ ಅಲ್ಲ. ನೀವು ಸಂಗೀತಾ ಕಲಿತಾ ಇದೀರಂತಲ್ಲ. ಒಂದು ಹಾಡು ಹೇಳಿ ಕೇಳೋಣ,' ಎಂದರು. ಹುಡುಗ ಕಾಮ ಕೋಟಿ ಸುಂದರಾ ಎನ್ನುವ ಮಾತಿನ ಹಾಡಿದೆಯಲ್ಲಾ ಅದನ್ನ ಹಾಡಿದ. ಚೆನ್ನಾಗಿ ಹಾಡಿದ. ಇನ್ನೊಬ್ಬ ಇದಕ್ಕೆ ಪ್ರತಿಯಾಗಿ ಏನು ಮಾಡೋದು? ಮಾವ 'ನಿಮ್ಮನ್ನ ಒಂದು ಇಂಗ್ಲೀಷ್ ಪದ್ಯ ಹೇಳಿ ಅಂತ ಕೇಳಬಹುದು, ಹಾಡು ತಿಳಿದ ಹಾಗೆ ಅದು ನಮಗೆ

ತಿಳಿಯುವುದಿಲ್ಲ,' ಅಂದರು. ಹುಡುಗ ಹೌದು ಅಂದ. ಸ್ವಲ್ಪ ಹೊತ್ತಾದ ಮೇಲೆ ಇಬ್ಬರಿಗೂ ಎಲೆ ಅಡಿಕೆ ಕೊಟ್ಟು ಕಳಿಸಿದ್ದಾಯಿತು. ನಾಲ್ಕೈದು ದಿನದಲ್ಲಿ ಜೋಯಿಸರನ್ನು ಕೇಳಿ ಜಾತಕ ಕೂಡಿದೆಯೇ ನೋಡಿ ತಿಳಿಸುತ್ತೇವೆ ಅಂತ ಹಿರಿಯರಿಗೆ ನಮ್ಮ ಪರ ವಿಜ್ಞಾಪನೆ ಮಾಡಿ ಅಂದದ್ದಾಯಿತು.

"ಜಾತಕ ನೋಡಿಸಿದರು. ಮಳವಳ್ಳಿ ಹುಡುಗನ ಜಾತಕ ನನ್ನ ಜಾತಕ ಚೆನ್ನಾಗಿ ಕೂಡಿದುವು, ಚನ್ನರಾಯಪಟ್ಟಣದ ಹುಡುಗನ ಜಾತಕ ನನ್ನ ಜಾತಕ ಅಷ್ಟಾಗಿ ಕೂಡಲಿಲ್ಲ. ಅಪ್ಪ, ಕೂಡಿದ ಜಾತಕಾನ ಒಪ್ಪಿಕೊಳ್ಳೋಣ, ಅಂದರು. ನಾನು ಅಮ್ಮನ ಹತ್ತಿರ, 'ನೀ ಅಪ್ಪನಿಗೆ ಹೇಳಮ್ಮ ನಾನು ಈ ಹುಡುಗನ್ನ ಮದುವೆ ಆಗ್ತೇನೆ. ಆಗೋಣ ಅನ್ನಿಸುತ್ತಾ ಇದೆ. ಅವನ್ನ ಆಗೋಣ ಅನ್ನಿಸುತ್ತಾ ಇಲ್ಲ,' ಅಂತ ಹೇಳಿದೆ. ಅಮ್ಮ ಅಪ್ಪನಿಗೆ ಹೇಳಿದರು. ಒಳ್ಳೇದಕ್ಕೆ ಅಂತ ಮಾಡೋಣವೇ, ಹುಡುಗೀ ಇಷ್ಟ ಅಂತ ಮಾಡೋಣವೇ, ಅಂತ ನಾಲ್ಕು ದಿನ ಮೀನ ಮೇಷ ಮಾಡಿ, ಅಪ್ಪ ನಾನು ಬಯಸಿದಂತೆ ಮಾಡುವುದು ಅಂತ ಒಪ್ಪಿಕೊಂಡರು. ಮದುವೆ ಆಯಿತು. ಆ ಚನ್ನರಾಯಪಟ್ಟಣದ ಹುಡುಗನೇ ನಿನ್ನ ಅಜ್ಜ.

"ಮನುಷ್ಯ ಕೆಟ್ಟವರಲ್ಲ. ನನ್ನನ್ನು ಪ್ರೀತಿಯಿಂದ ನೋಡಿಕೊಂಡರು. ಆದರೆ ಅವರಿಗೆ ಈ ಹಾಡಿನ ಪ್ರಪಂಚದಲ್ಲಿ ಹಾಡುಗಾತಿ ಹೆಣ್ಣು ಮಕ್ಕಳ ಜೊತೆ ಓಡಾಟ ಬಹಳ ಆಯಿತು. ಇಂಥ ಜೊತೇಲಿ ಇಷ್ಟು ಓಡಾಡಿ ತಪ್ಪಿ ನಡೆಯದೆ ಇರುವವರು ತೀರ ಅಪರೂಪ. ನಿಮ್ಮ ಅಜ್ಜ ಈ ಅಪರೂಪದ ಮನುಷ್ಯ ಆಗಲಿಲ್ಲ. ಇದನ್ನು ಮೊದಲು ಕಂಡಾಗ ನಾನು ತುಂಬ ದುಃಖಪಟ್ಟೆ, ಹೀನಾಯ ಪಟ್ಟೆ, ಕಣ್ಣೀರು ಸುರಿಸಿದೆ. ನಾಲ್ಕು ದಿನ ಆಯಿತು; ಇದೇ ವಾಡಿಕೆ ಆಯಿತು; ಮನಸಿನ ಕಷ್ಟ ಇಂಗಿಹೋಯಿತು.

"ಬಹಳ ವರ್ಷ ಆಯಿತು. ಇವರು ಬೆಂಗಳೂರಿನಲ್ಲಿ ಸಂಗೀತದ ಮೇಷ್ಟರಾಗಿ ಒಂದು ಕಡೆ ನಿಂತರು. ಅಲ್ಲಿ ಇಲ್ಲಿ ಹೋಗತಾ ಬರತಾ ಏನೋ ಕಾಯಿಲೆ ತಂದುಕೊಂಡರು. ಒಂದು ರಾತ್ರಿ ಇವರಿಗೇನೋ ಬಹಳ ಕಷ್ಟವಾಯಿತು. ನನಗೆ ಹಿಂದು ಮುಂದು ತೋರಲಿಲ್ಲ. ಡಾಕ್ಟರನ್ನ ಕರೆತರಬೇಕು. ಯಾರೂ ಇಲ್ಲ. ನಾನೇ ಹೋಗಬೇಕು. ಹೊರಟೆ. ಪಕ್ಕದ ಮನೆಯವರನ್ನು ಕೇಳಿ, ಡಾಕ್ಟರ್ ಮನೆ ಎಲ್ಲಿ ಅಂತ ತಿಳುಕೊಂಡು, ನಾನು ಅಲ್ಲಿಗೆ

ಹೋದೆ. ಮನೆ ಬಾಗಿಲ ಬಳಿ ಒಬ್ಬ ಆಳಿದ್ದ. ನಾನು ಡಾಕ್ಟರನ್ನ ನೋಡಬೇಕಪ್ಪಾ ಎಂದೆ. ಅವನು ಒಳಗೆ ಹೋಗಿ ಹೇಳಿದ. ಡಾಕ್ಟರು ಹೊರಕ್ಕೆ ಬಂದರು. ಡಾಕ್ಟರು ಯಾರು? ನನ್ನ ಮದುವೆ ಆದೇನೇ ಅಂತ ಬಂದು ನಾನು ಒಲ್ಲೆ ಅಂದಿದ್ದೆನಲ್ಲಾ ಆ ಹುಡುಗ, ಅದೇ ಮುಖ. ಇನ್ನು ಸ್ವಲ್ಪ ದೊಡ್ಡದಾಗಿದೆ. ಅದೇ ಗಂಭೀರ, 'ಯಾಕೆ ತಾಯಿ, ಏನು?' ಅಂತ ಕೇಳಿದರು. ಅವರಿಗೆ ನನ್ನ ಗುರುತು ಸಿಕ್ಕಲಿಲ್ಲ. ಹ್ಯಾಗೆ ಸಿಕ್ಕಬೇಕು? ಅವರು ನನ್ನನ್ನು ನೋಡಿದಾಗ ನಾನು ಹುಡುಗಿ. ಈಗ ಎರಡು ಮಕ್ಕಳ ತಾಯಿ. ಮುಖವೇ ಬೇರೆ ಅನ್ನೋ ಹಾಗಿರುತ್ತೆ. ಅದೇನು ಹುಡುಗೀನ ಆ ಬಾರಿ ಚೆನ್ನಾಗಿ ನೋಡಿದ್ದರೆ ಕೂಡ. ಅವರು ನನ್ನನ್ನು ಹಾಗೆ ನೋಡಿದವರಲ್ಲ. ಹುಡುಗೀನ ಹಾಗೇ ನೋಡೋ ಚೆಲ್ಲು ಸ್ವಭಾವ ಅಲ್ಲ. ನಾನು, 'ನಮ್ಮ ಯಜಮಾನರಿಗೆ ಮೈಯಲ್ಲಿ ಸರಿಯಾಗಿಲ್ಲ. ಆಸ್ಪತ್ರೆಗೆ ಹೋಗಿ ಏನೋ ಔಷಧ ತಕ್ಕೊಂಡು ಈ ಹೊತ್ತು ತುಂಬ ಕಷ್ಟ ಪಡತಾ ಇದ್ದಾರೆ. ನಿಮ್ಮನ್ನ ಕರಕೊಂಡು ಹೋಗೋಣ ಅಂತ ಬಂದೆ,' ಅಂದೆ. 'ಬರತೇನಮ್ಮ' ಅಂತ ಅವರು ಒಳಗೆ ಹೋಗಿ ಬಟ್ಟೆ ಹಾಕಿಕೊಂಡು, ಕೈಯಲ್ಲಿ ರೋಗದ ಪರೀಕ್ಷೆಯ ಅದೇನೋ ಎರಡು ಸಾಮಾನು ತಕ್ಕೊಂಡು ಬಂದರು. ನಮ್ಮ ಮನೆ ಸೇರಿದರು. ಯಜಮಾನರ ಹತ್ತಿರಕ್ಕೆ ಬಂದು ಇವರು ಅವರನ್ನು ನೋಡಿದರು. ತಕ್ಷಣ ನನ್ನ ಕಡೆಗೆ ತಿರುಗಿ, ನಿಮ್ಮ ತೌರು ಅತ್ತಿಗುಪ್ಪೇನೇ ತಾಯಿ, ಅಂತ ಕೇಳಿದರು. ನಾನು, ಹೌದು ಅಂದೆ. ಅವರು, 'ಇವರನ್ನ ನೋಡಿ ನೆನಪು ಬಂತು, ನಿಮ್ಮನ್ನ ನೋಡಿದಾಗ ಇದು ತೋರಲಿಲ್ಲ,' ಎಂದರು. ಹಾಸಿಗೆ, ಪಕ್ಕದಲ್ಲಿ ಕುಳಿತು ಯಜಮಾನರನ್ನ ವಿವರ ವಿವರವಾಗಿ ಪರೀಕ್ಷಿಸಿದರು. ಎದ್ದು 'ಏನೂ ಭಯ ಬೇಡಿ ತಾಯಿ, ನಾನು ಒಂದು ಔಷಧ ಕೊಡತೇನೆ. ಮೂರು ದಿವಸಕೊಡಿ, ಸರಿ ಹೋಗಿಬಿಡುತ್ತೆ', ಎಂದರು. ನಾನು ಅವರ ಜೊತೆಗೆ ಅವರ ಮನೆಗೆ ನಡೆದೆ. ಅವರು 'ನನ್ನ ಆಳನ್ನ ಜೊತೆಗೆ ಕರೆತರಬೇಕಾಗಿತ್ತು. ಅವನ ಕೈಲಿ ಔಷಧಿ ಕಳಿಸಬಹುದಾಗಿತ್ತು. ಅವನಿಗೆ ಮನೆ ಗುರುತಿಲ್ಲ. ನೀವೇ ಬರಬೇಕಾಯಿತು,' ಎಂದರು. ನಾನು, 'ಹಿಂದಿನ ಮಾತನೆಲ್ಲ ಮರೆತು ನೀವು ದೇವರಂತೆ ನಮ್ಮನ್ನ ಕಾಪಾಡೋಕೆ ಬಂದಿದೀರಿ. ನಿಮ್ಮ ಜೊತೆಗೆ ನಾಲ್ಕು ಹೆಜ್ಜೆ ನಡೆದರೆ ಅದೊಂದು ಪುಣ್ಯ', ಎಂದೆ. ಅವರು, 'ಅಂಥದೇನೂ ಇಲ್ಲ ತಾಯಿ. ನೀವು ಸುಖವಾಗಿ

ಇರಬೇಕಾದ್ದು ಮುಖ್ಯ. ಚಿಕ್ಕಂದಿನ ಮಾತು ಹತ್ತು ಇರುತ್ತೆ. ಅದನ್ನೆಲ್ಲ ನೆನಪಿಟ್ಟುಕೊಂಡು ಮನಸ್ಸು ಕೆಡಿಸಿಕೊಳ್ಳೋದು ಉಂಟೆ' ಎಂದರು. ನಾನು 'ಇವರು ದೇವರಂತೆ ಬರಲಿಲ್ಲ. ದೇವರೇ ಬಂದರು' ಎಂದುಕೊಂಡೆ. ಔಷಧಿ ತಂದೆ. ಯಜಮಾನರಿಗೆ ಗುಣ ಆಯಿತು."

ಇಲ್ಲಿ ನನಗೆ ಒಂದು ಕುತೂಹಲ, ಅಜ್ಜಿ ಒಲ್ಲೆ ಎಂದಿದ್ದ ಈ ಹುಡುಗನಿಗೆ ಎಂಥ ಹೆಂಡತಿ ಬಂದಿದ್ದಳು?

ನಾನು ಅಜ್ಜೀನ ಕೇಳಿದೆ.

ಅಜ್ಜಿ ಹೇಳಿದರು: "ನಾನು ಇವರ ಮನೆಗೆ ಹೋದ ಮೊದಲ ದಿನವೇ ಅವರನ್ನ ನೋಡಿದೆ. ಗಂಡ ಎಲ್ಲಿಗೋ ಹೊರಟಿದ್ದಾರೆ ಅಂತ ಇವರನ್ನು ಬಿಡೋಕೆ ಅವರು ಬಾಗಿಲವರೆಗೆ ಬಂದರು. ತುಂಬ ಚೆಲುವೆ. ಮಂಗಳಗೌರಿ. ನಾ ಒಲ್ಲೆ ಅಂದಿದ್ದ ಹುಡುಗ ನನಗಿಂತ ಚೆಲುವೆ ಆದವಳನ್ನ ಮದುವೆ ಆಗಿದ್ದ."

"ಆಮೇಲೆ ಅಜ್ಜಿ?"

"ಆಮೇಲೆ ಬಹಳ ವರ್ಷ ನಾನು ಇವರನ್ನ ಕಾಣಲಿಲ್ಲ, ನಿಮ್ಮಪ್ಪ ಮೈಸೂರಲ್ಲಿ ಕೆಲಸದಲ್ಲಿದ್ದಾಗ ಒಂದು ಸಲ ನನಗೆ ಒಂದು ತರಹ ಜ್ವರ ಬಂತು. ಲಕ್ಷ್ಮೀಪುರದ ಆಸ್ಪತ್ರೆಯ ಡಾಕ್ಟರು, ಇದರ ಮಾತು ಹೀಗೇ ಅನ್ನೋದಕ್ಕೆ ನಮ್ಮ ದೊಡ್ಡ ಡಾಕ್ಟರನ್ನ ಕರೆಯೋದು ಒಳ್ಳೆಯದು, ನಾನು ಅವರನ್ನ ಕರೆ ತರುತ್ತೇನೆ ಅಂದರು. ಕರೆಂದರು. ದೊಡ್ಡ ಡಾಕ್ಟರು ಬಂದರು. ಯಾರವರು? ಇದೇ ದೊಡ್ಡ ಮನುಷ್ಯರು. ನನ್ನನ್ನು ನೋಡಿ ಅವರಿಗೆ ಆಶ್ಚರ್ಯ. 'ಇದೇನು ತಾಯಿ, ನಾನು ನಿಮ್ಮನ್ನು ನೋಡೋದೆಲ್ಲ ಕಾಯಿಲೆ ಸಂದರ್ಭದಲ್ಲಿ ಅಂತ ಅನ್ನೋ ಹಾಗೆ ಕಾಣ್ತದಲ್ಲಾ,' ಅಂತ ನಕ್ಕರು. ನಾನೂ ನಕ್ಕೆ. 'ಏನು ಸಂಗತಿ? ಮುಖ ಏನೋ ಬೇರೆ ಲಕ್ಷಣ ಆಗಿ ಕಾಣತದಲ್ಲ?'

'ಯಜಮಾನರು ಮೂರು ವರ್ಷದ ಹಿಂದೆ ತೀರಿಕೊಂಡರು'

'ಅಯ್ಯೋ ಪಾಪವೆ! ಮಧ್ಯ ವಯಸ್ಸು. ನಾನೂ ಅವರೂ ಒಂದು ಜೊತೆ. ಇಷ್ಟು ಬೇಗನೆ ತೀರಿಕೊಂಡರೆ? ದೇವರ ಇಚ್ಛೆ. ಈಗ ನಿಮಗೆ ಈ ಜ್ವರ, ನೋಡೋಣ, ಇದರ ಸಂಗತಿ ಏನು.' ಹೀಗೆಂದು ಅವರು ಹಾಸಿಗೆ ಪಕ್ಕದಲ್ಲಿ ಕುಳಿತು, ನಾಡಿ ನೋಡಿ, ನಾಲಿಗೆ ತೋರಿಸಿ

ಅಂತ ಹೇಳಿ, ಕಣ್ಣು ರೆಪ್ಪೆಯನ ಮೇಲಕ್ಕೆ ಎಳೆದು ಕಣ್ಣಿನ ಕಡೆ ನಿಟ್ಟಿಸಿ, ಒಂದು ನಿಮಿಷ ನೋಡಿ, ಕಿರಿಯ ಡಾಕ್ಟರಿಗೆ, 'ಇದು ಪ್ಯಾರಟೈಫಾಯ್ಡ್ ಇರಬೇಕು ಡಾಕ್ಟರ್, ಭಯಕ್ಕೇನೂ ಕಾರಣ ಇಲ್ಲ, ಮೂರುವಾರ ಸುಮಾರು ಕಳೆಯಬೇಕು, ನೋಡಿಕೊಳ್ಳಿ ಸರಿಹೋಗುತ್ತೆ, ಮಧ್ಯೆ ಬೇಕಾದರೆ ನನ್ನನ್ನು ಕಾಣಿ,' ಎಂದರು. ನಾನು ಬರತೇನೆ ತಾಯಿ, ಅಂತ ಹೇಳಿ ಹೊರಟರು. ಮಾರನೇ ದಿನ ನಮ್ಮ ಹುಡುಗ ಕಿರಿಯ ಡಾಕ್ಟರ ಮಾತಿನಂತೆ ಇವರ ಹತ್ತಿರ ಹೋಗಿ ನಿನ್ನೆ ರಾತ್ರಿ ದಯಮಾಡಿಸಿದ್ದಕ್ಕೆ ಫೀ ಅಂತ ಹದಿನೈದು ರೂಪಾಯಿಗಳನ್ನು ಮೇಜಿನ ಮೇಲಿಟ್ಟ. ಅವರು 'ಇದು ಫೀಸ್ ತಕೊಳ್ಳೋ ಕೇಸ್ ಅಲ್ಲಪ್ಪ, ನಿಮ್ಮ ತಾಯಿನ ನಾನು ಹುಡುಗಿಯಾಗಿದ್ದ ದಿನದಿಂದ ಬಲ್ಲೆ, ಹಣ ಜೇಬಿನಲ್ಲಿಟ್ಟುಕೊಳ್ಳಿ, ಅವರಿಗೆ, ಇನ್ನಷ್ಟು ಔಷಧಿ ಉಪಚಾರಕ್ಕೆ ಬಳಸಿ,' ಎಂದರು.

"ನೀನು ಹತ್ತು ವರ್ಷದ ಹುಡುಗ. ಒಂದು ದಿನ, ಏನೋ ಕಷ್ಟ, ಎಂಜಲು ನುಂಗೋಕಾಗಲಿಲ್ಲ ಅಂತ ಮಲಗಿದೆ. ತುಂಬ ಜ್ವರ, ಡಾಕ್ಟರು ಏನು ಎತ್ತ ಅಂತ ತಿಳೀಲಿಲ್ಲ ಎಂದರು. ನಿಮ್ಮ ದೊಡ್ಡಪ್ಪ, ಡಾಕ್ಟರ ಗುರುತು ಹ್ಯಾಗೂ ಇದೆಯಲ್ಲ ಅಂತ ಇವರ ಹತ್ತಿರ ಹೋದ. ಇವರನ್ನ ಕರೆತಂದ. ಆಗೇನು, ಇವರಿಗೆ ಕೆಲಸದಿಂದ ಬಿಡಿಸಿಕೊಳ್ಳೋ ವಯಸ್ಸು. ಆದರೂ, ಮುದುಕ ಹುಡುಗರಿಗಿಂತ ಹೆಚ್ಚು ಚಟುವಟಿಕೆಯಿಂದ ನಡೆದುಕೊಳ್ಳೋರು. ನೇರ ಬಂದರು. ನಿನ್ನನ್ನ ನೋಡಿದರು. 'ಗಂಟಲ ಒಳಗೆ ಬೆಳ್ಳಗೆ ಏನೋ ಚುಕ್ಕೆ ಕಾಣತಾ ಇದೆ, ಇದು ಥಿಫ್ತೀರಿಯಾ ಇರಬೇಕು, ಒಂದು ಇಂಜೆಕ್ಷನ್ ಕೊಡಿ,' ಅಂತ ಡಾಕ್ಟರಿಗೆ ಹೇಳಿದರು. ಡಾಕ್ಟರು, 'ಅಯ್ಯೋ ನನಗೆ ತೋಚಲೇ ಇಲ್ಲವಲ್ಲ. ಡಿಫ್ತೀರಿಯಾ ಅನ್ನೋ ರೋಗದ ಮಾತು ನಾನು ಬಲ್ಲೆ. ಆದರೆ ಇದು ಅಪರೂಪದ ರೋಗ, ಇದನ್ನು ಗುರುತಿಸೋದು ಕಷ್ಟ. ಬಹಳ ಅಪಾಯದ ರೋಗ, ಅನುಭವಸ್ಥರು ಬಂದರು, ಮಗು ಉಳುಕೊಂಡಿತು,' ಎಂದರು. ಇಂಜೆಕ್ಷನ್ ಕೊಟ್ಟು ನಿನ್ನನ್ನ ಉಳಿಸಿದರು.

"ಆಗ ಈ ಮಾತನ್ನು ಹತ್ತು ಸಲ ಕೇಳಿಯೇ ಈಗ ಇಷ್ಟು ಸುಲಭವಾಗಿ ಡಿಫ್ತೀರಿಯಾ ಡಿಫ್ತೀರಿಯಾ ಅಂತ ಹತ್ತು ಸಲ ಹೇಳತಾ ಇದ್ದೇನೆ. ಹೀಗೆ ಮದುವೆಗೆ ನೋಡೋಕೆ ಬಂದು ಒಲ್ಲೆ ಅನ್ನಿಸಿಕೊಂಡ ಹುಡುಗ ಆಮೇಲೆ ನನ್ನ ಬಾಳಿನಲ್ಲಿ ದೊಡ್ಡವನಾಗಿ ಮೂರು

ಸಲ ಬಂದು ನನ್ನ ಗಂಡನ್ನ ಕಾಪಾಡಿದರು, ನನ್ನನ್ನ ಕಾಪಾಡಿದರು, ನನ್ನ ಮೊಮ್ಮಗನ್ನ ಕಾಪಾಡಿದರು. ಇದನ್ನ ನಾನು, ತನ್ನಿಚ್ಛೆಯಿಂದ ನಡೆಯಿತು ಅನ್ನೋದೆ, ಅಪ್ಪಾ? ಅದೂ ಇರಬಹುದು, ಆದರೆ ನನಗೆ ತೋರೋದು ಹೀಗೆ. ನಾನು, ಇವನು ಬೇಡ ಇನ್ನೊಬ್ಬ ಇರಲಿ ಅಂತ ಗಂಡನ್ನ ವರಿಸಿದೆ. ಅಪ್ಪನ ಮಾತು ಕೇಳಿದ್ದರೆ ಇವನ ಹೆಂಡತಿಯಾಗಿ ಇರತಾ ಇದ್ದೆ. ದೇವರು ನೀನು ನಡೆಕೊಂಡದ್ದು ಜಾಣು ಆಯಿತೆ ಅಂತ ಕೇಳೋದಕ್ಕೆ ಇವರನ್ನ ಈ ಮೂರು ಸಲ ನನ್ನ ಬಾಳಿನಲ್ಲಿ ಆಮೇಲೆ ಹತ್ತಿರ ಕರೆತಂದರು ಅಂತ ಅನ್ನಿಸತ್ತೆ. ಅಲ್ಲ ಅಂತ ಹ್ಯಾಗೆ ಅನ್ನೋದು? ಎಲ್ಲರ ಬಾಳಿನಲ್ಲಿ ಇಂಥ ವಿಚಿತ್ರ ಕಾಣತ್ತೆ ಅಥವಾ ನಡೆಯುತ್ತೆ ಅಂತ ಅಲ್ಲ ಒಂದು ಬಾಳಿನಲ್ಲಿ ಕಂಡಾಗ, ಇರಬಹುದು ಅನ್ನೋದೇ ಸರಿ. ಹಿರಿಯರು ಹೇಳಿದಾರೆ. ನಮಗೆ ಮುಂದೆ ಆಗತ್ತೆ ಅನ್ನೋ ಸಂಗತಿ ದೇವರ ಮನಸ್ಸಿನಲ್ಲಿ ಆಗಿ ಮುಗಿದಿದೆ. ಅದನ್ನ ತಪ್ಪಿಸೋರು ಯಾರು? ಯಾವ ಮಾತಿನಲ್ಲೂ ಏನು ಮಾಡೋಣ ಅಂತ ನಾವು ಬಹಳ ಚಿಂತೆ ಮಾಡಿ ಪ್ರಯೋಜನ ಇಲ್ಲ. ನೀನು ಸರಿಯಾದ ಪ್ರೇರಣೆ ಕೊಡು ಅಂತ ದೇವರನ್ನ ಕೇಳಿಕೋಬೇಕು. ಬಂದ ಪ್ರೇರಣೆಯಂತೆ ನಡೀಬೇಕು. ನಮ್ಮ ಬದುಕು ಚೌಕಾಬಾರದ ಆಟ. ದಾಳ ನಾವು ಹಾಕತೇವೆ. ಗರ ನಮ್ಮ ಯತ್ನ ಅಲ್ಲ. ಅದರ ದೊರೆ ಬೇರೆ ಇದಾನೆ. ಸರಿಯಾದ ಪ್ರೇರಣೆ ಕೊಡು, ಮಗುವಿನ ಬಾಳನ್ನು ಚೆನ್ನಾಗಿ ಮಾಡು, ಅಂತ ದೇವರನ್ನ ಕೇಳಿಕೋ."

* * * *

ಅಜ್ಜಿ ಅನುಭವದಿಂದ ಹೇಳಿದ ಮಾತು. ನನ್ನ ಮನಸ್ಸು ಅದನ್ನು ಒಪ್ಪಿತು. ನಾನು ಚಿಂತಿಸುವುದನ್ನು ಬಿಟ್ಟೆ. ದೇವರೆದುರಿಗೆ ನಿಂತು ಪ್ರೇರಣೆ ಕೊಡು ಅಂತ ಕೇಳಿದೆ. ಒಂದು ಪ್ರೇರಣೆ ಅಂತ ಕಂಡಿತು. ಅದರಂತೆ ಮಾಡಿದೆ. ಮಗಳ ಮದುವೆ ಆಯಿತು. ಅವರು ಸುಖವಾಗಿದ್ದಾರೆ.

ಅಜ್ಜಿ ಈಗ ಇಲ್ಲ. ಅವರು ಕೊಟ್ಟ ಬುದ್ಧಿವಾದ ಈಗಲೂ ನನ್ನ ಬಾಳಿನ ಬೆಳಕಾಗಿ ನನ್ನನ್ನು ಕಾಯುತ್ತಿದೆ.

ಎಮ್ಮೇ ಕಳವು

ನಮ್ಮ ಲಾಯರ್ ಮಿತ್ರರೊಬ್ಬರು ಹೇಳಿದ ಕತೆ ಇದು.

ನಾನು ಇಪ್ಪತ್ತು ವರ್ಷದ ಹಿಂದೆ ಲಾಯರ್ ಆದ ಹೊಸದರಲ್ಲಿ ಚಾಮರಾಜಪೇಟೆಯಲ್ಲಿ ಒಂದು ಸಣ್ಣ ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ಬಾಳು ನಡೆಸಿದೆ. ಆಗ ನನಗೆ ಪಕ್ಕದ ಹಳ್ಳಿಯಿಂದ ಒಂದು ಮನೆಯ ತರುಣಿ ಹಾಲು ತಂದು ಕೊಡುತ್ತಿದ್ದಳು. ಕೆಲವು ದಿನ ಅವಳ ಅಣ್ಣ ಹಾಲನ್ನು ತರುವನು. ನನ್ನ ಮನೆಯಾಕೆ ಇವರೊಂದಿಗೆ ಆಗಾಗ ಮಾತನಾಡಿ ಅವರ ಜೀವನದ ಸಂಗತಿ ಕೆಲವನ್ನು ತಿಳಿದುಕೊಂಡಿದ್ದರು.

ಇವರು ಕೆಂಗೇರಿಯ ಸಮೀಪದ ಒಂದು ಹಳ್ಳಿಯ ಜನ. ತಂದೆ ವಯಸ್ಸಾದ ಮನುಷ್ಯ, ತಾಯಿ ತೀರಿಕೊಂಡಿದ್ದಳು. ಪ್ರಾಯದಲ್ಲಿ ತಂದೆ ಬೇಸಾಯ ಮಾಡಿ ಜೀವನ ನಡೆಸಿದ, ಈಗ ಅದು ಕಷ್ಟ. ಈ ಮಗ ಬೇಸಾಯಕ್ಕೆ ಬಗ್ಗಲಿಲ್ಲ. ತಾವೇ ಸಾಗು ಮಾಡಿದರೆ ಬೆಳೆಯೆಲ್ಲ ತಮ್ಮದು, ಸುಖವಾಗಿ ಬಾಳಬಹುದು. ವಾರಕ್ಕೋ ಗುತ್ತಿಗೆಗೋ ಕೊಟ್ಟರೆ ಬೆಳೆದದ್ದರಲ್ಲಿ ಇವರಿಗೆ ಬರುವುದು ಅರ್ಧವೋ ಕಾಲುಪಾಲೊ. ಹಳ್ಳಿಯಲ್ಲಿದ್ದಾಗಲೂ ಇವರ ಮನೆಯಲ್ಲಿ ಒಂದು ಹಸು, ಒಂದು ಎಮ್ಮೆ ಇದ್ದವು. ಮಗ ದನಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ. ಅಪ್ಪ ಯೋಚನೆ ಮಾಡಿ, "ಎಲಾ ಅಪ್ಪ, ನೀನು ಬೇಸಾಯಕ್ಕೆ ಒದಗಲಿಲ್ಲ. ಎಮ್ಮೆನ ಹಸಾನ ನೋಡಿಕೊಳ್ಳುತ್ತಿದ್ದೀಯ. ನನ್ನ ದಿನ ಆಯಿತು. ನಾನು ಇನ್ನು ಬಾಳಿ ಮಾಡಬೇಕಾದ್ದೇನೂ ಇಲ್ಲ. ನೀನು ನಿನ್ನ ತಂಗಿ ಸುಖವಾಗಿದ್ದರೆ ಸಾಕು. ನೆಲಾನ ಮಾರಿ ಇನ್ನೆರಡೆಮ್ಮೆ ಇನ್ನೆರಡು ಹಸ ಕೊಂಡು ಬೆಂಗಳೂರಲ್ಲಿ ಹಾಲು ಮಾರಿ ಬದುಕುತೀಯಾ ಹೇಳು. ಐದು ವರ್ಷ ದುಡಿದರೆ ಕೈಯಲ್ಲಿ ನಾಲ್ಕು ಕಾಸು ಉಳಿಯತದೆ. ತಂಗಿಗೆ ಮದುವೆ ಮಾಡು. ಆಮೇಲೆ ನೀ ಮದುವೆ ಆಗು. ಏನಂತೀಯಾ?" ಎಂದ. ಮಗ

“ಆಗಲಿ ಅಪ್ಪಾ” ಎಂದ. ತಂದೆ ಮಗಳನ್ನು ಕೇಳಿದ. ಅವಳೂ ಆಗಲಿ. ಎಂದಳು. ತಂದೆ, ಇಬ್ಬರು ಮಕ್ಕಳು, ಚಾಮರಾಜಪೇಟೆಯ ಪಕ್ಕದ ಈ ಹಳ್ಳಿಗೆ ಬಂದರು.

ಬಂದು ಮೂರು ವರ್ಷ ಆಗಿದೆ. ಇವರು ಮೂರು ಕಾಸು ಮಾಡಿದ್ದೂ ಆಗಿದೆ. ಚೆನ್ನಾಗಿ ರೂಪಕ್ಕೆ ಬರುತ್ತಿದ್ದ ಮನೆಯ ಬಾಳಿನಲ್ಲಿ ಹುಡುಗನಿಂದ ಸ್ವಲ್ಪ ಕಷ್ಟ ಆರಂಭ ಆಯಿತು. ಪ್ರಾಯದ ಹುಡುಗ, ಊರಿನಲ್ಲಿ ಇದ್ದಿದ್ದರೆ ಒಂದು ರೀತಿಯಲ್ಲಿ ಕ್ಷೇಮವಾಗಿ ಬಾಳನ್ನು ನಡೆಸಬಹುದಾಗಿತ್ತು. ಮೂರು ಪಾಲು ಜನ ಸಭ್ಯರಾಗಿರುತ್ತಾರೆ. ಬೆಂಗಳೂರಿನ ತೀರ ಹತ್ತಿರದ ಹಳ್ಳಿಗಳಲ್ಲಿ ಈ ಒಳ್ಳೇತನ ಕಡಿಮೆ, ಪೋಲಿ ಆಟ ಸ್ವಲ್ಪ ಹೆಚ್ಚು. ಹುಡುಗ ಒಬ್ಬರಿಬ್ಬರು ದುಷ್ಟರ ಪರಿಚಯ ಮಾಡಿಕೊಂಡ. ಅತ್ತ ಇತ್ತ ಹೋದ. ಇಸ್ಪೀಟಾಟ ಕಲಿತ. ಜೂಜಿಗೆ ಕೈಯಿಟ್ಟ. ಒಮ್ಮೆ ಯಾರೊಂದಿಗೋ ಹೋಗಿ ಕುಡಿದು ಬಂದ. ಕೆಲವು ದಿನದ ಮೇಲೆ ಒಂದು ದಿನ ಯಾವಳೋ ಒಬ್ಬ ಕೆಟ್ಟ ಹೆಂಗಸಿನ ಮನೆಗೆ ಹೋಗಿ ಹೊತ್ತು ಮಾಡಿಕೊಂಡು ಮನೆಗೆ ಬಂದ. ತಂದೆಗೆ ಮಗನ ಈ ನಡತೆಯ ಮಾತು ಅಷ್ಟಾಗಿ ತಿಳಿಯದು. ತಂಗಿ ಇದನ್ನೆಲ್ಲ ಚೆನ್ನಾಗಿ ಬಲ್ಲಳು. ಒಂದು ದಿನ ಹಾಲು ಕೊಡುವುದಕ್ಕೆ ಹೊರಟಾಗ ಅಣ್ಣನನ್ನು ಜೊತೆಗೆ ಬಾ ಎಂದು ಕರೆದು ಅವನಿಗೆ, “ನೀನು ಹೀಗೆಲ್ಲಾ ಮಾಡಬೇಡ. ಅಪ್ಪನಿಗೆ ತಿಳಿದರೆ ತುಂಬಾ ದುಃಖ ಪಡುತ್ತಾನೆ. ನಾನೂ ನೀನೂ ಚೆನ್ನಾಗಿ ನಡಕೊ ಬೇಕು,” ಎಂತ ಹೇಳಿದಳು. ಅವನು, “ಈಗೇನಂಥಾದ್ದು ಆದದ್ದು? ಅಣ್ಣನಿಗೆ ಬುದ್ಧಿ ಹೇಳೋ ತಂಗಿ ಆದೆಯೋ ನೀನು? ನಿನಗೆ ಈ ಭಯ ಬೇಡ,” ಅಂದ.

ಕೆಲವು ದಿನ ಕಳೆದಿವೆ. ದನಗಳನ್ನು ನೋಡಿಕೊಳ್ಳುವ ಕೆಲಸ ತಕ್ಕಷ್ಟು ಇದೆ. ಇಬ್ಬರೂ ದುಡಿದರೆ ಕೊಟ್ಟಿಗೆ ಚೆನ್ನಾಗಿ ಇದ್ದೀತು. ದನಕ್ಕೆ ಹುಲ್ಲು ತರಬೇಕು. ಕಾಳು ಸರಿಮಾಡಬೇಕು. ಹಾಲು ಕರೆಯಬೇಕು. ಕರೆದ ಹಾಲನ್ನು ಇಪ್ಪತ್ತು ಮನೆಗೆ ಕೊಡಬೇಕು. ತಿಂಗಳು ತಿಂಗಳೂ ಮೊದಲನೆಯ ದಿನಗಳಲ್ಲಿ, ಇಲ್ಲ ಗೊತ್ತಾದ ದಿನದಲ್ಲಿ, ಹೋಗಿ, ಬೇಕಾದರೆ ಕಾದು, ಬರಬೇಕಾದ ಹಣವನ್ನು ತಕೊಂಡು ಬರಬೇಕು. ಇದೆಲ್ಲಾ ತಕ್ಕಷ್ಟು ಕೆಲಸ. ಅಣ್ಣ ತಂಗಿ ಇಬ್ಬರೂ ಮಾಡಿದರೂ ಮೈ ಮುರಿದು ಮಾಡಬೇಕಾದಷ್ಟು ಇದೆ. ಆದರೆ ಅಣ್ಣ ಈ ಕೆಲಸಕ್ಕೆ ನೆರವಾಗಿ ನಡೆದುಕೊಳ್ಳಲಿಲ್ಲ. ವಿಧಿಯಿಲ್ಲದೆ ಹುಡುಗಿ ಹತ್ತಿರದ ಜನರಲ್ಲಿ ಸಹಾಯ

ಪಡೆಯಬೇಕಾಯಿತು. ಇವರು ಮಾಡಿಕೊಂಡಿದ್ದ ಮನೆಗೆ ಹತ್ತು ಮನೆಯಾಚೆ ಒಬ್ಬ ಪ್ರಾಯದ ಮನುಷ್ಯ ವಾಸವಾಗಿದ್ದ. ಅವನು ಸಂಸಾರಿ. ಹೆಂಡತಿ ಮಕ್ಕಳು ಉಳ್ಳವನು. ನೆಲ ಉಳ್ಳವನು. ಬೇಸಾಯ ಮಾಡಿಸುತ್ತಿದ್ದ. ತಾನೂ ಒಂದು ಎಮ್ಮೆ ಒಂದು ಹಸು ಕಟ್ಟಿದ್ದ. ಮಾರುತ್ತಿದ್ದ. ಹುಡುಗಿ ಒಂದು ಸಲ ಇವನು ತನ್ನ ಮನೆಗೆ ಹುಲ್ಲು ತರುತ್ತಿದ್ದಾಗ ನೋಡಿ, "ಅಪ್ಪಾ ನೀವು ದನ ಕಟ್ಟಿರೋರು ಹ್ಯಾಗೂ ಹುಲ್ಲು ತರುತ್ತೀರಿ. ನಮಗೂ ಒಂದಷ್ಟು ಹುಲ್ಲು ತಂದುಕೊಡಬಹುದೆ?" ಎಂತ ಕೇಳಿದಳು. ಅವನು, "ಯಾಕವ್ವ, ನಿಮ್ಮ ಅಣ್ಣ ತರೋಲ್ಲವೆ?" ಎಂತ ಕೇಳಿದ. "ತರತಾನೆ, ಒಂದೊಂದು ಸಲ ಬೇರೆ ಕೆಲಸ ಇದ್ದು ತರೋಕೆ ಆಗೋಲ್ಲ, ನಾನೇ ಹೋಗಿ ತರಬೇಕು. ದನ ನೋಡಿಕೊಳ್ಳೋದು, ಅಡಿಗೆ, ಅಪ್ಪನ ಆರೈಕೆ; ಬಿಡುವು ಇರೋದಿಲ್ಲ." "ಆಯಿತವ್ವ, ಬೇಕಾದಾಗ ಹೇಳು. ತಂದು ಕೊಡುತ್ತೇನೆ". ಹೀಗೆ ಈ ಪ್ರಾಯದ ಮನುಷ್ಯನೊಂದಿಗೆ ಈ ತರುಣಿಯ ಸಂಬಂಧ ಸ್ವಲ್ಪ ಹತ್ತಿರವಾಯಿತು. ಹುಡುಗಿ ಪ್ರಾಯಕ್ಕೆ ಬಂದಿದ್ದಾಳೆ. ಚೆಲುವೆ. ಮಾತು, ರೀತಿ, ಚೆನ್ನ. ಪರಿಚಯದ ಪ್ರಾಯದ ಮನುಷ್ಯ ತೀರ ಸಹಜವಾಗಿ ಇವಳ ಸ್ನೇಹ ಮಾಡಿಕೊಳ್ಳೋಣ ಎಂದುಕೊಂಡ. ಬಹು ಉಪಾಯದಿಂದ, ಬಹು ಎಚ್ಚರದಿಂದ ಮಾತನ್ನೆತ್ತಿ ಸೂಚನೆ ಕೊಟ್ಟು ಅವಳು ತನಗೆ ಹೊಂದಿಕೊಳ್ಳಬಹುದೇ ಎಂತ ಕೇಳಿದ, ಹುಡುಗಿ, "ಉಂಟೇ ಅಪ್ಪ? ಅಪ್ಪ ನಾ ಮದುವೆಯಾಗಿ ಬಾಳಬೇಕು ಅಂತ ಇದ್ದಾರೆ. ನಾನು ದಾರಿ ಬಿಟ್ಟರೆ ಮದುವೆ ಆಗೋದು ಹ್ಯಾಗೆ? ಅಣ್ಣ ಬೇರೆ ಇದ್ದಾನೆ. ಅವನು ಸುಮ್ಮನೆ ಇರುತಾನಾ? ನನ್ನನ್ನು ದಂಡಿಸುತ್ತಾನೆ. ನಿನ್ನನ್ನೂ ದಂಡಿಸೋನೆ," ಎಂದಳು. "ಸರಿ ಕಣವ್ವ, ಏನೋ ಆಶೆ ಆಯಿತು. ಕೇಳಿದೆ. ನಿನ್ನ ನೋಡಿದರೆ ಆಸೆ ಆಗದೆ ಇರತದೆಯಾ? ನೀನು ತಪ್ಪು ತಿಳಿಯಬೇಡ."

ಮಾತನ್ನೆತ್ತಿದ ಮೊದಲ ದಿನ ಹೀಗೆ ಹೇಳಿದನಾದರೂ ಅವನು ಯೋಚನೆಯನ್ನು ಬಿಡಲಿಲ್ಲ. ಹುಡುಗಿಯೊಡನೆ ಮತ್ತಷ್ಟು ಮರ್ಯಾದೆಯಿಂದ ನಡೆದುಕೊಂಡ. ಬಹು ಸಭ್ಯವಾದ ಮಾತುಗಳನ್ನು ಆಡಿದ. ಅವಳನ್ನು ಕನಿಕರದಿಂದ ನೋಡಿದ. ಉಪಾಯವಾಗಿ ಅವಳ ಮನಸ್ಸನ್ನು ಮೆದುಮಾಡಿದ. ಅವಳ ಅಣ್ಣನ, ತಂದೆಯ, ಪರಿಚಯವನ್ನೂ

ಮಾಡಿಕೊಂಡು ಆಗಾಗ ಈ ಮಾತು, ಆ ಮಾತು ಆಡುತ್ತಾ ಅವರಿಗೂ ತುಂಬ ಬೇಕಾದವನಾದ. ತಂದೆಯಾದವನು ಒಂದು ಸಲ ಇವನಿಗೆ, "ಅಪ್ಪಾ, ನೀವು ಬಹಳ ಒಳ್ಳೆಯವರಾಗಿದ್ದೀರಿ. ನಮ್ಮ ಮಗಳಿಗೆ ಒಬ್ಬ ಹೈದನ್ನ ನೋಡಿಕೊಡಿ. ಹತ್ತು ಜನಾನ ಬಲ್ಲವರು, ನಿಮ್ಮಿಂದ ಇದು ಆಗುತ್ತೆ," ಎಂದು ಹೇಳಿದ. ಅವನು, "ಆಯಿತು ಅಜ್ಜ, ಮಾಡೋಣಂತೆ," ಎಂದ.

ಈ ಮಧ್ಯೆ ಅಣ್ಣನ ದಾರಿ ಮತ್ತಷ್ಟು ಕೆಟ್ಟಿತ್ತು. ಹಾಲು ಮಾರಿ ಬಂದ ಕಾಸು ಮನೆಯಲ್ಲಿ ಒಂದು ಸಣ್ಣ ಪೆಟ್ಟಿಗೆಯಲ್ಲಿರುವುದು. ಬೇಕಾದ ಸಾಮಾನು ತರುವುದಕ್ಕೆ ತಂಗಿ ಅಣ್ಣ ಇಬ್ಬರೂ ಅದನ್ನು ಬೇಕದಾಗ ತೆರೆಯುವರು; ಅವಶ್ಯವಾದ ಕಾಸನ್ನು ತೆಗೆದುಕೊಳ್ಳುವರು. ಒಳ್ಳೆ ದಾರಿಯಲ್ಲಿ ಇದ್ದಷ್ಟು ದಿನ ಅಣ್ಣ ತನಗಾಗಿ ಎಂದು ಎಂದೆ ಆಗಲಿ ಬಹಳ ಕಾಸು ತೆಗೆದುಕೊಂಡವನಲ್ಲ. ಕೆಟ್ಟ ದಾರಿಗೆ ಬಿದ್ದ ಮೇಲೆ ಅವನು ಕಾಸು ತೆಗೆದುಕೊಳ್ಳುವುದು ಹೆಚ್ಚಾಯಿತು. ತಂಗಿ ಇದನ್ನು ಗಮನಿಸಿದಳು. ಒಂದು ದಿನ ಅವನು ಪೆಟ್ಟಿಗೆಯನ್ನು ತೆರೆದಾಗ ಹತ್ತಿರದಲ್ಲಿ ನಿಂತಳು. ಎಷ್ಟು ತೆಗೆದುಕೊಳ್ಳುತ್ತಾನೆ ಎಂದು ನೋಡಿದಳು. ತಂಗಿ ಪಕ್ಕದಲ್ಲಿ ನಿಂತು ನೋಡುತ್ತಿದ್ದಾಳೆ ಎಂದು ಬಲ್ಲ ಅಣ್ಣ, ಅವಳಿಲ್ಲದಿದ್ದರೆ ಎಷ್ಟು ತೆಗೆದುಕೊಳ್ಳುತ್ತಿದ್ದನೋ, ಅವಳು ಇದ್ದಾಳೆ ಎಂಬ ಕಾರಣದಿಂದ ಐದು ರೂಪಾಯಿಗಳ ಹತ್ತು ನೋಟುಗಳ ಸಣ್ಣ ಒಂದು ಕಟ್ಟನ್ನು ಎತ್ತಿಕೊಂಡ. ತಂಗಿ "ಏನು ತರಬೇಕಣ್ಣ? ಐವತ್ತು ರೂಪಾಯಿ ತಗೊಂಡಿದ್ದೀಯಲ್ಲ," ಎಂತ ಕೇಳಿದಳು.

"ಅಲ್ಲಿ ಒಬ್ಬರಿಗೆ ಕೊಡಬೇಕಾಗಿದೆ. ಅದಕ್ಕಾಗಿ ತಕ್ಕೊಂಡೆ."

"ಅವರಿಂದ ಏನು ತಗೊಂಡೆ?"

"ಏನೂ ತಗೊಳ್ಳಲಿಲ್ಲ."

"ಮನೆಗೇನಾದರೂ ತರೋಕೆ ತಕ್ಕೊಂಡೆಯೇನೋ ಅಂದುಕೊಂಡೆ. ಯಾಕೆ ಕೊಡಬೇಕು ಅವರಿಗೆ ಐವತ್ತು ರೂಪಾಯಿ?"

"ಅವರಿಗೆ ಕೊಡಬೇಕಾಗಿ ಬಂತು."

"ಕೊಡಬೇಕಾಗಿ ಬಂತೆ? ಏನಾಯ್ತು?"

ಅಣ್ಣ ಅದನ್ನು ಹೇಳುವಂತಿಲ್ಲ. ಅವನು ಆ ಹಣವನ್ನು ಜೂಜಿನಲ್ಲಿ ಸೋತಿದ್ದ. ಈ ಹಿಂದೆ ಹೀಗೆ ಸೋತದ್ದುಂಟು. ಹೀಗೆ ಹಣ ತೆಗೆದುಕೊಂಡು ಹೋಗಿ ಕೊಟ್ಟಿದ್ದುಂಟು. ತಂಗಿ ನೋಡಿರಲಿಲ್ಲ. ಆಮೇಲೆ ಗಮನಿಸಿರಬೇಕು. ಹಣ ಕಡಿಮೆ ಆಗತಾ ಇದೆ ಅನ್ನೋದನ್ನ ಕಂಡೇ ಹತ್ತಿರ ನಿಂತು ನೋಡಿರಬೇಕು. ಆದ್ದರಿಂದ ಈ ಪರೀಕ್ಷೆ ಅವನು, "ಅದೆಲ್ಲ ನಿನಗ್ಯಾಕೆ? ನನಗೆ ಬೇಕು. ನಾ ತಗೋತೀನಿ," ಎಂದ.

"ಅಣ್ಣ, ಈ ಹಣ ಅಪ್ಪಂದು. ನನ್ನದಲ್ಲ. ನಿನ್ನದಲ್ಲ. ಮನೇ ಕೆಲಸಕ್ಕೆ ಅಂತ ತಗೊಂಡರೆ ನಾನೂ ತಗೋಬಹುದು; ನೀನೂ ತಗೋಬಹುದು; ಅಪ್ಪನ್ನ ಕೇಳಬೇಕಾಗಿಲ್ಲ. ಮನೆ ಕೆಲಸಕ್ಕಲ್ಲದೆ ಇದ್ದರೆ ಅಪ್ಪನ್ನ ಕೇಳಿ, ಇಂಥಾದಕ್ಕೆ ಅಂತ ಹೇಳಿ, ತಕ್ಕೋಬೇಕು."

"ಲೇ ತಂಗಿ! ನೀ ತಂಗಿ. ಅಮ್ಮ ಅಲ್ಲ, ಅಕ್ಕ ಅಲ್ಲ, ಬುದ್ಧಿ ಹೇಳೋಕೆ. ಅಪ್ಪನ ಕಾಸಿಗೆಲ್ಲಾ ನಾನು ಒಡೆಯ, ನಾನು ಬೇಕಾದ್ದು ಮಾಡತೀನಿ. ನಿನಗೆ ಅದಕ್ಕೆ ಸಂಬಂಧ ಇಲ್ಲ."

"ಸಂಬಂಧ ಇಲ್ಲ? ಯಾಕಿಲ್ಲ ಸಂಬಂಧ? ಹಾಲು ಮಾರಿ ತರೋ ಕಾಸು. ದನ ಸಾಕೋಳು ನಾನು, ಹಾಲು ಕರೆಯೋಳು ನಾನು, ಹಾಲು ಮಾರೋಳು ನಾನು. ಇದನೆಲ್ಲ ನೀನೂ ಮಾಡಿದಿ ಆರು ತಿಂಗಳು. ಮಾಡಿದ್ದು ಅಲ್ಲಿಗೆ ನಿಂತಿತು. ಈಗ ಈ ಮನೇಲಿ ನಿನ್ನ ಮುಖ ನೋಡೋ ಹಂಗಿಲ್ಲ. ಕಾಸು ಯಾರದು? ದುಡಿಯುತಾ ಮನೇಲಿರೋರದಾ? ಆಡತಾ ಬೀದಿ ಸುತ್ತೋರದಾ? ನನ್ನ ಮಾತು ಮಾತಲ್ಲ ಅಂದರೆ ಅಪ್ಪನಿಗೆ ಹೇಳತೀನಿ, ಅವನೇ ಹೇಳತಾನೆ".

"ಹೇಳಲಿ ಅಪ್ಪ. ನಾನು ಹೇಳೋ ಮಾತನ್ನ ಅಪ್ಪನಿಗೆ ಹೇಳತೀನಿ".

ತಂಗಿ ಆ ದಿನ ತಂದೆಗೆ ಇದನೆಲ್ಲ ಹೇಳಿದಳು. "ಕಷ್ಟ ಬಿದ್ದು ಸೇರಿಸಿರೋ ಕಾಸು. ನನಗೆ ಮಗನಿಗೆ ಮದುವೆ ಮಾಡುಬೇಕು ಅಂತ ಇದ್ದೀ. ಕಾಸು ಹೀಗೆ ಪೋಲಾದರೆ ಮದುವೆ ಆದಾತೇ?" ಎಂದಳು. ಇವರು ಈ ಮಾತನಾಡುವ ಹೊತ್ತಿನಲ್ಲಿ ಇವರ ಗುರುತಿನ ಆ ದೊಡ್ಡ ಮನುಷ್ಯ ಬಂದ. ಮಗಳ ಮಾತಿಗೆ ದನಿ ಕೂಡಿಸಿದ. ಅಪ್ಪನ ಮನಸ್ಸನ್ನ ಕೆಡಿಸಿದ.

ಮಾರನೆಯ ದಿನ ಮಗ ಮನೆಗೆ ಬಂದದ್ದೇ ಅಪ್ಪ, "ಎಲಾ ಆಯ್ಯ, ರಾತ್ರಿ ಎಲ್ಲಿ ಮಲಗಿದ್ದೆಯೋ? ಏನು ಮನೆಯಾಗೆ ಇರೋದೇ ಇಲ್ಲವಲ್ಲೋ. ದನವಿನ ಕೆಲಸ ಎಲ್ಲಾ ನಿನ್ನ ತಂಗಿ ಒಬ್ಬಳು ಮಾಡೋಕೆ ಆದಾತಾ? ಮನಿಯಾಗಿರಪ್ಪ," ಎಂದು ಹೇಳಿದ. "ಮಗಳು ನಿನ್ನ ಎತ್ತಿ ಕಟ್ಟಿದಳೋ ಈ ಮಾತ ಹೇಳೋಕೆ? ದನಾನ ನಾನು ನೋಡಿಕೊಳ್ಳತಿಲ್ಲವಾ? ಹಿಂದಿನ ಸಲ ಹುಲ್ಲು ತಂದದ್ದು ಯಾರು?" ಈ ಮಾತು ಕೇಳಿಕೊಂಡು ಮಗಳು ಬಳಿಗೆ ಬಂದಳು. "ಹಿಂದಿನ ಸಲ ಹುಲ್ಲು ತಂದದ್ದು ನೀನು. ಅದಕ್ಕೆ ಹಿಂದಿನ ಮೂರು ಸಲ ಯಾರು ತಂದರು?" "ಓ ಅಪ್ಪನ ಜೊತೆಗೆ ಸೇರಿಕೊಂಡು ನೀನೂ ನನ್ನ ಕಾಡೋಕೆ ನೋಡತೀಯಾ?" ತಂದೆಗೆ ಕೋಪ ಬಂದಿತು. "ಎಲಾ ಅಪ್ಪ. ನೀನು ಬೆಳೆದ ಹುಡುಗ. ಬೆಳೆದ ಮೇಲೆ ಮಗ ಅಪ್ಪನಿಗೆ ಸಮನೆ. ಅಂದರೂ ಹಂಗಂತ ಮಗ ಅಪ್ಪನ್ನ ಕಸ ಮಾಡತೇನೆ ಅನ್ನಬಾರದಲ್ಲಾ."

"ಸರಿ, ನಾನು ನಿನ್ನ ಕಸ ಮಾಡಿದೆನಾ? ಇವಳು ನನ್ನ ಕಸ ಮಾಡಿದಳಾ? ಮಗಳ ಮಾತೇ ನಿನಗೆ ಸರಿ ಅನ್ನಿಸಿದರೆ ಬೇಡದ ಮಗ ನನಗೆ ಪಾಲು ಕೊಟ್ಟು ಹೊರಗೆ ಹಾಕು".

"ಎಲಾ ಮಗನೆ, ಅಳತೆ ತಿಳಿದು ಮಾತನಾಡೋ! ಈ ಮನೇಲಿರೋ ಸ್ವತ್ತೆಲ್ಲ ನಂದು, ಇದರಲ್ಲಿ ನಿನ್ನದೇನಿದೆ?"

"ನನ್ನದೇನಿದೆ? ಮಗನ ಪಾಲಿದೆ! ಊರಿನಲ್ಲಿ ಗೌಡರ ಮನೆ ಪಾಲಾಯಿತಲ್ಲ. ಹಿರೇರ ಆಸ್ತೀಲಿ ಮನೆ ಮಗನಿಗೆ ಪಾಲು ಉಂಟು ಅಂತ ಕೊಡಲಿಲ್ಲವಾ? ನಮ್ಮ ಹಿರೇರದು ನೆಲ ಮನೆ ಮಾರಿ ಇಲ್ಲಿ ಮನೆ ಮಾಡಿದಿವಿ. ಎಮ್ಮೆ ಹಸು ಕಟ್ಟಿ ಕಾಸು ಗಳಿಸಿದಿವಿ. ಇನ್ನು ನನಗೆ ಇದರಲ್ಲಿ ಪಾಲಿಲ್ಲ ಅಂತ ಅಂದರೆ ನಡೀತದೆಯಾ?"

ಹೊರಗಿಂದ ಬಂದಿದ್ದ ಮನುಷ್ಯ ಮಗನಿಗೆ, "ಅಯ್ಯ, ಅಪ್ಪನೊಂದಿಗೆ ಇಷ್ಟು ದೊಡ್ಡ ಮಾತು ಯಾಕೆ ಆಡುತಿ? ಮನೇಲಿರಪ್ಪಾ ಅಂತ ಅಪ್ಪ ಹೇಳಿದರೆ ಇರತೀನಪ್ಪಾ ಅಂತ ಅನ್ನು, ಮಗನಾಗಿ ನಡಕೋ. ಅಪ್ಪನ್ನ, ತಂಗೀನ ನೋಡಿಕೋ."

"ಅಪ್ಪನ್ನ ತಂಗೀನ ನೋಡಿಕೋ! ತಂಗೀನ ನೀ ನೋಡುಕೋತಾ ಇದ್ದೀಯಲ್ಲ. ನಾನು ನೋಡಿಕೊಳ್ಳೋದು ಏನು ಅದೆ?"

ಆ ಮನುಷ್ಯ ಮುಖ ಕೆಟ್ಟ. ಬಾಯಿ ತೆಗೆಯಲಿಲ್ಲ. ಹುಡುಗಿ ಮುಖ ಕೆಟ್ಟಳು. ಅವಳೂ ಬಾಯಿ ತೆರೆಯಲಿಲ್ಲ.

ತಂದೆಗೆ ಇದುವರೆಗೆ ತೋರದೆ ಇದ್ದ ಶಂಕೆ ತೋರಿತು. ಎರಡು ನಿಮಿಷ ಸುಮ್ಮನಿದ್ದವನು, "ಅಪ್ಪ, ನೀನು ಪೆಟ್ಟಿಗೆಯಿಂದ ದಿನಾ ಅಷ್ಟಷ್ಟು ರೂಪಾಯಿ ತಗೊಂಡು ಹೋಗುತಾ ಇದ್ದೀಯಂತೆ. ನೀನೇ ಬೆಳೆಸಿದ ಕಾಸು ಅನ್ನೋಣ. ದಿನಾ ಹಿಂಗೆ ಕಳೆದರೆ ಅದು ಎಷ್ಟು ದಿವಸ ನಿಲ್ಲುತ್ತಪ್ಪಾ? ನಿನ್ನ ಪಾಲಷ್ಟೇ ಹೋಗತದೆಯೇ? ನನ್ನ ಪಾಲೂ ಹೋಗತ್ತೆ. ಕಳೆಯಲೇ ಬೇಕೂ ಅಂದರೆ ನಿನ್ನ ಪಾಲನ್ನ ಕಳಿ, ಬಲ್ಲವರನ್ನ ಕರಿ. ಪಾಲು ಮಾಡಿಬಿಡೋಣ," ಎಂದ.

"ಮಾಡಿಬಿಡು, ನಾ ಎತ್ತಲಾಗಾದರೂ ತೊಲಗತೀನಿ. ನೀನು ನಿನ್ನ ಮಗಳು ಸುಖವಾಗಿರಿ. ನಿನಗೆ ನೆರವಾಗಿ ಈ ಮನುಷ್ಯ ಇರತಾನೆ."

ಮಾತು ಆ ಘಟ್ಟಕ್ಕೆ ಬಂದ ಮೇಲೆ ಮುಂದಕ್ಕೆ ಹೋಗದೆ ನಿಂತೀತೇ? ಮುಂದಕ್ಕೆ ಹೋಯಿತು. ತಂಗಿ ಆ ದಿನ ನಮ್ಮ ಮನೆಗೆ ಬಂದು ನಡೆದ ಸಂಗತಿಯನ್ನೆಲ್ಲ ನನಗೆ ಹೇಳಿ, "ದೊಡ್ಡವರು ನೀವು. ನಿಮ್ಮಂತೆ ಇನ್ನೊಬ್ಬನ ಜೊತೆಗೆ ಇರಿಸಿಕೊಂಡು ಈ ಪಾಲನ್ನ ಮಾಡಿಕೊಡಿ. ಅಣ್ಣ ಅವನ ಪಾಲು ತಕೊಂಡು ಬೇರೆಯಾಗಿ ಬಾಳಲಿ, ನಮಗನಕ ಒಂದು ಪಾಲು ನಿಲ್ಲತ್ತದೆ. ಆಸ್ತಿ ಎಲ್ಲ ಹೋಗೋ ಮುನ್ನ ಪಾಲಾದರೆ ಇಷ್ಟು ನಿಲ್ಲತದೆ. ಇಲ್ಲ ಅಂದರೆ ಅದೂ ಹೋಗತದೆ. ದೊಡ್ಡ ಮನಸು ಮಾಡಿ ಇದು ನಡೆಸಿಕೊಡಿ," ಎಂದಳು.

ಮಧ್ಯೆ ಮಧ್ಯೆ ಈ ಅಣ್ಣನ ನಡತೆಯ ಮಾತು ನಮ್ಮ ಮನೆಯಾಕೆಯವರ ಕಿವಿಗೆ ಬಿದ್ದು, ತಂಗಿ ಇವರಿಗೆ ಹೇಳುತ್ತಿರುವಾಗಲೋ ಇಲ್ಲ ಆಮೇಲೆ ಅವರು ಹೇಳಿಯೋ, ನನ್ನ ಕಿವಿಗೂ ಬಿದ್ದಿತ್ತು. ಆದರೆ ಇವರ ವಿರಸ ಇಷ್ಟು ಕ್ರೂರ ಆದೀತು ಅಂತ ನನಗೆ ತೋರಿರಲಿಲ್ಲ. ನಾನು, "ಆಗಲಿ ತಾಯಿ. ನಿಮ್ಮಣ್ಣ ತಿರುಗಿ ಬಂದಾಗ ಅವನಿಗೆ ಈ ಮಾತು ಹೇಳಿ, ಅವನನ್ನ ನಿಮ್ಮ ತಂದೆಯನ್ನ ಜೊತೆಯಾಗಿ ಕರ ಕೊಂಡು ಬಾ. ಸಮಾಧಾನ ಆಗೋದಾದರೆ ನಿಮ್ಮಣ್ಣನಿಗೆ ಎಚ್ಚರ ಹೇಳಿ ಸಮಾಧಾನ ಮಾಡಿಸುತ್ತೇನೆ. ಆಗೋದಿಲ್ಲ ಅಂದರೆ ತಿಳಿದೇ ಇದೆ. ಅವನ ಪರವಾಗಿ ಒಬ್ಬರನ್ನ ಜೊತೆಗೆ ತಕ್ಕೊಂಡು ಪಾಲು ಮಾಡಿಸಿ ಕೊಡುತ್ತೇನೆ," ಎಂದೆ.

ಮರು ದಿನವೇ ಹುಡುಗಿ ತಂದೆಯನ್ನ ಅಣ್ಣನನ್ನ ಕರೆದುಕೊಂಡು ಬಂದಳು. ಆ ಅಣ್ಣ ಪಾಲಾಗಲೇಬೇಕು ಅಂತ ಪಟ್ಟು ಹಿಡಿದ. "ಪೆಟ್ಟಿಗೇಲಿರೋ ಕಾಸು ನನ್ನದೂ ಹೌದು. ಅದನ್ನ ತಗೊಳ್ಳೋಕೆ ನಾನು ಅಪ್ಪನ್ನ ಯಾಕೆ ಕೇಳಲಿ? ಅವಂದು ಅವನದಾಗಿರಲಿ. ನನ್ನದು ನನ್ನದಾಗಿರಲಿ. ನಾನು ಬೇರೆ ಆಗತೇನೆ. ಏನಾಗಬೇಕೋ ಆಗಿ ಹೋಗುತೀನಿ," ಎಂದ. ನಾನು, "ನಿನ್ನ ಪರವಾಗಿ ಯಾರನ್ನಾದರೂ ಗೊತ್ತು ಮಾಡು. ನಾವು ಇಬ್ಬರೂ ಸೇರಿ ಆಸ್ತಿಯನ್ನು ಹಂಚಿಕೊಡುತ್ತೇವೆ," ಎಂದೆ. "ನಾನು ಬೇರೆ ಯಾರನ ಕರೆಯಲಿ? ನಿಮ್ಮ ಗುರುತಿನ ಲಾಯರೊಬ್ಬರನ್ನ ನೀವೇ ಕರೆಯಿರಿ. ಅವರಿಗೆ ಕೊಡೋ ಫೀಜ ನಾ ಕೊಡುತೀನಿ. ನೀವೂ ಅವರೂ ಸೇರಿ ಪಾಲು ಮಾಡಿ."

ಅವನು ಹೀಗೆಂದ ಮೇಲೆ ನಾನು ನಮ್ಮ ಮನೆಯ ಎದುರು ಸಾಲಿನಲ್ಲಿದ್ದ ನನ್ನ ಜೊತೆ ಲಾಯರೊಬ್ಬರನ್ನು ನೆರವು ಮಾಡಿಕೊಂಡು, ಅವರನ್ನು ಅವನ ಲಾಯರು ಅಂತ ಒಪ್ಪಿಸಿ, ಅವಶ್ಯಕವಾದ ಕಾಗದವನ್ನು ಬರೆಸಿ, ಆಸ್ತಿಯ ವಿವರಗಳನ್ನು ಪಟ್ಟಿ ಮಾಡಿ, ಆಸ್ತಿಯನ್ನು ಹಂಚಿಕೊಟ್ಟೆ. ತಂದೆಗೆ ಕೊಟ್ಟ ಭಾಗದಲ್ಲಿ ಮಗಳ ಸಲುವಾಗಿ ಇಷ್ಟು ಅಂತ ನಾವಿಬ್ಬರೂ ಅಷ್ಟು ಹಣವನ್ನು ಸೇರಿಸಿದೆವು. ಹುಡುಗ, "ಎಮ್ಮೆ ಹಸುವನ್ನು ಯಾರು ನೋಡಿಕೊಳ್ಳುತ್ತಾರೆ. ನನಗೆ ದನ ಬೇಡ, ನನ್ನ ಪಾಲಿನ ದನದ ಬದಲು ನನಗೆ ಹಣಕೊಡಿ," ಎಂದ. ತಂದೆ "ಇದು ಆಗಬಹುದು," ಎಂದ. ಇದನ್ನೂ ಮಾಡಿದ್ದಾಯಿತು. ತನ್ನ ಪಾಲಿನ ಕಾಸನ್ನು ನಮ್ಮೆದುರಿಗೆ ಪಡೆದು ಸಂದಾಯ ಬರೆದುಕೊಟ್ಟು ಈ ಮಗ ಹೊರಟು ಹೋದ.

ಆಮೇಲೆ ಮೂರು ತಿಂಗಳು ಇವರ ಮಾತು ನಮ್ಮ ಹತ್ತಿರ ಮತ್ತೆ ಬರಲಿಲ್ಲ. ಆಮೇಲೆ ಒಂದು ದಿನ ಈ ಹುಡುಗಿ ನಮ್ಮ ಮನೆಗೆ ಬಂದು, "ಅಣ್ಣ ಹಿಂದಿನ ರಾತ್ರಿ ನಮ್ಮ ಮನೆಗೆ ಬಂದ; ನಾನು ಕಾಣದಂತೆ ಒಂದು ಎಮ್ಮೆಯನ್ನ ಬಿಚ್ಚಿಕೊಂಡು ಹೊರಟುಹೋದ. ಅದನ್ನ ಕಂಡವರು ನನಗೆ ಬೇಕಾದವರು ಬಂದು ನನಗೆ ಹೇಳಿದರು. ನಾನು ಹಿಂದೆ ಅಟ್ಟಿಕೊಂಡು ಹೋದೆ, ಅಣ್ಣನನ್ನ ತಡೆದೆ. "ಎಮ್ಮೆ ಅಪ್ಪನ ಪಾಲಿಗೆ ಬಂದಿದೆ, ಅಪ್ಪನ್ನ ಕೇಳಿ ತಗೊಂಡೆಯಾ? ಇಲ್ಲ ಅಂದರೆ ಕಳವಾಗತ್ತೆ, ಜೋಕೆ," ಎಂದೆ. ಅವನು ನನ್ನನ್ನು

ಹಿಡಿದು ದೂರಕ್ಕೆ ತಳ್ಳಿದ. ಕೊಸರಿಕೊಂಡು ಹೊರಟುಹೋದ. ಬೇಕಾದವರು ಸ್ವಲ್ಪ ದೂರದಲ್ಲಿ ಅವನ ಹಿಂದೇನೇ ಹೋದರು. ಅವನು ಆ ಎಮ್ಮೆಯನ್ನ ಪಕ್ಕದ ಹಳ್ಳೀಲಿ ಒಂದು ಮನೆ ಹತ್ತಿರಕ್ಕೆ ತಗೊಂಡು ಹೋಗಿ ಆ ಮನೆಯವರ ಹತ್ತಿರ ಅದನ್ನು ಬಿಟ್ಟು ಬಂದ. ಹಿಂದೆ ಹೋಗಿದ್ದವರು ಇವರು ಒಂದು ಗಳಿಗೆ ಬಿಟ್ಟು ಆ ಮನೆಗೆ ಹೋಗಿ ವಿಚಾರಿಸಿದರು. ಮನೆಯವರು, "ಆ ಎಮ್ಮೆನ ಕೊಂಡು ಕೊಂಡಿದೀವಿ, ಇಷ್ಟು ಹಣ ಕೊಟ್ಟಿದೀವಿ," ಅಂದರು. ಇವತ್ತು ಬೆಳಿಗ್ಗೆ ನಾ ಹೋಗಿ, "ಈ ಎಮ್ಮೆ ನಮ್ಮ ಅಪ್ಪನದು. ಪಾಲಾಗಿ ಬೇರೆ ಆಗಿರುವ ಅಣ್ಣ ಕದ್ದು ತಂದು ಇದನ್ನ ನಿಮಗೆ ಮಾರಿದ್ದಾನೆ. ಇದು ನಿಮಗೆ ಆಗುವುದಿಲ್ಲ. ನಮಗೆ ಹಿಂದಕ್ಕೆ ಕೊಡಿ" ಅಂತ ಕೇಳಿದೆ. ಅವರು ಕದ್ದದ್ದು ಅಂತ ನಾವೇನು ಬಲ್ಲೆವೆ? ನಮ್ಮ ಹಣ ನಮಗೆ ಕೊಟ್ಟು ಬೇಕಾದರೆ ತಗೊಂಡುಹೋಗು. ನಿಮ್ಮ ಅಣ್ಣನಿಂದ ಅ ಹಣ ಪಡಕೊ, ಎಂದರು. ಈಗೇನು ಮಾಡೋದು?" ಎಂತ ಕೇಳಿದಳು.

ಎಮ್ಮೆ ತಂದೇದು. ಅದನ್ನು ಹೊಡಕೊಂಡು ಹೋಗೋದಕ್ಕೆ ಮಗನಿಗೆ ಅಧಿಕಾರ ಇಲ್ಲ. ಹೊಡಕೊಂಡು ಹೋಗಿ ಮಾರಿದ್ದರೆ ಎಮ್ಮೆನ ಕದ್ದು ಮಾರಿದ್ದಾನೆ. ಪೊಲೀಸಿಗೆ ಫಿರ್ಯಾದು ಕೊಡಬಹುದು. ಕೊಟ್ಟರೆ ಕಳವು ಪ್ರಮಾಣ ಆಗುತ್ತದೆ. ಅವನು ಜೈಲಿಗೆ ಹೋಗುತ್ತಾನೆ. ಈ ತಂದೆ, ಈ ತಂಗಿ, ಹೀಗೆ ಮಾಡಬೇಕೇ? ಇದು ಒಂದು ಪಕ್ಷ. ಇನ್ನೊಂದು ಪಕ್ಷ: ಇವರು ಏನೂ ಮಾಡಲಿಲ್ಲ, ಅವನು ವಾರಬಿಟ್ಟು ತಿರುಗಿ ಒಂದು ರಾತ್ರಿ ಬಂದು ಇನ್ನೊಂದು ಎಮ್ಮೆನೋ, ಇಲ್ಲ ಒಂದು ಹಸೂನೋ, ಹೀಗೇ ತಗೊಂಡು ಹೋಗುತ್ತಾನೆ. ಮಾರುತಾನೆ. ಇವರು ಏನು ಮಾಡೋ ಹಾಗಿದೆ? ಮಗ ಅಂತ, ಅಣ್ಣ ಅಂತ, ಸುಮ್ಮನೆ ಇರಬೇಕು. ಇದಕ್ಕೆ ಕೊನೆ ಎಲ್ಲಿ?

ತುಂಬ ಯೋಚನೆ ಮಾಡಿ ನಾನು, "ನಿಮ್ಮ ಅಣ್ಣನ್ನ ಇಲ್ಲಿಗೆ ಹೇಗಾದರೂ ಕರೆದುತಂದೀಯಾ ತಾಯಿ?" ಅಂತ ಕೇಳಿದೆ.

"ನಾನು ಅವನ ಹತ್ತಿರ ಹೋಗೋ ಹಾಗಿಲ್ಲ. ಸೀಳುನಾಯಿ ಹಂಗೆ ಶಿರ್ರೆಂತಾನೆ".

"ನಿಮ್ಮ ಗುರುತಿನ ಈ ದೊಡ್ಡ ಮನುಷ್ಯ ಇದ್ದಾನಲ್ಲಾ ಅವರು ಅವನ್ನ ಕಾಣಬಹುದೋ?"

"ಅವರ ಮೇಲೆ ಅವನಿಗೆ ಇನ್ನಷ್ಟು ಸಿಟ್ಟು. ತನ್ನ ತಂಗೀನ ಕೆಡಿಸಿದ ಅಂತ ಅವರನ್ನ ಬೈಯುತಿದ್ದಾನೆ".

"ಸರಿ, ಇನ್ನು ಸ್ವಲ್ಪ ಯೋಚನೆಮಾಡಿ ಹೇಳುತ್ತೇನೆ ತಾಯಿ. ಎರಡು ಗಳಿಗೆ ಬಿಟ್ಟು ಬಾ."

ಹುಡುಗಿ ಹೊರಟು ಹೋದಳು. ನಾನು ಪಾಲು ಮಾಡುವುದರಲ್ಲಿ ನನ್ನ ಜೊತೆಗೆ ಸೇರಿದ್ದ ಲಾಯರ್ ಮಿತ್ರರ ಬಳಿಗೆ ಹೋಗಿ ಈ ವಿಷಯದಲ್ಲಿ ಹೇಗೆ ನಡೆಯುವುದೆಂದು ವಿಚಾರ ಮಾಡಿದೆ.

ನಮಗಿಬ್ಬರಿಗೂ ಈ ಅಣ್ಣ ತಂಗಿ ಜಗಳದಲ್ಲಿ ಹುಡುಗಿಯ ಮರ್ಯಾದೆಗೆ ಧಕ್ಕೆ ಬರುತ್ತೆ ಎನ್ನೋದು ದೊಡ್ಡ ಮಾತು ಅಂತ ಕಂಡಿತು. ಹೇಗಾದರೂ ಮಾಡಿ ಈ ಜಗಳ ಮುಂದಕ್ಕೆ ಹೋಗದ ಹಾಗೆ ತಡೆಯಬೇಕು.

ಎರಡು ಗಳಿಗೆ ಬಿಟ್ಟು ಹುಡುಗಿ ಬರಲಿಲ್ಲ. ಸರಿ ನಾಳೆ ಬಂದಾಳು ಎಂದು ನಾನು ಸುಮ್ಮನಾದೆ.

ಮಾರನೆಯ ದಿನ ಹುಡುಗಿ ಬರಲಿಲ್ಲ. ಈ ದೊಡ್ಡ ಮನುಷ್ಯ ಬಂದ. "ಆ ಹುಡುಗಿ ಬರೋಕೆ ಹಿಂತೆಗೆಯುತಿದಾಳೆ, ನನ್ನ ಕಳುಹಿದಳು. ಒಂದು ಸಂಗತಿ ಆಗ್ಯದೆ. ಅದನ್ನ ಹೇಳತೀನಿ. ನೀವು ನಿಂತು ಇವರಿಗೆ ಸಹಾಯ ಮಾಡಬೇಕು," ಎಂದ.

"ಏನು ಸಂಗತಿ?"

"ಎರಡು ಗಳಿಗೆ ಬಿಟ್ಟು ಬಾ ಎಂತ ನೀವು ಹೇಳಿದರಂತೆ. ಇವಳು ಮನೆಗೆ ಬರೋ ಹೊತ್ತಿಗೆ ನಮ್ಮ ಹಳ್ಳೀಲಿ ಬಲ್ಲವರೊಬ್ಬರು, "ನಿನ್ನೆ ರಾತ್ರಿ ಕಳವಾದ ಮಾತು ಈ ಹೊತ್ತು ದೂರು ಕೊಡದೇ ಇದ್ದರೆ ಪೊಲೀಸಿನೋರು, ಯಾಕೆ ತಡಮಾಡಿದೀ, ಕಳವಾದ್ದು ಸುಳ್ಳು, ಅನ್ನಬಹುದು. ಅವನ ಹತ್ತಿರ ಕಾಸು ತಗೊಂಡು ನಿನಗೆ ನಾನು ಹಾಕಬಹುದು. ಈಗಲೇ ಫಿರ್ಯಾದು ಕೊಡಿ," ಅಂದರು. ಅದೂ ಒಂದು ಮಾತು ಇರಲಿ ಅಂತ ನಾನು ಹುಡುಗಿ ಕೈಲಿ ರುಜು ಮಾಡಿಸಿ ಕಳವಾಯಿತು ಅಂತ ಫಿರ್ಯಾದು ಕೊಡಿಸಿದೆ. ಫಿರ್ಯಾದು ತಗೊಂಡು ಸ್ಟೇಷನ್ ದಣಿ ನಮ್ಮ ಮಾತನ್ನೆಲ್ಲಾ ಕೇಳಿದ. ಅವನು ಈ ಪುಂಡರನ್ನೆಲ್ಲಾ ಬಲ್ಲ ಅಂತ ಕಾಣುತ್ತೆ. ಒಬ್ಬ ಪೋಲೀಸಿನೋನ ಕರೆದು, ಕಲಾಸಿಪಾಳ್ಯದ ಆ ಛತ್ರದಲ್ಲಿ ಇಂಥ

ಮನುಷ್ಯ ಇದ್ದಾನೆ, ಅವನ್ನ ನಾ ಕರೆದೆ ಅಂತ ಬರಹೇಳು ಅಂತ ಹೇಳಿ ಕಳುಹಿಸಿದ. ಈ ಹುಡುಗ ಬಂದ. ಅವನಿಗೆ ಸಂಗತೀನೆಲ್ಲ ಹೇಳಿ ಈ ದಣಿ, ನೀನು ಎಮ್ಮೆನ ತಗೊಂಡು ಹೋಗೋ ಮೊದಲು ನಿಮ್ಮಪ್ಪನ್ನ ಕೇಳಿದೆಯೇನೋ, ಅಂತ ಕೇಳಿದ. ಏನೋ ಸನ್ನೆ ಮಾಡಿದ. ಅವನು "ಕೇಳಿದೆ" ಅಂದ. ದಣಿ ನನಗೆ, ನೂರು ರೂಪಾಯಿ ತಗೊಂಡು ಬಾ, ಕೇಸ್ ಬರಕೋತೀನಿ, ಇಲ್ಲ ಅಂದರೆ ಇವನು ಅಪ್ಪನ್ನ ಕೇಳಿ ಎಮ್ಮೆ ತಗೊಂಡು ಹೋದ ಅಂತ ಬಿಟ್ಟು ಬಿಡತೀನಿ, ಅಂದ. ಈಗೇನು ಮಾಡೋದು ಅಂತ ಯೋಚನೆ ಮಾಡತಾ ನಾ ನಿಂತಿದೀನಿ. ಹುಡುಗ ಹೇಳಿದ: ಇವನು ನನ್ನ ತಂಗೀನ ಕೆಡಿಸಿದ್ದಾನೆ. ಅವನೇ ಅವಳಿಂದ ದೂರು ಬರೆಸಿದ್ದಾನೆ. ನಾನು ಇವನ ಮೇಲೆ ಒಂದು ದೂರು ಕೊಡೋಣ ಅಂತ ಇದೀನಿ, ಅಂದ. ಆ ದಣಿ ನನ್ನ ಮುಖ ನೋಡಿ, "ಏನಯ್ಯಾ ಬೇಕಾದಾಟ ಆಡೋದಕ್ಕೆ ಅನುಸಿಕ್ಕಿತು ಅಂತ ನೋಡುತಾ ಇದ್ದೀಯಾ? ಇದು ಫಿರ್ಯಾದಿನ ಅಣ್ಣ ತಂಗಿ ಮಾತಿನಲ್ಲಿ ನಿಲ್ಲೋದಿಲ್ಲ. ನಿನ್ನ ಕುತ್ತಿಗೆಗೂ ಬರುತ್ತೆ. ಜೋಕೆ," ಅಂದ. ನಾನು, 'ಒಳ್ಳೇದು ದಣಿಗಳೆ, ಒಂದು ಗಂಟೆ ಬಿಟ್ಟು ಬರತೀನಿ,' ಅಂತ ಹೇಳಿ, ಮನೆಗೆ ಬಂದು ಹುಡುಗಿಗೆ ತಿಳಿಸಿ ಈಗ ಇಲ್ಲಿಗೆ ಓಡಿ ಬಂದೆ."

ನಾನು ಜೊತೆಯ ಲಾಯರ್ ಬಳಿಗೆ ಹೋಗಿ ಸಂಗತಿಯನ್ನು ತಿಳಿಸಿದೆ. ಈ ಕಥೆ ಇಷ್ಟಕ್ಕೆ ನಿಲ್ಲುವಂತೆ ಮಾಡುವುದೇ ಕ್ಷೇಮ, ಇಲ್ಲದಿದ್ದರೆ ಈ ಜನ ಹಾಳಾಗುತ್ತಾರೆ, ಅಂತ ಇಬ್ಬರೂ ನಿಶ್ಚಯಿಸಿದೆವು. ಪೊಲೀಸ್‌ನವರಿಗೆ ದೂರು ಕೊಟ್ಟಿದ್ದಾಗಿದೆ. ಅದನ್ನು ಹಿಂದಕ್ಕೆ ತಗೊಳ್ಳಬೇಕು. ಹುಡುಗನನ್ನು ಬರ ಮಾಡಿಕೊಂಡು, "ನೀನು ಜೈಲಿಗೆ ಹೋಗಬೇಕಾಗುತ್ತೆ" ಅಂತ ಭಯಪಡಿಸಬೇಕು. ಈ ಹುಡುಗಿಗೆ "ನಿನ್ನ ಮರ್ಯಾದೆ ಉಳಿಯೋದಿಲ್ಲ" ಅಂತ ಭಯ ಹುಟ್ಟಿಸಬೇಕು. ಈ ದೊಡ್ಡ ಮನುಷ್ಯನಿಗೆ, "ಈ ಹುಡುಗೀನ ಕೆಡಿಸಿದೆ ಅಂತ ಇವರ ಅಪ್ಪ ಕ್ರಮ ತಗೊಳ್ಳೋ ಅಪಾಯ ಇದೆ ಜೋಕೆ", ಅಂತ ಹೇಳಬೇಕು ಎಂದುಕೊಂಡೆವು. ಇನ್ನು ಒಂದು ಗಂಟೆ ಹೊತ್ತಿಗೆ ಇವರೆಲ್ಲ ನನ್ನ ಆಫೀಸ್ ಬಳಿ ಬರಬೇಕು ಅಂತ ಏರ್ಪಾಟು ಮಾಡಿದೆವು.

ಹೇಳಿದ ಹೊತ್ತಿಗೆ ಹುಡುಗ, ಹುಡುಗಿ, ಅವರ ತಂದೆ, ಈ ದೊಡ್ಡ ಮನುಷ್ಯ ಎಲ್ಲ ಬಂದರು. ಹುಡುಗಿಯನ್ನು ಒಪ್ಪಿಸುವುದು ಬಹಳ ಕಷ್ಟವಾಯಿತು. “ನಿನ್ನ ಮರ್ಯಾದೆ ಹಾಳಾಗುತ್ತೆ” ಎಂತ ನಾವು ಹೇಳಿದ್ದಕ್ಕೆ ಅವಳು ಕೊಟ್ಟ ಉತ್ತರ ದಿಟ್ಟವಾಗಿತ್ತು. “ಏನು ಸ್ವಾಮಿ, ಈ ನನ್ನ ಅಣ್ಣ ಹತ್ತು ಜನದ ಎದುರಿಗೆ ನನ್ನ, ನೀನು ಇವನೊಂದಿಗೆ ಬಾಳಿದ್ದೀಯಲ್ಲಾ ಅಂತ ಹೇಳತಾನಲ್ಲಾ, ಕೇಳಲಿ, ನಾ ಹೇಳತೀನಿ. “ನೀನು ನನ್ನ ಅಣ್ಣ. ನಮ್ಮಮ್ಮ ನಿನ್ನ ಮೊದಲು ಹೆತ್ತಳು. ಆಮೇಲೆ ನನ್ನ ಹೆತ್ತಳು. ಈ ತಂಗೀ ಹೆಸರು ಕೆಡಿಸೋಕೆ ಒಬ್ಬ ಅಣ್ಣ ಇರಲಿ ಅಂತ ನಿನ್ನ ಹೆತ್ತಳಾ? ನಿನಗೆ ಪ್ರಾಯ ಬಂತು. ನೀನು ಗಂಡು. ನೀನು ಹೆಣ್ಣು ಹುಡುಕ್ಕೊಂಡು ಹೋದಿ. ನನಗೂ ಪ್ರಾಯ ಬಂತು. ನಾನು ಹೆಣ್ಣು. ಬೀದೀಲಿ ಹೋಗೋ ಹಂಗಿಲ್ಲ. ಇರೋ ಕಡೆ ಇರಬೇಕು. ಒಬ್ಬರು ಬಂದು ಅಕ್ಕರೆ ಮಾತಾಡಿದರು. ಬಾಳುವ ಅಂದರು. ಮದುವೆ ಆಗೋಣೇ ಅಂದೆ. ಆಗೋಣ, ಸದ್ಯಕ್ಕೆ ಜೊತಿಗೆ ಇರು ಅಂದರು. ಇದ್ದೆ, ಬಹಳ ದೊಡ್ಡ ತಪ್ಪಾಯಿತಾ? ಗಂಡು ಮಾತ್ರ ಬೇಕಾದ ಆಟ ಆಡ ಬಹುದು. ಹೆಣ್ಣು ಮದುವೆ ಆಗತೀನಿ ಅಂದವರೊಂದಿಗೆ ಸದರವಾಗಿರಬಾರದಾ? ಇದ್ದೆ, ಏನಾಯಿತು?”

ಅಣ್ಣ : “ಇವ ನಿನ್ನ ಮದುವೆ ಆಗತಾನಾ?”

ತಂಗಿ : “ಆಗತೇನೆ ಅಂದಿದ್ದಾರೆ. ಆದಾರು. ನೀನು ಒಳ್ಳೇ ಮಗನಾಗಿ ಮನೇಲಿ ಬಾಳು. ಅಣ್ಣನ ಮುಖ ನೋಡಿ ಜನ ತಂಗೀನ ಮರ್ಯಾದೆಯಾಗಿ ಕಾಣತಾರೆ. ನೀನು ಅಪ್ಪನ್ನ ಅಪ್ಪ ಅನ್ನೋದು ಬಿಟ್ಟು, ತಂಗೀನ ತಂಗಿ ಅನ್ನೋದು ಬಿಟ್ಟು, ಬೀದಿ ನಾಯಾಗಿ ಅಲಿ. ಅಪ್ಪನ್ನ ಕೆಡಿಸಿ, ತಂಗೀನ ಕೆಡಿಸಿ, ಇಬ್ಬರನ್ನಾ ಕೆಡಿಸಿದಿ ಅಂತ ಹೇಳಿಕೊಂಡು, ನೀನೂ ಕೆಟ್ಟು ಸುಖವಾಗಿ ಬಾಳು.”

ಇಷ್ಟು ಮಾತು ಹೇಳಿ ಹುಡುಗಿ ಗೊಳೋ ಅಂತ ಅಳುತ್ತ ಕುಳಿತುಕೊಂಡಳು. ಇವಳ ಗೋಳನ್ನು ನೋಡಲಾರದೆ ಆ ಅಪ್ಪ ಅತ್ತ, (ಮಗನಿಗೆ), “ನಿಮ್ಮ ತಾಯಿ ಒಳ್ಳೆ ಹೆಂಗಸು. ಅವಳು ಹೆತ್ತ ಮಗ ನೀನು, ತಂಗೀ ಮರ್ಯಾದೇನ ಯಾಕೋ ಕೆಡಿಸುತಾ ಇದ್ದೀಯ?” (ಆ ದೊಡ್ಡ ಮನುಷ್ಯನನ್ನು ನೋಡಿ) “ಅಪ್ಪ, ಹುಡುಗಿ ನಾಲ್ಕು ಜನ ದೊಡ್ಡವರೆದುರಿಗೆ

ಹೇಳಿದ್ದಾಳೆ ನೀನು ಅವಳನ್ನು ಮುಟ್ಟಿದೆ ಅಂತ. ಮುಟ್ಟಿ ಆಯಿತು. ಮದುವೆ ಆಗು. ಅವಳ ನಡತೆ ಕಾದುಕೊ. ಅರಿಯದ ಹುಡುಗೀನ ಕೆಡಿಸಿದ ಅಂತ ಜನರಿಂದ ಅನಿಸಿಕೋ ಬೇಡ" (ಮಗಳಿಗೆ) "ಲೇ ಮಗು ಇಂಥ ಮಾತು ನೀನು ಇಷ್ಟು ಜನರೆದುರಿಗೆ ಬಾಯಿ ಬಿಟ್ಟು ಹೇಳಬಾರದು. ಎಳೆ ಹುಡುಗಿ. ಅಮ್ಮನ್ನ ಕಳಕೊಂಡು ಬೆಳೆದಿ. ನಿನಗೆ ತಿಳಿಸೋರಿಲ್ಲ ಆಯಿತು. ಆದದ್ದಾಯಿತು. 'ನಿನ್ನ ನಂಬಿದೆ. ನನ್ನ ಕೈ ಬಿಡಬೇಡ' ಅಂತ ಇವನ ಕಾಲ ಮೇಲೆ ಬೀಳು. ಕಾಪಾಡು, ಅನ್ನು. ಹೇಗಿದ್ದರೂ ದೇವರಂಥ ಜನ ಈ ಹಿರಿಯರೆದುರು ಇಷ್ಟು ಮಾತೂ ಆಗಿದೆ. ಅವರು ಇದನ್ನೆಲ್ಲ ಕಚ್ಚಿತ ಮಾಡಲಿ," ಎಂದ.

ತಂಗಿ, ಅಪ್ಪ, ಅತ್ತದ್ದನ್ನ ನೋಡಿ ಮಗನೂ ಅತ್ತ. ನನ್ನ ತಂಗಿಯ ಮಾನವನ್ನು ಕಳೆದದ್ದು ತನ್ನಲ್ಲಿ ತಪ್ಪಾಯಿತು ಎಂತ ಅವನಿಗೂ ಮನ ಮುಟ್ಟಿರಬೇಕು.

ನಾನು, "ಆಯ್ಯ, ಸ್ವಲ್ಪ ಏನೋ ದಾರಿ ತಪ್ಪಿದೆ. ತಪ್ಪು ದಾರಿಯಲ್ಲೇ ನಡೆಯಬೇಕಾದ್ದಿಲ್ಲ. ಭಾಗ ಆದರೆ ಏನಾಯಿತು? ಅಪ್ಪ ಮಗ ಅಲ್ಲವೇ? ತಿರುಗಿ ಒಂದಾಗಿ ನಿನ್ನ ಮನೆಗೆ ಬಾ. ಅಪ್ಪನ್ನ ತಂಗೀನ ನೋಡಿಕೋ. ಇವರು ನಿನ್ನ ತಂಗೀನ ಮದುವೆ ಆಗುತ್ತಾರೆ," ಎಂದು (ಅವನ ಕಡೆ ತಿರುಗಿ) "ಏನಪ್ಪ" ಎಂತ ಕೇಳಿದೆ.

ಆತ, "ಆಗತೀನಿ, ಸ್ವಾಮಿ."

ಈ ಸಂದರ್ಭದ ಇನ್ನೆರಡು ವಿವರ ಆಮೇಲೆ ತಿಳಿದವು. ಇವನ ಹೆಂಡತಿ, ಕಾಯಿಲೆ ಹೆಂಗಸು. ಅವನು ಮನೇನ, ಮಕ್ಕಳನ್ನ ನೋಡಿಕೊಳ್ಳೋದಕ್ಕೆ ಇನ್ನೊಂದು ಮದುವೆ ಆಗುವುದೇ ಎಂದು ಆಲೋಚಿಸುತ್ತಿದ್ದ. ಆ ಆಲೋಚನೆ ಈ ರೀತಿ ಮುಗಿಯಿತು.

ನಾನು: "ಸಂತೋಷ. (ಮಗನಿಗೆ) ನೋಡಿದ್ಯಾ ಎಲ್ಲಾ ಸರಿ ಹೋಯಿತು. ನೀನು ಇವರೊಂದಿಗೆ ತಂದೇನ ತಂಗೀನ ಕರಕೊಂಡು ನಿಮ್ಮ ಮನೇಗೆ ಹೋಗು. ಚೆನ್ನಾಗಿ ಬಾಳು. ಇದು, ನಿನ್ನ ಲಾಯರು ಇವರು, ನಾನು, ನಮ್ಮಿಬ್ಬರ ಇಚ್ಛೆ. ಏನಂತಿ?"

ಹುಡುಗ, ಆಗಲಿ ಎಂದ. ಬಗ್ಗಿ ನಮ್ಮಿಬ್ಬರಿಗೂ ನಮಸ್ಕಾರ ಮಾಡಿದ.

ಇವರೆಲ್ಲರೂ ಜೊತೆಯಾಗಿ ಮನೆಗೆ ಹೋದರು.

ಪೊಲೀಸರಿಗೆ ಕೊಟ್ಟಿದ್ದ ದೂರನ್ನು ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ಅಣ್ಣ, ತಂಗಿ, ನೂರು ರೂಪಾಯಿ ತೆರಬೇಕಾಯಿತಂತೆ. ನಾವು ಲಾಯರುಗಳು ಇದರ ಮಾತಿಗೆ ಹೋಗಲಿಲ್ಲ.

ಅರ್ವಾಚೀನ ಆಂಗ್ಲ ಶಕುಂತಲೆ

ಈಗ ಕೆಲವು ತಿಂಗಳ ಹಿಂದೆ ಇಂಗ್ಲೆಂಡಿನ ಒಂದು ಊರಿನಲ್ಲಿ ನಡೆದ ಒಂದು ಸಂಗತಿಯ ವರದಿಯನ್ನು ಒಂದು ದಿನಪತ್ರಿಕೆಯಲ್ಲಿ ಓದಿದೆ. ವರದಿಯ ವಿಸ್ತಾರರೂಪ ಈ ಕಥೆ. ಹೆಸರುಗಳು ಕಲ್ಪಿತ.

ಆ ಊರಿನಲ್ಲಿ ವಿಲ್ಸನ್ ಎಂಬ ಒಬ್ಬ ಗೃಹಸ್ಥರು ಇದ್ದರು. ಆತ ವಯಸ್ಸಾದ ಮನುಷ್ಯ. ಆತ, ವಯಸ್ಸಾದ ಆತನ ಪತ್ನಿ, ಅವರ ಮಗ ಲಯೋನೆಲ್: ಇದು ಸಂಸಾರ. ತಂದೆ ಪ್ರಾಯದಲ್ಲಿ ಒಂದು ವ್ಯವಹಾರದಲ್ಲಿ ತೊಡಗಿದ್ದು, ವಯಸ್ಸಾಯಿತು, ಇನ್ನೆಷ್ಟು ದುಡಿಯುವುದು, ಎಂದು ವಿಶ್ರಾಂತನಾಗಿದ್ದ. ದುಡಿದ ದಿನದಲ್ಲಿ ಉಳಿಸಿದ್ದ ಹಣ ಒಂದಷ್ಟು ಇತ್ತು. ಅದನ್ನು ಒಂದು ಬ್ಯಾಂಕಿನಲ್ಲಿ ನಿಧಿಯಾಗಿ ಇಟ್ಟು ಬಂದ ಬಡ್ಡಿಯಿಂದ ಸಂಸಾರ ನಡೆಸುತ್ತಿದ್ದ. ವರಮಾನ ತಕ್ಕಷ್ಟು ಇತ್ತು. ಸಂಸಾರ ನಡೆಯುವುದು ಕಷ್ಟವೇನೂ ಆಗಿರಲಿಲ್ಲ.

ಲಯೋನೆಲ್ ತಕ್ಕಷ್ಟು ಒಳ್ಳೆಯ ಹುಡುಗ. ಆದರೆ ಅವನು ವಿದ್ಯೆಯಲ್ಲಿ ಮುಂದರಿಯಲಿಲ್ಲ. ಯಾವುದಾದರೂ ಕೆಲಸ ಕಲಿತು ತನ್ನ ಅನ್ನವನ್ನು ತಾನು ಗಳಿಸುವ ಶಕ್ತಿಯನ್ನು ಪಡೆಯಲಿಲ್ಲ. ಕೆಲಸ ಹುಡುಕುತ್ತೇನೆ ಅಂತ ಅಲ್ಲಿಗೆ ಇಲ್ಲಿಗೆ ಹೋಗುತ್ತ ತಂದೆ ತಾಯಿಯೊಡನೆ ಕಾಲಹಾಕುತ್ತಿದ್ದ.

ಇವನು ಯಾವುದಾದರೂ ಕೆಲಸವನ್ನು ಒಪ್ಪಿಕೊಂಡು ತನ್ನ ಪಾಡನ್ನು ತಾನು ನೋಡಿಕೊಂಡಾನೇ ಎಂದು ತಾಯಿ ತಂದೆ ಇಬ್ಬರೂ ಬಯಸುತ್ತಿದ್ದರು. ಹಿರಿಯರಿಗಿದ್ದ ಯೋಚನೆ ಈ ಮಗನಿಗೆ ಇರಲಿಲ್ಲ. ಹೀಗೆ ದಿನ ಕಳೆದಿದೆ. ಒಂದು ಬಾರಿ ಮಗ ಎಲ್ಲಿಗೋ ಹೋದವನು ವಾಡಿಕೆಯಂತೆ ಎರಡುದಿನ ಮೂರು ದಿನದಲ್ಲಿ ಹಿಂತಿರುಗಲಿಲ್ಲ. ಎಲ್ಲಿಗೆ ಹೋದನೋ ಏನಾದನೋ ಎಂದು ತಂದೆ ತಾಯಿ ಯೋಚನೆ ಮಾಡುತ್ತಿದಾರೆ.

ಆರು ತಿಂಗಳು ಕಳೆಯಿತು. ಒಂದು ದಿನ ತಂದೆ ಮನೆಯ ಮುಂದೆ ಒಂದು ಕುರ್ಚಿಯ ಮೇಲೆ ಕುಳಿತಿದ್ದಾನೆ. ತಾಯಿ ಮನೆಗೆ ಏನೋ ಸಾಮಾನು ತರಲು ಅಂಗಡಿ ಬೀದಿಗೆ ಹೋಗಿದ್ದಾಳೆ. ಒಬ್ಬ ತರುಣಿ ಒಂದು ಹಸುಳೆಯನ್ನು ಕೈಯಲ್ಲಿ ಎತ್ತಿಕೊಂಡು ಹಿರಿಯನ ಬಳಿಗೆ ಬಂದಳು.

ಹಿರಿಯ ತಲೆ ಎತ್ತಿ ನೋಡಿದ. ಪರಿಚಯದ ಹುಡುಗಿಯಲ್ಲ. ಯಾರಿವಳು? ಕೈಯಲ್ಲಿ ಏನು? ಓ, ಒಂದು ಮಗು.

ಇವನು ಹೀಗೆಂದುಕೊಳ್ಳುವ ವೇಳೆಗೆ ತರುಣಿ ತೀರ ಹತ್ತಿರ ಬಂದಳು, "ನಮಸ್ಕಾರ ಅಜ್ಜ," ಎಂದಳು.

"ನಮಸ್ಕಾರ,"

"ನೀವು ನನ್ನನ್ನು ಕಾಣಿರಿ. ನಾನು ಜೆನ್ನಿ; ಪಕ್ಕದ ಊರಿನ ಜೋನ್ಸ್ ದಂಪತಿಗಳ ಮಗಳು. ಇದು ಮೂರು ತಿಂಗಳ ಹಿಂದೆ ನಾನು ಹೆತ್ತ ಮಗು. ನಿಮಗೆ ಇದನ್ನು ತೋರಿಸಬೇಕು ಎಂದು ಬಂದಿದ್ದೇನೆ."

ಮುದುಕನಿಗೆ ಈ ಮಾತಿನ ಹಿಂದುಮುಂದು ತಿಳಿಯಲಿಲ್ಲ. ಪಕ್ಕದ ಊರಿನ ಜೋನ್ಸ್‌ರ ಮಗಳು ತಾನು ಹೆತ್ತ ಮಗುವನ್ನು ನನಗೆ ಯಾಕೆ ತೋರಿಸಬೇಕು? ಹೀಗೆಂದುಕೊಳ್ಳುತ್ತ ಅವನು ಏನೂ ಹೇಳಲಿಲ್ಲ. ನಿನ್ನ ಅರ್ಥ ಏನು ಎಂದು ಪ್ರಶ್ನೆ ಮಾಡುವಂತೆ ತರುಣಿಯ ಕಡೆ ನೋಡಿದ.

ತರುಣಿ ಮಗುವನ್ನು ಇವನ ಎದುರಿಗೆ ಹಿಡಿದಳು. "ಈ ಮಗು ಯಾರ ಹಾಗಿದೆ ನಿಮಗೆ ತಿಳಿಯುತ್ತೆಯೇ?" ಎಂದು ಕೇಳಿದಳು.

ಇವಳ ಪ್ರಶ್ನೆ ಕಿವಿಗೆ ಬೀಳುವ ವೇಳೆಗೆ ಮುದುಕ ಹೇಳಿದ, "ಎಲ! ನಮ್ಮ ಲಯೋನೆಲ್ ಮುಖ! "

"ಅಲ್ಲ? ನೀವು ಗುರುತು ಹಿಡಿಯುತ್ತೀರಿ ಅಂತ ನನಗೆ ನಿಶ್ಚಯ -ಹಾಗೆಂತಲೇ ಇಲ್ಲಿಗೆ ಬಂದೆ. ನಿಮ್ಮ ಮೊಮ್ಮಗನನ್ನು ಹೆತ್ತ ನನ್ನ ಮೇಲೆ ನಿಮಗೆ ಪ್ರೀತಿ ಇರಲೇಬೇಕಲ್ಲ?"

"ಮೊಮ್ಮಗನನ್ನ ಹೆತ್ತೆ ಸರಿ. ಈ ಸಂಗತಿ ನಾನು ಕಾಣೆನಲ್ಲ. ನಾನು ಏನು ಮಾಡಬೇಕು ಎನ್ನುತ್ತೀ?"

"ನೋಡಿ, ಅಜ್ಜ. ವರ್ಷ, ವರ್ಷವೂ ಅರೆ, ಹಿಂದಿನಮಾತು. ಪಕ್ಕದೂರಿನ ಕುದುರೆ ಪಂದ್ಯದ ದಿವಸ ನಾನು ಗುಂಪಿನಲ್ಲಿ ನಿಂತಿದ್ದಾಗ ಲಯೋನೆಲ್ ನನ್ನ ಪಕ್ಕದಲ್ಲಿ ನಿಂತಿದ್ದ - ನಾನು ಯಾರು ಅವನು ಕಾಣ. ಅವನು ಯಾರು ನಾನು ಕಾಣೆ. ಚೆನ್ನಾಗಿದ್ದೆ ಅಂತ ಇರಬೇಕು, ಅವನು ನನ್ನ ಕಡೆ ನಾಲ್ಕೈದು ಸಲ ನೋಡಿದ್ದು ನನಗೆ ಕಂಡಿತು. ಲಯೋನೆಲ್ ಚೆಲುವ. ನನಗೂ ಅವನ ನೋಡೋಣ ಅನ್ನಿಸಿತು. ತಿರಿಗಿ ಅವನು ನನ್ನ ಕಡೆ ನೋಡಿದಾಗ ನಾನೂ ಅವನ ಕಡೆ ನೋಡಿ, 'ನೀವು ಯಾರು? ಎಲ್ಲಿಯವರು?' ಅಂತ ಕೇಳಿದೆ. ಅವನು ಹೇಳಿದ; 'ನೀಯಾರು?' ಅಂದ. ನಾನೂ ಹೇಳಿದೆ. ನಾವು ಸ್ನೇಹಿತರಾದೆವು. ಎರಡು ದಿವಸ ಕಳೆಯಿತು. ನಾನು ನಮ್ಮ ಮನೇಲಿ ಒಬ್ಬಳೇ ಇದ್ದಾಗ ಲಯೋನೆಲ್ ಬಂದ. ಒಂದಷ್ಟು ದೂರ ಸುತ್ತಿಕೊಂಡು ಬರೋಣ, ಬರುತೀಯಾ ಅಂದ. ಇವನು ಬಂದದ್ದು ನನಗೆ ಸಂತೋಷ. ನಾನು, 'ಬರತೇನೆ. ನಮ್ಮ ಅಮ್ಮ ಹತ್ತಿರದ ಮನೆಗೆ ಮೈಲಿಗೆ ಬಟ್ಟೆ ತರೋಕೆ ಹೋಗಿದ್ದಾಳೆ. ಅವಳು ಬರಲಿ. ಹೋಗೋಣ,' ಎಂದೆ. ನಾನು ನಿಮಗೆ ಹೇಳಲಿಲ್ಲ. ನಮ್ಮ ತಂದೆ ಊರಿನ ಪುಣ್ಯವಂತರ ನೆಲಾನ ಸಂಬಳ ತಗೊಂಡು ಸಾಗುವಳಿ ಮಾಡುತ್ತಾರೆ. ನಮ್ಮ ತಾಯಿ ನಾಲ್ಕು ಮನೆ ಪುಣ್ಯವಂತರ ಮೈಲಿಗೆ ಬಟ್ಟೆನ ಒಗೆದು ಗಳಿಗೆಮಾಡಿ ಕೊಡುತ್ತಾಳೆ, ನಾಲ್ಕು ಕಾಸು ಗಳಿಸುತಾಳೆ. ನಾನೂ ತಾಯಿ ಜೊತೇಲಿ ಈ ಕೆಲಸ ಮಾಡುತ್ತೇನೆ. ಸ್ವಲ್ಪ ಹೊತ್ತಿಗೆ ಅಮ್ಮ ಬಂದಳು. ಅವಳಿಗೆ ಹೇಳಿ ನಾನು ಲಯೋನೆಲ್ ಜೊತೇಲಿ ಹೋದೆ. ಅಷ್ಟು ದೂರ ಮರಗಳ ನೆರಳಲ್ಲಿ ಹಗುರಾಗಿ ನಡೆದಾಡಿಕೊಂಡು ಹಿಂದಕ್ಕೆ ಬಂದೆವು. ಹೀಗೆ ಒಂದು ನಾಲ್ಕು ಸಲ ಆಯಿತು.

ಆಮೇಲೆ ಒಂದುದಿನ ಲಯೋನೆಲ್, ನಾವು ಜೊತೆಗಿರೋಣ, ಎಂದ. ನಾನು, 'ಅವಶ್ಯ ಇರೋಣ, ಅಂದರೆ ಮದುವೆ ಆಗಬೇಕಲ್ಲ,' ಎಂದೆ. ಅವನು, 'ಮದುವೇನೆ ಆಗತೇನೆ. ಮದುವೆ ಇಲ್ಲದೆ ನಿನ್ನ ಕೆಡಿಸಿ ಓಡಿಹೋಗೋಣ ಅಂತ ನಾಮಾಡಿಲ್ಲ. ಒಂದು ಕೆಲಸ ಹುಡುಕುತಾ ಇದ್ದೇನೆ. ಅದು ಸಿಕ್ಕಿದರೆ ಒಂದು ಮನೆ ಮಾಡಿ. ಜೊತೆಗೆ ನಿಲ್ಲಬಹುದು.

ಕೆಲಸ ಸಿಕ್ಕತ್ತೆ. ಅಷ್ಟರವರೆಗೆ ಯಾಕೆ ಬೇರೆ ಬೇರೆ ಇರಬೇಕು? ಮದುವೆ ಆಯಿತು ಅಂತ ಇಟ್ಟುಕೊ. ಜೊತೆಗೆ ಇರು,' ಎಂದ.

"ಅವನೇನು ಮೋಸ ಮಾಡೋಣ ಅಂತ ಯೋಚಿಸಿರಲಿಲ್ಲ. ನಾನೂ ಮೋಸ ಏನೂ ಹೋಗಲಿಲ್ಲ. ಮದುವೆ ಆಗತಾನೆ, ನಾಲ್ಕು ದಿನ ಮುಂದಾಗಿ ಜೊತೆಗೆ ಇದ್ದರೆ ಏನು ತಪ್ಪು, ಎಂದುಕೊಂಡೆ. ಒಪ್ಪಿದೆ.

"ನಾವು ಜೊತೆಗೆ ಇದ್ದೆವು. ಮೂರು ತಿಂಗಳಾಯಿತು. ನನಗೆ ನಾನು ತಾಯಿ ಆಗತೇನೆ ಅನ್ನೋದು ತಿಳಿಯಿತು. ನನಗೆ ಹೀಗಾಗಬಹುದು ಅನ್ನೋ ಶಂಕೆ ಇತ್ತು. ಇನ್ನೂ ಆಗತ್ತೆ ಅಂತ ನಾನು ಅಂದುಕೊಂಡಿರಲಿಲ್ಲ. ನಾನು ಲಯೋನೆಲ್‌ಗೆ ಹೇಳಿದೆ: 'ನೋಡು ಮದುವೆ ಆಗದೆ ಜೊತೆಗೆ ಇದ್ದದ್ದು ಸರಿ ಆಗಲಿಲ್ಲ. ಬೇಗನೆ ಮದುವೆ ಆಗು. ನಾನು ಹೆರೋ ಮಗು ಹಾದರದ ಕೂಸು ಅನ್ನಿಸಿಕೊಳ್ಳೋದು ಬೇಡ.'

"ಲಯೋನೆಲ್ 'ಆಗತೇನೆ, ಸ್ವಲ್ಪ ತಡಿ' ಅಂದ. ಆಯಿತು ಎಂದು ನಾನು ಸುಮ್ಮನಾದೆ. ಇನ್ನು ಮೂರು ತಿಂಗಳಾಯಿತು. ಲಯೋನೆಲ್, 'ಹತ್ತಿರದಲ್ಲಿ ಯಾವುದೂ ಕೆಲಸ ಸಿಕ್ಕಲಿಲ್ಲ. ದೊಡ್ಡ ಊರಿಗೆ ಹೋಗಿ ಏನಾದರೂ ಸಂಪಾದಿಸೋದು ಆಗುತ್ತೆಯೇ ನೋಡಿಕೊಂಡು ಬರತೇನೆ,' ಎಂತ ನನಗೆ ಹೇಳಿಹೋದ. ಹೋದ ಮೂರು ತಿಂಗಳ ವೇಳೆಗೆ ನಾನು ಈ ಮಗುವನ್ನ ಹೆತ್ತೆ. ಅಮ್ಮ ಅಪ್ಪ ನನ್ನನ್ನ ಬಯ್ಯಲಿಲ್ಲ. 'ಹುಡುಗ ನಂಬಿಕೆ ಕೊಟ್ಟ; ನೀ ಒಪ್ಪಿಕೊಂಡೆ; ತಪ್ಪಿಲ್ಲ. ಮಗೂನ ನೋಡಿಕೊಳ್ಳಬೇಕು. ನಾವು ಮೂವರು ದುಡಿದರೂ ನಮ್ಮ ಸಂಸಾರಕ್ಕೆ ಎಷ್ಟು ಬೇಕೋ ಅಷ್ಟೇ ಬರುತ್ತೆ. ಮಗೂನ ನೋಡಿಕೊಂಡು ನೀ ಸುಮ್ಮನೆ ಕೂತರೆ ಅಷ್ಟು ವರಮಾನ ಕಡಿಮೆ. ಮಗುವಿಗೆ ಪೋಷಣೆ ಸುಲಭ ಅಲ್ಲ. ಹೋಗಿ ಲಯೋನೆಲ್ ತಂದೆಗೆ ಹೇಳು. ಅವರು ಏನಾದರೂ ಏರ್ಪಾಡು ಮಾಡುವುದಾದರೆ ನಿನ್ನ ಬದುಕು ಸುಲಭ ಆಗುತ್ತೆ,' ಅಂದರು.

"ಹೌದು ಅಂತ ತೋಚಿ ಇದೋ ಈ ಹೊತ್ತು ಹೀಗೆ ಬಂದೆ. ಲಯೋನೆಲ್ ಹೊರಟುಹೋಗಿ, ತಿಂಗಳು ಬರದೆ ನಿಂತಾಗ ನಾನು ಇತ್ತಲಾಗ ಬಂದು, ಜನರನ್ನ ಕೇಳಿ, ಇದು ನಿಮ್ಮಮನೆ ಅಂತ ತಿಳಕೊಂಡೆ. ನಿನ್ನನ್ನ ಅಜ್ಜನ ದೂರದಿಂದ ನೋಡಿದೆ. ಇಬ್ಬರೂ

ಒಳ್ಳೆಯವರು, ಒಳ್ಳೆಮನಸ್ಸಿನ ಜನ, ನನ್ನ ಕೈ ಹಿಡೀತಾರೆ, ಅಂದುಕೊಂಡೆ. ಬಂದು ಮಗೂನ ನಿಮ್ಮೆದುರಿಗೆ ಹಿಡಿದಿದ್ದೇನೆ. ಏನಂತೀರಿ?"

ಇಷ್ಟು ಮಾತು ನಡೆಯುವ ಹೊತ್ತಿಗೆ ಮನೆಯ ಯಜಮಾನಿ ಬಂದಳು.

ಮಗುವನ್ನ ನೋಡಿ ಒಡನೆಯೇ, "ನಮ್ಮ ಲಯೋನೆಲ್ ಮಗು ಇರಬೇಕು. ನೀನು ಯಾರೆ ತಾಯಿ? ಅವನು ನಿನ್ನ ಮದುವೆಯಾದನೆ?" ಅಂತ ಕೇಳಿದಳು.

"ಲಯೋನೆಲ್ ಮಗು ಹೌದು. ಮದುವೆ ಆಗತೀನೆ ಅಂದ. ಆಗಿಲ್ಲ. ನಮ್ಮ ಅಮ್ಮ ಅಪ್ಪ ನನ್ನ, ಮಗೂನ, ನೋಡಿಕೊಳ್ಳೋ ಸ್ಥಿತೀಲಿ ಇಲ್ಲ. ನೀವೇನಾದರೂ ಮಾಡತೀರಾ ಅಂತ ಕೇಳೋಕೆ ಬಂದೆ."

ಯಜಮಾನ ಹೇಳಿದ: "ಲೇ ಮಗು, ಮದುವೆ ಆಗಿರಲಿ ಬಿಡಲಿ, ಇವನು ನನ್ನ ಮೊಮ್ಮಗ ದಿಟ. ಇವನ್ನ ನಾನು ನೋಡಿಕೋ ಬೇಕು ಅಂತ ನೀ ಅಂದರೆ, ನಾನು, ಆಗಲಿ ಅಂತೇನೆ. ನಮ್ಮ ಯಜಮಾನಿತಿ ಹಾಗೇ ಅಂತಾಳೆ. ನಮ್ಮ ಮೊಮ್ಮಗ ನಮ್ಮ ಮನೇಲಿ ಇರಲಿ. ಮಗೂನ ನೋಡಿಕೊಳ್ಳೋಕೆ ನೀನೂ ಇರಬೇಕು. ಇದ್ದು ಬಿಡು, ಸಂತೋಷ. ಮದುವೆ ಆಗದೆ ಸೊಸೆ ಅಂತ ಹ್ಯಾಗೆ ಬರೋದು ಅನ್ನೋದಾದರೆ ಬೇಡ. ನಿಮ್ಮ ತಾಯ ಮನೇಲಿ ಇರು. ಇಷ್ಟ ಬಂದಾಗ ಬಂದು ಮಗೂನ ನೋಡಿಕೊಂಡು ಹೋಗು. ನಿನ್ನ ಅದೃಷ್ಟ ಚೆನ್ನಾಗಿದ್ದು ಯಾವುದಾದರೂ ಕೆಲಸ ದೊರಕಿ ಲಯೋನೆಲ್ ಹಿಂದಕ್ಕೆ ಬಂದ ಅಂದರೆ, ಮಗುವನ್ನ ಕರಕೋ, ಅವನ ಜೊತೆಗೆ ಹೋಗು, ಬಾಳುವೆ ಮಾಡು."

ಇಷ್ಟರಲ್ಲಿ ಅಜ್ಜಿ ಮೊಮ್ಮಗನನ್ನು ಕೈಗೆ ತೆಗೆದುಕೊಂಡು ಮುದ್ದಿಸಿ, ಮಾತನಾಡಿಸಿದಳು. ಮಗು ಏನೋ ನಕ್ಕಹಾಗೆ ಮಾಡಿತು. ಅವಳು ಯಜಮಾನನಿಗೆ, "ಇದೇನಿದು ನೋಡಿದೆಯಾ? ಲಯೋನೆಲ್ ತಿರುಗಿ ಮಗು ಆಗಿ ನಗುತಾನೆ ಅನ್ನೋ ಹಾಗೆ ಕಾಣತದಲ್ಲ ಇದರ ನಗು?" ಎಂದಳು.

ಅಜ್ಜ, "ಹೌದು. ಮಗುವಿನದು ಹುಬ್ಬು, ತುಟಿ, ಗಲ್ಲ, ಕಾಲವು ಬೆರಳು, ಕೈಯವು ಬೆರಳು, ಅದೇ ಹುಬ್ಬು ಅದೇ ತುಟಿ ಅದೇ ಬೆರಳು," ಎಂದನು.

ಜೆನ್ನಿ, "ಹೌದಲ್ಲ ಅಜ್ಜ? ದಿಟವಾಗಿ ಈ ಬೆರಳನ್ನ ನೋಡಿ, ಲಯೋನೆಲ್ ಬೆರಳೇ. ಅದೇ ಬೆರಳು ; ಪಡಿ ಅಚ್ಚು," ಎಂದಳು.

"ತಂದೆ ತಾಯ ಜೊತೆಗಿರುತ್ತ ನಾನು ಅಲ್ಲೇ ಇರುತ್ತೇನೆ. ನೀವು ಮಗೂನ ನೋಡಿಕೊಳ್ಳಿ. ವಾರದಲ್ಲಿ ನಾಲ್ಕು ಸಲ ನಾನು ಬಂದು ಮಗುವನ್ನ ನೋಡಿಕೊಂಡು ಹೋಗುತ್ತೇನೆ. ನಿಮಗೇನಾದರೂ ಸಹಾಯಬೇಕು ಅನ್ನಿಸಿದರೆ ಮಾಡಿಕೊಡುತೇನೆ," ಎಂದು ಹೇಳಿ ಜೆನ್ನಿ ತನ್ನ ತವರಿಗೆ ಹೋದಳು.

ಮಗುವಿನ ಮುಖ, ಹುಬ್ಬು, ತುಟಿ, ಗಲ್ಲ, ಬೆರಳು ತಮ್ಮ ಮಗನ ಮುಖ, ಗಲ್ಲ, ಬೆರಳಂತೆ ಇದ್ದದ್ದರಿಂದ ಈ ಅಜ್ಜ ಅಜ್ಜಿ ಮಗುವನ್ನು ಒಪ್ಪಿಕೊಂಡರು. ಹಾಗಿರಲಿಲ್ಲ. ಒಪ್ಪುತ್ತಿದ್ದರೇ? ಹೇಳುವಂತಿಲ್ಲ. ಮಗ ಎಲ್ಲ ವಿವರದಲ್ಲಿ ತಂದೆಯನ್ನು ಹೋಲಿದ್ದಾನೆ ಎನ್ನುವ ಮಾತನ್ನು ನೋಡಿದಾಗ ನನಗೆ, ಭಾರತದ ನಮ್ಮ ಶಕುಂತಲೆಯ ಕತೆ ನೆನಪಿಗೆ ಬಂದಿತು. ಶಕುಂತಲೆ ದುಷ್ಯಂತನಿಗೆ, "ಈ ಮಗುವನ್ನು ನೋಡು. ಇದು ನಿನ್ನ ಮಗು ಎನ್ನುವುದು ಸ್ಪಷ್ಟ ಕಾಣುತ್ತದೆ. ಕೈಕಾಲು ಬೆರಳೆಲ್ಲ ನಿನ್ನ ಬೆರಳಂತೆಯೇ ಇವೆ," ಎಂದಳು ಎಂದು ಕತೆ ಹೇಳುತ್ತದೆ. ಶಕುಂತಲೆಯ ಕಥೆಯಲ್ಲಿ ದುಷ್ಯಂತನ ಅಪ್ಪ ಇರಲಿಲ್ಲ; ದುರ್ದೈವ, ದುಷ್ಯಂತ ಮಾತ್ರ ಇದ್ದು, ಅವಳ ಮಾತನ್ನು ಒಪ್ಪಲಿಲ್ಲ. ಜೆನ್ನಿಯ ಸುದೈವ: ಇಲ್ಲಿ, ದುಷ್ಯಂತ ಇರಲಿಲ್ಲ, ಅವನ ಅಪ್ಪ ಇದ್ದ; ಮಗು ತನ್ನ ಮೊಮ್ಮಗ ಎಂದು ಒಪ್ಪಿಕೊಂಡ.

ಆಚಾರವಂತ ಅಯ್ಯಂಗಾರ್‍ರು

ಒಂದು ದಿನ ರಾಯರು ತಮ್ಮ ಗಮನಕ್ಕೆ ಬಂದ ಒಂದು ಸಂಗತಿ ಎಂದು ಇದನ್ನು ಹೇಳಿದರು.

* * * *

ನಾನು ನನ್ನ ಮನೆಯಿಂದ ಬೆಳಗಾಗ ಸುತ್ತುವುದಕ್ಕೆಂದು ಹೊರಟಾಗ ನಮ್ಮ ಮನೆಯ ಮುಂದೆ ಬಹುಸಲ ಒಬ್ಬ ಹೆಂಗಸು ಕೈಯಲ್ಲಿ ಒಂದು ಚೀಲವನ್ನು ಹಿಡಿದುಕೊಂಡು ಯಾವುದೋ ಕೆಲಸಕ್ಕೆಂದು ಹೋಗುತ್ತಿರುವುದನ್ನು ಕಂಡದ್ದುಂಟು. ಆಕೆ ತಕ್ಕಷ್ಟು ವಯಸ್ಸಾದ ಹೆಂಗಸು. ಆದರೂ ಮುಖದ ಮೇಲೆ ವಯಸ್ಸಾದ ಚಿಹ್ನೆ ಕಾಣುತ್ತಿರಲಿಲ್ಲ. ನೋಡುವುದಕ್ಕೆ ಲಕ್ಷಣವಾಗಿದ್ದರು. ಮುಖದಲ್ಲಿ ಕುಂಕುಮ ಇಲ್ಲ. ಯಾರೋ ಪಾಪ, ಗಂಡನನ್ನು ಕಳೆದುಕೊಂಡಾಕೆ ಇರಬೇಕು. ಜೀವನಕ್ಕಾಗಿ ಎಲ್ಲಿಯೋ ಕೆಲಸ ಮಾಡುತ್ತಿದಾರೆ.

ಒಂದು ದಿನ ನಾನು ವಾಡಿಕೆಯ ಹೊತ್ತಿನಲ್ಲಿ ಒಬ್ಬ ಸ್ನೇಹಿತರ ಮನೆಗೆ ಹೋಗಲು ನನ್ನ ಮನೆಯಾಕೆಯೊಂದಿಗೆ ಹೊರಟೆ. ಈ ಹೆಂಗಸು ಮನೆ ಎದುರಿಗೆ ಹೋಗುತ್ತಿದ್ದಾರೆ. ನಮ್ಮ ಮನೆಯವರನ್ನು ಕಂಡು ಅವರಿಗೆ ಕೈ ಮುಗಿದರು. ನಾನು ಜೊತೆಗಿದ್ದೆ; ಆದ್ದರಿಂದ ಇರಬೇಕು, ನನಗೂ ಕೈ ಮುಗಿದರು. ಪ್ರತಿಯಾಗಿ ನಾವಿಬ್ಬರೂ ಕೈ ಮುಗಿದೆವು. ಆಕೆ ಏನೂ ಮಾತನಾಡಲಿಲ್ಲ. ಮುಂದಕ್ಕೆ ಹೋದರು.

ನಾಲ್ಕು ಹೆಜ್ಜೆ ನಡೆದಮೇಲೆ ನಾನು ನಮ್ಮ ಮನೆಯವರಿಗೆ, "ವಾರದಲ್ಲಿ ಒಂದು ಸಲ, ಎರಡು ಸಲ ನಾನು ಈಕೆ ಹೀಗೆ ಹೋಗುತಾ ಇರುವುದನ್ನ ಕಾಣತೇನೆ. ನಿಮಗೆ ಗುರುತು ಅಂತ ಕಾಣುತ್ತೆ. ಮುಖದಲ್ಲಿ ಕುಂಕುಮ ಇಲ್ಲ, ಗಂಡನ್ನ ಕಳಕೊಂಡಿದ್ದಾರೆ ಅಂತ ಕಾಣುತ್ತೆ," ಎಂದೆ.

ನಮ್ಮ ಮನೆಯಾಕೆ, “ಈಕೆ ಒಬ್ಬ ಕ್ರಿಶ್ಚಿಯನ್ ಹೆಣ್ಣು ಮಗಳು. ಮದುವೆ ಆಗಲಿಲ್ಲ ಅಂತ ಕಾಣುತ್ತೆ. ನಮ್ಮ ಮನೆಯ ಹಿಂದುಗಡೆ ಬೀದೀಲಿ ಒಂದು ಮನೇಲಿ ಇದ್ದಾರೆ. ಇಲ್ಲೆ ಬಸವನ ಗುಡೀಲಿ ಒಬ್ಬ ಡಾಕ್ಟರ ಆಸ್ಪತ್ರೇಲಿ ನರ್ಸ್ ಆಗಿ ಇದ್ದಾರಂತೆ,” ಎಂದರು.

“ನೀವು ಈಕೇನ ಎಲ್ಲಿ ಕಂಡಿರಿ?”

“ಸ್ವಲ್ಪ ಹಿಂದೆ ಲಕ್ಷ್ಮಮ್ಮ ಅವರ ಮನೇಲಿ ಮಗು ಕಾಯಿಲೆ ಆಗಿದ್ದಾಗ ಒಬ್ಬ ನರ್ಸ್ ಹತ್ತಿರ ಇದ್ದು ನೋಡಿಕೊಳ್ಳೋದು ಒಳ್ಳೇದು ಅಂತ ಡಾಕ್ಟರ್ ಹೇಳಿದರು. ಈಕೇನ ಕಳುಹಿಸಿಕೊಟ್ಟರು. ಒಂದು ದಿನ ಅಲ್ಲಿ ಹೋದಾಗ ಇವರನ್ನ ನೋಡಿದ್ದೆ.”

“ಓ, ಹಾಗೇ. ಈ ಜನ ಸಾಮಾನ್ಯವಾಗಿ ಬಹಳ ಶ್ರದ್ಧೆಯಿಂದ ಕೆಲಸ ಮಾಡುತ್ತಾರೆ.”

“ಹೌದಂತ ಕಾಣುತ್ತೆ. ಲಕ್ಷ್ಮಮ್ಮ ಈಕೆಯನ್ನ ತುಂಬ ಮೆಚ್ಚಿಕೊಂಡರು. ರಾತ್ರಿ ಹೊತ್ತು ರೆಪ್ಪೆ ಹಾಕದೆ ಹಾಸಿಗೆ ಬಳೀಲಿ ಕಾದು ಮಗುವನ್ನು ನೋಡಿಕೊಂಡರು, ಅಂದರು.”

“ಎಂದಮೇಲೆ ಒಳ್ಳೆ ವರಮಾನವೂ ಇರಬೇಕು.”

“ಇರಬೇಕು. ಡಾಕ್ಟರು ತಕ್ಕಮಟ್ಟಿಗೆ ಒಳ್ಳೆ ಸಂಬಳ ಕೊಡತಾ ಇದ್ದಾರೆ. ಇಂಥ ಕೆಲಸ ಬಿದ್ದಾಗ ಮನೇಜನ ದಿನಕ್ಕೆ ಹತ್ತೋ ಹದಿನೈದೋ ರೂಪಾಯಿ ಹೆಚ್ಚಿಗೆ ಕೊಡುತ್ತಾರೆ.”

ನಮ್ಮ ಮನೆಯ ಹಿಂದಿನ ಬೀದಿಯಲ್ಲಿ ವಾಸಮಾಡುತ್ತಿದ್ದ ಈಕೆಯ ವಿಷಯ ನನಗೆ ಆಮೇಲೆ ಇನ್ನೆರಡು ವಿವರ ತಿಳಿದವು. ಹಿಂದಿನ ಬೀದಿಯ ಆ ಮನೆಯಲ್ಲಿ ಇವರೊಂದಿಗೆ ಒಬ್ಬ ಅಯ್ಯಂಗಾರ್ ಮನುಷ್ಯ ಇದ್ದರು. ಮನೆಯಲ್ಲಿ ಬೇರೆ ಯಾರೂ ಇಲ್ಲ. ಮನೆಯ ಅಡಿಗೆ ಕೆಲಸ ಅಯ್ಯಂಗಾರರದು. ಇದನ್ನು ನೋಡಿದವರು, ಈಕೆ ಈ ಅಯ್ಯಂಗಾರನ್ನ ಅಡಿಗೆ ಕೆಲಸಕ್ಕೆ ನೇಮಿಸಿಕೊಂಡಿದ್ದಾರೆ, ಎಂದುಕೊಂಡರು. ಕ್ರಿಶ್ಚಿಯನ್ ಹೆಂಗಸು ಅಡಿಗೆಗೆ ಅಯ್ಯಂಗಾರನ್ನ ಯಾಕೆ ನೇಮಿಸಿಕೋಬೇಕು? ಈಕೆ ಅಯ್ಯಂಗಾರಾಗಿದ್ದು ಕ್ರಿಶ್ಚಿಯನ್ ಆದರೇನೋ? ಇಂಥ ಜನ ಕ್ರೈಸ್ತರಾದರೂ ತಮ್ಮ ಹಿಂದಿನ ಆಚಾರವನ್ನ ಬಿಡದೆ ಕಷ್ಟಪಡುವುದೂ ಉಂಟು- ಇದು ಅಂಥ ಸಂದರ್ಭ ಇರಬಹುದು.

ಆಮೇಲೆ ಕೆಲವು ದಿನದಲ್ಲಿ ಈಕೆ ಯಾರೊಡನೆಯೋ ಮಾತಾಡುತ್ತ ಆ ಮನುಷ್ಯನನ್ನ ನಮ್ಮ ಯಜಮಾನರು ಎಂದು ವರ್ಣಿಸಿದರಂತೆ. ಅದರಿಂದ ತಿಳಿಯಿತು, ಇವರು ಗಂಡ ಹೆಂಡಿರಾಗಿ ಬಾಳುತ್ತಿದಾರೆ ಅಂತ.

ಆಮೇಲೆ ಯಾವಾಗಲೋ ಮಾತನಾಡುವಾಗ ನಮ್ಮ ಮನೆಯಾಕೆ ಇದನ್ನು ನನಗೆ ಹೇಳಿದರು.

ಇನ್ನೊಂದು ದಿನ ಬೆಳಗಾಗ ಸುತ್ತುವುದಕ್ಕೆ ಹೊರಟ ನಾನು ನಮ್ಮ ಬೀದಿಯ ಹಿಂದಿನ ಬೀದಿಯಲ್ಲಿ ನಡೆದೆನು. ಅದರ ಒಂದು ಮನೆಯ ಬಾಗಿಲಲ್ಲಿ ಒಬ್ಬ ಅಯ್ಯಂಗಾರ್ ಮನುಷ್ಯ ನಿಂತಿದ್ದರು. ಇವರೇ ನಮ್ಮ ನರ್ಸ್ ಆಕೆಯ ಗಂಡ ಇರಬೇಕು. ಆತ ನಾನು ಕಂಡ ಮನುಷ್ಯನಲ್ಲ. ಆದರೂ ನನಗೆ ನಮಸ್ಕಾರ ಮಾಡಿದರು. ನಾನು ಪ್ರತಿ ನಮಸ್ಕಾರ ಮಾಡಿ ಮುಂದಕ್ಕೆ ನಡೆದೆ.

ಇವರು ನಮಸ್ಕಾರ ಮಾಡಿದ್ದು, ಪರಿಚಯ ಇದೆ ಎನ್ನುವುದಕ್ಕೆ ಅಲ್ಲ, ಹತ್ತಿರದಲ್ಲಿ ವಾಸಮಾಡುತ್ತಿರುವ ಒಬ್ಬ ದೊಡ್ಡ ಮನುಷ್ಯರು, ಮನೆಯ ಎದುರು ನಡೆಯುತ್ತಿದಾರೆ, ನಮಸ್ಕಾರ ಮಾಡೋಣ, ಎನ್ನುವಷ್ಟಕ್ಕಾಗಿ ಇರಬೇಕು. ಅಥವಾ ಇವರೇ ಆ ಅಯ್ಯಂಗಾರು ಆದರೆ ಆ ನರ್ಸ್ ಆಕೆ ಇವರಿಗೆ ನಮ್ಮ ಮಾತನ್ನು ಹೇಳಿರಬಹುದು. ಅದರಿಂದ ನಾನು ಇವರನ್ನು ಕಾಣದಿದ್ದರೂ ಇವರು ನಾನು ಯಾರು ಎಂಬುದನ್ನು ಬಲ್ಲರು.

ಹೀಗೆ ನಾವು ಹತ್ತಿರದ ಎರಡು ಬೀದಿಯಲ್ಲಿ ಬಾಳುತ್ತ ಒಬ್ಬರನ್ನೊಬ್ಬರು ಬಲ್ಲವರು, ಬೇರೆ ಏನೂ ಸಂಬಂಧ ಇಲ್ಲ, ಇಂಥ ಅಲ್ಪ ಪರಿಚಯದ ಜನರಾಗಿ ಹಲವು ವರ್ಷ ಬಾಳಿದೆವು.

ಒಂದು ದಿನ ಬೆಳಿಗ್ಗೆ, ನಾನಿನ್ನೂ ಮನೆಯಿಂದ ಹೊರಟಿರಲಿಲ್ಲ, ಇನ್ನೇನು ಹತ್ತು ನಿಮಿಷದಲ್ಲಿ ಹೊರಡಬೇಕು, ಎಂತ ಇರುವಾಗ ಈಕೆ ನಮ್ಮ ಮನೆಯ ಬಾಗಿಲ ಬಳಿ ಕಾಣಿಸಿಕೊಂಡರು. ನಾನು ಮನೆಯ ಮುಂದೆ ನಿಂತಿದ್ದೆ. ತಲೆ ಎತ್ತಿ ಇವರ ಕಡೆ ನೋಡಿದಾಗ ಇವರು ನನಗೆ ಕೈ ಮುಗಿದರು. ನಾನೂ ಕೈ ಮುಗಿದೆ.

ಈಕೆ, “ತಮ್ಮನ್ನು ಕಾಣಬೇಕು ಅಂತ ಬಂದೆ. ಒಳಗೆ ಬರಲೆ?” ಎಂದರು.

“ಅಯ್ಯೋ, ಬನ್ನಿ, ತಾಯಿ. ಬರಲೆ ಅಂತ ಕೇಳಬೇಕಾದ್ದೇನು? ಬನ್ನಿ.” ಅವರು ಬಾಗಿಲನ್ನು ತೆರೆದು ಒಳಕ್ಕೆ ಬಂದರು. ಹತ್ತಿರ ಬಂದಾಗ ನಾನು, “ಏನು ತಾಯಿ ಬಂದಿರಿ?” ಅಂತ ಕೇಳಿದೆ.

ಆಕೆಯ ಕಣ್ಣಲ್ಲಿ ಹನಿಕೂಡಿತ್ತು. ಮುಖ ದುಃಖದ ಮುಖ. ಆದರೂ ಹೆಂಗಸು ದಿಟ್ಟೆ. ಅದನ್ನು ಸಹಿಸಿಕೊಂಡಿದ್ದರು. ನನಗೆ ಹೇಳಿದರು, “ನಮ್ಮ ಯಜಮಾನರು ಹತ್ತು ದಿವಸದಿಂದ ಜ್ವರದಲ್ಲಿದ್ದು ಈಗ ಬೆಳಗಾಗ ತೀರಿಕೊಂಡರು. ಅವರು ಅಯ್ಯಂಗಾರ್ ಜನ. ತುಂಬ ಆಚಾರವಂತರು. ಕೊನೆಯವರೆಗೂ ಆಚಾರವನ್ನು ಪಾಲಿಸಿದರು. ತಾನು ತೀರಿಕೊಂಡಾಗ ತನ್ನ ಶವಸಂಸ್ಕಾರವನ್ನೆಲ್ಲಾ ಶ್ರೀ ವೈಷ್ಣವರಿಂದ ಮಾಡಿಸು ಎಂತ ನನಗೆ ಅಪ್ಪಣೆ ಮಾಡಿದ್ದರು. ಆಗಲಿ ಅಂತ ನಾನು ಒಪ್ಪಿದ್ದೆ. ಈಗ ಆ ಕೆಲಸವನ್ನು ಮಾಡುವುದಕ್ಕೆ ನಾನು ಹೋಗಿ ಜನರನ್ನು ಕರೆಯುವುದು ತಪ್ಪಾಗುತ್ತದೆ. ಅವರು ಆಗೋದಿಲ್ಲ ಎನ್ನಬಹುದು. ತಾವು ದಯಮಾಡಿ ನಮ್ಮ ಯಜಮಾನರ ಅಪೇಕ್ಷೆಯನ್ನು ಸಲ್ಲಿಸುವುದಕ್ಕೆ ನನಗೆ ಸಹಾಯ ಮಾಡಬೇಕು,” ಎಂದರು.

ನಾನು “ತಾಯಿ, ಈ ವಿಷಯದಲ್ಲಿ ಮೊದಲಲ್ಲೆ ಸ್ವಲ್ಪ ಎಚ್ಚರವಹಿಸಬೇಕಾಗಿತ್ತಲ್ಲವೆ? ಅವರು ಹೋದಮೇಲೆ ಈಗ ಬಂದಿದ್ದೀರಲ್ಲ?” ಎಂದೆ.

“ಮೊದಲೇ ಬಂದು ತಮ್ಮಲ್ಲಿ ಹೇಳಿಕೊಳ್ಳೋಣ ಅಂತ ಯೋಚಿಸಿದೆ. ಅವರು, ಅನವಶ್ಯಕವಾಗಿ ತೊಂದರೆ ಕೊಡಬೇಡ, ಹೋಗಲೇ ಬೇಕಾದಾಗ ಹೋಗು, ಕೇಳು, ಅವರು ದೊಡ್ಡ ಮನುಷ್ಯರು, ಖಂಡಿತ ಸಹಾಯಮಾಡತಾರೆ, ಎಂದರು. ನಾನು ಒಂದು ದಿನ ಅವರ ಮಾತನ್ನ ಮೀರಿದವಳಲ್ಲ. ಅವರು ನನ್ನನ್ನು ಬಹು ಚೆನ್ನಾಗಿ ನಡೆಸಿಕೊಂಡರು. ಮದುವೆ ಆಗಲಿಲ್ಲ ಹೊರತು ಮದುವೆ ಆದ ಯಾವ ಗಂಡ ಹೆಂಡಿರೂ ಇಷ್ಟು ಅನ್ಯೋನ್ಯ ಆಗಿರಲಾರರು ಎನ್ನುವಂತೆ ಜೊತೆಯಾಗಿ ಬಾಳಿದೆವು. ನನ್ನ ಅದೃಷ್ಟ ಇಷ್ಟಕ್ಕೆ ಇತ್ತು. ಈ ಹೊತ್ತು ಮುಗಿಯಿತು. ಈಗ ಉಳಿದಿರುವುದು ಈ ಸಂಸ್ಕಾರವನ್ನು ಮಾಡಿಸುವುದಷ್ಟೇ.”

ಹೀಗೆ ಹೇಳುತ್ತಾ ಆಕೆ ತಡೆಯಲಾರದೆ ಒಂದುಸಲ ಬಿಕ್ಕಿದರು. ಮತ್ತೆ ಅಳುವನ್ನು ತಡೆದುಕೊಂಡರು.

ಈ ವೇಳೆಗೆ ನಮ್ಮ ಮನೆಯಾಕೆ ಹೊರಕ್ಕೆ ಬಂದು ನನ್ನೊಡನೆ ನಿಂತಿದ್ದರು. ಇವರ ಮಾತನ್ನು ಕೇಳಿ, ಇವರ ಯಜಮಾನರು ತೀರಿಕೊಂಡರು ಎನ್ನುವುದನ್ನು ಗ್ರಹಿಸಿದರು. ಈಕೆಯ ಮಾತು ಮುಗಿದ ಮೇಲೆ, "ಅವರಿಗೆ ಏನಾಗಿತ್ತು?" ಎಂದು ಇವರನ್ನು ಕೇಳಿದರು. "ಹತ್ತು ದಿವಸದ ಹಿಂದೆ ಜ್ವರ ಅಂತ ಹೇಳಿದರು. ಆದರೂ ಎಂದಿನಂತೆ ಅಡಿಗೆ ಮಾಡಿದರು, ನನಗೆ ಅನ್ನ ಕೊಟ್ಟು ತಾವು ಊಟ ಮಾಡಿದರು. ನಾನು ಹೇಳಿದೆ. 'ಜ್ವರ ಅಂತೀರಿ. ಈ ಅಡಿಗೆ ಮಾಡೋದು ಕೆಲಸ ಮಾಡೋದು ಬ್ಯಾಡ; ಜ್ವರ ಹೆಚ್ಚಾಗುತ್ತೆ. ಹೋಟಲಿಗೆ ಹೇಳಿ ಅನ್ನ ತರಿಸುತ್ತೇನೆ. ನೀವು ಮಲಗಿ, ಸ್ವಲ್ಪ ಸುಮ್ಮನಿರಿ,' ಎಂದೆ. ಅವರು ಕೇಳಲಿಲ್ಲ. 'ಜ್ವರ ಅಂತ ಇಷ್ಟು ಭಯಪಡಬೇಕೇ? ಬರುತ್ತೆ ಹೋಗುತ್ತೆ,' ಎಂದರು. 'ಹೋಗುತ್ತೆ ಸರಿ. ಡಾಕ್ಟರಿಗೆ ಹೇಳಿ ಔಷಧಿ ತರತೇನೆ, ತಗೊಳ್ಳಿ', ಎಂದೆ. 'ಸಣ್ಣ ಕಾಯಿಲೇನ ದೊಡ್ಡದು ಮಾಡಿಕೊಂಡು ಸುಖ ಪಡೋ ಪುಣ್ಯವಂತರಲ್ಲ ನಾವು. ಡಾಕ್ಟರು, ಔಷಧಿ ಬೆಂಗಳೂರಲ್ಲಿ ಸುಮ್ಮನೆ ಆಗೋದಿಲ್ಲ', ಅಂದರು. 'ಎಷ್ಟಾಗುತ್ತೆ? ಹತ್ತೋ ಇಪ್ಪತ್ತೋ, ಮುವ್ವತ್ತೋ ಆಗತ್ತೆ. ಆಗಲಿಲ್ಲ, ನನ್ನ ಹತ್ತಿರ ಕಾಸಿದೆ. ನೀವು ಯೋಚನೆ ಮಾಡಬೇಡಿ', ಅಂದೆ. 'ನೀನು ಖರ್ಚು ಮಾಡೋಕೆ ಸಿದ್ಧ, ನಾನು ಮಾಡಿಸೋಕೆ ಸಿದ್ಧ ಇಲ್ಲ', ಎಂದರು. ಹಠ ಮುಷ್ಕರಾನೇ. ಯಾವುದೋ ಸರಿ ಅಂತ ಕಂಡರೆ, ಆದದ್ದಾಗಲಿ ಅದನ್ನ ಮಾಡಿಯೇ ಬಿಡಬೇಕು. ಸರಿಯಲ್ಲ, ಆದದ್ದಾಗಲಿ ಅದನ್ನ ಮಾಡೋದಿಲ್ಲ. ಜ್ವರ ಅದೆಷ್ಟು ಹೆಚ್ಚಿತೋ, ಯಾವಾಗ ಇಳಿಯಿತೋ, ಇಳಿಯಲೇ ಇಲ್ಲವೋ ನನಗೆ ಒಂದೂ ತಿಳಿಯದು. ನಿನ್ನೆ ರಾತ್ರಿ ಕೂಡ ಅಡಿಗೆ ಮಾಡಿದರು. ನನಗೆ ಊಟ ಕೊಟ್ಟರು. ತಾವೂ ಊಟ ಮಾಡಿರಬೇಕು. ರಾತ್ರಿ ಮಲಗಿದರು. ಬೆಳಗಾಗಿ ಏಳೋ ಹೊತ್ತಿಗೆ ಉಸಿರು ನಿಂತು ಹೋಗಿತ್ತು. ಯಾಕೋ ಏಳಲಿಲ್ಲವಲ್ಲ ಅಂತ ಹತ್ತಿರ ಹೋಗಿ ನೋಡಿದೆ. ಇದನ್ನ ಕಂಡೆ. ಹಿಂದೆ ಒಂದು ಸಲ ಕಾಯಿಲೆ ಆಗಿದ್ದಾಗ, 'ನನಗೆ ಏನಾದರೂ ಆದರೆ ನೀನು ಮೂರು ನಾಮದ ನನ್ನ ಜನಾನ ಕರೆಸಿ ಸಂಸ್ಕಾರ ಮಾಡಿಸು,' ಅಂದಿದ್ದರು. ನಾನು, 'ಮಾಡಿಸತೇನೆ', ಅಂದಿದ್ದೆ. 'ಮಾಡಿಸತೇನೆ ಅಂತ ಸುಮ್ಮನೆ ಅಂದರೆ ಸಾಲದು. ಮಾತುಕೊಡು,' ಅಂದರು. 'ಮಾತು ಕೊಟ್ಟಿದ್ದೇನೆ,' ಅಂದೆ. 'ಎಲ್ಲಿ ಕೈಮೇಲೆ ಕೈಹಾಕು,' ಅಂತ ಕೈ ಚಾಚಿದರು. ಕೈಮೇಲೆ ಕೈ

ಹಾಕಿದೆ. ಆಗ ಅದು ಹಾಸ್ಯ. ನಕ್ಕರು. ನಾನು ನಗಲಿಲ್ಲ. ಇಂಥ ಕೆಟ್ಟ ಮಾತು ಗಂಡಸಿಗೆ ಹಾಸ್ಯ ಆಗುತ್ತೆ. ಹೆಂಗಸಿಗೆ ಹಾಸ್ಯ ಆಗುವುದಿಲ್ಲ. ಮದುವೆಯಾದ ಹೆಂಡತಿ ಅಲ್ಲ. ಆದರೂ ನಾನು ಇವರ ಕಣ್ಣೆದುರಿಗೆ ಸಾಯಬೇಕು ಅಂತ ದೇವರನ್ನ ಬೇಡತಾ ಇದ್ದೆ. ದೇವರು ಆಗೋದಿಲ್ಲ ಅಂದಿದ್ದಾರೆ. ಈ ಕೆಲಸಾನ ನಾನು ಮಾಡಿಸಬೇಕಾಗಿದೆ. ಯಜಮಾನರು ದಯಮಾಡಿ ಕೆಲಸ ನಡೆಸಿಕೊಡಬೇಕು." ಈಕೆಯ ಮಾತನ್ನು ಕೇಳುತ್ತ ನನಗೆ "ಇದು ಏನು? ಈ ಹೆಣ್ಣಾದ ಜೀವದ ತನ್ನಗಂಡು ಎನ್ನೋದರ ಅಭಿಮಾನ? ನಾನು ಇಬ್ಬರು ಹೆಂಡತಿಯರನ್ನು ಕಳಕೊಂಡು ನನ್ನ ಈಗಿನ ಸಂಸಾರವನ್ನ ಮೂರನೆಯ ಮದುವೆ ಆಗಿದ್ದೇನೆ. ಮೊದಲ ಹೆಂಡತಿಯರು ಇಬ್ಬರೂ ಹೀಗೆಯೇ ಇದ್ದರು. ಮೂರನೆಯ ಹೆಂಡತೀನೂ ಹೀಗೆಯೇ ಇದ್ದಾರೆ. ಈ ಹೆಂಗಸು ತಾನೇ ಹೇಳುತಾ ಇದಾರೆ. ಮದುವೆಯೇ ಆಗಿಲ್ಲ. ಆದರೂ ಮದುವೆ ಆದದ್ದಕ್ಕಿಂತ ರವೆ ಅಷ್ಟು ಕಡಮೆ ಇಲ್ಲ. ತನ್ನ ಗಂಡು ಸುಖ ಪಡಬೇಕು. ತನ್ನ ಗಂಡಿನ ಇಷ್ಟ ನಡೆಯಬೇಕು ಎನ್ನೋ ಈ ಅಪೇಕ್ಷೆ," ಎನ್ನಿಸಿತು.

ಮನೆಯಾಕೆ, "ಶ್ರೀವೈಷ್ಣವರನ್ನ ಹಿಡೀಬೇಕಲ್ಲ. ಎಲ್ಲಿಗೆ ಹೋಗುತೀರಿ?" ಎಂದರು. ನಾನು, "ಏನು ಇಂಥಮಾತು ಬಂದೀತೋ ಅಂತಲೋ ಏನೋ ಎರಡು ತಿಂಗಳ ಹಿಂದೆ ಕ್ಲಬ್‌ನಲ್ಲಿ ಸಾಹುಕಾರ್ ಗರುಡಾಚಾರ್ ಹತ್ತಿರ ಮಾತನಾಡುತ್ತಾ ಇದ್ದೆ. ಅವರು ಒಂದಷ್ಟು ಹಣ ನಿಧಿಮಾಡಿ ಇಂಥ ವೇಳೆ ಜನರಿಗೆ ಉಪಯೋಗ ಆಗೋ ಏರ್ಪಾಡುಗಳನ್ನ ಮಾಡಿಸಿದೇನೆ ಅಂದರು. ತುಲಸೀತೋಟದ ದೇವಸ್ಥಾನದ ಯಜಮಾನರಿಗೆ ತಿಳಿಸಿದರೆ ಇಂಥ ಕೆಲಸಕ್ಕೆ ಅವರು ಏರ್ಪಾಡು ಮಾಡುತ್ತಾರೆ ಎಂತ ಹೇಳಿದರು. ಅಲ್ಲಿಗೆ ಹೋಗಿ ಯಾರನ್ನಾದರೂ ನೋಡತೇನೆ," ಎಂದೆ.

ಆಕೆ, "ಇದು ಸರಿ ಅಂತ ಕಾಣುತ್ತೆ. ಹಿಂದೆ ಯಜಮಾನರು ಒಂದು ಸಲ ಈ ಮಾತನ್ನೇ ಹೇಳಿದ್ದು ನನಗೆ ನೆನಪಿದೆ," ಅಂದರು.

ಬೇರೆ ಯಾರನ್ನಾದರೂ ಕಳುಹಿಸಿದರೆ ಅವರು ಬರುವುದಕ್ಕೆ ತಡವಾಗುವುದು, ನಾವಿಲ್ಲಿ ತುದಿಗಾಲಮೇಲೆ ನಿಂತು ಕಾಯುತಾ ಇರುವುದು, ಅವರು ಬರಲಿಲ್ಲವಲ್ಲ ಅಂತ ಮಿಡುಕೋದು, ಈ ಕಷ್ಟವೆಲ್ಲಬೇಡ ಎಂತ ಕೃಷ್ಣಸ್ವಾಮಿ ದೇವಸ್ಥಾನಕ್ಕೆ ನಾನೇ ಹೊರಟೆ.

ದೈವಕೃಪೆ. ದೇವಸ್ಥಾನಕ್ಕೆ ಹೋಗುತಾಲೇ ಗುರುಡಾಚಾರ್ರೇ ಎದುರಿಗೆ ಕಂಡರು. ಎಲ್ಲ ಕೆಲಸವೂ ಸುಲಭವಾಯಿತು. ತುಲಸೀತೋಟದ ಅಗ್ರಹಾರದ ಶ್ರೀವೈಷ್ಣವರ ಮನೆಗಳಿಂದ ನಾಲ್ಕು ಜನ ವಾಹಕರು, ಒಬ್ಬ ಪುರೋಹಿತರು, ಹದಿನೈದು ನಿಮಿಷದಲ್ಲಿ ಬಂದು ಸೇರಿದರು. ಪುರೋಹಿತರಿಗೆ ಹಣಕೊಟ್ಟು, ಕರ್ಮಕ್ಕೆ ಅವಶ್ಯಕವಾದ ಸಾಮಾನು ತನ್ನಿ ಎಂದು ಕಳುಹಿಸಿ ನಾನು ವಾಹಕರನ್ನು ಜೊತೆಗೆ ಕರೆತಂದೆ. ಮುಕ್ಕಾಲು ಗಂಟೆ ಎನ್ನುವ ಹೊತ್ತಿಗೆ ಪುರೋಹಿತರು ಬಂದರು. ಎಲ್ಲ ಕರ್ಮವೂ, ಆ ಸತ್ಯ ಮನುಷ್ಯ ಸಾಯದೆ ಬದುಕಿದ್ದರೆ ಅವನಿಗೇ ತೃಪ್ತಿಯಾಗುವಷ್ಟು ಕ್ರಮವಾಗಿ ನಡೆಯಿತು. ನಾನೇನೂ ಹೋಗಬೇಕಾಗಿರಲಿಲ್ಲ. ಆದರೆ ಈ ಹೆಂಗಸು ಅಲ್ಲಿಗೆ ಹೋಗಬೇಕು. ನಮ್ಮ ಮನೆಯಾಕೆ, ನಾನೂ ಬರತೇನೆ, ಎಂದರು. ನಾವು ಮೂವರೂ ಸ್ಮಶಾನಕ್ಕೆ ಹೋಗಿ, ದಹನಕ್ರಿಯೆ ಸಾಂಗವಾಗಿ ನಡೆದುದನ್ನು ನೋಡಿಕೊಂಡು ಕೆರೆಯಲ್ಲಿ ಸ್ನಾನ ಮುಗಿಸಿಕೊಂಡು ಹಿಂದಕ್ಕೆ ಬಂದೆವು.

ಮುಂದಿನ ಹದಿಮೂರು ದಿನದ ಕ್ರಮ ಶಾಸ್ತ್ರದ ಯಾವ ವಿಧಿಯನ್ನೂ ಬಿಡದೆ ಕ್ರಮವಾಗಿ ನಡೆಯಿತು. ಹದಿಮೂರನೆಯ ದಿನ ವೈಕುಂಠ ಸಮಾರಾಧನೆ ಆಯಿತು. ಮುಂದೆ ತಿಥಿಗಳನ್ನು ಕರ್ಮಗಳನ್ನು ಮಾಡುವ ಅವಶ್ಯಕವಿಲ್ಲದಂತೆ ಹಿಂದಿನ ದಿನವೇ ಯಾವುದೋ ಒಂದು ಹೋಮ ಎನ್ನುತ್ತಾರೆ ಅದನ್ನು ಮಾಡಿಸಿಯೂ ಆಗಿತ್ತು.

ಆಕೆ, "ಎಲ್ಲ ಕೆಲಸವನ್ನೂ ನಡೆಸಿಕೊಟ್ಟು ನನ್ನನ್ನು ಕಾಪಾಡಿದಿರಿ. ನಿಮ್ಮ ಉಪಕಾರಕ್ಕೆ ನಾನು ಏನು ಹೇಳುವುದಕ್ಕೂ ತೋಚದೆ ಇದೆ," ಎಂದರು.

"ನಿಮ್ಮ ಯಜಮಾನರ ಆತ್ಮ ಸಮಾಧಾನವಾಗಿರಲಿ ಅನ್ನುವ ನಿಮ್ಮ ಆಸೆ ತುಂಬ ಒಳ್ಳೆ ಆಸೆ. ಅದು ನಡೆಯಬೇಕಾದರೆ ನಿಮಗೆ ಯಾರದಾದರೂ ಸಹಾಯ ಅವಶ್ಯಕವಾಗಿತ್ತು. ಆ ಸಹಾಯ ಮಾಡೋ ಪುಣ್ಯ ನನ್ನದಾಯಿತು. ಇದನ್ನ ನೀವು ಉಪಕಾರ ಅಂತ ತಿಳಿಯಲೇ ಬೇಡಿ. ಒಳ್ಳೇ ಮನುಷ್ಯ ಒಬ್ಬನ ಅಂತ್ಯಕರ್ಮ ನಡೆಸೋ ಅವಕಾಶಾನ ನನಗೆ ದೊರಕಿಸಿದೆ ಅಂತ ತಿಳಿದುಕೊಳ್ಳಿ," ಎಂದೆ.

ಕೆಲವು ದಿನ ಬಿಟ್ಟು ಈಕೆ ನಮ್ಮ ಮನೆಗೆ ಬಂದಾಗ, ಸಹಜವಾಗಿ ಇವರು ನಮ್ಮ ಮನೆಯವರಿಗೆ ತಾವು, ತಮ್ಮ ಯಜಮಾನರು ಈ ಸಂಬಂಧ ಬೆಳೆಸಿದ್ದು ಹೇಗೆ ಎಂಬುದನ್ನು ಹೇಳಿದರು.

ನಮ್ಮ ಜಿಲ್ಲೆ ಪಟ್ಟಣ ಒಂದರಲ್ಲಿ ದೊಡ್ಡ ಆಸ್ಪತ್ರೆ. ಅದರ ಕಚೇರಿಯಲ್ಲಿ ಈತ ಗುಮಾಸ್ತರಾಗಿದ್ದರು. ಈಕೆ ಆಸ್ಪತ್ರೆಯಲ್ಲಿ ನರ್ಸ್. ಈ ಮನುಷ್ಯನಿಗೆ ಸಂಸಾರ ಇತ್ತು. ಮಕ್ಕಳಿರಲಿಲ್ಲ. ಇವನಿಗೆ ಮಧ್ಯ ವಯಸ್ಸು; ಹೆಂಡತಿ ತೀರಿ ಕೊಂಡರು. ನರ್ಸ್ ಆಗಿದ್ದ ಈಕೆ, ತನ್ನ ಕೆಲಸದಲ್ಲಿ, ಯಾವುದೋ ಔಷಧಿ ಬೇಕೆಂದೋ, ಯಾವುದೋ ಹಾಸಿಗೆ ಬಟ್ಟೆ, ಹೊದಿಕೆ ಬಟ್ಟೆ ಬೇಕೆಂದೋ, ಕೇಳುವುದಕ್ಕೆ ಹೋದಾಗ ಇವರನ್ನು ಮಾತನಾಡಿಸುತ್ತಿದ್ದರು. ಈಕೆ ಕ್ರಿಶ್ಚಿಯನ್, ಮದುವೆ ಆಗದ ಹೆಣ್ಣು, ಎಂದು ಅವರು ಬಲ್ಲರು. ಹೆಂಡತಿ ಹೋದ ಒಂದು ವರ್ಷದ ಬಳಿಕ ಯಾವುದೋ ಮಾತಿಗೆ ಬಂದು ಈಕೆ ಅವರಿಗೆ, “ನಿಮ್ಮ ಹೆಂಡತಿ ಹೋಗಿ ವರ್ಷ ಆಯಿತು. ಏನು ಒಂಟಿಯಾಗಿ ಇದ್ದು ಬಿಟ್ಟಿದೀರಿ? ತಿರುಗಿ ಮದುವೆ ಆಗಬಾರದೆ? ನೀವೇ ಬೇಯಿಸಿಕೊಂಡು ಬಾಳುತ್ತಿದ್ದೀರಂತಲ್ಲಾ?” ಎಂದರು. ಆತ, “ತಿರುಗಿ ಮದುವೆ ಆಗೋಕೆ ನನಗೆ ಹೆಣ್ಣು ಯಾರು ಕೊಡುತ್ತಾರೆ,” ಎಂದರು. ಈಕೆ: “ವಯಸ್ಸಾಯಿತು ಎಂತಲೆ?” ಆತ, “ವಯಸ್ಸೂ ಆಯಿತು,” ಎಂದು ಹೇಳಿ ಬೇರೆ ಯಾವುದೋ ಮಾತನ್ನೆತ್ತಿದರು. ಇನ್ನು ಕೆಲವು ದಿನ ಕಳೆದಿದೆ. ಬೇರೆ ಏನಾದರೂ ಉದ್ದೇಶ ಇದ್ದು ಅಲ್ಲ, ಏನೋ ಕನಿಕರದ ಮಾತು ಹೇಳೋಣ ಎನ್ನುವ ಚಪಲದಲ್ಲಿ ಈಕೆ ಅವರಿಗೆ, “ನೀವು ಒಂಟಿಯಾಗಿರುವುದನ್ನ ನೋಡಿ ನನಗೆ ಅಯ್ಯೋ ಪಾಪ ಎನ್ನಿಸುತ್ತೆ,” ಅಂದರು. ಆತ, “ಒಂಟಿಯಾಗಿರೋದು ಬೇಡ ಅಂದರೆ ನೀವು ನನಗೆ ಜೊತೆ ಆದೀರೇನು?” ಎಂತ ಕೇಳಿದರು. ಇದು ಈಕೆ ನಿರೀಕ್ಷಿಸುತ್ತಿದ್ದ ಪ್ರಶ್ನೆ ಅಲ್ಲ. ಆದರೆ ಈಕೆಯ ಮಾತಿನಿಂದ ಸಹಜವಾಗಿ ಮೂಡಿತ್ತು. “ನೀವು ಬ್ರಾಹ್ಮಣರು; ನಾನು ಕ್ರಿಶ್ಚಿಯನ್; ಮದುವೆ ಆಗಬಹುದೇ?” “ಮದುವೆ ಅಲ್ಲ, ಜೊತೆ ಆಗಬಹುದು. ಮದುವೆ ಆದರೆ ಏನು ವಿಶೇಷ? ಆಗಲಿಲ್ಲ, ಹೋದದ್ದೇನು?” ಕ್ಷಣ ತಡೆದು ಈಕೆ, “ಆಗೋಣಂತೆ,” ಎಂದರು.

“ನನಗೆ ವಯಸ್ಸಾಗಿತ್ತು ತಾಯಿ. ಮುವ್ವತ್ತು ವರ್ಷದ ಮೇಲೆ ಆಗಿತ್ತು. ದಾರಿ ಬಿಡದೆ ಸರಿಯಾಗಿ ಬಾಳಿದ್ದೆ. ನಮ್ಮ ಜನ ಯಾರೂ ಮದುವೆ ಆಗು ಬಾ ಅಂತ ಕರೆದಿರಲಿಲ್ಲ. ಮದುವೆ ಮಾಡಿಸೋ ಹಿರಿಯರೂ ಇರಲಿಲ್ಲ. ಇವರ ಜೊತೆಗೆ ಬಾಳಿದರೆ ಏನು ತಪ್ಪು? ಜೊತೆಗೆ ಇದ್ದ ಮೇಲೆ ಎಂದಾದರೂ ಒಂದು ದಿನ, ಈ ರಿಜಿಸ್ಟರ್ ಮದುವೆ ಅಂತಾರಲ್ಲ, ಅಂಥ ಮದುವೆ ಆದರೂ ಆಗಬಹುದು. ಹೀಗೆ ಅಂತ ಇವರ ಮಾತಿಗೆ ಒಪ್ಪಿಕೊಂಡೆ. ನಾನು ಒಪ್ಪಿಕೊಂಡೇನು ಅಂತ ಅವರು ಅಂದುಕೊಂಡಿರಲಿಲ್ಲ ಅಂತ ಕಾಣುತ್ತೆ. ಆಗಲಿ ಅಂದೆನೋ, ಅವರ ಸಂತೋಷ ಅದೆಷ್ಟು! ಆಮೇಲೆ ಹೇಳಿದರು, “ನೀನು ಆಸ್ಪತ್ರೆಯಲ್ಲಿ ಕೆಲಸದಲ್ಲಿರೋ ನರ್ಸ್. ನಾನು ನಿನ್ನ ಕೆಡಿಸಿದೆ ಅನ್ನೋ ಮಾತು ಬರಬಾರದು. ಈ ಹೊತ್ತು ಕೆಲಸ ಮುಗಿದು ಮನೆಗೆ ಹೋಗತಾ ನೀನು ನನ್ನ ಜೊತೇಲಿ ಬಾ. ದೊಡ್ಡ ಡಾಕ್ಟರ ಹತ್ತಿರ ಹೋಗಿ, ನಾವಿಬ್ಬರೂ ಜೊತೆಯಾಗಿ ಬಾಳಬೇಕು ಅಂತ ಮಾಡಿಕೊಂಡಿದ್ದೇವೆ, ನಮ್ಮ ಮೇಲೆ ಯಾರಾದರೂ ಚಾಡಿಗೀಡಿ ಹೇಳಿದರೆ ತಪ್ಪೇನು ಆಗಿಲ್ಲ ಅನ್ನೋದು ತಮಗೆ ತಿಳಿದಿರಲಿ ಅಂತ ಇಬ್ಬರೂ ತಮಗೆ ತಿಳಿಸೋಕೆ ಬಂದಿದ್ದೇವೆ, ಅಂತ ಹೇಳೋಣ. ಯಾರೂ ಏನೂ ಹೇಳುವಂತಿಲ್ಲ,” ಎಂದರು. ನಾನು ಒಪ್ಪಿದೆ. ಸಂಜೆ ಇಬ್ಬರೂ ಹೋಗಿ ದೊಡ್ಡ ಡಾಕ್ಟರಿಗೆ ತಿಳಿಸಿದೆವು. ಅವರು, ತಪ್ಪಲ್ಲ ಎಂದಷ್ಟೇ ಅಲ್ಲ, ತುಂಬ ಚೆನ್ನ ಆಯಿತು, ಸುಖವಾಗಿ ಬಾಳಿ, ಹೋಗಿ, ಎಂದರು. “ದೊಡ್ಡ ಡಾಕ್ಟರು ಬಹಳ ಒಳ್ಳೆಯವರು. ತಮ್ಮ ಯಜಮಾನರಿದ್ದಾರಲ್ಲ, ಸುಮಾರು ಇದೇ ಗಂಭೀರ, ಇದೇ ದೊಡ್ಡತನ.”

ಇವರು ಈ ಮಾತನ್ನು ಆಡುವ ಹೊತ್ತಿಗೆ ಸರಿಯಾಗಿ ನಾನು ನನ್ನ ಮನೆಯವರಿಗೆ ಏನೋ ಹೇಳಲು ಆ ಬಾಗಿಲ ಬಳಿ ಹೋದೆ. ಇವರ ಮಾತನ್ನು ಕೇಳಿ ಸುಮ್ಮನೆ ನಿಂತೆ. ನಮ್ಮಾಕೆ, “ಸುಶೀಲಮ್ಮ ತಾವು ತಮ್ಮ ಯಜಮಾನರು ಗಂಡ ಹೆಂಡರಾದದ್ದು ಹೇಗೆ ಅನ್ನೋದನ್ನ ಹೇಳುತ್ತಿದ್ದರು. ಇವರ ಆಸ್ಪತ್ರೆ ಡಾಕ್ಟರು ಇವರ ಸಂಬಂಧ ಬೆಳೆಸಿದ್ದನ್ನು ಮೆಚ್ಚಿದರಂತೆ. ಆ ಡಾಕ್ಟರು ನಿಮ್ಮಂತೆ ಗಂಭೀರದ ದೊಡ್ಡತನದ ಮನುಷ್ಯರು ಅಂತ ಇವರು ಹೇಳುತಿದ್ದಾರೆ,” ಎಂದರು. ನಾನು ನಕ್ಕೆ.

ಬೇಬಿಲಾನ್ ಕುಮಾರಿ

ಈಗ ಸುಮಾರು ಎರಡು ಸಾವಿರದ ಐನೂರು ವರ್ಷಗಳ ಹಿಂದೆ ಪ್ರಾಚೀ ಗಾಂಧಾರದ ಮುಖ್ಯ ನಗರ ತಕ್ಷಶಿಲಾದಲ್ಲಿ ನರೇಂದ್ರ ಅಭಿನವ ಪುರು ಆಳುತ್ತಿದ್ದ ಕಾಲ. ನಗರದ ಹಿರಿಯ ವ್ಯಾಪಾರಿ ಧನಪಾಲ ಬೇಬಿಲಾನ್ ರಾಜ್ಯದೊಂದಿಗೆ ವ್ಯವಹಾರ ನಡೆಸುತ್ತಿದ್ದವನು ನಾಲ್ಕು ವರ್ಷ ಪ್ರವಾಸ ಮುಗಿಸಿ ಹಿಂತಿರುಗಿ ಬಂದನು. ಇಷ್ಟು ಕಾಲ ಪ್ರವಾಸಮಾಡಿ ಸುಖವಾಗಿ ಹಿಂತಿರುಗಿ ಬಂದನೆಂಬುದೇ ಜನರಿಗೆ ಅವನು ಅಸಾಧಾರಣ ಸಾಹಸಿ ಎನ್ನುವುದಕ್ಕೆ ಪ್ರಮಾಣ ಆಗಿತ್ತು. ಇದರ ಮೇಲೆ ಅವನು ಬೇಬಿಲಾನ್ ರಾಷ್ಟ್ರದ ಭಾಷೆಯನ್ನು ಕ್ರಮವಾಗಿ ಕಲಿತು ಬೇರೆ ಬಂದಿದ್ದನು. ಅಲ್ಲಿಯ ಪ್ರಮುಖ ವ್ಯಾಪಾರಿಗಳು ನಾಲ್ವರೊಂದಿಗೆ ಸಂತತವಾಗಿ ವ್ಯವಹಾರ ನಡೆಸುವ ಒಪ್ಪಂದಗಳನ್ನು ಮಾಡಿಕೊಂಡು ಅವನ್ನು ಅವರ ಭಾಷೆಯಲ್ಲಿ ಬರೆಸಿಕೊಂಡು ತಂದಿದ್ದನು. ಸಾಲದ್ದಕ್ಕೆ ಬರುತ್ತ ತನ್ನೊಂದಿಗೆ ಬೇಬಿಲಾನಿನ ಒಬ್ಬ ತರುಣಿ ಚೆಲುವೆಯನ್ನು ಕರೆದು ತಂದಿದ್ದನು. ಪ್ರವಾಸದ ದೇಶ ಹಲವದರಿಂದ ತಂದಿದ್ದ ಅಪೂರ್ವ ವಸ್ತು ಹಲವನ್ನು ಪ್ರಭು ನರೇಂದ್ರರಿಗೆ ಒಪ್ಪಿಸಿದ ನಂತರ, ಇಂಥ ಇತರ ವಸ್ತು ಹಲವನ್ನು, ಜೊತೆಗೆ ಈ ತರುಣಿಯನ್ನು, ನರೇಂದ್ರನ ಹಿರಿಯ ರಾಣಿಯರ ಪರಿವಾರದಲ್ಲಿ ಇರಲು ಆಕೆಗೆ ಒಪ್ಪಿಸಲೆಂದು ಅರಮನೆಗೆ ಬಂದನು.

ರಾಣಿ ವಸುಮತಿ ಈ ಕಾಣಿಕೆಯನ್ನೆಲ್ಲ ಸ್ವೀಕರಿಸಿದರು. “ವಣಿಜರಾಜರು ಈ ಬಾರಿ ಈ ಚೆಲುವೆಯನ್ನು ಕರೆತರುವ ಯೋಚನೆ ಏಕೆ ಮಾಡಿದಿರಿ?” ಎಂದು ಕೇಳಿದರು. ಧನಪಾಲ ಹೇಳಿದನು:

ಬೇಬಿಲಾನ್ ನಗರದಲ್ಲಿ ನಿಂತು ಸುತ್ತಿನ ದೇಶಗಳಿಗೆ ಸಹ ಹೋಗಿ ವ್ಯಾಪಾರ ಮಾಡುವುದರಲ್ಲಿ ನನಗೆ ಹತ್ತಾರು ಜನ ತುಂಬ ಪರಿಚಿತರಾದರು. ಈ ತೆರದಲ್ಲಿ ಈ ತರುಣಿಯ ತಂದೆತಾಯಿ ಉಳಿದವರಿಗಿಂತ ಹೆಚ್ಚು ಎಂಬಂತೆ ನನಗೆ ಹತ್ತಿರವಾದರು. ದೂರದೇಶದಿಂದ ಬಂದ ನಾನು ಪರದೇಶದ ಒಬ್ಬ ಮನುಷ್ಯ ಅಲ್ಲ, ತಮ್ಮ ದೇಶದ

ನಿವಾಸಿ ಒಬ್ಬ ಎಂಬಂತೆ ತೀರ ಅಕ್ಕರೆಯಿಂದ ಸರಳವಾಗಿ ನಡೆದುಕೊಂಡರು. ನಾನು ಇವರ ಮನೆಯ ಒಂದು ಭಾಗದಲ್ಲಿ ಉಳಿದುಕೊಂಡೆ. ಈ ಪ್ರವಾಸದಲ್ಲಿ ಕಳೆದ ಸುಮಾರು ಮೂರು ವರುಷ ಈ ಮನೆಯಲ್ಲೇ ನಿಂತೆ. ಹತ್ತು ಕಡೆ ಹೋಗಿ ಬಂದು ನನ್ನ ಸ್ವತ್ತೇನಿತ್ತು ಅದನ್ನೆಲ್ಲ ಇವರ ರಕ್ಷಣೆಯಲ್ಲಿ ಇಟ್ಟು, ಇವರು ಎಷ್ಟು ಸತ್ಯವಂತರು ಎನ್ನುವುದನ್ನು ಕಂಡು ಸಂತೋಷಪಟ್ಟೆ. ಈ ಹುಡುಗಿ ಅವರ ತಾಯಿತಂದೆಗೆ ಒಬ್ಬಳೇ ಮಗಳು. ಇವಳ ಸೋದರ ಒಬ್ಬ ಇದ್ದಾನೆ. ಅವನು ಸಂಸಾರದಲ್ಲಿ ತಂದೆಗೆ ನೆರವಾಗಿ ಇದ್ದಾನೆ. ಈ ಬಾಲೆಯ ಬಾಳು ಆ ರಾಷ್ಟ್ರದ ಹೆಣ್ಣು ಮಕ್ಕಳ ವಾಡಿಕೆಯ ಬಾಳಿನಂತೆ ನಡೆದಿದೆ. ಅದರ ರೀತಿ ಏನೆಂದು ತಮಗೆ ಹೇಳಬಲ್ಲಳು. ಇವಳು ನನ್ನ ಬಳಿ ತುಂಬ ಸಹಜವಾಗಿ ನಡೆದಾಡಿದಳು. ನನ್ನ ಒಬ್ಬ ಮಗಳಂತೆ ನನ್ನನ್ನು ನೋಡಿಕೊಂಡಳು. ಪರಿಚಯವಾದ ಹೊಸದರಲ್ಲೇ, "ನನಗೆ ನಿಮ್ಮ ಭಾಷೆಯನ್ನು ಹೇಳಿಕೊಡು, ನಿಮ್ಮ ದೇಶವನ್ನು ನೋಡೋಣ ಎಂದು ನನಗೆ ಆಸೆ; ನೀನು ಹಿಂತಿರುಗುವಾಗ ನನ್ನನ್ನು ನಿನ್ನೊಂದಿಗೆ ಕರೆದುಕೊಂಡು ಹೋಗು" ಎಂದಳು. ಇವರ ರಾಷ್ಟ್ರದ ಹೆಣ್ಣು ಮಕ್ಕಳು ಮೂರು ಪಾಲು ಜನ ಹೀಗೆ ಸರಳವಾದ ರೀತಿಯಲ್ಲಿ ನಡೆದುಕೊಳ್ಳುತ್ತಾರೆ. "ನಾನು ನನ್ನ ಮಾತನ್ನು ಕಲಿಸುತ್ತೇನೆ. ಆದರೆ ನೀನು ನನ್ನೊಡನೆ ಬಂದು ನಮ್ಮ ದೇಶದಲ್ಲಿ ಏನು ಮಾಡುತ್ತೀ?" ಎಂತ ಕೇಳಿದೆ. "ನಿಮ್ಮ ಮನೆ ಮಕ್ಕಳು ಇರುತ್ತಾರಲ್ಲ, ಅವರೊಂದಿಗೆ ಇರುತ್ತೇನೆ. ಅವರು ಬಾಳುವಂತೆ ಬಾಳುತ್ತೇನೆ" ಇದು ಇವಳ ಉತ್ತರ. "ಮಗು! ನಮ್ಮ ದೇಶದ ಜನ ನಿಮ್ಮ ಇಲ್ಲಿಯ ಜನರಷ್ಟು ಸರಳರಲ್ಲ. ಬದುಕು ಸ್ವಲ್ಪ ಕಟ್ಟುನಿಟ್ಟು. ನೀನು ನಮ್ಮ ದೇಶದಲ್ಲಿ ನಿಲ್ಲುವುದಾದರೆ ಪುಣ್ಯವಂತ ಜನರ ಮನೆಗಳಲ್ಲಿ ಒಬ್ಬ ಸೇವಕಿಯಾಗಿ ನಿಲ್ಲಬಹುದು, ಅಷ್ಟೆ." "ಹಾಗೇ ಆಗಲಿ. ನಿನ್ನ ಮನೆಯಲ್ಲೇ ಸೇವೆಗೆ ಇರುತ್ತೇನೆ. ಎರಡು ವರ್ಷ, ಮೂರು ವರ್ಷ ಇರುತ್ತೇನೆ. ಸುಖವಾಗಿ ಕಂಡರೆ ನಿಲ್ಲುತ್ತೇನೆ. ಕಷ್ಟ ಎಂದು ಕಂಡರೆ ನೀನು ಮತ್ತೊಮ್ಮೆ ಈ ದೇಶಕ್ಕೆ ಬರುವಾಗ ಇಲ್ಲಿಗೆ ಹಿಂತಿರುಗಿ ಬರುತ್ತೇನೆ." ನನಗೆ ಇವಳು ಈ ಸಂಗತಿಯನ್ನು ಇಷ್ಟು ಪೂರ್ತಿಯಾಗಿ ಯೋಚಿಸಿದ್ದಾಳೆ ಎಂಬುದನ್ನು ಕಂಡು ಆಶ್ಚರ್ಯವಾಯಿತು. ಇವಳನ್ನು ನಮ್ಮ ಊರಿಗೆ ಕರೆದುಕೊಂಡು ಬರಬಹುದು. ರಾಣಿ ತಾವು ಪರಿವಾರದಲ್ಲಿ ಸೇರಿಸಿಕೊಳ್ಳುವುದಾದರೆ

ಇವಳನ್ನು ತಮಗೆ ಒಪ್ಪಿಸಬಹುದು, ಎಂದು ಯೋಚಿಸಿದೆ. ಇವಳ ಈ ಉದ್ದೇಶ ಇವಳ ತಂದೆತಾಯಿಗೆ ಒಪ್ಪಿದೆಯೇ ಎಂತ ಕೇಳಿದೆ. ಅವರು ಸಂತೋಷದಿಂದ ಒಪ್ಪಿದರು. ಹೀಗಾಗಿ ನಾನು ಬರುತ್ತ ಇವಳು ನನ್ನೊಂದಿಗೆ ಬಂದಿದ್ದಾಳೆ.

* * * *

ಧನಪಾಲನ ವಿವರಣೆಯಿಂದ ರಾಣಿಗೆ ತುಂಬ ಸಂತೋಷ ಆಯಿತು. ಪರದೇಶದ ಒಬ್ಬ ತರುಣಿ ತನ್ನ ಪರಿವಾರದಲ್ಲಿರುವುದು ಒಂದು ವಿಧದಲ್ಲಿ ಚೆನ್ನವೇ. ಬೇರೆ ರಾಜ್ಯಗಳ ರಾಣಿಯರಿಗೆ ಇಲ್ಲದ ಒಂದು ಭಾಗ್ಯ ತನ್ನ ಪಾಲಿಗೆ ಬಂದಂತಾಯಿತು. ರಾಣಿ ಧನಪಾಲನನ್ನು "ಹುಡುಗಿ ನಮ್ಮ ಮಾತನ್ನಾಡುತ್ತಾಳೆ ಎಂದಿರಲ್ಲ?" ಎಂದು ಕೇಳಿದಳು.

"ಸನ್ನಿಧಾನ ಮಾತಾಡಿಸೋಣಾಗಲಿ, ತಿಳಿಯುತ್ತದೆ."

ರಾಣಿ ತರುಣಿಯನ್ನು "ನಿನ್ನ ಹೆಸರು ಏನೆ ತಾಯಿ" ಎಂದು ಕೇಳಿದರು.

"ಆಮಾ ಸುಕ್ಟಲ್."

"ನೀನು ನಮ್ಮ ಪರಿವಾರದಲ್ಲಿ ಇರುತ್ತೀಯಾ?"

"ಇರುತ್ತೇನೆ, ತಾಯಿ".

"ಅರಮನೆಯ ಸೇವೆ ಸುಲಭ ಅಲ್ಲ. ನೀನು ಎಲ್ಲರಂತೆ ದುಡಿಯಬೇಕಾಗುತ್ತೆ."

"ದುಡಿಯುತ್ತೇನೆ, ತಾಯಿ. ಆಗದಿದ್ದರೆ ತಿಳಿಸುತ್ತೇನೆ. ಅಪ್ಪನವರ ಮನೆಗೆ ಹಿಂದಿರುಗುತ್ತೇನೆ."

"ಧನಪಾಲರ ಮನೆಗೆ ?"

"ಹೌದು."

"ಅಲ್ಲಿ ನಿನ್ನ ಜೀವನ?"

"ಅವರ ಮನೆಯಲ್ಲಿ ಸೇವೆಮಾಡುತ್ತೇನೆ."

"ಅವರು ನಿನ್ನನ್ನು ತಮ್ಮ ಮನೆಯ ಹುಡುಗಿ ಎಂದು ಕಾಣುವುದಕ್ಕಾಗುವುದಿಲ್ಲ. ನಮ್ಮಲ್ಲಿ ವರ್ಣಭೇದ, ಆಚಾರ, ಒಂದು ರೀತಿಯಲ್ಲಿ ಕಟ್ಟು ನಿಟ್ಟು. ನೀನು ಮನೆಯ ಮಗುವಾಗಿ ಬಾಳುವಂತಿಲ್ಲ."

"ಅಪ್ಪ ಇದನ್ನು ಹೇಳಿದ್ದಾರೆ. ನಾನು ಒಪ್ಪಿದ್ದೇನೆ. ಹಾಗೆಂದೇ ಇಲ್ಲಿಗೆ ಬಂದೆ. ಅಪ್ಪ ಹೇಳಿದರು: ತಾನೊಬ್ಬ ಸಾಮಾನ್ಯ ವ್ಯಾಪಾರಿ. ಹೊರಗಿಂದ ಬಂದ ನೀನು ಸೇವಕಿಯಾಗುವುದಾದರೆ ಅರಮನೆಯ ಸೇವಕಿ ಆಗು, ರಾಣಿಯವರ ಪರಿವಾರ ಎನ್ನುವುದು ಗೌರವದ ಸ್ಥಾನ ಎಂದರು. ಅದರಿಂದ ಅವರೊಡನೆ ಇಲ್ಲಿಗೆ ಬಂದೆ."

ಸಾವಕಾಶವಾಗಿ, ಆದರೂ ಕ್ರಮವಾಗಿ ಹುಡುಗಿ ಇಷ್ಟು ಮಾತನ್ನಾಡಿದ ರೀತಿಯನ್ನು ಮೆಚ್ಚಿ ರಾಣಿ ಧನಪಾಲನಿಗೆ "ನಿಮ್ಮ ಈ ಸಾಕು ಮಗಳು ತುಂಬ ಜಾಣೆ, ಧನಪಾಲರೇ!" ಎಂದರು. ಧನಪಾಲ, "ಹೌದು ಮಹಾತಾಯಿ" ಎಂದು ನಕ್ಕನು. ಹುಡುಗಿಯೂ ಸಂತೋಷದಿಂದ ನಕ್ಕಳು. ಆಮೇಲೆ ರಾಣಿ ಹುಡುಗಿಯನ್ನು "ನಿನಗೆ ಈ ದೇಶಕ್ಕೆ ಬರೋಣ ಎಂದು ಆಸೆ ಆಯಿತು ಏಕೆ?" ಎಂದು ಕೇಳಿದರು. ಹುಡುಗಿ ಉತ್ತರ ಹೇಳಬೇಕು: ಕಂಚುಕಿ ಒಬ್ಬನು ಬಾಗಿಲಲ್ಲಿ ಕಾಣಿಸಿಕೊಂಡು ರಾಣಿಗೆ ಕೈಮುಗಿದು ದೂರ ನಿಂತನು. ಅವನು ನರೇಂದ್ರನ ಪರಿವಾರದ ಕಂಚುಕಿ. ರಾಣಿ "ಏನು ಸಂಗತಿ?" ಎಂದು ಅವನನ್ನು ಕೇಳಿದರು.

"ನಾಳೆಯ ಉತ್ಸವ ಒಂದರ ವಿಷಯ ಮಾತನಾಡಲು ಪ್ರಭುಗಳು ಪುರೋಹಿತರೊಂದಿಗೆ ದಯಮಾಡಿಸುತ್ತಿದ್ದಾರೆ," ಎಂದನು.

"ಹಾಗೆಯೇ? ತುಂಬ ಸಂತೋಷ" ಎಂದು ರಾಣಿ ಧನಪಾಲನಿಗೆ, "ಇದು ತಾನೇ ಎಷ್ಟು ಚೆನ್ನಾಯಿತು ನೋಡಿ; ನೀವು ಕರೆತಂದ ಚೆಲುವೆ ತನ್ನ ಕಥೆಯನ್ನು ಹೇಳುವ ಹೊತ್ತಿಗೆ ಸರಿಯಾಗಿ, ಅದನ್ನು ಕೇಳುವುದಕ್ಕಾಗಿಯೇ ದಯ ಮಾಡಿಸುತ್ತಿದ್ದಾರೆ ಎಂಬಂತೆ ಪ್ರಭುಗಳು ಬರುವ ಸುದ್ದಿ ಬಂದಿದೆ. ಅವರು ಬರಲಿ, ಉತ್ಸವದ ಮಾತು ಏನಿದೆ ಅದು ಕೆಲವು ನಿಮಿಷದಲ್ಲಿ ಮುಗಿಯುತ್ತದೆ. ಆಮೇಲೆ ಪ್ರಭು ಬಿಡುವಾಗಿದ್ದು, ಕುಳಿತು ಕೇಳಬಲ್ಲರಾದರೆ ನಿಮ್ಮ ಸಾಕು ಮಗಳು ಹೇಳುವ ಕಥೆಯನ್ನು ಕೇಳಬಹುದು," ಎಂದರು.

ಪ್ರಭುಗಳು ಬಂದರು. ತಾವು ಬಂದ ಉದ್ದೇಶ ಮಾತನ್ನಾಡಿ, "ಯಾರು ಈ ಸ್ತ್ರೀ ಬಂದಿದ್ದಾರೆ? ಈ ದೇಶದವರಲ್ಲ ಎಂದು ಕಾಣುತ್ತದೆ," ಎಂದರು.

ಪ್ರಭು ಬಂದಾಗ ಧನಪಾಲ ಎದ್ದು ನಿಂತಿದ್ದನು. ತರುಣಿಯೂ ಎದ್ದು ನಿಂತಿದ್ದಳು. ಪ್ರಭುಗಳ ಮಾತನ್ನು ಕೇಳಿ ಧನಪಾಲ ಅವರಿಗೆ, "ನಾನು ಪ್ರವಾಸದಿಂದ ಹಿಂದಿರುಗಿದ ಸಂಗತಿ ಸನ್ನಿಧಾನದ ಸಚಿವರಿಗೆ ತಿಳಿಸಿ ಸನ್ನಿಧಾನಕ್ಕೆ ಅರಿಕೆಮಾಡಬೇಕೆಂದು ಬೇಡಿದ್ದೇನೆ. ನನ್ನೊಂದಿಗೆ ನಮ್ಮ ದೇಶವನ್ನು ನೋಡಲು ಅಪೇಕ್ಷಿಸಿ ಬೇಬಿಲಾನದ ತರುಣಿ ಒಬ್ಬಾಕೆ ಬಂದಿದ್ದಾರೆ ಎಂಬುದನ್ನು ತಿಳಿಸಿದೆನು. ಅವರು ಅರಿಕೆ ಮಾಡಿದರೋ, ಇಲ್ಲವೋ ತಿಳಿಯದು," ಎಂದರು.

ಪ್ರಭು : "ಹೌದು ಸಚಿವರು ಹೇಳಿದರು. ತರುಣಿ ಒಬ್ಬಾಕೆ ಬಂದಿದ್ದಾರೆ ಎಂದು ಹೇಳಿದ ನೆನಪಿಲ್ಲ. ಈಕೆ ಆ ತರುಣಿಯೇ?" ಎಂದರು.

"ಅಹುದು ಪ್ರಭು."

ರಾಣಿ "ಧನಪಾಲರು ನಮ್ಮನ್ನು ಕಾಣಲು ಬರುತ್ತಾ ಈಕೆಯನ್ನು ಜೊತೆಯಲ್ಲಿ ಕರತಂದು ಗುರುತು ತಿಳಿಸಿದರು. ತರುಣಿ ನಮ್ಮ ಮಾತನ್ನು ಕಲಿತಿದ್ದಾಳೆ. ನನಗೆ ತನ್ನ ಜೀವನದ ವಿಷಯವನ್ನು ತಿಳಿಸುವುದರಲ್ಲಿದ್ದಳು. ಪ್ರಭು ದಯಮಾಡಿದಿರಿ. ವಿರಾಮ ಇದ್ದರೆ ಕುಳಿತು ಆಕೆ ಹೇಳುವ ಸಂಗತಿಯನ್ನು ಕೇಳಬಹುದು," ಎಂದರು.

ಪ್ರಭು, "ವಿರಾಮ ಇದೆ. ಕೇಳುತ್ತೇನೆ" ಎಂದರು; ರಾಣಿಯವರ ಪಕ್ಕದ ಒಂದು ಪೀಠದಲ್ಲಿ ಕುಳಿತರು; ಧನಪಾಲನಿಗೆ, ಕುಮಾರಿಗೆ ಕುಳ್ಳಿರಿ ಎಂದು ಅಪ್ಪಣೆ ಮಾಡಿದರು. ಇವರು ಕುಳಿತ ಮೇಲೆ "ನಾವು ಆಡಿದ ಮಾತೆಲ್ಲ ನಿಮಗೆ ಅರ್ಥವಾಯಿತೆ ತಾಯಿ?" ಎಂದು ತರುಣಿಯನ್ನು ಪ್ರಶ್ನಿಸಿದರು.

ಅವಳು : "ಆಯಿತು ಪ್ರಭು".

"ಮಾತನ್ನು ನಮ್ಮಂತೆಯೇ ಆಡುತ್ತೀರಿ. ತುಂಬ ಚೆನ್ನಾಯಿತು ನಿಮ್ಮ ಕತೆಹೇಳಿ" ತರುಣಿ ಹೇಳಿದಳು :

* * * *

ನಮ್ಮ ತಂದೆ ಈಜಿಪ್ಟಿನ ಮಗು. ಈಜಿಪ್ಟ್ ಬೇಬಿಲಾನ್ ರಾಜ್ಯಗಳ ಮಧ್ಯೆ ಬಹಳ ವರ್ಷಗಳ ಹಿಂದೆ ನಡೆದ ಯುದ್ಧದ ಸಂದರ್ಭಗಳಲ್ಲಿ ಇನ್ನೂ ಹುಡುಗನಾಗಿದ್ದ ಅವನನ್ನು

ಬೇಬಿಲಾನ್ ಸೈನಿಕರು ಸೆರೆಹಿಡಿದು ತಂದು ಬೇಬಿಲಾನ್‌ನಲ್ಲಿ ನಿಲ್ಲಿಸಿದರು. ಸೆರೆಯಾಗಿ ಬಂದ ಇಂಥ ಜನ ತಪ್ಪಿಸಿಕೊಂಡು ಹೋಗುವ ಮಾತೇ ಇಲ್ಲ. ಅಂಥ ಯತ್ನ ಏನನ್ನಾದರೂ ಮಾಡಿದರೆ ಶಿಕ್ಷೆ ಮರಣ ದಂಡನೆ. ತಂದೆ ನೋಡುವುದಕ್ಕೆ ಚೆನ್ನಾಗಿದ್ದರು. ಅಂದಿನ ನಮ್ಮ ದೊರೆ ಅವರನ್ನು ಅರಮನೆಯ ಪರಿವಾರದಲ್ಲಿ ಸೇರಿಸಿಕೊಂಡರು. ಅವರು ಹೇಳಿದಂತೆ ನಡೆದುಕೊಂಡು ತುಂಬ ಭಕ್ತಿಯಿಂದ ಸೇವೆ ಸಲ್ಲಿಸಿ ತಂದೆ ಅವರಿಗೆ ಬಹು ಪ್ರಿಯರಾದ ಒಬ್ಬ ಸೇವಕರಾದರು. ಹತ್ತಿರ ಹತ್ತಿರ ಇಪ್ಪತ್ತು ವರ್ಷ ಕಳೆದಿದೆ. ತಂದೆ ಅರಮನೆಯ ಪರಿವಾರದ ಹೆಣ್ಣುಗಳಲ್ಲಿ ಒಬ್ಬ ತರುಣಿಯನ್ನು ಮೆಚ್ಚಿಕೊಂಡು ಅವಳೊಡನೆ ಸ್ನೇಹ ಬೆಳೆಸಿದರು. ಆಕೆ ನಗರದ ನಿವಾಸಿಗಳಲ್ಲಿ ಒಂದು ಒಳ್ಳೆಯ ಮನೆತನದ ಮಗಳು. ನಮ್ಮ ಜನರಲ್ಲಿ ಮೂರು ವರ್ಗಗಳಿವೆ: ಅಮೇಲು, ಮುಷ್ಕೇನು, ವಾರ್ದು. ಅಮೇಲು ಎಲ್ಲಕ್ಕೂ ಮೇಲು. ನಮ್ಮ ತಾಯಿ ಈ ವರ್ಗದಾಕೆ. ಸೆರೆಯಾಗಿ ಬಂದ ಮನುಷ್ಯ ದಾಸ. ಈಕೆಯೋ ಇಲ್ಲಿಯ ಇಂಥ ಒಂದು ದೊಡ್ಡ ಮನೆತನದ ಕುಮಾರಿ. ಈ ಸ್ನೇಹದ ಕೊನೆ ಏನು? ಮದುವೆ ಆಗದೆ ಇವರು ಜೊತೆಯಾಗಿ ಬಾಳುವಂತಿಲ್ಲ. ಮದುವೆ ಸಾಧ್ಯವೇ? ಒಂದು ದಿನ ಪ್ರಭು ಸೇವಕನ ವಿಷಯದಲ್ಲಿ ತುಂಬ ಸಂತುಷ್ಟರಾಗಿದ್ದಾಗ ತಂದೆ ಅವರ ಎದುರಲ್ಲಿ ಕೈ ಮುಗಿದು ನಿಂತು: “ಪ್ರಭುಗಳಲ್ಲಿ ಒಂದು ಪ್ರಾರ್ಥನೆ ಮಾಡಬೇಕೆಂದು ಅಪೇಕ್ಷಿಸುತ್ತೇನೆ. ಅಪ್ಪಣೆ ಆದರೆ ಮಾಡುತ್ತೇನೆ” ಎಂದರು.

“ಏನು ಪ್ರಾರ್ಥನೆಯೋ ಅದು?”

“ನಾನು ಈಗ ಒಬ್ಬ ದಾಸನಾಗಿದ್ದೇನೆ. ನನ್ನನ್ನು ದಾಸ್ಯದಿಂದ ಬಿಡಿಸಿ ನಗರದ ಒಬ್ಬ ಸ್ವತಂತ್ರ ನಿವಾಸಿ ಎಂದು ಸ್ಥಾನವನ್ನು ದಯಪಾಲಿಸಬೇಕು.”

“ದಾಸನಾಗಿ ಈಗ ನೀನು ಪಡುತ್ತಿರುವ ಕಷ್ಟ ಏನು? ಸ್ವತಂತ್ರ ನಾಗರಿಕನಾಗಿ ಇದ್ದರೆ ಹೇಗೆ ಬಾಳುತ್ತಿದ್ದೆ, ಹಾಗೆ ಬಾಳುತ್ತಿದ್ದೀ ಅಲ್ಲ? ನಾವು ನಿನ್ನನ್ನು ಕಡಿಮೆಯ ಜನ ಎಂತ ಅವಮರ್ಯಾದೆಯಿಂದ ಕಾಣುತ್ತಿದ್ದೇವೆಯೇ?”

“ಇಲ್ಲ, ಮಹಾಪ್ರಭು. ತಾವು ನನ್ನನ್ನು ನನ್ನ ಯೋಗ್ಯತೆಗೆ ಮಿಂಚಿದ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದೀರಿ. ಇರುತ್ತ ಬೇರೆ ಜನ ನನ್ನನ್ನು ದಾಸ ಎಂದೇ ಕಾಣುತ್ತಾರೆ. ನಾನು

ಹುಟ್ಟಿನಿಂದ ನಮ್ಮ ರಾಷ್ಟ್ರದ ರಾಜರ ಬಂಧು ಮನೆತನ ಒಂದರ ಮಗು. ಗೌರವವಂತ ಮನೆತನದವನು. ಆದರೆ ಆ ಸ್ಥಾನ ಇಲ್ಲಿ ಯಾವ ಕೆಲಸಕ್ಕೂ ಬರುವುದಿಲ್ಲ. ಬೇಬಿಲಾನಿನ ಒಬ್ಬ ಪ್ರಜೆ ಎಂದು ಸ್ಥಾನ ಕೊಟ್ಟರೆ ನಾನು, ಪ್ರಭುಗಳು ನನಗೆ ಈ ಸ್ಥಾನವನ್ನು ಆನುಗ್ರಹಿಸಿದ್ದಾರೆ, ಬೇಬಿಲಾನಿನ ಇತರ ನಿವಾಸಿಗಳಂತೆ ನಾನೂ ಒಬ್ಬ ಸ್ವತಂತ್ರ ನಿವಾಸಿ, ಎಂದು ತಲೆ ಎತ್ತಿಕೊಂಡು ನಡೆಯುತ್ತೇನೆ."

"ಅನುಗ್ರಹಿಸಿದ್ದೇನೆ, ತಲೆ ಎತ್ತು" ಎಂದು ಪ್ರಭುಗಳು ನಕ್ಕರು. ತಂದೆ ಕೈ ಮುಗಿದಿದ್ದೇ ತಲೆಯನ್ನೆತ್ತಿ "ಅನುಗ್ರಹ ಆಯಿತು, ಪ್ರಭು. ಈಜಿಪ್ಟಿನ ಪ್ರಭುಗಳ ಬಂಧು ಒಬ್ಬ ನಿಮ್ಮ ಪ್ರಜೆಯಾಗಿ ವಂದನೆ ಸಲ್ಲಿಸುತ್ತೇನೆ," ಎಂದರು.

ಮಾರನೆಯ ದಿನ ನಮ್ಮ ತಾಯಿ ರಾಣಿಯವರ ಬಳಿಗೆ ಹೋಗಿ ಹೊಸದಾಗಿ ಬೇಬಿಲಾನ್ ಪ್ರಜೆ ಆದ ನನ್ನ ತಂದೆಯೂ ತಾನೂ ಮದುವೆ ಆಗಲು ಬಯಸುತ್ತೇವೆ ಎಂದು ವಿಜ್ಞಾಪಿಸಿ ಪ್ರಭುಗಳೂ ರಾಣಿಯವರೂ ಇದಕ್ಕೆ ಅಪ್ಪಣೆ ಕೊಡಬೇಕು ಎಂದು ಬೇಡಿದರು.

ಸಾಮಾನ್ಯವಾಗಿ ಇಂಥ ಮದುವೆ ನಡೆಯುವುದಿಲ್ಲ. ತಂದೆ ಈಜಿಪ್ಟ್ ದೇಶದವನು. ತಾಯಿ ಬೇಬಿಲಾನ್ ನಗರದಾಕೆ. ಅದರ ಮೇಲೆ ತಂದೆ ದಾಸನಾಗಿದ್ದವನು; ತಾಯಿ ನಗರದ ಮೊದಲ ವರ್ಗದವರು ಎಂಬ ಉನ್ನತ ಮನೆ ತನಗಳ ಒಂದರ ಮಗಳು. ಹುಡುಗಿಯ ತಂದೆತಾಯಿ ಇದಕ್ಕೆ ಒಪ್ಪಲಾರರು. ಇದು ಹೇಗೆ ಇವಳು ಈ ಸಂಬಂಧವನ್ನು ಮಾಡಿಕೊಳ್ಳುತ್ತೇನೆ ಎನ್ನುತ್ತಿದ್ದಾಳೆ?

ಅವರು ಇವಳನ್ನು ಹೀಗೆಂದುಕೇಳಿದರು. ಹುಡುಗಿ, "ತಾವು ಪ್ರಭುಗಳು ಒಪ್ಪಿದ ಮೇಲೆ ನಾನು ನಮ್ಮ ತಂದೆತಾಯಿಯವರನ್ನು ಒಪ್ಪಿಸುತ್ತೇನೆ. ಸಾಮಾನ್ಯವಾಗಿ ನಡೆಯುವುದಲ್ಲವಾದರೂ ಪ್ರಭುಗಳೂ ರಾಣಿಯವರೂ ಒಪ್ಪಿಕೊಂಡಿರುವ ಸೇವಕ ಸೇವಕಿ ಇವರ ಮದುವೆ. ಪ್ರಭು ರಾಣಿ ಒಪ್ಪಿಗೆ ನೀಡಿದ್ದಾರೆ. ಎಂದರೆ ನಮ್ಮ ತಂದೆತಾಯಿ ನಮ್ಮ ವರ್ಗದ ಜನ ಒಪ್ಪುತ್ತಾರೆ," ಎಂದಳು. ರಾಣಿಯವರೂ "ಪ್ರಭುಗಳನ್ನು ಕೇಳಿ ತಿಳಿಸುತ್ತೇನೆ" ಎಂದರು. ಅವರೊಂದಿಗೆ ಮಾತನಾಡಿದರು. ಪ್ರಭು "ಇವನು ಬಹಳ

ಒಳ್ಳೆಯ ಸೇವಕ; ಅವನು ಬೇಡದೆಯೇ ಅವನನ್ನು ದಾಸ್ಯದಿಂದ ಬಿಡಿಸೋಣ ಎಂದು ನನಗೆ ತೋರಿತ್ತು. ಈ ಹುಡುಗಿ ಒಳ್ಳೆಯವಳು ಎಂದು ಹೇಳುತ್ತಿದ್ದೀರಿ. ಮದುವೆ ಆಗಲಿ. ಮನೆಯವರಿಗೆ, ವರ್ಗದವರಿಗೆ ಅಡ್ಡಿ ಮಾಡುವುದು ಬೇಡ ಎಂದು ನಾನು ಹೇಳುತ್ತೇನೆ" ಎಂದರು. ಅಷ್ಟೇ ಅಲ್ಲ. "ಮದುವೆಯಾದ ಮೇಲೆಯೂ ಅರಮನೆಯಲ್ಲಿ ದುಡಿಯುತ್ತಿರುವುದು ಬೇಡ. ನಗರದ ಮರ್ಯಾದೆವಂತ ಸಂಸಾರವಾಗಿ ಬಾಳಿ. ನಾವು ನಿಮಗೆ ಒಂದು ಮನೆ, ಸ್ವಲ್ಪ ನೆಲವನ್ನೂ ಕೊಡುತ್ತೇವೆ," ಎಂದು ನಮ್ಮ ತಂದೆಗೆ ಹೇಳಿದರು. ಮದುವೆ ನಡೆಯಿತು. ತಂದೆತಾಯಿ ಒಂದು ಸಂಸಾರವಾಗಿ ಬಾಳನ್ನು ಆರಂಭಿಸಿದರು.

ಪ್ರಭುಗಳು ಇಷ್ಟಪಟ್ಟು ನಡೆಸಿದ ಮದುವೆ ಎಂಬ ಕಾರಣದಿಂದ ನಮ್ಮ ಅಜ್ಜ ನಮ್ಮ ತಾಯಿಗೆ ತಕ್ಕಷ್ಟು ಮೊತ್ತದ ಬಳುವಳಿಯನ್ನು ಕೊಟ್ಟರು.

ಗಂಡು ಹೆಣ್ಣು ಒಬ್ಬರನ್ನೊಬ್ಬರು ಒಲಿದು ಮದುವೆ ಆಗುವುದು ನಮ್ಮಲ್ಲಿ ಅಂಥ ವಾಡಿಕೆ ಆದ ಕ್ರಮ ಏನೂ ಅಲ್ಲ. ಒಲಿದು ಮದುವೆ ಆದವರು ಎನ್ನುವುದರಿಂದ ನಮ್ಮ ತಾಯಿತಂದೆ ತುಂಬ ಸಂತೋಷದಲ್ಲಿ ಬಾಳಿನಲ್ಲಿ ತೊಡಗಿದರು. ಸಂತೋಷದಲ್ಲೇ ಸಂಸಾರ ನಡೆಸಿದರು. ತಂದೆ ಒಳ್ಳೆ ಗಟ್ಟಿ ಮೈಯ ಗಂಡು. ಬೇಸಾಯದಲ್ಲಿ ತುಂಬ ಶ್ರಮವಹಿಸಿ ದುಡಿದು ಒಳ್ಳೆಯ ಬೆಳೆಯನ್ನು ಬೆಳೆದರು. ಪುಣ್ಯವಂತ ಆದರು.

ಮದುವೆ ಆದ ಎರಡನೆಯ ವರ್ಷ ನಾನು ಹುಟ್ಟಿದೆ. ನನ್ನ ಹತ್ತನೆಯ ವಯಸ್ಸಿನಲ್ಲಿ ಅಂದಿನ ದೊರೆ ತೀರಿಕೊಂಡರು. ಆಮೇಲೆ ಎರಡು ವರ್ಷದಲ್ಲಿ ಆ ರಾಣಿ ತೀರಿಕೊಂಡರು. ನಮ್ಮ ತಂದೆತಾಯಿ ಅದುವರೆಗೆ ಅರಮನೆಗೆ ಹೋಗುತ್ತ ಬರುತ್ತ ಹಿಂದಿನ ಸಂಬಂಧವನ್ನು ಉಳಿಸಿಕೊಂಡಿದ್ದರು. ಪ್ರಭು, ರಾಣಿ ಇಬ್ಬರೂ ತೀರಿಕೊಂಡ ಮೇಲೆ ಈ ಸಂಬಂಧ ತಪ್ಪಿತು.

ನಾನು ಹದಿನೇಳು ವರ್ಷದ ಹುಡುಗಿ. ಒಂದು ರಾತ್ರಿ ನಮ್ಮ ತಂದೆ ನಮ್ಮ ಗದ್ದೆಯ ಹತ್ತಿರ ಕಾಲುವೆಯಿಂದ ನೆಲಕ್ಕೆ ನೀರು ಹರಿಯುವ ಬಾಯನ್ನು ತೆರೆದು ಮನೆಗೆ ಬಂದರು.

ಸ್ವಲ್ಪ ಹೊತ್ತು ಬಿಟ್ಟು ಹೋಗಿ ಆ ಬಾಯನ್ನು ಮುಚ್ಚಬೇಕು. ಅದು ಏನಾಯಿತೋ ಅವರು ಗದ್ದೆಯ ಬಳಿಗೆ ಹೋಗಬೇಕು ಎನ್ನುವುದನ್ನು ಮರೆತರು. ಮಲಗಿ ನಿದ್ದೆ ಮಾಡಿಬಿಟ್ಟರು.

ಬೆಳಗಾಗ ಅವರಿನ್ನೂ ನಿದ್ದೆಯಿಂದ ಎದ್ದಿರಲಿಲ್ಲ. ಪಕ್ಕದ ಗದ್ದೆಯ ಬೇಸಾಯಗಾರ ದೊಡ್ಡದಾಗಿ ಕೂಗಿಕೊಂಡು ನಮ್ಮ ಮನೆಯ ಮುಂದುಗಡೆಗೆ ಬಂದ. ಅಪ್ಪ ಎದ್ದು "ಏನಪ್ಪ" ಎಂದು ಕೇಳಿದರೆ "ನೀನೇನು ಮಾಡಿದೆ ಮಹರಾಯ! ಕಾಲುವೆ ನೀರನ್ನ ಗದ್ದೆ ಮೇಲಕ್ಕೆ ಬಿಟ್ಟವರು ಮುಚ್ಚದೆ ಮಲಗಿದೆಯಲ್ಲ. ನೀನೂ ಹಾಳಾದೆ. ನನ್ನ ಬೆಳೆಯನ್ನೂ ಹಾಳುಮಾಡಿದೆ. ನಮ್ಮ ಪಕ್ಕದ ಗದ್ದೆಗಳಿಗೂ ನೀರು ಹರಿಯುತ್ತಾ ಇದೆ. ಹೋಗಿ ನೋಡು. ನಮಗೆಲ್ಲ ನಷ್ಟ ಕಟ್ಟಿಕೊಡಬೇಕು. ಹ್ಯಾಗೆ ಕೊಡುತ್ತೀಯೊ ಯೋಚಿಸು" ಎಂದ.

ತಂದೆಗೆ ಜ್ಞಾಪಕ ಬಂತು. ತಾನು ಕಾಲುವೆ ತೆರೆದವನು ಮುಟ್ಟೋದಕ್ಕೆ ಹೋಗಬೇಕು ಅಂದುಕೊಂಡು ಮರೆತೆ ಅಂತ; ಗದ್ದೆಯ ಬಳಿಗೆ ಓಡಿಹೋಗಿ ತೆರೆದಿದ್ದ ಬಾಯನ್ನು ಮುಚ್ಚಿದರು. ಪೆಚ್ಚು ಮುಖ ಹಾಕಿಕೊಂಡು ಮನೆಗೆ ಬಂದರು. ತಾಯಿಗೆ "ಹದಿನೈದು ವರುಷ ಉಳಿಸಿದ ಪುಡಿ ಹಣ ಈ ನಷ್ಟ ಕಟ್ಟಿ ಕೊಡುವುದರಲ್ಲಿ ಹೋಗುತ್ತೆ. ಇನ್ನಷ್ಟು ಕೊಡಬೇಕಾಗುತ್ತೆ. ಎಲ್ಲಿಂದ ಕೊಡೋದೋ ತಿಳಿಯಲಿಲ್ಲ" ಎಂದರು.

* * * *

ಪುರು ನರೇಂದ್ರರು ತರುಣಿಯನ್ನು "ಈ ನಷ್ಟ ಕಟ್ಟಿಕೊಡುವುದು ನಿಮ್ಮಲ್ಲಿ ವಾಡಿಕೆಯೋ" ಎಂದು ಕೇಳಿದರು.

"ಹೌದು ಪ್ರಭು. ನಮ್ಮ ದೇಶದಲ್ಲಿ ಅದೆಷ್ಟೋ ಹಿಂದೆ ಆಳಿದ ಒಬ್ಬ ದೊರೆ ಬಹು ದೊಡ್ಡವರು ಈ ಕಟ್ಟಳೆಗಳನ್ನೆಲ್ಲ ಆಗ ಮಾಡಿದರಂತೆ. ಸಾವಿರ ವರ್ಷದ ಹಿಂದೆಯೋ ಎರಡು ಸಾವಿರ ವರ್ಷದ ಹಿಂದೆಯೋ ಅಂತ ಹಿರಿಯರು ಹೇಳುತ್ತಾರೆ".

ಧನಪಾಲ "ಹೌದು ಮಹಾಪ್ರಭು. ಆ ದೊರೆ ಬೇಬಿಲಾನ್ ಚಕ್ರಾಧಿಪತ್ಯವನ್ನು ಸ್ಥಾಪಿಸಿದವರಂತೆ. ಅವರ ಹೆಸರು ನಮ್ಮ ಕಿವಿಗೆ ಧರ್ಮರವಿ ಎಂಬಂತೆ ಕೇಳುತ್ತದೆ" ಎಂದನು.

ತರುಣಿ: "ಹೌದು ಅವರ ಹೆಸರು ಖಮ್ಮುರಬಿ. ಅವರ ದಿನದಲ್ಲಿ ಆ ಕಟ್ಟಳೆಗಳು ಎಲ್ಲರಿಗೂ ತಿಳಿದಿರಲಿ ಎಂದು ಅವರು ನಗರದ ಮಧ್ಯೆ ಒಂದು ದೊಡ್ಡ ಜಗಲಿಯ ಮೇಲೆ ಎತ್ತರದ ಒಂದು ಕಂಬವನ್ನು ಕಟ್ಟಿಸಿ ಇಷ್ಟವುಳ್ಳವರು ಓದಿ ತಿಳಿದುಕೊಳ್ಳುವಂತೆ ಅದರ ನಾಲ್ಕು ಮುಖದ ಮೇಲೆ ತಮ್ಮ ಈ ಕಟ್ಟಳೆಗಳನ್ನು ಬರೆಯಿಸಿದರು. ಆ ಕಂಬ ಈಗಲೂ ಇದೆ. ಅವರ ದಿನದಲ್ಲಿ, ಅಲ್ಲಿಂದೀಚೆಗೆ, ರಾಜ್ಯದಲ್ಲೆಲ್ಲ ಎಲ್ಲ ಕಟ್ಟಳೆಯೂ ಚಾಚೂ ತಪ್ಪದೆ ನಡೆಯುತ್ತಿವೆ".

ರಾಜರು "ಎಂಥ ಮಹಾನುಭಾವ ಧರ್ಮರವಿ! ಖಮ್ಮುರಬಿ ಎಂದರೆ ಧರ್ಮರವಿ ಅಂತಲೇ ಅರ್ಥ ಇರಬೇಕು. ಆಮೇಲೆ?"

"ಕೇರಿಯ ಪ್ರಮುಖರು ಹತ್ತು ಜನ ಸೇರಿದರು. ಕಟ್ಟಿ ಕೊಡಬೇಕಾದ ನಷ್ಟ ಇಷ್ಟು ಎಂದು ನಿರ್ಣಯಿಸಿ ತಿಳಿಸಿದರು. ತಂದೆ ಅದನ್ನು ಒಪ್ಪಿಕೊಂಡು ಮನೆಯಲ್ಲಿದ್ದ ಸ್ವತ್ತನ್ನೆಲ್ಲ ಕೊಟ್ಟು, ಉಳಿದದ್ದನ್ನು ಹೇಗಾದರೂ ಕೂಡಿಸಿ ಕೊಡುತ್ತೇನೆ. ನಾಲ್ಕು ದಿನ ಅವಕಾಶ ಕೊಡಿ, ಎಂದು ಕೇಳಿಕೊಂಡರು. ನಷ್ಟ ಪಟ್ಟವರು ಇದಕ್ಕೆ ಒಪ್ಪಿದರು.

"ಈ ಸಾಲದೆ ಹೋದ ಹಣವನ್ನು ಹೇಗೆ ಕೂಡಿಸುವುದು? ನಮ್ಮ ತಾಯ ತೌರಿನ ಹಿರಿಯರು ತೀರಿಕೊಂಡಿದ್ದರು. ಇವರ ಒಡಹುಟ್ಟು ಅಂಥ ಪುಣ್ಯವಂತ ಜನವಲ್ಲ; ಇವರಿಗೆ ಹಣ ಒದಗಿಸುವ ಸ್ಥಿತಿಯಲ್ಲಿರಲಿಲ್ಲ. ಅರಮನೆಯಲ್ಲಿ ಕೇಳಿ ಸಹಾಯ ಪಡೆಯಬಹುದಾಗಿತ್ತು, ಹಿಂದಿನ ಪ್ರಭು, ರಾಣಿ ಇದ್ದಿದ್ದರೆ. ಅವರು ಇಲ್ಲ. ಈಗ ಅರಮನೆಯಲ್ಲಿ ಇವರನ್ನು ಬಲ್ಲ ಸಹಾಯಕ ಜನ ಇಲ್ಲ. ಏನು ಮಾಡುವುದು? ನಮ್ಮಲ್ಲಿ ಮನೆಯಲ್ಲಿ ಬೆಳೆದ ಹುಡುಗಿ ಇದ್ದು ಅವಳನ್ನು ಮದುವೆಯಾಗಲು ಹಣವೊಂದಿಗೆ ಮನುಷ್ಯ ಒಬ್ಬ ಬಯಸಿದರೆ, ತಂದೆ ತಾಯಿ ಅಂಥ ಮನುಷ್ಯನಿಂದ ಹಣ ತೆಗೆದುಕೊಂಡು ಮಗಳನ್ನು ಅವನಿಗೆ ಮದುವೆ ಮಾಡಿಕೊಡುವುದು ಒಂದು ಪದ್ಧತಿ. ಪುಣ್ಯವಂತರು ಮಗಳನ್ನು ಕೊಟ್ಟು, ಬಳುವಳಿಯನ್ನು ಕೊಡುವರು. ನಮ್ಮ ಅಜ್ಜ ನಮ್ಮ ತಾಯನ್ನು ಕೊಟ್ಟದ್ದು ಹೀಗೆ. ಆದರೆ ಹಣ ತೆಗೆದುಕೊಂಡು ಮಗಳನ್ನು ಕೊಡುವುದು ಅವಮರ್ಯಾದೆಯೇನೂ ಅಲ್ಲ. ನಮ್ಮ ತಾಯಿ ನನ್ನನ್ನು ಬೇರೆಯಾಗಿ ಕರೆದು

“ಹಣವೊಂದಿಗ ಯಾರನ್ನಾದರೂ ನೋಡುತ್ತೇನೆ. ನೀನು ಮದುವೆ ಆಗುತ್ತಿಯೇನೆ?” ಎಂದು ಕೇಳಿದರು.

ತಂದೆಗೆ ಬಂದಿದ್ದ ಕಷ್ಟವನ್ನು ನೋಡುತ್ತಿದ್ದ ನಾನು ಬೇರೆ ಏನು ಹೇಳುವಂತಿದ್ದೆ? ಮದುವೆ ಆಗೋಣ ಎಂತ ನಾನು ಯೋಚಿಸಿರಲಿಲ್ಲ. ಆದರೆ ಆಗದೆ ತಂದೆ ಕಷ್ಟದಿಂದ ಪಾರಾಗುವಂತಿರಲಿಲ್ಲ. ನಾನು ಒಂದು ಕ್ಷಣ ಯೋಚಿಸಿದೆನೋ ಇಲ್ಲವೋ ತೀರ ಸಂತೋಷದಿಂದ “ಆಗುತ್ತೇನೆ, ಅಮ್ಮ” ಎಂದೆ.

ತಂದೆಗೆ ತಾಯಿಗೆ ತುಂಬ ಸಂತೋಷ, ಅವರು ಬಲ್ಲವರಿಗೆ ತಿಳಿಸಿದರು. ಅವರು ಪುಣ್ಯವಂತ ತರುಣ ಒಬ್ಬನನ್ನು ಗೊತ್ತು ಮಾಡಿದರು. ಮೂರೇ ದಿನದಲ್ಲಿ ಮದುವೆಯ ಒಪ್ಪಂದ ಏರ್ಪಾಡಾಯಿತು. ತಂದೆ ತಮಗೆ ಬೇಕಾದ ಹಣವನ್ನು ಪಡೆದರು. ನಾನು ತರುಣನೊಂದಿಗೆ ಅವನ ಮನೆಗೆ ಹೋಗಿ ಅವನ ಹೆಂಡಿರಾಗಿ ನಿಂತೆ.

* * * *

ರಾಜ: “ಈ ಒಪ್ಪಂದ ಎನ್ನುವುದೇನು?”

ಧನಪಾಲ: “ಈ ಮದುವೆಯ ವೇಳೆ ನಾನು ಇವರ ಮನೆಯಲ್ಲಿದ್ದೆ, ಮಹಾಪ್ರಭು. ಮಣ್ಣಿನ ಒಂದು ಹಲಗೆಯ ಮೇಲೆ, ‘ಇಂಥ ಮನುಷ್ಯ ಈ ಹೆಸರ ತನ್ನ ಮಗಳನ್ನು ಇಂಥವನ ಹೆಂಡಿರಾಗಿರು ಎಂದು ಕೊಟ್ಟು, ಅವನಿಂದ ಇಷ್ಟು ಹಣ ಪಡೆದಿದ್ದಾನೆ. ಇನ್ನು ನನ್ನ ಈ ಮಗಳು ಇವನ ಹೆಂಡಿರಾಗಿ ಇರತಕ್ಕದ್ದು’, ಎಂತ ಬರೆಸುತ್ತಾರೆ. ಮದುವೆ ಆದ ತರುಣ ಆ ಒಪ್ಪಂದದ ಹಲಗೆಯನ್ನು ತನ್ನಲ್ಲಿ ಇಟ್ಟುಕೊಳ್ಳುತ್ತಾನೆ. ಒಪ್ಪಂದಕ್ಕೆ ನಾಲ್ಕು ಜನರ ಸಾಕ್ಷಿ ಇರುತ್ತದೆ. ದೇವರು ಅನುಗ್ರಹಿಸಿದ ಸಂಬಂಧ ಎಂದು ಒಂದು ಮಾತು ಇರುತ್ತದೆ. ಇಂಥ ಹಲಗೆಗಳನ್ನು ನಾನು ನೋಡಿದ್ದೇನೆ.”

ರಾಜ: “ತುಂಬ ಚೆನ್ನಾದ ಏರ್ಪಾಡು”.

ತರುಣಿ: ಮದುವೆ ಆಗಿ ನಾನು ಗಂಡನ ಮನೆಯಲ್ಲಿ ಮೂರು ಹುಣ್ಣಿಮೆ ಕಾಲ ಬಾಳಿದೆ. ಆ ವೇಳೆಗೆ ಅವನಿಗೆ ನಮ್ಮ ಇನ್ನೊಂದು ನಗರ ನಿಪ್ಪೂರಿನಲ್ಲಿರುತ್ತ ವ್ಯಾಪಾರ ಮಾಡುತ್ತಿದ್ದ ದೊಡ್ಡಪ್ಪ ಏನೋ ಕೆಲಸ ಇದೆ ಬರಬೇಕು ಎಂದು ಹೇಳಿ ಕಳುಹಿಸಿದರು.

ಇವನು ಹೋದ. ವಾರ ಎರಡು ವಾರದಲ್ಲಿ ತಿರುಗಿ ಬರಬೇಕು. ಬರಲಿಲ್ಲ. ಮನೆಯಲ್ಲಿ ದೊಡ್ಡವರು ಬೇರೆ ಯಾರೂ ಇಲ್ಲ. ನಾನು, ಒಬ್ಬ ಆಳು. ನನಗೆ ಅಲ್ಲಿ ಒಬ್ಬಳೇ ಇರುವುದು ಬೇಡ ಎನ್ನಿಸಿತು. ಗಂಡ ಹಿಂದಿರುಗಿ ಬಂದಾಗ ಮತ್ತೆ ಬಂದರಾಯಿತು ಎಂದು ತಂದೆಯ ಮನೆಗೆ ಬಂದೆ. ಎರಡು ಹುಣ್ಣಿಮೆ ಆಯಿತು, ನಾಲ್ಕು ಹುಣ್ಣಿಮೆ ಆಯಿತು, ಆರು ಹುಣ್ಣಿಮೆ ಆಯಿತು. ಗಂಡ ಹಿಂತಿರುಗಲಿಲ್ಲ, ನಮ್ಮ ತಂದೆಗೆ ತುಂಬ ಭಯವಾಯಿತು. ಮದುವೆ ಮಾಡಿಕೊಟ್ಟು ಮಗಳನ್ನು ಮನೆಯಲ್ಲೇ ಇರಿಸಿಕೊಂಡ ಎಂತ ಮದುವೆ ಆದವನು ದೊರೆಗಳಲ್ಲಿ ದೂರು ಹೇಳಿದರೆ ಏನು ಗತಿ? ಇದು ನಮ್ಮಲ್ಲಿ ಬಹು ದೊಡ್ಡ ಅಪರಾಧ. ಹೀಗಾದೀತು ಎಂದು ಶಂಕಿಸುವುದಕ್ಕೆ ತಂದೆಗೆ ಒಂದು ಕಾರಣ ಇದ್ದಿತು. ತಂದೆ ನಮ್ಮ ತಾಯಿಯನ್ನು ಮದುವೆ ಆಗುವ ಮೊದಲು ಈಕೆಯನ್ನು ಇವರ ಬುಡಕಟ್ಟಿನ ತರುಣ ಒಬ್ಬ ತನಗೆ ಕೊಡಬೇಕೆಂದು ನಮ್ಮ ಅಜ್ಜನನ್ನು ಕೇಳಿದ್ದ. ಇವರು ಕೊಟ್ಟರೂ ಕೊಡಬಹುದು ಎಂದಿದ್ದರು. ಈ ಮಧ್ಯೆ ತಂದೆ ಅಡ್ಡ ಬಂದು ಇವರನ್ನು ಮದುವೆಯಾಗಿದ್ದರು. ಪರದೇಶಿ ಗಂಡು ಒಬ್ಬ ನಮ್ಮವರ ಹೆಣ್ಣು ಮಗಳನ್ನು ಕದ್ದ ಎಂತ ಇವನ ಆರೋಪ. ತಂದೆ ಪರದೇಶದಿಂದ ಬಂದವರು ದಿಟ: ಆದರೆ ಇಲ್ಲಿ ನೆಲೆಸಿದವರು. ತಮ್ಮ ಈಜಿಪ್ಟ್ ಹೆಸರನ್ನು ತೊರೆದು ಬೇಬಿಲಾನ್‌ನ ಒಂದು ಹೆಸರನ್ನು ಸ್ವೀಕರಿಸಿದ್ದರು. ಮುಖದ ಮುದ್ರೆ ಹೊರತು ಬೇರೆ ಯಾವ ವಿವರದಲ್ಲೂ ಅವರು ಪರದೇಶಿಯಾಗಿ ನಡೆಯುತ್ತಿರಲಿಲ್ಲ. ಆದರೆ ಆಗದ ಜನಕ್ಕೆ ಇದನ್ನು ಕಟ್ಟಿಕೊಂಡೇನು? ಅವರ ವಿರೋಧ ಇದ್ದೇ ಇರುತ್ತದೆ. ಈ ವಿರೋಧಿ ಮನುಷ್ಯ ಶೂನ್ಯ ಮಾಡಿಸಿಯೇ ತಾನು ಆ ರಾತ್ರಿ ಕಾಲುವೆ ತೆರೆದಿದ್ದುದನ್ನು ಮರೆತು ಮಲಗಿ ನಿದ್ದೆ ಹೋಗಿ ಹಾಳಾದೆ ಎಂದು ನನ್ನ ತಂದೆಯ ನಂಬಿಕೆ. ನಮ್ಮಲ್ಲಿ ಹೀಗೆ ಶೂನ್ಯ ಮಾಡಿಸುವವರು, ಶೂನ್ಯ ಮಾಡುವವರು, ಇದ್ದಾರೆ. ಶೂನ್ಯ ಮಾಡಿಸಿದರು ಎಂದು ದೂರುಹೇಳಿ ಸಾಕ್ಷಿಕೊಟ್ಟು, ಮಾಡಿಸಿದವರಿಗೆ ಶಿಕ್ಷೆ ಕೊಡಿಸಬಹುದು. ಇದಕ್ಕೆ ಸಾಕ್ಷ್ಯ ಕೊಡಬೇಕು. ಶೂನ್ಯಮಾಡುವವರು ಮಾಡಿಸುವವರು ಗುಟ್ಟಾಗಿ ಮಾಡುತ್ತಾರೆ, ಮಾಡಿಸುತ್ತಾರೆ. ಇದನ್ನು ಬಲ್ಲ ಜನ ಅವರ ಹತ್ತಿರದ ಜನ ಆಗಿರಬೇಕು. ಬೇರೆಯ ಜನಕ್ಕೆ ಇದು ತಿಳಿಯುವ ದಾರಿ ಇಲ್ಲ. ಈ ಬಲ್ಲ ಜನ ಹೊರಗಿನ ಒಬ್ಬನನ್ನು ರಕ್ಷಿಸುವುದಕ್ಕೆ

ತಮ್ಮವನೊಬ್ಬನ ಮೇಲೆ ಸಾಕ್ಷಿ ಹೇಳಿಯಾರೆ? ಹೀಗೆಂದು ಆಗ ನಮ್ಮ ತಂದೆ ಸುಮ್ಮನಿದ್ದರು. ಈಗ ಈ ಪೀಡೆ ಒಂದು ಬಂದ ಹಾಗಾಯಿತು. ಇದನ್ನು ಈ ಬೇಡದ ಜನರೇ ಏರ್ಪಡಿಸಿರಬಹುದು. ಹೀಗೆಂದು ಹೆದರಿ ತಂದೆ ಮದುವೆಗೆ ಸಾಕ್ಷಿ ಹಾಕಿದ ನಾಲ್ಕು ಜನರನ್ನು ಕರೆದು, "ಮದುವೆಯಾದ ಮನುಷ್ಯ ಮಗಳನ್ನು ಬಿಟ್ಟು ಬೇರೆ ಊರಿಗೆ ಹೋಗಿದ್ದಾನೆ. ಇದರಲ್ಲಿ ನನ್ನ ತಪ್ಪಿಲ್ಲ. ನನ್ನ ಮಗಳು ನನ್ನ ಮನೆಗೆ ಬಂದಿದಾಳೆ. ನಾನು ಏನು ಮಾಡಲಿ ಹೇಳಿ. ದೊಡ್ಡವರು ನೀವು ಹೇಳಿದಂತೆ ನಾನು ನಡೆದುಕೊಳ್ಳುತ್ತೇನೆ" ಎಂದು ಹೇಳಿದರು. ಅವರಲ್ಲಿ ಪ್ರಮುಖ, "ನೀನು ನಿಪ್ಪೂರಿಗೆ ಹೋಗಿ ಸಾಧ್ಯವಾದರೆ ಅಳಿಯನನ್ನು ಕಂಡು ಮಗಳನ್ನು ಅಲ್ಲಿಗೆ ಕರೆದು ತರಲೇ ಎಂದು ಕೇಳಿ ಬಾ," ಎಂದನು. ತಂದೆ ನಿಪ್ಪೂರಿಗೆ ಹೋದರು. ಅಳಿಯನನ್ನು ಹೀಗೆಂದು ಕೇಳಿದರು. ಅವನು, "ಇನ್ನಷ್ಟು ದಿನ ನಾನು ಬರಲಾಗುವುದಿಲ್ಲ. ಅದುವರೆಗೆ ನಿನ್ನ ಮಗಳು ನಿನ್ನ ಮನೆಯಲ್ಲಿಯೇ ಇರಲಿ" ಎಂದನು. ತಂದೆ ಹಿಂದಕ್ಕೆ ಬಂದು, ಈಗ ಏನು ಮಾಡುವುದು ಎಂದು ಸಾಕ್ಷಿ ಹಿರಿಯರನ್ನು ಕೇಳಿದರು. ಅವರ ಪ್ರಮುಖ ತಾನೇ ನಿಪ್ಪೂರಿಗೆ ಹೋದರು. ಅಳಿಯನಾದವನನ್ನು ನೋಡಿದರು. ಹಿಂತಿರುಗಿ ಬಂದು, "ಅವನ ದೊಡ್ಡಪ್ಪ ತನ್ನ ಆಸ್ತಿಯನ್ನೆಲ್ಲ ಇವನಿಗೆ ಕೊಟ್ಟು ತನ್ನ ಗುರುತಿನ ಒಂದು ಮನೆಯ ಬಹು ಚೆಲುವೆ ಒಬ್ಬಳನ್ನು ಮದುವೆ ಮಾಡಿಸಿ ಇವನನ್ನು ನಿಲ್ಲಿಸಿಕೊಂಡಿದ್ದಾನೆ. ಈ ಮನುಷ್ಯ ಸದ್ಯ ಇಲ್ಲಿಗೆ ಬರುವಂತಿಲ್ಲ. ಈ ಹುಡುಗಿಯನ್ನು ಬಾಳಿಸುವಂತಿಲ್ಲ. ಹುಡುಗಿಯ ಮೇಲಾಗಲಿ ಅವಳ ತಂದೆಯ ಮೇಲಾಗಲಿ ತಾನು ಯಾವ ದೂರನ್ನೂ ತರುವುದಿಲ್ಲ ಎಂದು ಹೇಳಿದನು. ಹಾಗೆಂದ ಮೇಲೆ ನಿನ್ನ ಮದುವೆಯ ಒಪ್ಪಂದದ ಹಲಗೆಯನ್ನು ನೀನು ಹುಡುಗಿಯ ತಂದೆಗೆ ಹಿಂದಕ್ಕೆ ಕೊಡಬೇಕು ಎಂದು ನಾನು ಹೇಳಿದೆ. ಅವನು ಒಪ್ಪಿದ. ಒಪ್ಪಂದ ಇಲ್ಲಿ ತನ್ನ ಮನೆಯ ಒಂದು ಪೆಟ್ಟಿಗೆಯಲ್ಲಿ ಇದೆ ಎಂದು ಹೇಳಿ ಅದರ ಬೀಗದ ಕೈಯನ್ನು ನನಗೆ ಕೊಟ್ಟಿದ್ದಾನೆ. ನಾವು ನಾಲ್ಕು ಜನ ಆ ಮನೆಗೆ ಹೋಗಿ ಆ ಒಪ್ಪಂದವನ್ನು ಹಿಂದಕ್ಕೆ ತಂದು ನಿನಗೆ ಕೊಡುತ್ತೇವೆ," ಎಂದನು. ಮನೆಯ ಒಡತಿ ಎಂದು ನಾನು ಆ ಮನೆಗೆ ಹೋದೆ. ಈ ಜನರು ನನ್ನೊಡನೆ ಬಂದರು. ಪೆಟ್ಟಿಗೆಯನ್ನು ತೆರೆದು ಒಪ್ಪಂದವನ್ನು ಎತ್ತಿಕೊಂಡು

ಮತ್ತೆ ಅದಕ್ಕೆ ಬೀಗ ಹಾಕಿ ನನ್ನೊಡನೆ ಹಿಂದಕ್ಕೆ ಬಂದರು. ಅದನ್ನು ನಮ್ಮ ತಂದೆಗೆ ಕೊಟ್ಟರು. ಹೀಗಾಗಿ ನಾನು ಮದುವೆ ಆಗಿಯೂ ಆಗದಂತೆ ತಂದೆಯ ಮನೆಯಲ್ಲಿ ನಿಂತೆ.

ತಂದೆಗೆ ದೊಡ್ಡ ಗಂಡವೊಂದು ಹರಿಯಿತು ಎಂದು ಸಂತೋಷ. ತಾಯಿಗೆ ಇದು ತುಂಬ ಅವಮಾನವಾಯಿತು ಎನ್ನಿಸಿತು. ಪ್ರಾಯದ ಮಗಳು, ಚೆಲುವೆ, ಶೀಲವಂತೆ. ಇವಳು ಮದುವೆ ಆಗಿಯೂ ಆಗದಂತೆ ಮನೆಯಲ್ಲಿ ನಿಲ್ಲಬೇಕಾಯಿತೇ ಎಂದು ಅವರು ಕೊರಗಿದರು. ನನಗೆ ಇದು ಯಾವುದೂ ಅಷ್ಟಾಗಿ ಮನಸ್ಸಿಗೆ ತಟ್ಟಿರಲಿಲ್ಲ. ಮದುವೆ ಆದವನೊಡನೆ ಬಾಳಿದ್ದು ನನಗೆ ಚೆನ್ನಾಗಿಯೇ ಇತ್ತು. ಇರುತ್ತ ಮದುವೆ ಆದವನು ಬಿಟ್ಟು ಹೋಗಿ ತಂದೆಯ ಮನೆಗೆ ಬಂದವಳಿಗೆ, ಏನೋ ಕೆಟ್ಟು ಹೋಯಿತು, ಎಂತ ನೋವು ಆಗಲಿಲ್ಲ. ಬರುತ್ತಾನೆ ಎಂತ ಅದುವರೆಗೆ ಸಮಾಧಾನವಾಗಿ ಇದ್ದೆ. ಬರಲಿಲ್ಲ. ಅವನಿಗೆ ಬೇಡ. ಅವನಿಗೆ ಬೇಡವಾದರೆ ನನಗೇಕೆ ಬೇಕು? ನನ್ನ ಮನಸ್ಸು ಹೀಗಿತ್ತು; ನಾನು ಹಿಂತಿರುಗಿ ಬಂದದ್ದರಿಂದ ತಂದೆಗೆ ಏನೂ ಕೇಡಾಗುವುದಿಲ್ಲ ಎನ್ನುವುದು ನಿಶ್ಚಯವಾದೊಡನೆ ನಾನು ತೀರ ಸುಖವಾಗಿ ಇದ್ದು ಬಿಟ್ಟೆ. ಇಷ್ಟು ದಿನವೂ ಚಿಕ್ಕಪ್ಪ....

* * * *

ಧನಪಾಲ, “ಹುಡುಗಿ ನನ್ನನ್ನು ಚಿಕ್ಕಪ್ಪ ಎಂದು ಕರೆಯುತ್ತಾಳೆ, ಮಹಾಪ್ರಭು,” ಎಂದನು.

ಹುಡುಗಿ: ಹೌದು ಮಹಾಪ್ರಭು. ನಮ್ಮ ಮನೆಯಲ್ಲಿ ಇವರು ಇಳಿದು ಕೊಂಡ ಕೆಲವು ದಿನಗಳಲ್ಲಿ ನಾನು ಇವರನ್ನು ಚಿಕ್ಕಪ್ಪ ಎಂದು ಕರೆಯಲು ಮೊದಲು ಮಾಡಿದೆ. ಇವರು ಹಾಗೆಯೇ ನನ್ನಲ್ಲಿ ಬಹು ಚೆನ್ನಾಗಿ ನಡೆದುಕೊಂಡಿದ್ದಾರೆ. ನನಗೆ ಇಲ್ಲಿಯ ಸಂಗತಿಗಳನ್ನು ಆಗಾಗ ಹೇಳುತ್ತಿದ್ದರು. ನಾನು ಅಪೇಕ್ಷಿಸಿದೆ ಎಂದು ಇಲ್ಲಿಯ ಭಾಷೆಯನ್ನು ಕಲಿಸಿದರು. ಇಲ್ಲಿಯ ಲಿಪಿಯನ್ನು ಕಲಿಸಿದರು. ಹೀಗೆ ನಾನು ಸಂತೋಷವಾಗಿ ದಿನ ಕಳೆದೆನು.

ನಮ್ಮಲ್ಲಿ ಒಂದು ವಾಡಿಕೆ ಇದೆ. ಹತ್ತು ಮನೆಗಳ ಹಿರಿಯರು ತಮ್ಮ ಮನೆಗಳಲ್ಲಿರುವ ಮದುವೆ ಆಗುವ ವಯಸ್ಸಿನ ಹೆಣ್ಣು ಮಕ್ಕಳನ್ನು ವ್ಯವಹಾರದ ಕಟ್ಟೆಯಲ್ಲಿ ಸೇರಿಸಿ, ಇಷ್ಟ ಉಳ್ಳವರು ಅವರಲ್ಲಿ ತಮಗೆ ಬೇಕಾದವರನ್ನು ಆರಿಸಿಕೊಂಡು, ಹಿರಿಯರು ಗೊತ್ತು

ಮಾಡಿದ ತೆರವನ್ನು ಕೊಟ್ಟು, ಮದುವೆ ಆಗಬಹುದು ಎಂದು ಏರ್ಪಾಟು ಮಾಡುತ್ತಾರೆ. ನಗರದ ನಮ್ಮ ಭಾಗದ ಹೆಣ್ಣು ಮಕ್ಕಳ ಕೂಟ ಆಗ ಒಂದು ನೆರೆಯಿತು. ನನ್ನ ಮೊದಲ ಮದುವೆಗೆ ಸಾಕ್ಷಿ ಹಾಕಿದ್ದ ಹಿರಿಯರು, ನಾನು ಆ ಕೂಟದಲ್ಲಿ ಸೇರಬಹುದು, ಬೇರೆ ಯಾರಾದರೂ ಮದುವೆ ಆಗಲು ವರಿಸಿದರೆ ಬೇರೆ ಮದುವೆ ಆಗಬಹುದು ಎಂದು ತಂದೆಗೆ ತಿಳಿಸಿದರು. ಈ ವಿಷಯದಲ್ಲಿ ಕಟ್ಟಳೆ ಏನಿದೆಯೋ ತಂದೆಗೆ ತಿಳಿಯದು. ಹೋಗಿ ಬಲ್ಲವರನ್ನು ಕೇಳಬೇಕು. ಮಾತನ್ನು ಎತ್ತಿದರೆ ಆಗದ ಜನ ಅದನ್ನು ಏನಾಗಿ ಬಳಸಬಹುದೋ ಎಂಬ ಒಂದು ಭಯ. ತಾಯಿಗೆ ಹುಡುಗಿ ಒಬ್ಬಳೇ ಇದ್ದಾಳೆಯೇ ಎಂದು ಬೇಸರ. ಆದರೆ ಇನ್ನೊಂದು ಮದುವೆಯಾಗಿ ಅದು ಅಪರಾಧ ಎಂದೇನಾದರೂ ಆದರೆ ಏನು ಮಾಡುವುದು? ಹಿಂದಿನ ರಾಜರಿಲ್ಲ. ಹಿಂದಿನ ರಾಣಿ ಇಲ್ಲ. ತಮಗೆ ಹೊಸ ರಾಜರ ಪರಿಚಯ ಇಲ್ಲ. ಹೀಗೆಂದು ಮನಸ್ಸಿನಲ್ಲಿ ತಂದೆಗೆ ಶಂಕೆ. ನನಗೆ, ನಾನು ಆಗಿರುವುದು ಹೀಗೆ ಎಂಬ ಬೇಸರದಲ್ಲಿ ಸದ್ಯ ಮತ್ತೆ ಮದುವೆ ಆಗೋಣ ಎಂಬ ಅಪೇಕ್ಷೆ ಇಲ್ಲ. ಅದಕ್ಕೆ ಪ್ರತಿಯಾಗಿ ಚಿಕ್ಕಪ್ಪ ಊರಿಗೆ ಹೋದಾಗ ಅವರೊಂದಿಗೆ ಹೋಗಿ ಅವರ ದೇಶವನ್ನು ನೋಡೋಣ ಎಂದು ಆಸೆ ಇತ್ತು. ನಾನು ಮದು ಮಕ್ಕಳ ಕೂಟಕ್ಕೆ ಹೋಗಲಿಲ್ಲ. ಮನೆಯಲ್ಲೇ ಇದ್ದು ಬಿಟ್ಟೆ. ಎರಡು ವರುಷ ಕಳೆದು ಚಿಕ್ಕಪ್ಪ ಈಗ ಇತ್ತಲಾಗಿ ಹೊರಟರು. ನಾನು ತಂದೆ ತಾಯಿಯ ಅಪ್ಪಣೆ ಪಡೆದು ಅರಮನೆಯಲ್ಲಿ ಈ ಪ್ರವಾಸದ ವಿಷಯವನ್ನು ತಿಳಿಸಿ ಇವರೊಂದಿಗೆ ತಮ್ಮ ನಗರಿಗೆ ಬಂದಿದ್ದೇನೆ.

* * * *

ಈ ಮಾತೆಲ್ಲ ಮುಗಿದ ಮೇಲೆ ಪ್ರಭು ರಾಣಿಗೆ, “ಹುಡುಗಿ ತುಂಬ ಜಾಣೆ. ತುಂಬ ಸಮಾಧಾನಿ. ಇವರ ಸೀಮೆಯಲ್ಲಿ ಕೂಡ ಈ ಜಾಣು ಸಮಾಧಾನದ ಹುಡುಗಿಯರು ಹಲವರೇನೋ ಇರಲಾರರು. ಇಲ್ಲಿ ಅಂತೂ ಅಷ್ಟೇ” ಎಂದರು. ರಾಣಿ, “ಹೌದು. ಮಗು ಬಹಳ ಒಳ್ಳೆಯ ಸ್ವಭಾವದ ಹುಡುಗಿ. ನಮ್ಮಲ್ಲಿ ನಿಲ್ಲಲು ಬಂದಿದ್ದಾಳೆ. ಅವಶ್ಯ ನಿಲ್ಲಲಿ. ದಿನ ಕಳೆದು ಸರಿಯಾದ ವರ ಒಬ್ಬ ಒದಗಿ ಇವಳು ಮದುವೆಯಾಗಲೊಪ್ಪಿದರೆ ಮದುವೆ ಆಗಿ

ನಮ್ಮಲ್ಲಿ ಬಾಳಲಿ. ಪ್ರಭು ಒಪ್ಪಿದರೆ ನಾನು ಇವಳನ್ನು ಪರಿವಾರದಲ್ಲಿ ಸೇರಿಸಿಕೊಳ್ಳುತ್ತೇನೆ" ಎಂದರು. ಪ್ರಭು, "ಏನಡ್ಡಿ? ಆಗಲಲ್ಲ", ಎಂದರು.

ಈ ಮಾತು ಮುಗಿದ ಬಳಿಕ ರಾಜರು ಧನಪಾಲನನ್ನು "ನಿಮ್ಮ ವ್ಯವಹಾರವೆಲ್ಲ ಸುಮುಖವಾಗಿ ನಡೆಯಿತು ಅಲ್ಲ?" ಎಂದು ಕೇಳಿದರು.

ಧನಪಾಲ "ಆ ವಿಷಯ ಇವರ ದೇಶದಲ್ಲಿ ಯಾವಾಗಲೂ ಸುಮುಖ, ಮಹಾಪ್ರಭು. ಧರ್ಮರವಿ ಇಂಥ ಎಲ್ಲ ವಿಷಯದಲ್ಲೂ ಈ ವೇಳೆ ಹೀಗೆ, ಎಂತ ಕಟ್ಟು ನಿರ್ಮಿಸಿಬಿಟ್ಟಿದ್ದಾರೆ. ಎರಡು ಸಾವಿರ ವರ್ಷ ನಡೆದು ಬಂದು ಅದು ದೇಶದಲ್ಲಿ ಎಲ್ಲರಿಗೂ ತಿಳಿದ ಶಾಸನ ಆಗಿದೆ. ಹುಲ್ಲ ಮೊನೆಯಷ್ಟು ಹೆಚ್ಚುಕಡಿಮೆಗೆ ಅವಕಾಶ ಇಲ್ಲ".

"ಪ್ರಯಾಣದ ವೇಳೆ ಅಪಾಯ ಏನೂ ಇಲ್ಲ ಅಲ್ಲ?"

"ಅದೂ ಸಹ ಸಾವಿರ ವರ್ಷದ ನಾಡಿಕೆಯಿಂದ ಖಚಿತವಾದ ರೂಪಕ್ಕೆ ಬಂದಿದೆ, ಮಹಾಪ್ರಭು. ನಾಲ್ಕು ಹರಿದಾರಿ, ಐದು ಹರಿದಾರಿಗೆ ಒಂದು ದೊಡ್ಡ ಊರಿದೆ. ಒಂದೊಂದರಲ್ಲೂ ಹತ್ತು ಇಪ್ಪತ್ತು ಮಂದಿ ಇಂಥ ವ್ಯಾಪಾರದಲ್ಲಿ ತೊಡಗಿರುವವರು ಇದಾರೆ. ನಾನು ಒಂದೊಂದು ಊರಿನಲ್ಲೂ ಇವರಲ್ಲಿ ಒಬ್ಬೊಬ್ಬನನ್ನು ಜೊತೆ ಮಾಡಿಕೊಂಡಿದೇನೆ. ಇಲ್ಲಿಂದ ಹೋಗುತ್ತಾ ಒಬ್ಬ ರಕ್ಷಕನನ್ನು ಒಯ್ಯುತ್ತೇನೆ. ಮುಂದೆ ಒಂದೊಂದು ಊರಿನಿಂದ ನನ್ನ ಜೊತೆಗಾರನ ಕಡೆಯ ಒಬ್ಬ ರಕ್ಷಕನನ್ನು ಜೊತೆಗೆ ತಕೋತೇನೆ. ಅವನು ಮುಂದಿನ ಊರಿನವರೆಗೆ ಬರುತ್ತಾನೆ. ಅಲ್ಲಿಯ ಮನುಷ್ಯ ಸೇರಿದ್ದೆ ತನ್ನ ಊರಿಗೆ ಹಿಂತಿರುಗುತ್ತಾನೆ. ದಾರೀಲಿ ಯಾರೂ ತೊಂದರೆ ಕೊಟ್ಟಾರು ಅನ್ನೋ ಭಯ ಇಲ್ಲ. ಈ ರಕ್ಷಕ, ಈ ಊರವನು, ಇಂಥವರ ಕಡೆಯವನು, ಎಂತ ಎಲ್ಲರೂ ಬಲ್ಲರು. ಹಾಗೂ ಯಾವನಾದರೂ ಪುಂಡ ಕೈ ಮಾಡುವುದಾದರೆ ಇವನು ಅವನನ್ನು ಅಲ್ಲೇ ಬಡಿದು ಸಾಯಿಸಿಯಾನು. ಈ ರಕ್ಷಕರು ಅಂಥ ಘಟ್ಟಿ ಆಳುಗಳು. ಹೀಗಾಗಿ ದಾರಿ ನಮ್ಮಂಥವರಿಗೆ ಕ್ಷೇಮವಾಗಿದೆ".

"ನೀವು ಬೆಲೆಯಾಗಿ ಏನು ಕೊಡುತ್ತೀರಿ? ಇಲ್ಲಿಯ ನಾಣ್ಯ ಅಲ್ಲಿ ನಡೆಯುತ್ತದೆಯೇ?"

“ಈ ದೇಶದ ನಾಣ್ಯ ಈ ಎಲ್ಲಾ ಕಡೆಯೂ ನಡೆಯುತ್ತೆ, ಮಹಾಪ್ರಭು. ಬೇಬಿಲಾನ್ ನಾಣ್ಯ ಇಲ್ಲಿ ನಡೆಯುತ್ತೆ. ಆದರೂ ನಾವು ನಾಣ್ಯವನ್ನು ತಕೊಂಡು ಹೋಗೋದು ಕಷ್ಟ. ದಾರಿ ಉದ್ದಕ್ಕೂ ಚಿನ್ನ, ಬೆಳ್ಳಿ, ಇಷ್ಟು ಬಣ್ಣ, ಇಷ್ಟು ತೂಕ ಎಂತ ಲೆಕ್ಕ ಮಾಡುತ್ತೀವೆ. ಅದೂ ಏನು, ಚಿನ್ನ ಬೆಳ್ಳೀನ ಹೊರೋದಿಲ್ಲ. ಈ ಜೊತೆಗಾರನಿಂದ ಮುಂದಿನ ಜೊತೆಗಾರನಿಗೆ, ಆ ಮುಂದಿನವನಿಂದ ಇನ್ನೊಬ್ಬ ಮುಂದಿನವನಿಗೆ ಲೆಕ್ಕ ಹೋಗುತ್ತೆ. ನಾನು ಬೇಬಿಲಾನ್ ಮುಟ್ಟೋ ವೇಳೆಗೆ ಅಲ್ಲಿಯ ನನ್ನ ಜೊತೆಗಾರ ನನ್ನ ಲೆಕ್ಕದಲ್ಲಿ ನಿನ್ನ ಹಣ ಇಷ್ಟು ಇದೆ ಎಂತ ಲೆಕ್ಕ ಹೇಳುತ್ತಾನೆ. ಬೇಕೆಂದಾಗ ಅಷ್ಟನ್ನೂ ಒದಗಿಸುತ್ತಾನೆ. ಅದು ಸಾಲದೆ ಹೋಯಿತು. ಮೇಲೆ ಅಷ್ಟನ್ನ ಒದಗಿಸುತ್ತಾನೆ. ನನ್ನಿಂದ ಇಷ್ಟು ಬರಬೇಕು ಎಂತ ಹೇಳತಾನೆ”.

“ಇದರಲ್ಲಿ ಯಾವಾಗಲೂ ಹೆಚ್ಚು ಕಡಿಮೆ ಆಗೋದಿಲ್ಲ?”

“ಇಲ್ಲ ಮಹಾಪ್ರಭು. ಈ ವ್ಯಾಪಾರಿ ಜನ ತಮ್ಮ ಪ್ರಾಣವನ್ನು ಕೊಟ್ಟಾರು. ಲೆಕ್ಕದಲ್ಲಿ ತಪ್ಪು ಮಾಡೋದಿಲ್ಲ.”

“ಹಾಗಿರಬೇಕು ತಾನೆ. ಇಲ್ಲ ಅಂದರೆ ಬಳಕೆ ಉಳಿಯೋದು ಹೇಗೆ?”

“ಹೌದು, ಮಹಾಪ್ರಭು.”

“ಅಂದರೆ, ಧನಪಾಲರೆ, ಇವರಲ್ಲಿ ನಮ್ಮಲ್ಲಿರುವಂತೆ ಕ್ರಮವಾಗಿ ಒಂದು ಧರ್ಮ ಬಳಕೆಯಲ್ಲಿದೆ?”

“ಏನೂ ಸಂದೇಹವಿಲ್ಲ. ಮಹಾಪ್ರಭು. ದಿಟದಲ್ಲಿ ನಮ್ಮಲ್ಲಿ ಇಲ್ಲಿ, ಇವರಲ್ಲಿ ಅಲ್ಲಿ ಇರುವಷ್ಟು, ಕಟುನಿಟ್ಟಿಲ್ಲ.”

“ಹಾಗಂತೀರಾ?”

“ಹೌದು ಮಹಾಪ್ರಭು. ಇವರಲ್ಲಿ ದೇವತೆ ಸಭೆ ಸೇರಿ, ಚರ್ಚೆಮಾಡಿ, ಸತ್ಯವನ್ನು ತಿಳಿದು ಅದನ್ನು ನಡೆಸುತ್ತಾರೆ ಎಂತ ಒಂದು ನಂಬಿಕೆ ಇದೆ. ಇವರ ನಗರ ಬೇಬಿಲಾನ್ ಹೆಸರು ಬಾಬ್-ಇಲ್-ಇ. ದೇವತೆ ಊರಬಾಗಲ ಮಂಟಪ. ಅಂದರೆ ಸಭಾ ಮಂಟಪ.”

“ಇವರಲ್ಲಿ ಬೇರೆ ನಗರಗಳೂ ಇವೆ ಅಲ್ಲ?”

“ಇವೆ, ಮಹಾಪ್ರಭೂ. ನಾನು ಮೊದಲೇ ಹೇಳಿದ ನಿಪ್ಪೂರ್, ನಿಸೆನ್, ಇಸಿನ್, ಲಾರ್‌ಸನ್ ಇವೆಲ್ಲ ನಗರಗಳೇ.”

ರಾಣಿ: “ವ್ಯಾಪಾರದಲ್ಲಿರುವಂತೆಯೇ ಇವರಲ್ಲಿ ಮದುವೆಯ ಕಾಯಿದೆಯೂ ಬಹು ಕಠಿಣ ಎಂತ ಕಾಣುತ್ತೆ.”

ಧನಪಾಲ: “ಇಂಥ ಮಾತಿಗೆ ಬಂದಾಗ ಇವರ ದೇಶದಲ್ಲಿ ಬಳಕೆಯ ಕಟ್ಟುನಿಟ್ಟು ಬಹಳ. ಗಂಡ ಈ ಹೆಂಡತಿ ಬೇಡ ಎಂದರು. ತಾನು ತೆಗೆದುಕೊಂಡಿದ್ದ ಹಣವನ್ನು ಹಿಂದಿರುಗಿಸಬೇಕು. ಹೆಂಡತಿ ಈ ಗಂಡ ಬೇಡ ಎಂದಳು. ಅವಳನ್ನು ನೀರಿಗೆ ಎಸೆಯುತ್ತಾರೆ. ಅವಳು ಅದರಲ್ಲಿ ಸಾಯಬೇಕು: ಹೊರಕ್ಕೆ ಬರುವಂತಿಲ್ಲ. ಈ ಹುಡುಗಿಯ ಬಾಳಿನಲ್ಲಿ ಗಂಡ ತಾನು ಕಾಸು ಹಿಂತಿರುಗಿಸಬೇಕಾಗಿ ಬರಲಿಲ್ಲ. ಅವನೇ ಕೊಟ್ಟಿದ್ದ. ಇರುತಾ ಇವಳು ತನಗೆ ಬೇಡ ಎನ್ನುವುದಕ್ಕೆ ಕಾರಣ ಇಲ್ಲ. ಬೇಡ ಎನ್ನುವುದು ಹೇಗೆ? ಸ್ವಲ್ಪ ಹೇಡಿ. ಹಿಂತೆಗೆದ. ಇವಳು ಅವನೇ ಬೇಕು ಎನ್ನುವವಳಲ್ಲ. ಆದರೆ ಅವನು ಬೇಡ ಎಂತ ಹೇಳುವವಳೂ ಅಲ್ಲ. ಏನು ಮಾಡುವುದು? ಹೀಗಾಗಿ ಮದುವೆಗೆ ಸಾಕ್ಷಿ ಹಾಕಿದ್ದ ಜನ ಹೊಣೆ ವಹಿಸಿಕೊಂಡು ಮದುವೆ ಗಂಟನ್ನು ಬಿಡಿಸಬೇಕಾಯಿತು.”

“ಇವರ ಮದುವೆ ಒಪ್ಪಂದಗಳಲ್ಲಿ ದೇವರ ಸಾಕ್ಷಿ ಇರುತ್ತೆ ಅಂದಿರಲ್ಲ?”

“ಹೌದು, ಮಹಾತಾಯಿ.”

“ನಮ್ಮಲ್ಲಿ ಇರುವಂತೆ ಇವರಲ್ಲೂ ಬೇರೆ ಬೇರೆ ದೇವರು ಇದಾರೋ?”

“ಇದಾರೆ ಮಹಾತಾಯಿ. ನಾನು ಆ ಹೆಸರುಗಳನ್ನು ನೆನಪಿಟ್ಟುಕೊಂಡಿಲ್ಲ. ನಮ್ಮ ಈ ಹುಡುಗಿ ಹೇಳುತ್ತಾಳೆ.”

ತರುಣಿ ಹೇಳಿದಳು. “ನನಗೂ ಎಲ್ಲಾ ಹೆಸರೂ ತಿಳಿಯದು. ಎಲ್ಲದರ ಅರ್ಥ ಸಹ ತಿಳಿಯದು. ಕೆಲವನ್ನು ಬಲ್ಲೆ. ನಮ್ಮ ದೊಡ್ಡ ದೇವರು ಅನು, ಬೇಲ್, ಈಯ. ಇನ್ನಿಬ್ಬರು ಮೆರೋಡಾಕ್ ಶೌರ್ಯವನ್ನು ಕೊಡುವ ದೇವರು, ಸಾರ್ ದನೀತ್ ಇವರ ಪತ್ನಿ. ಜಮಾಮ ಶೂರ. ಆಷ್ಟಾರ್ ಯುದ್ಧದ ದೇವತೆ. ಆಯುಧಗಳನ್ನು ಕೊಡುವವಳು. ಷಮಾಮ್ ಸೂರ್ಯ ದೇವರು. ಸಾಕ್ಷಿ. ಹೀಗೆ ಬೇರೆ ದೇವತೆಗಳೂ ಇದಾರೆ.”

“ದೇವಾಲಯಕ್ಕೆ ಏನಂತೀರಿ?”

“ಮಾಸಾಗಿಲ್ಲ. ಎ ಬಬ್ಬರ ಅಂತಲೂ ಹೇಳುತ್ತೇವೆ. ಅಂದರೆ ಬೆಳಕಿನ ಮನೆ.”

ತರುಣಿ ಸದ್ಯಕ್ಕೆ ರಾಜ್ಯದ ಪ್ರಜೆಯಾಗಿ ರಾಣಿಯ ಪರಿವಾರದಲ್ಲಿ ಒಂದು ಸ್ಥಾನ ಪಡೆದು ನಿಂತಳು.

ಮೂರು ವರ್ಷ ಹೀಗೆ ಬಾಳಿದ್ದರಲ್ಲಿ ಅರಮನೆಯ ಕಾರ್ಯ ಕಲಾಪದಲ್ಲಿ ತೊಡಗಿದ್ದ ಅಥವಾ ತನ್ನ ಪಾಲಿನ ಸಂಸಾರದ ಪರಿಸರದಲ್ಲಿ ಪರಿಚಯಕ್ಕೆ ಬಂದ ಯಾವ ತರುಣನನ್ನೇ ಆಗಲಿ ಈ ಬೇಬಿಲಾನ್ ಕುಮಾರಿ ಮದುವೆ ಆಗಲು ಬಯಸಲಿಲ್ಲ. ತರುಣರು ಕೆಲವರು ಬಯಸಿದ್ದುಂಟು. ಇರುತ್ತ ಇವಳು ಬೇರೆ ರಾಷ್ಟ್ರದ ಬಾಲೆ ಎಂಬುದು ಎಷ್ಟೋ ಅಷ್ಟೇ ಅಡ್ಡಿಯಾಗಿ ಬಂದಿತು. ಅವರ ಅಪೇಕ್ಷೆ ಮುಂದುವರಿಯಲಿಲ್ಲ.

ಮೂರು ವರುಷ ಕಳೆದು ಧನಪಾಲ ತನ್ನ ವ್ಯಾಪಾರದ ಕಾರಣ ಬೇಬಿಲಾನ್‌ಗೆ ಮತ್ತೆ ಹೊರಟಾಗ ತರುಣಿ ತಾನು ಅವನೊಂದಿಗೆ ತನ್ನ ದೇಶಕ್ಕೆ ಹಿಂತಿರುಗುವುದಾಗಿ ನಿಶ್ಚಯಿಸಿದಳು. ಅವನೊಡನೆ ರಾಣಿಯ ಸನ್ನಿಧಿಯಲ್ಲಿ ವಿಜ್ಞಾಪನೆ ಮಾಡಿ, ಅಲ್ಲಿಂದ ಪ್ರಭುಸನ್ನಿಧಿಗೆ ಹೋಗಿ ಅವರಿಗೂ ತನ್ನ ನಿಶ್ಚಯ ಅರಿಕೆ ಮಾಡಿ, ಅರಮನೆಯ ಸೇವೆಯಿಂದ ಬಿಡುಗಡೆ ಪಡೆದಳು. ಮೂರು ವರ್ಷ ಮನಒಪ್ಪುವಂತೆ ಸೇವೆ ಸಲ್ಲಿಸಿದ್ದ ಸೇವಕಿ ಊರಿಗೆ ಹೊರಡುವಾಗ ರಾಣಿ ಅವಳಿಗೆ ತಕ್ಕಷ್ಟು ಉಚಿತವನ್ನು ಕೊಟ್ಟು, “ಊರಿಗೆ ಹೋಗಿ ತಕ್ಕ ಒಬ್ಬ ವರನನ್ನು ಮದುವೆಯಾಗು. ಸುಖವಾಗಿ ಬಾಳು. ಮದುವೆಯ ದಿನ ಈ ಸೇವೆಯನ್ನು ನಾವು ಕೊಟ್ಟ ಉಡುಗೊರೆ ಎಂದು ಧರಿಸು,” ಎಂದು ವಸ್ತ್ರಗಳನ್ನು ಕೊಟ್ಟು ಕಳುಹಿಸಿದರು.